THE BOOK WAS DRENCHED

DAMAGE BOOK

"ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ"

ಶ್ರೀ

# ವಿದ್ಯಾರಣ್ಯಕಾವ್ಯಮ್

(ಸಚಿತ್ರಮ್)

200508

ಹೊಸಕೆರೆ ಚಿದಂಬರಯ್ಯ.

UNIVERSAL
LIBRARY
OU_200508
UNIVERSAL
LIBRARY

ಬೆಂಗಳೂರಲ್ಲಿರುವ

**ಕರ್ಣಾಟಕಸಾಹಿತ್ಯಪರಿಷತ್ತಿನ ಉಪಾಧ್ಯಕ್ಷರೂ**

ಮತ್ತು

**ಮೈಸೂರು ದೇಶದ ಚೀಫ್ ಇಂಜಿನಿಯರಾಗಿದ್ದವರೂ**

ಆದ

**ರಾಜಸಭಾಭೂಷಣ ಕರ್ಪೂರ ಶ್ರೀನಿವಾಸ ರಾವ್, ವಿದ್ಯಾಭೂಷಣ**

ಇವರ ಮುನ್ನುಡಿ ಇರುವ

ಶ್ರೀ

# ವಿದ್ಯಾರಣ್ಯಕಾವ್ಯಮ್

(ಸಚಿತ್ರಮ್)

ಕವಿ

**ಹೊಸಕೆರೆ ಚಿದಂಬರಯ್ಯ,**

(ಭಕ್ತಬಂಧುಕಾರ್ಯಾಲಯ, ಬಸವನಗುಡಿ, ಬೆಂಗಳೂರು ಸಿಟಿ.)

ಪರಮಾರ್ಥಗ್ರಂಥಮಾಲೆ, ಭಕ್ತಬಂಧುಗ್ರಂಥಮಾಲೆ, ಗೀತಾರ್ಥವಿವರಣೆ,
ಭಗವದ್ಗೀತಾಸಾರವಿಚಾರ, ಭರತಖಂಡದ ಜೀವಜ್ಯೋತಿಗಳು,
ಆತ್ಮಶಕ್ತಿಯ ತೇಜಸ್ಸು ಮತ್ತು ಆರ್ಯಧರ್ಮಪ್ರದೀಪ
ಮೊದಲಾದವುಗಳ ಲೇಖಕ.

ಮೊದಲನೇ ಮುದ್ರಣ ೧೦೦೦ ಪ್ರತಿಗಳು.

ಶಾ. ೧೮೪೬.] ರಕ್ತಾಕ್ಷಿ. [ಕ್ರಿ. ೧೯೨೪.

ಇದರ ಸರ್ವಸ್ವಾಮ್ಯವೂ ಗ್ರಂಥಕರ್ತರದು.

ಬೆಲೆ: ೧ ರೂ.

ಉಡುಪಿಯ
" ಪ್ರಭಾಕರ " ಮುದ್ರಾಯಂತ್ರದಲ್ಲಿ
ಪ. ನಾರಾಯಣ ಪ್ರಭುರಿಂದ ಮುದ್ರಿತವಾಯಿತು.
ಮತ್ತು
ಬೆಂಗಳೂರು
**ಭಕ್ತಬಂಧುಕಾರ್ಯಾಲಯದಲ್ಲಿ**
ಗ್ರಂಥಕರ್ತರಿಂದ ಪ್ರಸಿದ್ಧವಾಯಿತು.

ಜಗದ್ಗುರು ಶ್ರೀವಿದ್ಯಾರಣ್ಯಸ್ವಾಮಿಗಳು.



ಶ್ರೀಸಾಯಣಾಚಾರ್ಯರು. ವಿಜಯನಗರದ ರಾಜ.

# ಮುನ್ನುಡಿ.

ಲೋಕದಲ್ಲಿ ನೀತಿಯನ್ನು ಉತ್ತಮರೀತಿಯಿಂದ ಉಪದೇಶಮಾಡುವದಕ್ಕೆ ಕಾವ್ಯಗಳು ಬಹಳ ಅನುಕೂಲವಾದ ಸಾಧನಗಳೆಂಬುದನ್ನು ಒಪ್ಪದ ಜನಾಂಗದವರೇ ಇಲ್ಲ. ಯಾವದಾದರೊಂದು ಜನಾಂಗದಲ್ಲಿ ಕಾವ್ಯಗಳೇ ಆಗಿಲ್ಲವೆಂದರೆ ಆ ಜನಾಂಗವು ನಾಗರಿಕವಲ್ಲವೆಂದು ಖಂಡಿತವಾಗಿ ಹೇಳುವಷ್ಟು ಪ್ರಾಶಸ್ತ್ಯವು ಕಾವ್ಯಗಳಿಗಿರುವದೆಂದರೆ ಅತ್ಯುಕ್ತಿಯಾಗಲಾರದು. ಕರ್ಣಾಟಕದೇಶದಲ್ಲಿ ಗದ್ಯ, ಪದ್ಯ, ಚಂಪೂ ಮುಂತಾದ ಕಾವ್ಯಗಳು ಹೇರಳವಾಗಿ ಪ್ರಸಿದ್ಧಿಗೆ ಬಂದು ಜನರಿಗೆ ಅತ್ಯಂತೋಪಕಾರಕವಾಗಿರುವದು ಸರಿಯಷ್ಟೆ. ಆದರೆ ಈಚೀಚೆಗೆ ನಮ್ಮ ಕರ್ಣಾಟಕಕಾವ್ಯಮಾತೆಯು ಬಂಜೆಯಾದಳೋ ಎಂಬ ಖೇದಕ್ಕೆ ಕಾರಣವಾಗಿತ್ತು. ಹೊಸ ಷಟ್ಪದಿಕಾವ್ಯಗಳು ಸ್ವಲ್ಪಮಟ್ಟಿಗೆ ಈಗಿನ ಕಾಲದಲ್ಲಿ ಹೊರಬೀಳುತ್ತಿದ್ದರೂ ಚಂಪೂರೂಪದ ಕಾವ್ಯಗಳು ಇತ್ತಿತ್ತ ಪ್ರಕಟವಾದದ್ದು ನಮ್ಮ ಕಣ್ಣಿಗೆ ಬಿದ್ದಿರುವುದಿಲ್ಲ. ಅದರಲ್ಲಿಯೂ ರಾಮಾಯಣಭಾರತಾದಿಗಳಲ್ಲಿರುವ ಪೌರಾಣಿಕಕಥೆಗಳ ಆಧಾರದ ಮೇಲೆ ರಚಿತವಾಗಿರುವ ಕಾವ್ಯಗಳ ಸಂಖ್ಯೆಯೇ ಹೆಚ್ಚು. ಐತಿಹಾಸಿಕಕಾವ್ಯಗಳು ಕನ್ನಡದಲ್ಲಿ ಬಹಳ ವಿರಳವಾಗಿರುವವು. ಅದರಲ್ಲಿಯೂ '**ಕಾವ್ಯಾಲಾಪಾಂಶ್ಚ ವರ್ಜಯೇತ್**' ಎಂಬುವ ವಿಧಿಗೆ ಅನುಗುಣವಾಗಿ ಕೇವಲ ಲೌಕಿಕವಿಷಯಗಳನ್ನು ಬಿಟ್ಟು ಲೋಕೋತ್ತರನಾದ ಐತಿಹಾಸಿಕಮಹಾಪುರುಷನ ಚರಿತ್ರೆಯನ್ನವಲಂಬಿಸಿ ವಾಚಕರಿಗೆ ನೀತಿಬೋಧಕವಾಗುವಂತೆ ರಚಿಸಿದ ಪದ್ಯಕಾವ್ಯಗಳು ನಮ್ಮ ಕನ್ನಡ ಭಾಷೆಯಲ್ಲಿ ಇಲ್ಲವೆಂದರೂ ಅತಿಶಯೋಕ್ತಿಯಲ್ಲ. ಈ ಎಲ್ಲಾ ಕಾರಣಗಳಿಂದ ಅನೇಕ ಗದ್ಯಪದ್ಯ ಗ್ರಂಥಗಳನ್ನು ಬರೆದು ಕವಿರತ್ನರೆಂದು ಪ್ರಸಿದ್ಧರಾಗಿರುವ **ಮ. ರಾ. ಹೊಸಕೆರೆ ಚಿದಂಬರಯ್ಯನವರು** ಬರೆದಿರುವ ವಿದ್ಯಾರಣ್ಯಕಾವ್ಯವು ನಮ್ಮ ಕರ್ಣಾಟಕಕವಿತಾಮಾತೆಗೆ ಒಂದು ನವ್ಯಭೂಷಣವಾಗಿರುವದೆಂದು ಭಾವಿಸಬೇಕಾಗಿದೆ. ಆದ್ದರಿಂದಲೇ ಈ ಹೊಸ ಕಾವ್ಯಕ್ಕೊಂದು ಮುನ್ನುಡಿಯನ್ನು ಬರೆದುಕೊಡಬೇಕೆಂದು ಗ್ರಂಥಕರ್ತರು ಕೇಳಿಕೊಂಡದ್ದಕ್ಕೆ ನಾನು ಸಂತೋಷದಿಂದ ಒಪ್ಪಿಕೊಂಡೆನು.

ಕಾವ್ಯದ ಪ್ರಾಶಸ್ತ್ಯವು ಶಬ್ದಾರ್ಥಗಳಲ್ಲಿರುವ ಗುಣ, ಅಲಂಕಾರ, ಸರಸೋಕ್ತಿ— ಇವುಗಳನ್ನವಲಂಬಿಸಿರುವದು. ಪ್ರಕೃತದಲ್ಲಿ ಇವುಗಳೆಲ್ಲ ವ್ಯಕ್ತವಾಗಿ ತೋರುತ್ತಿರುವವು. "**ರವಿ ಕಾಣದುದನ್ನು ಕವಿ ಕಂಡ**"ನೆಂಬ ಗಾದೆಗೆ ಅನುಸಾರವಾಗಿ ಹಿಂದಿನ ಕವಿಗಳ ಕಲ್ಪನಾಶಕ್ತಿಗೆ ಬಹಿರ್ಭೂತವಾದ ವರ್ಣನೆ ಮುಂತಾದವುಗಳೇ ಇಲ್ಲ; ಅಂತಹ ಪೂರ್ವ

ಗ್ರಂಥಗಳಲ್ಲಿಲ್ಲದ ಅರ್ಥಸ್ವಾರಸ್ಯವಾಗಲಿ, ಹೊಸ ಕಲ್ಪನೆಯಾಗಲಿ, ಶಬ್ದವೈಚಿತ್ರಿಯಾಗಲಿ ಈ ಕಾವ್ಯದಲ್ಲಿ ಮಾತ್ರವೇ ಕಾಣಬರುತ್ತದೆ ಎಂದು ಹೇಳುವದು ನನ್ನ ಉದ್ದೇಶವಲ್ಲ. ಆದರೂ ಈ ಗ್ರಂಥದಲ್ಲಿ ಕಥಾಸರಣಿ, ಬರೆದಿರುವ ಶೈಲಿ, ಹೊಸಸನ್ನಿವೇಶದ ವರ್ಣನೆ, ಅಲ್ಲಲ್ಲಿ ಹೃದಯಂಗಮವಾಗುವಂತೆ ಕಂಡುಬರುವ ಹೊಸಕಲ್ಪನೆಗಳು— ಇವು ವಾಚಕರ ಮನಸ್ಸನ್ನು ಸೆಳೆಯದೆ ಇರಲಾರವೆಂದು ಹೇಳಬಹುದು. ಕಾವ್ಯದಲ್ಲಿರಬೇಕಾದವೆಂದು ಲಕ್ಷಣಕಾರರು ಕಟ್ಟುಮಾಡುವ ಎಲ್ಲಾ ವರ್ಣನೆಗಳೂ ಬಂದೇ ತೀರಬೇಕೆಂಬುವ ನಿರ್ಬಂಧಕ್ಕೆ ಸಿಕ್ಕುಬೀಳದೆ ಕಥಾವೃತ್ತವು ತಕ್ಕಮಟ್ಟಿಗೆ ಬೇಗಬೇಗನೆ ಸಾಗುವದಕ್ಕೆ ಅನುಕೂಲತೆಯನ್ನು ಕಲ್ಪಿಸಿಕೊಂಡಿರುವದೂ ಕಥಾನಾಯಕನನ್ನು ಪ್ರಧಾನಮಾಡಿಕೊಂಡು ಮಿಕ್ಕ ವಿಷಯಗಳನ್ನು ನಾಯಕನ ವರ್ಣನೆಗೆ ಎರಡನೆಯವಾಗಿ ಏರ್ಪಡಿಸಿಕೊಂಡಿರುವುದೂ ಈ ಗ್ರಂಥದಲ್ಲಿ ಶ್ಲಾಘನೀಯವಾಗಿದೆ.

ಕಥೆಯನ್ನೊಂದು ನೆಪವಾಗಿ ಮಾಡಿಕೊಂಡು ಕೇವಲ ಕವಿತಾಪ್ರೌಢಿಮೆಯನ್ನು ತೋರಿಸಬೇಕೆಂಬ ಉದ್ದೇಶವು ಈ ಗ್ರಂಥದಲ್ಲಿ ಕಾಣಬರುವದಿಲ್ಲ. ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಅಲ್ಲಲ್ಲಿ ತಕ್ಕಂತೆ ಶಬ್ದಸ್ವಾರಸ್ಯವೂ, ಅರ್ಥಸ್ವಾರಸ್ಯವೂ, ಮನೋಹರವಾಗಿ ಪರಿಣಮಿಸುವವು. ಪ್ರಾಸಾನುಪ್ರಾಸಾದಿಗಳು ಎಲ್ಲೆಲ್ಲಿಯೂ ತೋರುತ್ತಲೇ ಇರುವದರಿಂದ ಈ ವಿಷಯದಲ್ಲಿ ಅಷ್ಟು ಹೇಳಬೇಕಾದದ್ದೇ ಇರುವದಿಲ್ಲ. ಆದಿಪ್ರಾಸಗಳ ಜತೆಗೆ ಬಹು ಕಡೆಗಳಲ್ಲಿರುವ ಅಂತ್ಯಪ್ರಾಸಗಳು, ಆದಿಪ್ರಾಸವಿರುವ ಕಡೆ ಸಜಾತೀಯವಾದ ಎರಡು ಮೂರು ಅಕ್ಷರಗಳು ಒಟ್ಟಿಗೆ ಬಂದಿರುವದು, ಒಂದೇ ಶಬ್ದವನ್ನು ಅನೇಕಾರ್ಥಗಳಲ್ಲಿ ಚಮತ್ಕಾರವಾಗಿ ಉಪಯೋಗಿಸಿರುವದು, ಮಹಾರಾಷ್ಟ್ರದ ಪ್ರಸಿದ್ಧಕವಿಯಾದ ಮೋರೋಪಂತರಂತೆ ಮಾತುಗಳನ್ನು ಒಡೆದೊಡೆದು ಬೇರೆಬೇರೆ ಅರ್ಥವನ್ನು ಮಾಡಿರುವುದು (ಉದಾಹರಣೆ ೮—೫೩) ಇವೇ ಮೊದಲಾದ ಶಬ್ದಪ್ರಧಾನವಾದ ಕವಿತಾನೈಪುಣ್ಯವು ಅನೇಕಕಡೆ ಕಂಡುಬರುವುದು. ಆದಾಗ್ಯೂ ಕವಿತಾಸ್ವಾರಸ್ಯವನ್ನು ಅರ್ಥದ ದೃಷ್ಟಿಯಿಂದ ಒರೆಹಚ್ಚುವದರಿಂದ ನಿರ್ಣಯಿಸುವದೇ ನ್ಯಾಯವು. ಈ ದೃಷ್ಟಿಯಿಂದ ನೋಡಲಾಗಿ ಅಲ್ಲಲ್ಲಿ ಕಂಡುಬರುವ ವರ್ಣನೆಗಳು ಸ್ವಭಾವೋಕ್ತಿ, ಉತ್ಪ್ರೇಕ್ಷೆ ಮುಂತಾದ ಅಲಂಕಾರಗಳಿಂದ ಕೂಡಿ ಹೃದಯಂಗಮವಾಗಿರುವದನ್ನೂ ಸ್ವದೇಶಪ್ರೀತಿಸ್ವಧರ್ಮಪ್ರೀತಿಗಳನ್ನು ಹೆಚ್ಚಿಸುವದಕ್ಕೆ ತಕ್ಕಂತಿರುವದನ್ನೂ ನೋಡಿದರೆ ಈ ಕಾವ್ಯವು ತುಂಬ ಪ್ರಶಂಸಾರ್ಹವೆಂದು ವ್ಯಕ್ತವಾಗುವದು. ಈ ವಿಷಯದಲ್ಲಿ ಕೆಲವು ಪದ್ಯಗಳನ್ನು ಇಲ್ಲಿ ದೃಷ್ಟಾಂತಾರ್ಥವಾಗಿ ಉದಾಹರಿಸಬಹುದು

## (ಹಂಪೆಯ ವರ್ಣನೆ)

**ವಟುಗಳ ವೇದಘೋಷವು ಬಲಾಜನಗಾಯನಘೋಷಮೆಲ್ಲಿಯುಂ ।**
**ಸ್ಫುಟಮಹ ಪಾಠಘೋಷಮುರೆ ಘಂಟೆಯ ಘೋಷಮುಮಾ ಪುರಾಣದೊಳ್ ॥**

ಪಟುತರವಾಕ್ಯಘೋಷಮತಿಥಿಪ್ರಕರಂಗಳ ಬನ್ನಿರೆಂಬ ಧೂ ।
ಜಟಿಲತರಣಾಳಿಘೋಷಮಿದಿದಂತಿರುತಿರ್ಪುವು ನಾಡೆ ಹಂಪೆಯೊಳ್ ॥(೪–೫)

## (ಮಾಧವನ ತಪೋವರ್ಣನೆ)

ಹಸಿವುಂ ಪೀಡಿಸಿ ಸೋತುಪೋಗಿ, ತೃಷೆಯುಂ ಕೈಮೀರಿ ಬಂದಾಗೆ, ಭಾ ।
ವಿಸಲೆಂದುಂ ತನುಕಾರ್ಶ್ಯದಿಂ ಸೊರಗಿ ಸೊಪ್ಪಾಗಿರ್ದೊಡಂ ನೋಡದೇ ॥
ವಶದೊಳ್ಳಿಲ್ಲದೆ ಚಿತ್ತಮತ್ತ ಚಲಿಸಲ್ಬಾಯೆಂದದಂ ತಂದು ನಿ ।
ತ್ಯಸಮಾಧಿಸ್ಥಿತಿಯಲ್ಲಿ ನಿಲ್ಲಿಸಿದನಾ ಯೋಗೋತ್ಸವಂ ಮಾಧವಂ ॥ (೫–೪೨)

## (ಬೇಟೆಯು ವರ್ಣನೆ)

ಕೂಗುವರೊರ್ಮೆ, ಕೇಕೆಗಳ ಹಾಕುವರೊರ್ಮೆ, ಮಹಾರ್ಭಟಂ ಮಿಗಲ್ ।
ಬಾಗುವರೊರ್ಮೆ, ಚಪ್ಪಳೆಯ ನಿಕ್ಕುವರೊರ್ಮೆ, ಮೃಗಂಗಳಿಕ್ಕೆಯಂ ॥
ಬೇಗದೆ ಕಾಣ್ಬರೊರ್ಮೆ, ಬಡಿಕೋಲ್ಗಳನಿಟ್ಟಪರೊರ್ಮೆ, ಪಕ್ಕದೊಳ್ ।
ರೇಗುವರೊರ್ಮೆ, ಬೀಗಿದಪರೊರ್ಮೆ ನಿಷಾದರಮಂದಹರ್ಷದಿಂ ॥ (೬–೯)

ಆಯಾ ನೆಲೆಯ ಆದಿಯಲ್ಲಿ ಮಂಗಲಶ್ಲೋಕಗಳಲ್ಲಿರುವ ಇಷ್ಟದೇವತಾವರ್ಣನೆಯಲ್ಲಿ ಮುಂದೆ ಬರುವ ಕಥಾಸಂದರ್ಭವನ್ನು ಸೂಚಿಸುವ ಅಭಿಪ್ರಾಯದ ವಿಶೇಷಣಗಳು ಬಂದಿರುವದೂ ಈ ಕಾವ್ಯದ ಯೋಗ್ಯತೆಗೆ ಅನುಗುಣವಾಗಿಯೇ ಇರುವದು. ಲಕ್ಷ್ಮೀದೇವಿಯು ವಿದ್ಯಾರಣ್ಯರಿಗೆ ಪ್ರಸನ್ನಳಾದ ಸಂದರ್ಭವನ್ನು ವರ್ಣಿಸಿರುವ ಪದ್ಯವು ತುಂಬ ಮನೋರಂಜಕವಾಗಿರುವದು.

ಕನಕರಸಂ ಸ್ವರೂಪಮನಿದೊಂದನೆ ತಾಳುತೆ ಬಂದು ನಿಂದುದೋ ।
ಜನರನುರಾಗಮೆಲ್ಲ ಕಲೆತೊಂದೆಡೆಯಲ್ಲಿರಲಿಂತು ಕಾಣ್ಬುದೋ ॥
ಮುನಿಪನ ಶಾಸ್ತ್ರಸಿದ್ಧಮಹ ಮಾನಸಮೂರ್ತಿಯೆ ರೂಪುಗೊಂಡುದೋ ।
ನೆನೆವೊಡೆ ಬಾರದೆಂಬವೊಲದೇಂ ಮೆರೆದಿರ್ದುದೊ ಮೂರ್ತಿ ಲಕ್ಷ್ಮಿಯಾ ॥

ಹೀಗೆ ಕಾವ್ಯಸಾಮಾನ್ಯಕ್ಕೆ ಅವಶ್ಯಕವಾದ ಶಬ್ದಾರ್ಥಗಳ ಸೊಬಗು, ಉತ್ತಮವಾದ ಕಲ್ಪನೆಗಳ ಸಂಗ್ರಹ, ಒಳ್ಳೆಯ ಆದರ್ಶಪ್ರಾಯನಾಗಿರುವ ನಾಯಕನನ್ನೊಳಕೊಂಡು ನೀತ್ಯಾಘಾಯಕವಾಗಿಯೂ ಪ್ರಕೃತೋಚಿತವಾಗಿಯೂ ಇರುವ ಐತಿಹಾಸಿಕವಿಷಯಗಳಿಗೆ ವಿರೋಧವಿಲ್ಲದ ಕಥಾಸಂವಿಧಾನ— ಇವುಗಳಿಂದೊಡಗೂಡಿರುವ ಈ ಕಾವ್ಯವು ಸುಲಭವಾಗಿ ಓದಿ ಆನಂದಪಡುವಂತೆ ಹೊಸಹಳಗನ್ನಡಗಳ ಇಂಪಾದ ಮಿಶ್ರಣದಿಂದ ಕೂಡಿರುವದರಿಂದ ಇದು ಬಹುಜನಸಮ್ಮತವಾದೀತೆಂದು ನಾನು ಭಾವಿಸುವೆನು. ಈ ಗ್ರಂಥದಲ್ಲಿ ದೋಷಗಳು ಇಲ್ಲವೆಂದು ನನ್ನ ಅಭಿಪ್ರಾಯವಲ್ಲ; ಅಂಥ ದೋಷಗಳನ್ನು ವಾಚಕರು ಕಂಡು ತಿಳಿಸಿದಲ್ಲಿ ಗ್ರಂಥಕಾರರೇ ತಿದ್ದುವದಕ್ಕೆ ಸಿದ್ಧರಾಗಿರುವರೆಂದು ನಾನು ನಂಬುತ್ತೇನೆ.

ಹೀಗೆ ಅನೇಕಕಾರಣಗಳಿಂದ ಉತ್ಕೃಷ್ಟತರಗತಿಗೆ ಸೇರತಕ್ಕದ್ದಾಗಿಯೂ ದೇಶಾಭಿಮಾನ, ಭಾಷಾಭಿಮಾನ, ಧರ್ಮನೀತ್ಯಭಿಮಾನ ಮುಂತಾದವುಗಳ ಉತ್ಪಾದನೆಗೆ ಯೋಗ್ಯವಾಗಿಯೂ ಇರುವ ಈ ಗ್ರಂಥವು ನಮ್ಮ ಕರ್ಣಾಟಕದ ಯುವಕರಿಗೆ ಪಠ್ಯಪುಸ್ತಕವಾಗಿ ಉಪಯೋಗಿಸಲು ಎಲ್ಲಾ ವಿಧದಿಂದಲೂ ಅರ್ಹವಾಗಿರುವದೆಂದು ನಾನು ಅಲ್ಲಲ್ಲಿ ಓದಿಸಿ ನೋಡಿದ ಭಾಗಗಳಿಂದ ನನಗೆ ಪೂರ್ಣಭರವಸೆಯುಂಟಾಗಿರುವದು. ಇದಕ್ಕೆ ತಕ್ಕ ಪ್ರೋತ್ಸಾಹವು ವಾಚಕವೃಂದದಿಂದಲೂ ವಿದ್ಯಾಭ್ಯಾಸದ ಇಲಾಖೆಯವರಿಂದಲೂ ದೊರೆತು ಗ್ರಂಥಕರ್ತರ ಶ್ರಮವು ಸಾರ್ಥಕವಾಗಲೆಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾವ್, ವಿದ್ಯಾಭೂಷಣ,
ಕರ್ಣಾಟಕಸಾಹಿತ್ಯಪರಿಷತ್ತಿನ ಉಪಾಧ್ಯಕ್ಷ,
ಮೈಸೂರುದೇಶದ ಮಾಜಿ ಚೀಫ್ ಇಂಜಿನಿಯರ್.

# ವಿಷಯಕ್ರಮ.


| ನೆಲೆ. | ವಿಷಯ. | ಪದ್ಯಸಂಖ್ಯೆ. | ಪುಟಸಂಖ್ಯೆ. |
|---|---|---|---|
| | ಕಬ್ಬಿಗನ ಬಿನ್ನಹ | | 7 |
| | ಕಥೆಯ ತಿರುಳು | | 15 |
| ೧ | ಮುನ್ನುಡಿ. | ೩೬ | ೧ |
| ೨ | ಜನ್ಮದೇಶವರ್ಣನೆ. | ೫೮ | ೯ |
| ೩ | ಹಂಪೆಯ ವರ್ಣನೆ. | ೬೫ | ೨೩ |
| ೪ | ಬಾಲ್ಯವೃತ್ತಾಂತ. | ೭೯ | ೩೬ |
| ೫ | ಸಾಮಾನ್ಯವ್ಯವಹಾರವರ್ಣನೆ. | ೬೨ | ೫೧ |
| ೬ | ಹರಿಹರಬುಕ್ಕರು ಶರಣುಬಂದದ್ದು. | ೭೮ | ೬೪ |
| ೭ | ಮಾಧವನು ರಾಜಕಾರ್ಯಕ್ಕೊಲಿದದ್ದು. | ೭೦ | ೭೯ |
| ೮ | ರಾಜ್ಯಸ್ಥಾಪನೆ. | ೯೨ | ೯೨ |
| ೯ | ವಿಜಯಯಾತ್ರೆ. | ೫೬ | ೧೧೧ |
| ೧೦ | ಸ್ವರಾಜ್ಯವೈಭವ. | ೭೦ | ೧೨೨ |
| | ಒಟ್ಟು | ೬೬೬ | |

## ಇದರಲ್ಲಿರುವ ಚಿತ್ರಗಳು.

(೧) ಶ್ರೀವಿದ್ಯಾರಣ್ಯರು (ಮುಖಪತ್ರದ ಹತ್ತರ)
(೨) ವೇರುಳದ ಕೈಲಾಸದೇವಾಲಯ (೨—೩೫)
(೩) ಗೇರಸೊಪ್ಪೆಯ ಜಲಪಾತ (೨—೫೮)
(೪) ಹಂಪೆಯ ಶ್ರೀ ವಿರೂಪಾಕ್ಷದೇವಾಲಯ (೩—೩)
(೫) ಹಂಪೆಯಲ್ಲಿರುವ ಶ್ರೀವಿಜಯವಿಠಲದೇವಾಲಯ (೧೦-೪೭)

## ಇದರಲ್ಲಿ ಬಂದಿರುವ ವೃತ್ತಗಳು.

ಶಾರ್ದೂಲವಿಕ್ರೀಡಿತ, ಉತ್ಪಲಮಾಲೆ, ಮತ್ತೇಭವಿಕ್ರೀಡಿತ, ಮಹಾಸ್ರಗ್ಧರಾ, ಸ್ರಗ್ಧರಾ, ವಸಂತತಿಲಕ, ದ್ರುತವಿಲಂಬಿತ, ಕಂದ, ಗೀತಿ, ಚಂಪಕಮಾಲೆ, ಮಂಜುಭಾಷಿಣಿ, ರಥೋದ್ಧತ, ಸ್ವಾಗತ, ಮಾಲಿನಿ, ಪುಷ್ಪಿತಾಗ್ರ, ಔಪಚ್ಛಂದಸಿಕ, ವೈತಾಳೀಯ, ವಂಶಸ್ಥ, ಇಂದ್ರವಜ್ರ, ಉಪೇಂದ್ರವಜ್ರ, ಶಿಖರಿಣಿ, ಮಂದಾಕ್ರಾಂತ, ಶಾಲಿನಿ, ಪ್ರಹರ್ಷಿಣಿ, ಇಂದ್ರವಂಶ ಮತ್ತು ಭುಜಂಗಪ್ರಯಾತ.

# ಕಬ್ಬಿಗನ ಬಿನ್ನಹ.

ಲೋಕದಲ್ಲಿ ವಿನೋದಕರವಾದ ಬೆಡಗಿನ ಮಾತಿಗೆ ಬೆಲೆ ಹೆಚ್ಚು. ಮನೆಗಳಲ್ಲಿ ತಮ್ಮ ಕಾಂತೆಯರು ಬೆಡಗನ್ನು ಬೀರುತ್ತ ಆಡುವ ಮಾತು ಪತಿಗಳಿಗೆ ಪಥ್ಯವಾಗುತ್ತಿರುವದು ನಮ್ಮೆಲ್ಲರ ಅನುಭವದಲ್ಲಿಯೂ ಇದೆ. ಈ ಬೆಡಗಿನ ಮಾತನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ಯೋಚಿಸಿ ಚತುರರು ಧರ್ಮನೀತಿಗಳ ಉಪದೇಶಕ್ಕೆ ಬೆಡಗಿನ ಮಾತುಗಳ ಪದ್ಧತಿಯನ್ನು ತೆಗೆದುಕೊಂಡು ಅದನ್ನು ಕಾವ್ಯವೆಂದ ಕರೆದಂತೆ **"ಕಾಂತಾಸಮ್ಮಿತತಯೋಪದೇಶಯುಜೇ"** ಎಂಬ ಆಲಂಕಾರಿಕವಚನದಿಂದ ತಿಳಿಯಬರುತ್ತದೆ. ಅದ್ದರಿಂದಲೇ ಕಾವ್ಯವೆಂದರೆ ಎಲ್ಲರೂ ಆನಂದದಿಂದ ತಲೇಹಾಕುತ್ತಾರೆ. ಈ ಬಗೆಯ ಉತ್ತೇಜನವನ್ನು ಕಂಡು ಈಗ ಎಷ್ಟೋ ಕಾವ್ಯಗಳು ಪ್ರಕಟವಾಗಿವೆ ಇವುಗಳನ್ನು ನೋಡುತ್ತ ಬಂದ ಹಾಗೆಲ್ಲ ನಾನೂ ಒಂದು ಕಾವ್ಯವನ್ನು ಬರೆಯಬೇಕೆನಿಸಿತು. ಹೊಸ ಗ್ರಂಥಗಳು ಬೇಕಾಗಿವೆಯೋ ಇಲ್ಲವೋ ಎಂಬ ವಿಚಾರವನ್ನು ಕೆದಕಿ ನೋಡುವ ಗೋಜಿಗೆ ಹೋಗದೆ ನಾನು ಇದುವರೆಗೆ ಕೆಲಕೆಲವು ಪದ್ಯಗ್ರಂಥಗಳನ್ನೂ ಕೆಲಕೆಲವು ಗದ್ಯಗ್ರಂಥಗಳನ್ನೂ ಭಾಷಾಸೇವೆಗಾಗಿ ಬರೆಯುತ್ತ ಬಂದಿರುವದು ವಾಚಕರ ಲಕ್ಷ್ಯಕ್ಕೆ ಬರದೆ ಇರಲಾರದು. ಗ್ರಂಥರಚನೆಗೆ ಉತ್ತೇಜನವು ಸಿಕ್ಕಲಿ, ಸಿಕ್ಕದಿರಲಿ; ಸ್ವಭಾವವಾಗಿ ಮನಸ್ಸಿನ ಪ್ರವೃತ್ತಿಯು ಅತ್ತಕಡೆಗೆ ಇರುವ ನನ್ನ ಚಪಲವು ಈ ಸಲ ಕಾವ್ಯದ ಕಡೆಗೆ ಕಣ್ಣುಹಾಕಿತು.

**"ಮಹಾಗಜಾಃ ಪಲಾಯನ್ತೇ ಮಶಕಾನಾಂ ತು ಕಾ ಕಥಾ"** ಎಂಬಂತೆ ಮಹಾಮಹಾದಿಗ್ದಂತಿಗಳ ಕಾವ್ಯಗಳು ನಾನು ಮುಂದು ತಾನು ಮುಂದೆಂದು ಹೋರಾಡುತ್ತಿರುವಾಗ ನನ್ನದೇನು ಕೆಲಸಕ್ಕೆ ಬಂದೀತೆಂಬ ಕಲ್ಪನೆಯು ಮನಸ್ಸಿನಲ್ಲಿ ತಲೆದೋರುವ ಹೊತ್ತಿಗೆ ಸರಿಯಾಗಿ ಷಡಕ್ಷರಿಯು ಪದ್ಯವೊಂದು ಕಣ್ಣ ಮುಂದೆ ಬಂದು ನಿಂತಿತು. ಅದನ್ನು ಓದಿದೆನು. ಅದೇನೆಂದರೆ—

**"ಮೊದಲ ಕವೀಂದ್ರರೊಲ್ದೊರೆದ ಸತ್ಕೃತಿಸಂಚಯಮೀ ಧರಿತ್ರಿ**
**ಯೊಳ್ | ಪುದಿದಿರೆ ನೋಡಿ ತುಷ್ಟಿವಡಲೊಲ್ಲದೆ ಕಬ್ಬಿಗರೇಕೆ ಕಬ್ಬ**
**ಮಂ || ಗದಿಪರೊ ಬೇರೆನುತ್ತೆ ನುಡಿವಳ್ಕಜಕಾರನವಂಗೆ ಪುತ್ರಸಂ |**
**ಪದದೊದವೇಕೆ ಬೇರೆ ಪರಪುತ್ರರನೀಕ್ಷಿಪ ತುಷ್ಟಿ ಸಾಲದೇ" ||**

ಆದ್ದರಿಂದ ನಾನೂ ಒಂದು ಕಾವ್ಯವನ್ನು ಬರೆದರೆ ಅತಿಪ್ರಸಂಗವೆನಿಸಲಾರದೆಂದು ತೋರಿತು. ಆ ಮೇಲೆ ಯಾವ ವಿಷಯದಲ್ಲಿ ಬರೆಯಬೇಕೆಂದು ತಲೆಯನ್ನು ಕೆದರಿಕೊಂಡೆನು. ಈಗ ಇರುವ ಕಾವ್ಯಗಳಲ್ಲಿ ಪೌರಾಣಿಕಕಾವ್ಯಗಳೇ ಬಹಳವಾಗಿರುವದರಿಂದ ಬಹುಜನಗಳ ನಡುವೆ ನನ್ನ ಸಣ್ಣ ಕೂಗು ಕೇಳಲಾರದೆಂದು ಮನಸ್ಸಿನಲ್ಲಿ ಕೆಲವು ಅಲೆಗಳ ಹೊಯ್ದಾಟವಾಗಿ ಕೊನೆಗೆ ಐತಿಹಾಸಿಕಕಾವ್ಯದ ಕಲ್ಪನೆಯ ರೂಪವಾದ ಒಂದು ಅಲೆಯು ಮೇಲಕ್ಕೆದ್ದು ನಿಂತಿತು. ಒಡನೆ ಶ್ರೀವಿದ್ಯಾರಣ್ಯರು ನನ್ನ ಕಣ್ಣ ಮುಂದಕ್ಕೆ ಬಂದು ನನ್ನ ತಲೆಯ ಮೇಲೆ ಅಭಯಹಸ್ತವನ್ನಿಟ್ಟಂತೆ ಭಾಸವಾಯಿತು. ಆ ಮೇಲೆ ವಿಜಯನಗರದ ವಾತಾವರಣದ ವಾಸನೆಯನ್ನು ಚೆನ್ನಾಗಿ ಅಂಟಿಸಿಕೊಂಡು ಬರಬೇಕೆಂದು ಹಂಪೆಗೆ ಹೋಗಿ ವಿದ್ಯಾರಣ್ಯರ ಮೂರ್ತಿಯ ಮುಂದೆ ಕುಳಿತು ಹರಕೆಯನ್ನು ಹೊತ್ತು ತಿರುಗಿ ಬಂದು ಬರೆಯಲೆಂದು ಹೋದೆನು. ಶ್ರೀವಿದ್ಯಾರಣ್ಯರು ಸಂನ್ಯಾಸಿಗಳಾಗಿ ಮಂತ್ರಿಗಳಾಗಿದ್ದರೆಂದು ಈಚೀಚಿನ ಇತಿಹಾಸಕಾರರು ಹೇಳುವ ಮಾತು ನನ್ನ ಮನಸ್ಸನ್ನು ಹಿಡಿದುಕೊಂಡಿತು. ಇದಕ್ಕೆ ಮೊದಲು ನಾನು ಇತಿಹಾಸಕಾರರು ನಡೆದ ದಾರಿಯನ್ನೇ ಹಿಡಿದು ಭರತಖಂಡದ ಜೀವಜ್ಯೋತಿಗಳು ಮೊದಲಾದ ಕಡೆಗಳಲ್ಲಿ ಆ ಪಕ್ಷವನ್ನೇ ಅವಲಂಬಿಸಿದ್ದೆನು. ಈಗ ನನ್ನ ಮನಸ್ಸಿನಲ್ಲಿ ಅದರ ಯುಕ್ತಾಯುಕ್ತತೆಯ ವಿಚಾರತರಂಗಗಳೇಳುತ್ತಲೇ ನನ್ನ ಸಿದ್ಧಾಂತವು ರೂಪಾಂತರಕ್ಕೆ ತಿರುಗಿತು. ಸಂನ್ಯಾಸಿಗಳು ರಾಜ್ಯಭಾರದಂಥ ಪ್ರಬಲವಾದ ವ್ಯವಹಾರದಲ್ಲಿ ತೊಡಗುವದು ಪ್ರಾಚೀನಸಂಸ್ಕೃತಿಯ ದೃಷ್ಟಿಯಿಂದ ನನಗೆ ಪ್ರಶಸ್ತವೆನಿಸಲಿಲ್ಲ. ಈ ನನ್ನ ಅಭಿಪ್ರಾಯಕ್ಕೆ ಸಾಧಕವಾಗಿ ಶ್ರೀವಿದ್ಯಾರಣ್ಯರು ಪೂರ್ವಾಶ್ರಮದಲ್ಲಿ ಮಂತ್ರಿಗಳಾಗಿದ್ದರೆಂದು ನಮ್ಮ ಪ್ರಾಚೀನರ ಬರವಣಿಗೆಗಳೂ ಕೆಲವು ಕಡೆ ನನ್ನ ದೃಷ್ಟಿಗೆ ವಿಷಯವಾದವು ಮತ್ತು ಬುಕ್ಕನ ಕಾಲದಲ್ಲಿ ಮಾಡಿದ ಸಾಮವೇದಭಾಷ್ಯದ ಪ್ರಾರಂಭದಲ್ಲಿ ಶ್ರೀಸಾಯಣರು **'ಪಂಚಾಗ್ನಿನಾ ಮಾಧವೇನ'** ಎಂದು ಮುಂತಾಗಿ ಬರೆದಿರುವದರಿಂದ ಆಗ ಮಾಧವಾಚಾರ್ಯರು ಗೃಹಸ್ಥರಾಗಿದ್ದರೆಂದೇ ನನ್ನ ನಿಶ್ಚಯವಾಯಿತು. ಇನ್ನು ಇತಿಹಾಸಕಾರರ ಅಭಿಪ್ರಾಯಗಳಿಗೂ ಏನಾದರೂ ಆಧಾರಗಳು ತೋರಬಹುದು ಅವುಗಳ ಸಾಧಕಬಾಧಕಗಳನ್ನು ವಿಚಾರಮಾಡಿ ನನ್ನ ಪಕ್ಷವನ್ನು ಸಾಧಿಸುವದಕ್ಕೆ ನಾನು ಇತಿಹಾಸಜ್ಞನಾಗದೆ ಮುಖ್ಯವಾಗಿ ಇಲ್ಲಿ ಕಾವ್ಯಕಾರನಾದ್ದರಿಂದ ಅದನ್ನು ಅಗತ್ಯವೆಂದು ಭಾವಿಸುವದಿಲ್ಲ. ಇತಿಹಾಸಕಾರರನ್ನು ನಾನು ಬಹಳ ಹಗುರವಾಗಿ ಭಾವಿಸುವೆನೆಂದು ಮಾತ್ರ ಯಾರೂ ತಿಳಿಯಬಾರದು. ಇತಿಹಾಸಕಾರರ ಅಭಿಪ್ರಾಯಗಳಲ್ಲಿ ಪ್ರಾಚೀನಸಂಸ್ಕೃತಿಗೆ ಅವಿರುದ್ಧವಾದವುಗಳನ್ನೆಲ್ಲ ನಾನು ಈ ಕಾವ್ಯದಲ್ಲಿ ಉಪಯೋಗ ಮಾಡಿಕೊಂಡೇ ಇದ್ದೇನೆ. ಇನ್ನು ವಿರುದ್ಧವೆಂದು ತೋರುವ ಸಂದರ್ಭಗಳಲ್ಲಿ ಆ ಇತಿಹಾಸಕಾರರ ಅಭಿಪ್ರಾಯಗಳ ಸಾಧಕಬಾಧಕಗಳೇನೇ ಇರಲಿ; ಮತ್ತು ಒಂದು ಪಕ್ಷ ನಿಜ

ವಾಗಿ ಹೇಗಾದರೂ ನಡೆದಿರಲಿ; ಕಥಾನಾಯಕನನ್ನು ಪ್ರಾಚೀನಸಂಸ್ಕೃತಿಗೆ ಆದರ್ಶಸ್ವರೂಪ ನನ್ನಾಗಿ ಮಾಡಿಕೊಳ್ಳುವದು ಕಾವ್ಯಕರ್ತನ ಕರ್ತವ್ಯವೆಂದು ನಾನು ತಿಳಿದಿದ್ದೇನೆ. ಇತಿಹಾಸ ಜ್ಞರು ತಮ್ಮ ವಿಮರ್ಶೆಗಳನ್ನು ಇನ್ನೂ ಮುಂದುವರಿಸಿದರೆ ಅವರೂ ಈ ಸಿದ್ಧಾಂತಕ್ಕೇ ಬರು ವರೆಂಬಷ್ಟು ಈ ವಿಷಯದಲ್ಲಿ ನನಗೆ ಭರವಸೆಯುಂಟಾಗಿದೆ. ಇತಿಹಾಸಜ್ಞರ ಸಿದ್ಧಾಂತಗಳು ಹೊಸಹೊಸ ಆಧಾರಗಳು ಸಿಕ್ಕಿದ ಹಾಗೆಲ್ಲ ಹೆಚ್ಚು ಕಡಿಮೆಯಾಗುತ್ತ ಹೋಗುವಂಥವುಗಳು. ಆದ್ದರಿಂದ ಕಾವ್ಯಕ್ಕೆ ಅವುಗಳನ್ನು ಆಧಾರವಾಗಿಟ್ಟುಕೊಳ್ಳುವದಕ್ಕಿಂತಲೂ ಆದರ್ಶಸ್ವರೂಪ ವನ್ನಿಟ್ಟುಕೊಳ್ಳುವದು ಹೆಚ್ಚು ಸಮಂಜಸವಾಗುವದು. ಆದಕಾರಣ ಈ ಕಾವ್ಯದಲ್ಲಿರುವ ಪ್ರಸಂಗಗಳನ್ನು ಈಗಿನ ಇತಿಹಾಸದ ಜೊತೆಗೆ ತಿಕ್ಕಿ ಒರೆ ಹಚ್ಚುವದಕ್ಕೆ ಹೋಗದೆ ಕಾವ್ಯದೃಷ್ಟಿ ಯಿಂದಲೇ ನೋಡಬೇಕೆಂದು ಬೇಡುತ್ತೇನೆ.

ಈ ಕಾವ್ಯದಲ್ಲಿ ಹರಿಹರನಿಗೆ ರಾಜನೀತಿಯನ್ನುಪದೇಶಿಸುವಾಗ ಮಾತ್ರ ಪ್ರಾಚೀನನೀತಿ ಶಾಸ್ತ್ರಜ್ಞರ ಕೆಲವು ಕಲ್ಪನೆಗಳನ್ನು ಕೃತಜ್ಞತಾಪೂರ್ವಕವಾಗಿ ಉಪಯೋಗಮಾಡಿಕೊಂಡಿದ್ದೇನೆ. ಉಳಿದ ಕಡೆಗಳಲ್ಲಿ ನನ್ನ ಅಲ್ಪಬುದ್ಧಿಗೆ ಸ್ಫೂರ್ತಿಯಾದ ಕಲ್ಪನೆಗಳನ್ನೇ ಜೋಡಿಸಿದ್ದೇನೆ. ಈ ಕಾವ್ಯವನ್ನು ಈಗ ಕಾವ್ಯವೆಂದು ಪ್ರಸಿದ್ಧವಾಗಿರುವ ಎಷ್ಟೋ ಗ್ರಂಥಗಳ ಸರಿಜೋಡಿಯೆನಿ ಸಬೇಕೆಂಬ ಮಹತ್ವಾಕಾಂಕ್ಷೆ ನನಗೆ ಇಲ್ಲ. ಆಕಾಶಕ್ಕೆ ಏಣಿಯನ್ನು ಹಾಕಹೋಗುವ ಪ್ರಯತ್ನದಂಥ ಈ ನನ್ನ ಕಾವ್ಯಪ್ರಯತ್ನವು ಅನ್ವರ್ಥನಾಮಧೇಯದ್ದೆನಿಸಿ ಎಲ್ಲರಿಗೂ ಹೃದ ಯಂಗಮವಾಗದಿದ್ದರೂ ನನ್ನ ಸಮಾನಧರ್ಮಿಗಳಾದ ಕೆಲವರಿಗಾದರೂ ಅಂಕಿತನಾಮಧೇಯ ದ್ದಾದರೂ ಆಗಿ ನನಗೆ ಹೇಗೋ ಹಾಗೆ ಆನಂದಜನಕವೇ ಆದೀತೆಂದು ನಿರೀಕ್ಷಿಸುತ್ತೇನೆ.

ಈ ಕಾವ್ಯದ ಭಾಷೆಯ ವಿಷಯವಾಗಿ ನಾನು ಒಂದೆರಡು ಮಾತುಗಳನ್ನು ಹೇಳಬೇಕಾ ಗಿದೆ. ಭಾಷೆಯು ಕ್ಲಿಷ್ಟವಾಗಿದ್ದು ಮೆದುಳಿಗೆ ಕೆಲಸವನ್ನು ಕೊಡುವದಾಗುವದಕ್ಕಿಂತಲೂ ಸರ ಳವಾಗಿದ್ದು ಹೃದಯವನ್ನು ಅರಳಿಸುವದರ ಕಡೆಗೆ ಹೆಚ್ಚು ಒಲವು ಇರಬೇಕೆಂದು ಸ್ವಭಾವವಾಗಿ ನನಗೆ ಇರುವ ಉದ್ದೇಶವು ಈ ಗ್ರಂಥದ ಸರಣಿಯ ಮೇಲೆ ಪರಿಣಾಮವನ್ನು ಮಾಡಿದೆ. ಆ ಸರ ಳತೆಯು ಸಾಮಾನ್ಯಗ್ರಂಥಗಳಲ್ಲಿರಬೇಕೆಂದೂ ಕಾವ್ಯವೆಂದು ಕರೆಯಿಸಿಕೊಳ್ಳುವ ಗ್ರಂಥವು ಪ್ರೌಢವಾಗಿಯೇ ಇರಬೇಕೆಂದೂ ಕೆಲವರು ಅಭಿಪ್ರಾಯಪಡಬಹುದು. ಪ್ರೌಢಿಮೆಯನ್ನು ರಕ್ಷಣೆಮಾಡುವದೂ ಅವಶ್ಯವಾದದ್ದು. ಆದರೆ ಅದೇ ಪರಮಪುರುಷಾರ್ಥವೆಂದು ಮಾತ್ರ ನಾನು ತಿಳಿಯಲಾರೆನು. ಭಾಷೆಯು ವಿಚಾರವನ್ನು ಪ್ರಸಾರಮಾಡುವುದಕ್ಕೇ ಹೊರತು ಪ್ರೌಢಿಮೆ ಯನ್ನು ತೋರಿಸುತ್ತಿರುವದಕ್ಕಲ್ಲ. ಆದ್ದರಿಂದ ಧರ್ಮನೀತಿಗಳನ್ನುಪದೇಶಮಾಡುವದೇ ಪರಮಪುರುಷಾರ್ಥವಾಗಿರಬೇಕು. ಪ್ರೌಢಿಮೆಯು ಅದಕ್ಕೆ ಉಪಕರಣವು ಜಗತ್ತಿಗೆ ಜಗತ್ತೇ

ರೂಪಾಂತರವನ್ನು ಹೊಂದುತ್ತ ಹೋಗುತ್ತಿರುವಾಗ ಕಾವ್ಯದ ಪ್ರೌಢಿಮೆ ಮಾತ್ರ ಏಕರೂಪದಿಂದ ಇರಬೇಕೆಂದು ಯೋಚಿಸುವದು ಸಯುಕ್ತಿಕವಾಗಲಾರದು. ಬಹುಕಾಲದ ಹಿಂದೆ ನಮ್ಮ ಗ್ರಂಥಗಳೆಲ್ಲಾ ಸಂಪೂರ್ಣವಾಗಿ ಗದ್ಯವೂ ಹಳಗನ್ನಡ, ಪದ್ಯವೂ ಹಳಗನ್ನಡ– ಹೀಗೆ ಹಳಗನ್ನಡದಲ್ಲಿಯೇ ಇದ್ದವು. ಆ ಮೇಲೆ ಷಟ್ಪದಿಕಾರರು ತಲೆ ಎತ್ತಿ ಆಗಿನ ಕಾಲದ ಸ್ಥಿತಿಯನ್ನು ನೋಡಿ ಜನರ ಗಂಟಲಲ್ಲಿ ಬರೀ ಹಳಗನ್ನಡದ ಶಬ್ದಗಳ ಆರಿದ ತುತ್ತುಗಳು ಇಳಿಯದಂತಾಗಿದ್ದುದರಿಂದ ಮೆಲ್ಲಮೆಲ್ಲಗೆ ಅದರಲ್ಲಿ ಹೊಸಗನ್ನಡದ ರೂಪಗಳನ್ನು ಅಲ್ಲಲ್ಲಿ ಬೆರೆಸಿ ಹೊಸಸವಿಯನ್ನುಂಟು ಮಾಡಿ ಗ್ರಂಥಗಳನ್ನು ರಚಿಸಿದರು. ಲಕ್ಷ್ಮೀಶನಂಥ ಷಟ್ಪದಿಕಾರರಿಗೆ ಸಂಪೂರ್ಣವಾಗಿ ಹಳಗನ್ನಡದಲ್ಲಿಯೇ ಬರೆಯುವದಾಗುತ್ತಿರಲಿಲ್ಲವೆಂದು ಯಾರೂ ಊಹಿಸುವ ಹಾಗಿಲ್ಲ. ಜನರ ಮನಸ್ಸಿನ ಮೇಲೆ ತನ್ನ ಗ್ರಂಥವು ಏನಾದರೂ ಪರಿಣಾಮವನ್ನು ಮಾಡಬೇಕಾಗಿದ್ದರೆ ತನ್ನ ಭಾಷೆಯು ಜನರ ಗಂಟಲಲ್ಲಿ ಸರಾಗವಾಗಿ ಇಳಿಯುವಂತೆ ಸವಿಗೂಡಿರುವ ಹಾಗೆ ಮಾಡುವದಗತ್ಯವೆಂದೇ ಅವನು ಹೊಸಗನ್ನಡಹಳಗನ್ನಡಗಳ ಮಿಶ್ರಣವನ್ನು ಮಾಡಿದನೆಂದು ಹೇಳಬೇಕಾಗುವದು. ಇದಲ್ಲದೆ ಪೂರ್ವದ ನಾಟಕಗಳಲ್ಲಿ ಗದ್ಯಪದ್ಯಗಳೆರಡೂ ಹಳಗನ್ನಡದಲ್ಲಿರುತ್ತಿದ್ದರೂ ಈಚೀಚೆಗೆ ಪದ್ಯಗಳನ್ನು ಮಾತ್ರ ಹಳಗನ್ನಡದಲ್ಲಿಟ್ಟು ಗದ್ಯವನ್ನೆಲ್ಲಾ ಹೊಸಗನ್ನಡದಲ್ಲಿ ಬರೆಯುವ ಪದ್ಧತಿಯೂ ಮುಂದೆ ಬಂತು. ಹೀಗೆ ಕಾಲಕ್ರಮವಾಗಿ ಹೊಸಗನ್ನಡವು ಹಳಗನ್ನಡದ ಸ್ಥಲವನ್ನಾಕ್ರಮಿಸುತ್ತ ಬರುತ್ತಿರುವದು ಎಲ್ಲೆಲ್ಲಿಯೂ ಸ್ಪಷ್ಟವಾಗುವದು. ಗದ್ಯಗ್ರಂಥಗಳಲ್ಲಂತು ಈಚೀಚೆಗೆ ಹಳಗನ್ನಡದ ಶಬ್ದಗಳು ಅದೃಶ್ಯವೇ ಆಗಿರುವವು. ಹೊಸಗನ್ನಡ ಹಳಗನ್ನಡಗಳ ಮಿಶ್ರಣವು ಷಟ್ಪದಿಗಳಲ್ಲಿ ಪ್ರಾರಂಭವಾಗಿ ಸೋಮೇಶ್ವರಶತಕ ಮೊದಲಾದವುಗಳ ಮೂಲಕ ವೃತ್ತಜಾತಿಗಳಲ್ಲಿಯೂ ಕಾಲು ಚಾಚಿರುವದು. ಈ ವಿಚಾರವಾದ ಪ್ರಸ್ತಾವನೆಯನ್ನು ಇಲ್ಲಿ ಇಷ್ಟು ಬೆಳೆಸಿದ್ದಕ್ಕೆ ಕಾರಣವೇನೆಂದರೆ ವೃತ್ತಮಯವಾದ ಈ ನನ್ನ ಗ್ರಂಥದಲ್ಲಿಯೂ ಆ ಮಿಶ್ರಣವಿರುವದು. ಈ ಮಿಶ್ರಣವು ಷಟ್ಪದಿಗೆ ಮಾತ್ರ ಶಿಷ್ಟಸಮ್ಮತವೆಂದು ಕೆಲವರು ಹೇಳಬಹುದು. ಷಟ್ಪದಿಯಲ್ಲಿ ಶಿಷ್ಟಸಮ್ಮತವೆನಿಸಿದ ಭಾಷೆಯು ಚೌಪದಿಯಲ್ಲಿ ಹೇಗೆ ನಿಂದ್ಯವಾದೀತು? ಈ ಸಂದರ್ಭದಲ್ಲಿ ಗ್ರಂಥಕರ್ತನ ಪರಿಸ್ಥಿತಿಯನ್ನೂ ಸ್ವಲ್ಪ ಮಟ್ಟಿಗೆ ವಿಚಾರಕ್ಕೆ ತೆಗೆದುಕೊಳ್ಳಬೇಕಾಗಿದೆ. ಉಪಾಧ್ಯಾಯನು ಪಂಡಿತನಾದರೂ ತನ್ನ ಪ್ರೌಢಿಮೆಯನ್ನು ಹಿಂದಿಟ್ಟು ವಿದ್ಯಾರ್ಥಿಯ ಮನಸ್ಸಿನ ಪರಿಸ್ಥಿತಿಗೆ ಇಳಿದು ವಿಚಾರ ಮಾಡಿ ಉಪದೇಶಿಸುವಂತೆ ಗ್ರಂಥಕರ್ತರು ಒಂದು ಪಕ್ಷ ತಾವು ಹಳಗನ್ನಡದಲ್ಲಿ ನಿಪುಣರಾಗಿದ್ದರೂ ತಮ್ಮ ಪ್ರೌಢಿಮೆಯನ್ನು ಹಿಂದಕ್ಕೊತ್ತಿ ವಾಚಕರ ಅಭಿರುಚಿಯನ್ನು ತಿಳಿದು ಅದಕ್ಕೆ ತಕ್ಕ ರೂಪದಲ್ಲಿ ಗ್ರಂಥವನ್ನು ನಿರ್ಮಿಸುವದು ಯೋಗ್ಯವಾಗಿದೆ. ಏಕೆಂದರೆ ಗ್ರಂಥವನ್ನು ಬರೆಯುವದು ಹಳಗನ್ನಡವನ್ನು ರಕ್ಷಿಸುವದಕ್ಕಲ್ಲ; ಉದಾತ್ತವಿಚಾರಗಳನ್ನು ವಾಚಕರ ಮನಸ್ಸಿನಲ್ಲಿ ಬಿತ್ತುವದಕ್ಕೆ. ಇದಕ್ಕಾಗಿ ಅವರು ಹೊಸ

ಗನ್ನಡವನ್ನು ಸೇರಿಸಿದ ಮಾತ್ರಕ್ಕೇ ಪ್ರೌಢಿಮೆಗೆ ಭಂಗ ಬಂದಂತೆ ಆಗಲಾರದು. ಶಬ್ದದ ಪ್ರೌಢಿಮೆಗಿಂತ ಅರ್ಥದ ಪ್ರೌಢಿಮೆಗೆ ಬೆಲೆ ಹೆಚ್ಚು. ಆದ್ದರಿಂದ ಕಾವ್ಯದ ಪ್ರೌಢಿಮೆಯನ್ನು ಅರ್ಥದಲ್ಲಿ ನೋಡಬೇಕು. ಶಬ್ದಗಳು ಆ ಕಾಲದ ವ್ಯವಹಾರರೂಪದಲ್ಲಿ ಗ್ರಂಥಕ್ಕೆ ಸೇರು ವಷ್ಟು ಶಿಷ್ಟಸಮ್ಮತವಾಗಿದ್ದರಾಯಿತು. ಮಾತಾಡುವ ಭಾಷೆಯು ವ್ಯವಹಾರದಲ್ಲಿ ಪೂರ್ಣ ಪ್ರವಾಹವಾಗಿ ಭೋರ್ಗರೆಯುತ್ತ ಮುಂದೆ ನುಗ್ಗುವ ಭರದಲ್ಲಿ ಗ್ರಂಥಸ್ಥರೂಪವನ್ನು ಮೀರಿದರೆ ಅದು ತನ್ನ ಪಾತ್ರವನ್ನು ಮೀರಿ ಹೋಯಿತೆಂದು ಅದರ ಮೇಲೆ ಕಣ್ಣುಕೆಂಪಗೆ ಮಾಡಿದರೇನು ಪ್ರಯೋಜನ? ಅದರ ಪಾತ್ರವನ್ನು ದೊಡ್ಡದು ಮಾಡುವದು ವಿವೇಕ. ಅದನ್ನು ಇತರರು ಮಾಡಲಿ, ಬಿಡಲಿ; ಅದು ತಾನಂತು ಮಾಡಿಕೊಂಡೇ ಬಿಡುವದು. ವ್ಯಾಕರಣಶಾಸ್ತ್ರಕಾರರೆಲ್ಲ ಈ ನಿಯಮದ ಬೆನ್ನು ಹಿಡಿದು ನಡೆಯತಕ್ಕವರೆ. ಆಯಾ ಕಾಲದ ಭಾಷೆಯ ಬೆಳವಳಿಗೆಯನ್ನು ನೋಡಿ ಅದಕ್ಕೊಂದು ವ್ಯವಸ್ಥೆಯನ್ನು ಕಲ್ಪನೆ ಮಾಡುವದೇ ಅವರ ಕೆಲಸ. ಅಭಿಜ್ಞರು ಈಗ ಹೊಸಗನ್ನಡದ ವಿಷಯದಲ್ಲಿ ಈ ಕಾರ್ಯವನ್ನು ಮಾಡುವದಕ್ಕೆ ತಕ್ಕ ಕಾಲವು ಒದಗಿರುವದು.

ಇಲ್ಲಿ ಇನ್ನೊಂದು ಮಾತನ್ನೂ ನಾನು ನೆನಪಿನಿಂದ ಹೇಳಬೇಕಾಗಿದೆ. ಹಿಂದೆ ನಾನು ಕೆಲವು ಮಾಸಪತ್ರಿಕೆಗಳಿಗೆ ಬರೆದಾಗ ಕೆಲವು ಕಡೆ ಪಾದಾಂತದಲ್ಲಿ ಲಘುವನ್ನಿಟ್ಟದ್ದೆನು. ಅದನ್ನು ನೋಡಿದ ನನ್ನ ಮಿತ್ರರು ಆ ಸ್ಥಲದಲ್ಲಿ ಗುರುವನ್ನಿಡುವಂತೆ ನನಗೆ ಆಗ ಎಚ್ಚರಿಕೆಯನ್ನು ಕೊಟ್ಟಿದ್ದರು. ಆಗಲೇ ಅವರಿಗೆ ನಾನು ವಿನಯಪೂರ್ವಕವಾಗಿ ಸಮಾಧಾನವನ್ನು ಹೇಳುವ ಅವಕಾಶವು ಸಿಕ್ಕಿರ ಲಿಲ್ಲ. ಈ ಗ್ರಂಥದಲ್ಲಿಯೂ ಎಷ್ಟೋ ಕಡೆ ಪಾದಾಂತದಲ್ಲಿ ಲಘುಗಳು ಕಣ್ಣಿಗೆ ಬೀಳಬಹುದು. ಆದ್ದರಿಂದ ಈಗ ನಾನು ಇಲ್ಲಿ ಅದರ ಸಮಾಧಾನವನ್ನು ಸೂಚನೆ ಮಾಡುತ್ತೇನೆ. ಪಾದಾಂತದ ಹ್ರಸ್ವವು ಗುರುವೆನಿಸಿಕೊಳ್ಳುವದೆಂದು ಮಹಾಕವಿ ಕಾಲಿದಾಸನು ಶ್ರುತಬೋಧದಲ್ಲಿ ಗುರು ಲಘುಗಳ ಲಕ್ಷಣವನ್ನು ಹೇಳುವ ಸಂದರ್ಭದಲ್ಲಿ ಸ್ಪಷ್ಟಮಾಡಿರುತ್ತಾನೆ; ನೋಡಬಹುದು.

**"ಸಂಯುಕ್ತಾಂತಂ ದೀರ್ಘಂ ಸಾನುಸ್ವಾರಂ ವಿಸರ್ಗಸಂಯುಕ್ತಂ॥**
**ವಿಜ್ಞೇಯಮಕ್ಷರಂ ಗುರು ಪಾದಾಂತಸ್ಥಂ ವಿಕಲ್ಪೇನ"**

ಇನ್ನು ಕಾವ್ಯದೃಷ್ಟಿಯಿಂದ ನೋಡಿದರೆ ಶಾಸ್ತ್ರಜ್ಞರಿಗೆ ಇದರಲ್ಲಿ ಏನಾದರೂ ದೋಷಗಳು ಕಾಣಬಹುದು. ಏಕೆಂದರೆ ಇದು ಪಾಕಶಾಸ್ತ್ರಜ್ಞನಲ್ಲದ ಅನುಭವಿಯ ಅಡಿಗೆಯಂತೆ ಕಾವ್ಯ ಲಕ್ಷಣಜ್ಞನಲ್ಲದವನ ಕಾವ್ಯವು. ಕಾವ್ಯದಲ್ಲಿ ನಗರ, ಅರ್ಣವ, ಶೈಲ, ಋತು, ಚಂದ್ರ, ಅರ್ಕ— ಮೊದಲಾದ ಅಷ್ಟಾದಶವರ್ಣನೆಗಳಿರಬೇಕೆಂಬ ತಿಳಿವಳಿಕೆಯು ಒಂದು ಸಂಸ್ಕಾರವು ನನಗೆ ಅಸ್ಪಿಷ್ಟಿ ದ್ದರೂ ಆ ನಿಯಮವನ್ನು ಪೂರ್ಣಮಾಡುವದಕ್ಕಾಗಿ ನಮ್ಮ ಪ್ರಸಂಗಕ್ಕೆ ಸಂಬಂಧಪಡದ

ವಿಷಯಗಳ ವರ್ಣನೆಯಲ್ಲಿ ತೊಡಗುವದು ಹೇಗೆ ಯೋಗ್ಯವೋ ನನಗಿನ್ನೂ ವಿಚಾರಾಸ್ಪದ ವಾಗಿಯೇ ಇರುವದು. ಆದ್ದರಿಂದ ಅಂಥ ಗೋಜಿಗೆ ಹೋಗದೆ ಧರ್ಮಾಭಿಮಾನವೂ ದೇಶಾಭಿಮಾನವೂ ಏಕೀಭವಿಸಿ ಮೂರ್ತಸ್ವರೂಪವನ್ನು ಪಡೆದಿದ್ದ ಶ್ರೀವಿದ್ಯಾರಣ್ಯರ ಉದಾಹರಣೆಯಿಂದ ಸ್ವದೇಶಾಭಿಮಾನ, ಸ್ವಧರ್ಮಾನುರಾಗ, ಸ್ವಾರ್ಥತ್ಯಾಗ— ಮೊದಲಾದ ಲೋಕೋತ್ತರವಾದ ಗುಣಗಳನ್ನು ಬಿಚ್ಚಿ ತೋರಿಸುವದಕ್ಕೆ ಸಾಧಕವಾಗುವಂಥ ವಿಷಯಗಳ ವರ್ಣನೆಯನ್ನು ಮಾತ್ರ ಅಲ್ಲಲ್ಲಿ ಬೆಳೆಸಿದ್ದೇನೆ.

ಈ ಗ್ರಂಥದಲ್ಲಿ ಶಬ್ದವಾಗಲಿ, ಅರ್ಥವಾಗಲಿ ಕ್ಲಿಷ್ಟವಾಗಬಹುದೆಂದು ತೋರಿದ ಕಡೆಯಲ್ಲಿ ವಾಚಕರ ಸೌಕರ್ಯಕ್ಕಾಗಿ ಅವಶ್ಯಕವಾದಷ್ಟು ಟಿಪ್ಪಣಿಗಳನ್ನು ಕೊಟ್ಟಿರುತ್ತೇನೆ. ಕಾವ್ಯದ ಕಥೆಯ ಸಾರಾಂಶವು ಮುಂದಾಗಿಯೇ ತಿಳಿದಿರಲೆಂದು ಅದರ ತಿರುಳನ್ನು ತೆಗೆದು ಇದರ ಮುಂದೆ ಜೋಡಿಸಿದ್ದೇನೆ. ಈ ಗ್ರಂಥವನ್ನು ಆಮೂಲಾಗ್ರವಾಗಿ ಓದಿ ನೋಡಿ ಅಲ್ಲಲ್ಲಿ ತಿದ್ದಿ ಉಪಯುಕ್ತವಾದ ಅನೇಕ ಸೂಚನೆಗಳನ್ನು ಕೊಟ್ಟು ಈ ಗ್ರಂಥದ ಯೋಗ್ಯತೆಯನ್ನು ಹೆಚ್ಚಿಸಿದ್ದಕ್ಕಾಗಿ ಧಾರವಾಡದ 'ಗಂಡಸರ ಟ್ರೈನಿಂಗ್ ಕಾಲೇಜಿ'ನ ಕರ್ಣಾಟಕಪಂಡಿತರಾದ ಶ್ರೀಯುತ ಮಹಾದೇವ ಪ್ರಭಾಕರ ಪೂಜಾರ ಮತ್ತು ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತಪಾಠಶಾಲೆಯ ಅಧ್ಯಾಪಕರೂ ಮತ್ತು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಸಂಪಾದಕರೂ ಆದ ಶ್ರೀಯುತ ವೈ. ಸುಬ್ಬರಾಯರು— ಈ ಉಭಯರಿಗೂ ನಾನು ಅತ್ಯಂತಕೃತಜ್ಞತಾಪೂರ್ವಕವಾಗಿ ವಂದಿಸುತ್ತೇನೆ

ಇಲ್ಲಿ ನಾನು ಇನ್ನೊಂದು ಮಹತ್ತ್ವದ ವಿಷಯವನ್ನು ಹೇಳತಕ್ಕದ್ದಿದೆ. ಅದೇನೆಂದರೆ:— ಒಮ್ಮೆ ಈ ಕಾವ್ಯವನ್ನು ಶ್ರೀಯುತ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರ ಮುಂದೆ ಅಲ್ಲಲ್ಲಿ ಓದಿ ತೋರಿಸುವ ಪ್ರಸಂಗವು ನನಗೊದಗಿತು. ಅದನ್ನು ಕೇಳುತ್ತ ಕೇಳುತ್ತ ಗುಣೈಕಪಕ್ಷಪಾತಿಗಳಾದ ಅವರು ಅನೇಕವಿಷಯಗಳ ಮೇಲೆ ತಮ್ಮ ಮೆಚ್ಚುಗೆಯನ್ನು ತೋರಿಸುತ್ತ ನಡುನಡುವೆ ಕಾವ್ಯದ ಗುಣೋತ್ಕರ್ಷಕ್ಕೆ ಅತ್ಯುಪಯುಕ್ತವಾದ ಅನೇಕಸೂಚನೆಗಳನ್ನು ಕೊಡುತ್ತ ಬಂದರು. ಇದರಿಂದ ನನಗೆ ಮತ್ತಷ್ಟು ಉತ್ತೇಜನವುಂಟಾಗಿ ಈ ಗ್ರಂಥಕ್ಕೆ ಅವರ ಮುನ್ನುಡಿಯನ್ನು ಪಡೆದುಕೊಳ್ಳಬೇಕೆಂಬ ನನ್ನ ಹಂಬಲನ್ನು ಪ್ರಕಟಮಾಡಿದೆನು. ಅವರು ಅದಕ್ಕೆ ಅತ್ಯಂತಪ್ರೇಮದಿಂದ ಸಮ್ಮತಿಯನ್ನು ಕೊಟ್ಟರು. ಒಡನೆ ನಾನು ಅವರ ಸೂಚನೆಗಳನ್ನೆಲ್ಲಾ ಕಾರ್ಯಕಾರಿಯಾಗಿ ಮಾಡಿ ಆ ಮೇಲೆ ಇದನ್ನು ಅವರ ಮುಂದಿಟ್ಟೆನು. ಮತ್ತೆ ಅವರು ತಮ್ಮ ಅಮೌಲ್ಯವಾದ ಕಾಲವನ್ನು ಇದಕ್ಕೆಕೊಟ್ಟು

ಇದನ್ನು ಓದಿಸಿ ಕೇಳಿ ಅತ್ಯಂತಪ್ರೋತ್ಸಾಹಕವಾದ ಮುನ್ನುಡಿಯನ್ನು ಬರೆದುಕೊಟ್ಟಿರುತ್ತಾರೆ.

"ಖ್ಯಾತಿಂ ಗಮಯತಿ ಸುಜನಃ
ಸುಕವಿರ್ವಿದಧಾತಿ ಕೇವಲಂ ಕಾವ್ಯಂ ||
ಪುಷ್ಣಾತಿ ಕಮಲಮಂಭಃ
ಲಕ್ಷ್ಮ್ಯಾತು ರವಿರ್ನಿಯೋಜಯತಿ"

ಎಂಬ ವಾಕ್ಯದಂತೆ ನಾನು ಯಥಾಮತಿ ಬರೆದಿಟ್ಟಿದ್ದ ಈ ಕಾವ್ಯಕ್ಕೆ ಈ ನಮ್ಮ ಮಹನೀಯರು ಈ ಬಗೆಯ ಒತ್ತಾಸೆಯನ್ನು ಕೊಟ್ಟ ಉಪಕಾರವು ಚಿರಸ್ಮರಣೀಯವಾಗಿರುವದು. ಇದರ ಜೊತೆಗೆ ಧಾರವಾಡದ ಕರ್ಣಾಟಕವಿದ್ಯಾವರ್ಧಕಸಂಘದವರು ಇದನ್ನು ನೋಡಿ ಸಂಭಾವಿಸಿ ದ್ರವ್ಯಸಹಾಯವನ್ನುಮಾಡಿದ್ದು ಇದರ ಪ್ರಸಿದ್ಧಿಗೆ ಉತ್ತೇಜನವಾಯಿತಾದ್ದರಿಂದ ಇಲ್ಲಿ ಅವರ ಔದಾರ್ಯವನ್ನು ನಾನು ಪ್ರಸಂಸೆಮಾಡದೆ ಇರಲಾರೆನು.

ಇನ್ನೊಂದು ವಿಷಯವನ್ನು ತಮ್ಮ ಕಿವಿಯ ಮೇಲೆ ಹಾಕಿ ಈ ನನ್ನ ಬಿನ್ನಹವನ್ನು ಮುಗಿಸುತ್ತೇನೆ. ಈ ಗ್ರಂಥಕ್ಕೆ ಗ್ರಂಥನಾಯಕನ ಭಾವಚಿತ್ರವೊಂದನ್ನು ಜೋಡಿಸಬೇಕೆಂದು ಉತ್ಸಾಹವುಂಟಾಯಿತು. ಶ್ರೀ ವಿದ್ಯಾರಣ್ಯರ ಭಾವಚಿತ್ರವು ಇದುವರೆಗೆಲ್ಲಿಯೂ ಹೊರಗೆ ಕಾಣಲಿಲ್ಲ. ಶ್ರೀ ಪಂಪಾವಿರೂಪಾಕ್ಷ ದೇವಾಲಯದ ಮುಂಭಾಗದ ಮಂಟಪದ ಮೇಲುಗಡೆಯಲ್ಲಿದ್ದ ಒಂದು ಚಿತ್ರವು ಅವರದೇ ಇರಬಹುದೆಂದು ತೋರಿತು. ಅದರ ಭಾವವನ್ನೆಲ್ಲಾ ಮನಸ್ಸಿಗೆ ತುಂಬಿಕೊಂಡು ಶ್ರೀಗಳ ಪ್ರತಿಭಾವಿಶೇಷಗಳನ್ನು ಪ್ರಕಟಮಾಡತಕ್ಕ ಉಪಕರಣ ಸಾಮಗ್ರಿಗಳನ್ನು ಮನಸ್ಸಿನಲ್ಲಿಯೇ ಗುಣಾಕಾರಹಾಕಿ ಆ ಮೇಲೆ ಅವನ್ನು ಸ್ಥೂಲರೂಪಕ್ಕೆ ತಂದು ಕೊಡಬಲ್ಲವರನ್ನು ಹುಡುಕಿಹುಡುಕಿ ಕಾಣದೆ ಬೇಸತ್ತಿದ್ದೆನು. ಈ ಕಾವ್ಯದ ಪ್ರತಿಯೊಂದು ನೆಲೆಯ ಕೊನೆಯಲ್ಲಿಯೂ ಬಂದಿರುವ ಹರಿಹರದ ಹರಿಹರೇಶ್ವರನ ಸ್ಮರಣೆಯು ತನಗೆ ತಾನೇ ಫಲಕಾರಿಯಾಯಿತೆಂದು ತೋರುತ್ತದೆ. ನಾನು ಒಮ್ಮೆ ಹರಿಹರಕ್ಕೆ ಹೋಗಿದ್ದಾಗ ಅಲ್ಲಿಯೇ ನಮ್ಮ ಮಿತ್ರರಾದ ಮ. ರಾ. ಮಾಗಳದ ರಂಗರಾಯರ ಸಮಾಗಮವಾಯಿತು. ಅಲ್ಲಿ ನನ್ನ ಉದ್ದೇಶವನ್ನು ಹೇಳುತ್ತಲೇ ನಮ್ಮ ಮಿತ್ರರು ಬಾಯಲ್ಲಿ ಸಮ್ಮತಿಯನ್ನು ಸೂಚಿಸುವದಕ್ಕೆ ಮೊದಲು ಕೈಯಲ್ಲಿ ಶ್ರೀ ಭಗವತ್ಪಾದರ ರೂಪರೇಖೆಯನ್ನೇ ಆರಂಭಿಸಿ ನನ್ನ ಕಲ್ಪನೆಗಳೆಲ್ಲಾ ಜೀವಕಲೆಯಿಂದ ತುಂಬಿದ ಮೂರ್ತಸ್ವರೂಪವೆಂಬಂತೆ ತಮ್ಮ ಹಸ್ತಕೌಶಲ್ಯದಿಂದ ಚಿತ್ತಾಕರ್ಷಕವಾದ ಭಾವಚಿತ್ರವನ್ನು ಬರೆದುಕೊಟ್ಟು ನನ್ನ ಉತ್ಸಾಹವನ್ನು ಪೂರ್ಣಮಾಡಿದ ಕರ್ಮಾಗನನು ನಾನು ಎಂದಿಗೂ ಮರೆಯಲಾರೆನು. ಇದರ ಜೊತೆಗೆ ಧಾರವಾಡದ ಜಯ

ಕರ್ನಾಟಕವೆಂಬ ಸುಪ್ರಸಿದ್ಧ ಮಾಸಪತ್ರಿಕೆಯ ಸಂಪಾದಕರಾದ ಶ್ರೀಯುತ ವೆಂಕಟೇಶ ಭೀಮ ರಾವ ಆಲೂರ ಇವರು ಈ ಕಾವ್ಯದ ವಿಷಯಗಳಿಗೆ ಸಂಬಂಧಪಟ್ಟ ಇನ್ನೂ ಮೂರು ಚಿತ್ರಗಳ ಅಚ್ಚನ್ನು ಕೊಟ್ಟು ಈ ಕಾವ್ಯವನ್ನು ಅಲಂಕಾರಗೊಳಿಸಿರುವ ಉಪಕಾರಕ್ಕೆ ನಾನು ಅತ್ಯಂತ ಋಣಿಯಾಗಿರುವೆನು.

ಈ ಗ್ರಂಥದಲ್ಲಿ ಗುಣಭಾಗವೆಷ್ಟಿದ್ದರೂ ಅದೆಲ್ಲಾ ಶ್ರೀ ವಿದ್ಯಾರಣ್ಯಸ್ವಾಮಿಗಳದು; ದೋಷವೆಷ್ಟಿದ್ದರೂ ಅದೆಲ್ಲಾ ನನ್ನದು. ಅಭಿಜ್ಞರು ಆ ದೋಷಗಳನ್ನು ತಿಳಿಸಿದರೆ ಸಂಪೂರ್ಣ ಕೃತಜ್ಞತೆಯಿಂದ ತಿದ್ದಿಕೊಳ್ಳುವೆನು. ಇದರಲ್ಲಿ ಪ್ರಮಾದದಿಂದ ಬಿದ್ದಿರುವ ಕೆಲವು ಅಚ್ಚಿನ ದೋಷಗಳನ್ನು ವಾಚಕರು ಮುಂದಾಗಿ ತಿದ್ದಿಕೊಳ್ಳಲೆಂದು ಆರಿಸಿ ಇದರ ಕೆಳಗೆ ಬರೆದಿದ್ದೇನೆ.

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| ೧೬ | ೧೯ | ರತ್ನಂಗಳ್ | ರತ್ನಂಗಳ |
| ೧೬ | ೨೦ | ರತ್ನಂಗಳ್ | ರತ್ನಂಗಳ |
| ೪೨ | ೫ | ಸೆರಗಿನೊಳಗಡಗುತ್ತೊಳಗೇ | ಸೆರಗಿನೊಳಗಡಗುತೊಳಗೇ |
| ೫೧ | ೪ | ತೋದುರ್ದಹನಿರ್ಶಂ | ತೋದುರ್ದಹನಿರ್ಶಂ |
| ೫೫ | ೨೦ | ಶಿಷ್ಯರು | ಶಿಷ್ಯರುಂ |
| ೬೦ | ೮ | ವಿಸಿದಪನೆ | ವಿಸಿದಪನೈ |
| ೬೩ | ೫ | ತಲದೊಳ್ಮೆಯ್ಯಿಕ | ತಲದೊಳ್ಮೆಯ್ಯಿಕ್ಕ |
| ೬೭ | ೨೧ | ಕೊಲ್ಗೆ | ಕೋಲ್ಗೆ |
| ೮೮ | ೨೨ | ಮಿಳಿಯಾಳ್ಚನ | ಮಿಳಿಯೊಳ್ಚನ |
| ೮೯ | ೧೫ | ಕೆಂಡಿಂದೆ | ಕೇಡಿಂದೆ |
| ೯೧ | ೧೩ | ಕೂದಲ್ಮೇಣ್ | ಕೂದಲ್ಕಣ್ |
| ೧೧೫ | ೧೫ | ಒಡೆ | ಒಡ್ಡೆ |
| ೧೨೨ | ೨೨ | ಲಾದುದೆನಿಸಿ | ಲಾದುದಾಗ |

**ಕಾವ್ಯಕರ್ತ.**

# ಕಥೆಯ ತಿರುಳು.

ಶ್ರೀವಿರೂಪಾಕ್ಷಕ್ಷೇತ್ರವಾದ ಹಂಪೆಯಲ್ಲಿ ಕ್ರಿ. ಹದಿನಾಲ್ಕನೇ ಶತಮಾನದ ಆದಿಯಲ್ಲಿ ಮಾಯಣನೆಂಬ ಒಬ್ಬ ಬ್ರಾಹ್ಮಣನಿದ್ದನು. ಆತನಿಗೆ ಶ್ರೀಮತಿಯೆಂಬಾಕೆಯು ಧರ್ಮಪತ್ನಿಯಾಗಿದ್ದಳು. ಈ ದಂಪತಿಗಳು ಶ್ರೀಪರಮೇಶ್ವರಿಯ ಅನುಗ್ರಹದಿಂದ ಮಾಧವ, ಸಾಯಣ, ಭೋಗನಾಥ– ಎಂಬ ಮೂವರು ಸುಪುತ್ರರನ್ನು ಪಡೆದರು. ಸಕಾಲದಲ್ಲಿ ಉಪನೀತನಾದ ಮಾಧವನು ಮೊದಲು ತಂದೆಯಿಂದ ಕಲಿಯತಕ್ಕವನ್ನೆಲ್ಲಾ ಕಲಿತು, ಸರ್ವಜ್ಞವಿಷ್ಣುಶರ್ಮರೆಂಬವರಲ್ಲಿ ಶಾಸ್ತ್ರಾಭ್ಯಾಸವನ್ನು ಮುಗಿಸಿ, ಸರ್ವಜ್ಞನೆಂದು ಹೆಸರನ್ನು ಪಡೆದು, ಆ ಮೇಲೆ ಮುಖ್ಯತತ್ತ್ವವನ್ನು ಅನುಭವಕ್ಕೆ ತಂದುಕೊಳ್ಳುವದಕ್ಕೆ ಕಂಚಿಗೆ ಹೋಗಿ ಶ್ರೀವಿದ್ಯಾತೀರ್ಥಸ್ವಾಮಿಗಳಲ್ಲಿ ಗುರುಕುಲವಾಸವನ್ನು ಮಾಡಿದನು. ಅಲ್ಲಿಯ ಕೆಲಸ ಮುಗಿದ ಮೇಲೆ ಆ ಸ್ವಾಮಿಗಳು ತಮಗೆ ಗುರುದಕ್ಷಿಣೆಯಾಗಿ ಧರ್ಮಪ್ರಸಾರವನ್ನು ಮಾಡೆಂದು ಹೇಳಿ ಅನುಗ್ರಹವನ್ನು ಮಾಡಿ ಮಾಧವನನ್ನು ತಿರುಗಿ ಊರಿಗೆ ಕಳುಹಿಸಿದರು. ಇವನ ಜೊತೆಯಲ್ಲಿಯೇ ಸಾಯಣಭೋಗನಾಥರೂ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಬಂದರು.

ಇಷ್ಟರೊಳಗೆ ಉತ್ತರದಲ್ಲಿ ನಡೆಯುತ್ತಿದ್ದ ಮುಸಲ್ಮಾನರ ಹಾವಳಿಯ ಭಯಂಕರವಾದ ಸುದ್ದಿಯು ದಕ್ಷಿಣಕ್ಕೆ ಬರುವದಕ್ಕಾರಂಭವಾಗಿತ್ತು. ಇದನ್ನು ನೋಡಿ ವ್ಯವಹಾರದಲ್ಲಿದ್ದು ಧರ್ಮವನ್ನು ಕಾಪಾಡಿಕೊಳ್ಳುವದು ಈಗಿನ ಪರಿಸ್ಥಿತಿಯಲ್ಲಿ ಶಕ್ಯವಿಲ್ಲವೆಂದು ಭೋಗನಾಥನು ನೆಟ್ಟಗೆ ಶೃಂಗೇರಿಗೆ ಹೋಗಿ ಅಷ್ಟು ಹೊತ್ತಿಗೆ ಕಂಚಿಯಿಂದ ಅಲ್ಲಿಗೆ ಬಂದಿದ್ದ ಶ್ರೀವಿದ್ಯಾತೀರ್ಥರಿಂದ ಸಂನ್ಯಾಸವನ್ನು ಪಡೆದು ಶ್ರೀಭಾರತೀತೀರ್ಥರೆಂಬ ಹೆಸರಿನಿಂದ ಜಗದ್ಗುರುಪೀಠದಲ್ಲಿ ವಿರಾಜಿತನಾದನು. ಇತ್ತ ಮಾಧವಸಾಯಣರು ಗೃಹಸ್ಥರಾದರು ಮಾಧವನು ತನ್ನ ಮನೆಯಲ್ಲಿ ಶಿಷ್ಯರಿಗೆ ಪಾಠವನ್ನು ಹೇಳುತ್ತ ಅನೇಕಗ್ರಂಥಗಳನ್ನು ರಚಿಸುತ್ತ ಯಜ್ಞಯಾಗಾದಿಗಳನ್ನು ನಿರ್ವಹಿಸಿ ಧರ್ಮವನ್ನು ಊರ್ಜಿತಸ್ಥಿತಿಗೆ ತರುತ್ತಿದ್ದನು.

ಇದನ್ನು ಕಂಡು ಇಂದ್ರನು ಮಾಧವನ ನಿಷ್ಠೆಯನ್ನು ಪರೀಕ್ಷಿಸಬೇಕೆಂದು ಲಕ್ಷ್ಮಿಯು ಅವನಿಗೆ ನೆರವಾಗದಂತೆ ಮಾಡಿದನು. ಹೀಗೆ ಧನಸಂಪತ್ತು ತನ್ನಿಂದ ಹಿಮ್ಮೆಟ್ಟಿದ್ದನ್ನು ನೋಡಿ ಮಾಧವನು ಶ್ರೀಭುವನೇಶ್ವರಿಯನ್ನು ಕುರಿತು ಉಗ್ರತಪಶ್ಚರ್ಯೆಯನ್ನು ನಡೆಸಿದನು. ಆಗ

ಅವನ ಕುಲಪರಂಪರೆಯು ಶಿಷ್ಯವರ್ಗದವನಾದ ಹರಿಹರನು ಅವನಿಗೆ ಹಾಲು ಮೊದಲಾದ ಉಪಹಾರವನ್ನು ತಂದುಕೊಡುತ್ತಿದ್ದನು. ಹೀಗಿರುವಾಗ ಆದಿಶಕ್ತಿಯು "ನಿನಗೆ ಈ ಜನ್ಮದಲ್ಲಿ ಐಶ್ವರ್ಯವನ್ನನುಭವಿಸುವ ಯೋಗವಿಲ್ಲ" ಎಂದು ಅಶರೀರವಾಕ್ಕಿನಿಂದ ಹೇಳಿದಂತಾಯಿತು. ಇದರಿಂದ ನಿರಾಶನಾಗಿ ಮಾಧವನು ತಾನೂ ಸಂನ್ಯಾಸಿಯಾಗಿಬಿಡುವೆನೆಂದು ಶೃಂಗೇರಿಗೆ ಹೋಗಿ ಶ್ರೀವಿದ್ಯಾತೀರ್ಥರಿಗೆ ಶರಣುಹೊಕ್ಕನು. ಶ್ರೀವಿದ್ಯಾತೀರ್ಥರು ಒಡನೆ ಅವನ ಇಷ್ಟವನ್ನು ನೆರವೇರಿಸದೆ ಕೆಲವು ದಿವಸ ತಪಶ್ಚರ್ಯೆಯನ್ನು ಮಾಡಿಕೊಂಡು ಇಲ್ಲಿಯೇ ಇರೆಂದು ಅವನನ್ನು ಇಟ್ಟುಕೊಂಡರು.

ಮಾಧವನು ಶೃಂಗೇರಿಗೆ ಹೋದ ಮೇಲೆ ಅವನ ಸಹಾಯದಿಂದ ಮುಂದೆ ಬರಬೇಕೆಂದಿದ್ದ ಹರಿಹರನಿಗೆ ದಿಕ್ಕು ತೋಚದ ಹಾಗಾಗಿತ್ತು. ಹೀಗಿರುವಾಗ ಒಂದು ದಿನ ಬೇಡರು ಬಂದು ಹರಿಹರನನ್ನೂ ಅವನ ತಮ್ಮನಾದ ಬುಕ್ಕನನ್ನೂ ಬೇಟೆಗೆ ಕರೆದುಕೊಂಡುಹೋದರು. ಬೇಟೆಯಾಡುವಾಗ ಹರಿಹರನು ಒಂದು ಹುಲಿಯನ್ನು ಹಿಡಿಯಲೆಂದು ತನ್ನ ನಾಯನ್ನಟ್ಟಿದನು. ಆ ನಾಯಿ ಹೋಗುವಾಗ ಹಿಂದಿನಿಂದ ಒಂದು ಮೊಲವು ಬಂದು ಅದರ ಕಾಲನ್ನು ಹಿಡಿದು ಅದನ್ನು ತಡೆದುಬಿಟ್ಟಿತು. ಅಷ್ಟರಲ್ಲಿ ಮತ್ತೊಬ್ಬನು ಆ ಹುಲಿಯನ್ನು ಹೊಡೆದು ಅದರಿಂದ ಸಂಭವಿಸುತ್ತಿದ್ದ ಅಪಾಯವನ್ನು ತಪ್ಪಿಸಿ ಬೇಟೆಯನ್ನು ಯಶಸ್ವಿಯಾಗಿ ಮಾಡಿದನು. ಆದರೆ ತನ್ನ ನಾಯನ್ನು ಮೊಲವು ತಡೆದದ್ದು ಹರಿಹರನಿಗೆ ಬಹಳ ಖೇದವನ್ನುಂಟುಮಾಡಿತು. ಹೀಗೆ ಬೇಟೆಯನ್ನು ಮುಗಿಸಿಕೊಂಡು ತಿರುಗಿ ಬರುವ ಹೊತ್ತಿಗೆ ಮನೆಯಲ್ಲಿ ಬುಕ್ಕನ ಹೆಂಡತಿಯಾದ ಹೊನ್ನಮ್ಮನು ಕಣ್ಣೀರಿಡುತ್ತ ಕುಳಿತಿದ್ದಳು. ದುಃಖದ ಕಾರಣವನ್ನು ಕೇಳಿದಾಗ ತಮ್ಮ ಊರಾದ ಆನೇಗೊಂದಿಯ ರಾಜನು ಮುಸಲ್ಮಾನರೊಡನೆ ಕೈಮಾಡದೆ ಹೆಂಡತಿಮಕ್ಕಳೊಡನೆ ಅಗ್ನಿಪ್ರವೇಶಮಾಡುವದನ್ನು ನೋಡುತ್ತ ನಾವು ಸುಮ್ಮನಿರುವದು ಹೇಗೆಂದು ಆಕೆ ಬುಕ್ಕನಿಗೆ ವೀರಾವೇಶವುಂಟಾಗುವಂತೆ ಪರಿಪರಿಯಿಂದ ವಿಲಾಪಮಾಡಿದಳು. ಆಗ ಬುಕ್ಕನು ಈ ಸಮಯದಲ್ಲಿ ತನ್ನ ಪ್ರತಾಪವನ್ನು ತೋರುವೆನೆಂದು ಪ್ರತಿಜ್ಞೆಯನ್ನು ಮಾಡಿ ಹರಿಹರನೊಡನೆ ಆನೇಗೊಂದಿಯ ಜಂಬುಕೇಶ್ವರನ ಬಳಿಗೆ ಹೋದನು. ದುರ್ಬಲರಾಗಿರುವ ಸ್ಥಿತಿಯಲ್ಲಿ ಅವಿಚಾರದಿಂದ ಮುಂದೆ ಬೀಳುವದು ಯೋಗ್ಯವಲ್ಲವೆಂದು ಜಂಬುಕೇಶ್ವರನು ಬುಕ್ಕನನ್ನು ನಿವಾರಿಸಿ ಮುಂದೆ ಸಹಾಯಸಂಪತ್ತನ್ನು ದೊರಕಿಸಿಕೊಂಡು ದೇಶವನ್ನುದ್ಧಾರಮಾಡಹೇಳಿ ಆಗ ತನಗೆ ಉಪಾಯಾಂತರವಿಲ್ಲದ್ದರಿಂದ ಅಗ್ನಿಪ್ರವೇಶವನ್ನು ಮಾಡಿದನು ಆ ಮೇಲೆ ಹರಿಹರಬುಕ್ಕರು ತಮ್ಮತಮ್ಮಲ್ಲಿ ವಿಚಾರಮಾಡಿ ಮಾಧವನ ನೆರವನ್ನು ಪಡೆಯಬೇಕೆಂದು ಶೃಂಗೇರಿಗೆ ಹೋಗಿ ಶ್ರೀವಿದ್ಯಾತೀರ್ಥರ ಮುಂದೆ ತಮ್ಮ ಗೋಳನ್ನು

ಹೇಳಿಕೊಂಡರು. ಧರ್ಮಕ್ಕೂ ಧಾರ್ಮಿಕಪುರುಷರಿಗೂ ಒದಗಿದ್ದ ದುಃಸ್ಥಿತಿಯನ್ನು ಕೇಳಿ ಕನಿಕರದಿಂದ ಶ್ರೀವಿದ್ಯಾತೀರ್ಥರು ತಮ್ಮ ಶಿಷ್ಯನಾದ ಮಾಧವನನ್ನು ಈ ಕೆಲಸಕ್ಕೆ ನೆರವಾಗುವಂತೆ ಪ್ರೋತ್ಸಾಹಿಸಿ ಈ ಕೆಲಸವನ್ನು ಮುಗಿಸಿಕೊಂಡು ಬರುತ್ತಲೇ ಅವನಿಗೆ ವಿದ್ಯಾರಣ್ಯರೆಂಬ ಹೆಸರಿಟ್ಟು ಜಗದ್ಗುರುಪೀಠವನ್ನು ಅವನಿಗೆ ಬಿಟ್ಟುಕೊಡುವಂತೆ ಶ್ರೀಭಾರತೀತೀರ್ಥರಿಗೆ ಆಜ್ಞಾಪಿಸಿದರು. ಅದರಂತೆ ಮಾಧವನು ಹರಿಹರಬುಕ್ಕರ ಹಿಂದೆ ಮತ್ತೆ ಹಂಪೆಗೆ ಬಂದನು.

ಮಾಧವನು ಮಾರ್ಗದಲ್ಲಿ ದೇಶವೆಲ್ಲಾ ಮುಸಲ್ಮಾನರ ಅಪವಿತ್ರಕೃತ್ಯಗಳಿಂದ ಗಾಸಿಯಾಗಿದ್ದದ್ದನ್ನು ನೋಡುತ್ತ ಬರುತ್ತಿರುವಾಗ ಹರಿಹರನು ಕಾಡಿನಲ್ಲಿ ಮೊಲವು ನಾಯನ್ನು ಹಿಡಿದ ಸ್ಥಲವನ್ನು ಅವನಿಗೆ ತೋರಿಸಿದನು. ಮಾಧವನು ಅದನ್ನು ಕ್ಷಣಕಾಲ ವಿಚಾರಮಾಡಿ ಆ ಸ್ಥಲದಲ್ಲಿ ಸಾತ್ವಿಕಪ್ರಾಣಿಯಾದ ಮೊಲಕ್ಕೆ ಆ ಸಾಮರ್ಥ್ಯವುಂಟಾದ್ದನ್ನು ನೆನೆನೆನೆದು ಅದನ್ನು ಶುಭಸೂಚನೆಯೆಂದು ನಿಶ್ಚಯಿಸಿ ಅಲ್ಲಿಯೇ ಹೊಸ ರಾಜ್ಯವನ್ನು ಸ್ಥಾಪನೆ ಮಾಡುವೆನೆಂದು ಪ್ರತಿಜ್ಞೆಯನ್ನು ಮಾಡಿ ಅದಕ್ಕೆ ಉಪಕಾರಕವಾಗಿ ಜನರಲ್ಲಿ ಐಕಮತ್ಯವನ್ನುಂಟುಮಾಡುವ ಯತ್ನವನ್ನು ನಡೆಸಿರೆಂದು ಹರಿಹರಬುಕ್ಕರನ್ನು ಕಳುಹಿಸಿ ಇತ್ತ ತಾನು ಜನರ ದುಃಸ್ಥಿತಿಯನ್ನು ದೂರಮಾಡಲು ಶ್ರೀಭುವನೇಶ್ವರಿಯನ್ನು ಕುರಿತು ಪೂರ್ವಾಧಿಕವಾದ ತಪಶ್ಚರ್ಯೆಯಲ್ಲಿ ನಿಂತನು. ಆಗ ಮಾಧವನ ನಿಷ್ಠೆಗೆ ಬೆರಗಾದ ಇಂದ್ರನು ಲಕ್ಷ್ಮಿಯನ್ನು ಪ್ರೋತ್ಸಾಹಿಸಲು ಆಕೆ ಮಾಧವನಿಗೆ ಪ್ರತ್ಯಕ್ಷಳಾಗಿ ಸುವರ್ಣವೃಷ್ಟಿಯನ್ನು ಮಾಡಿದಳು.

ಇಷ್ಟರಲ್ಲಿ ಹರಿಹರಬುಕ್ಕರು ತಮ್ಮ ಪ್ರಯತ್ನವನ್ನು ಮುಗಿಸಿಕೊಂಡು ಅನೇಕಜನರೊಡನೆ ಮಾಧವನ ಬಳಿಗೆ ಬಂದರು. ಸುವರ್ಣವೃಷ್ಟಿಯಿಂದ ಸಂತುಷ್ಟರಾದ ಜನರು ಮಾಧವನನ್ನು ಹೊಗಳಿ ಸ್ವರಾಜ್ಯನಿಧಿಯನ್ನು ಕೂಡಿಸಿದರು. ಆ ಮೇಲೆ ಮೊಲವು ನಾಯನ್ನು ಹಿಡಿದ ಸ್ಥಲದಲ್ಲಿಯೇ ಮರುದಿನವೇ ಸುಮುಹೂರ್ತದಲ್ಲಿ ವರಾಹಧ್ವಜಪ್ರತಿಷ್ಠೆಯಾಯಿತು. ಬ್ರಾಹ್ಮಣರ ಪರಾರ್ಥನಿಷ್ಠೆಯನ್ನು ಪ್ರದರ್ಶನಮಾಡಿ ಮಾಧವನು ಹರಿಹರನಿಗೆ ರಾಜ್ಯಾಭಿಷೇಕವನ್ನು ಮಾಡಿದನು. ಹರಿಹರನು ತನ್ನ ಮೇಲೆ ದಂಡೆತ್ತಿ ಬರುವನೆಂದು ಕೇಳುತ್ತಲೇ ಆನೆಗೊಂದಿಯಲ್ಲಿದ್ದ ಮುಸಲ್ಮಾನರ ಅಧಿಕಾರಿಯು ಕಾಲಿಗೆ ಬುದ್ಧಿಹೇಳಿದನು. ಹರಿಹರನ ವಿಜಯಯಾತ್ರೆಯಿಂದ ಅನೇಕರಾಜ್ಯಗಳು ಶರಣುಬಂದವು. ಒಡನೆ ವಿಜಯನಗರದ ನಿರ್ಮಾಣವಾಯಿತು. ಈ ರೀತಿಯಲ್ಲಿ ರಾಜ್ಯವು ರೂಪುಗೊಳ್ಳುತ್ತಲೇ ಮಾಧವನು ಹರಿಹರನಿಗೆ ರಾಜನೀತಿಯನ್ನುಪದೇಶ ಮಾಡಿದ್ದಲ್ಲದೆ ಅವನ ಪ್ರಾರ್ಥನೆಯಂತೆ ಮಂತ್ರಿವರ್ಗಕ್ಕೆಲ್ಲ ಮಾರ್ಗದರ್ಶಕನಾಗಿ ಅಲ್ಲಿ ನಿಂತು ಹಿಂದೂರಾಜ್ಯಭಾರದ ಸ್ವರೂಪಕ್ಕೊಂದು ಸುಂದರರೂಪನ್ನು ತಂದುಕೊಟ್ಟನು. ಈ

ರೀತಿಯಲ್ಲಿ ಮಾಧವನು ರಾಜಕಾರ್ಯಗಳ ಗಡಿಬಿಡಿಯ ಕಡೆಗೆ ಮನಸ್ಸನ್ನು ಹಾಕುತ್ತಲೂ ಇದ್ದು ವಿವಿಧಶಾಸ್ತ್ರವಿಷಯಗಳ ಮೇಲೆ ಅನೇಕಗ್ರಂಥಗಳನ್ನು ಬರೆದು ವೇದಕ್ಕೆ ಕೂಡ ಭಾಷ್ಯವನ್ನು ಮಾಡಿ ಆಚಾರ್ಯರೆಂಬ ಬಿರುದನ್ನು ಪಡೆದನು. ಮಾಧವಾಚಾರ್ಯರು ಮೂವರು ರಾಜರಾಳುವ ವರೆಗೂ ಸ್ವಧರ್ಮೋತ್ತೇಜಕವಾದಂಥ ಸ್ವರಾಜ್ಯಚಕ್ರಕ್ಕೆ ಚಲನೆಯನ್ನು ಕೊಡುವವರಾಗಿದ್ದು ಆ ಮೇಲೆ ಸಾಕ್ಷಾತ್ತಾಗಿ ಧಾರ್ಮಿಕವೃತ್ತಿಯ ಪರಮಾವಧಿಯನ್ನು ಪ್ರದರ್ಶನಮಾಡಬೇಕೆಂದು ಶೃಂಗೇರಿಗೆ ಹೋಗಿ ಶ್ರೀವಿದ್ಯಾರಣ್ಯರೆಂಬ ಹೆಸರಿನಿಂದ ಜಗದ್ಗುರುಗಳಾಗಿ ಕಾಶಿಯ ವರೆಗೆ ದಿಗ್ವಿಜಯಂಗೆಯ್ದು ಅನೇಕಶಿಷ್ಯರನ್ನುದ್ಧರಿಸಿ ಅಸಂಖ್ಯಾತಗ್ರಂಥಗಳನ್ನು ಬರೆದು ಜೀವನ್ಮುಕ್ತಿ ಸುಖಾನುಭವವನ್ನು ಸೂರೆಗೊಂಡು ಮನುಷ್ಯಜನ್ಮದ ಪರಮಾವಧಿಯ ಆಯುಸ್ಸನ್ನು ಅನುಭವಿಸಿ ಶೃಂಗೇರಿಯಲ್ಲಿಯೇ ಮಹಾಸಮಾಧಿಸ್ಥರಾದರು.

|| ಶ್ರೀ ||

# ವಿದ್ಯಾರಣ್ಯಕಾವ್ಯಮ್

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ"

## ಮೊದಲನೇ ನೆಲೆ- ಮುನ್ನುಡಿ

[1]ಶ್ರೀಭೂಸೇವಿತಪಾದಪದ್ಮಯುಗಲಂ, [2]ಶ್ರೀಶಾರ್ಙ್ಗಧನ್ವಂ, [3]ಜಯ ।
ಶ್ರೀಭೂತಿಪ್ರದ[4]ನಾನತಾಖಿಲಜಗದ್ರಕ್ಷೈಕದೀಕ್ಷಾವಹಂ ॥
ಶೋಭಾಪೂರನುದಾರಧೀರ[5]ನಖಿಲಾಮ್ನಾಯಸ್ಥಿತಂ, [6]ಮುಕ್ತಿಕಾಂ ।
ತಾಭೋಗೈಕಸುಖಂ, ಸುಖಾತಿಶಯಮಂ ಮಾಳ್ಕೆಮ್ಮ[7]ನಾರಾಯಣಂ॥೧॥

ಶ್ರೀಕರ, ಶೀತಲಾಂಶುಧರ, ಸದ್ಗುಣಸಾಗರ, ಫಾಲನೇತ್ರ ಶೋ ।
ಭಾಕರ, ಕಾಮದೋಷಹರ, ಶೈಲಸುತಾವರ, ಭಕ್ತಸಜ್ಜನಾ ॥
ನೀಕಮನೋಹರಾ, ಗಿರಿಧರಾ, ಗರುಡಧ್ವಜಸಖ್ಯಭಾಸುರಾ ।
ಲೋಕಕಧೀಶ್ವರಾ, ಪೊರೆ ಮಹೇಶ್ವರ, ಹಂಪೆಯನಾಳ್ವ ಶಂಕರಾ ॥ ೨ ॥

---

೧— 1 ಶ್ರೀದೇವಿ ಮತ್ತು ಭೂದೇವಿ— ಇವರಿಂದ ಕೂಡಿದವನೆಂಬ ವಿಶೇಷಣದಿಂದ ಕಥಾನಾಯಕನಲ್ಲಿ ಇವೆರಡರ ಸಾನ್ನಿಧ್ಯವೂ ಇರುವದೆಂದು ಸೂಚಿತವಾಗುತ್ತದೆ. 2 ಇದರಿಂದ ಈ ಕಥೆಯಲ್ಲಿ ಭಗವಂತನು ದುಷ್ಟನಿಗ್ರಹವನ್ನು ಮಾಡಬೇಕಾದ ಸಂದರ್ಭವಿರುವದೆಂದು ತಿಳಿಯಬೇಕಾಗುತ್ತದೆ. 3 ಇದರಿಂದ ಈ ಕಥೆಯಲ್ಲಿ ಭಗವದನುಗ್ರಹದಿಂದ ಜಯವು ದೊರೆತ ವಿಷಯವಿರುವದೆಂದು ತೋರುತ್ತದೆ. 4 ಇದರಿಂದ ಕಥಾನಾಯಕನು ರಾಜ್ಯಭಾರವನ್ನು ವಹಿಸುವನೆಂದು ಊಹಿಸುವದಕ್ಕಾಗುತ್ತದೆ. 5 ಇದರಿಂದ ಕಥಾನಾಯಕನು ವೇದವಿಚಾರದಲ್ಲಿ ನಿಷ್ಣಾತನೆಂದು ಧ್ವನಿಯಾಗುತ್ತದೆ 6 ಇದರಿಂದ ಕಥಾನಾಯಕನು ಜೀವನ್ಮುಕ್ತಿಸುಖಾನುಭವವನ್ನೂ ಮಾಡುವನೆಂದು ಬೋಧೆಯಾಗುತ್ತದೆ 7 ನಾರಾಯಣಶಬ್ದಪ್ರಯೋಗದಿಂದ ಕಥಾನಾಯಕನು ಸಂನ್ಯಾಸಿಯೆಂದು ಹೇಳುವದಕ್ಕೆ ಬರುತ್ತದೆ.

ಗಿರಿರಾಜಪ್ರಿಯಪುತ್ರಿ, ಭಕ್ತಜನತಾಸಂಪತ್ಕರೀ, ಚಂದ್ರಶೇ ।
ಖರನಧಾರ್ಗಂಗದಿ ಮಿಂಚಿನಂತೆ ಮೆರೆವಾ ಶಾತೋದರೀ, ತ್ರ್ಯಕ್ಷರೀ, ॥
ಕರುಣಾಸಾಗರೆ, ಗೌರಿ, ದುರ್ಜನಚಮೂಶಿಕ್ಷಾಕರೀ, ಶಂಕರೀ, ।
ಪೊರೆಯೆಮ್ಮಂ [1]ಭುವನೇಶ್ವರೀ, ಕರುಣದಿಂ ಪಂಪಾಪುರಾಧೀಶ್ವರೀ ॥ ೩ ॥

ತ್ರಿಪುರಧ್ವಂಸಕ್ಕೆ ವಿಘ್ನಂ ಬರದವೊಲಭವಂಗೊಲ್ಮೆಯಿಂ ತೋರಿ, [1]ಮಹಿಷ್ಯೋ।
ಣಪನಂ ಸಂಹಾರಗೆಯ್ಯಲ್ಗಿರಿಜೆಗೆ ನೆರವಾಗುತ್ತೆ, ಕುಂತೀಸುತಂಗಂ ॥
ಕೃಪೆಯಿಂದಾಗಳ್ಸ್ವರಾಜ್ಯಾಗಮಕಭಯವನೀಯುತ್ತೆ ತೋರ್ದಾಗಜಾಸ್ಯಂ।
ವಿಪುಲಪ್ರೇಮಪ್ರಧಾನಂ ಪೊರೆಗೆ ನಿರುತಮೆಮ್ಮೆಲ್ಲರಂ ಭಕ್ತಿವಶ್ಯಂ ॥ ೪ ॥

ತಾಯೇ ನೀನೀಗ [1]ತಾಯೆನ್ನಭಿಮತವ ಸುರಾನೀಕಸಂಪತ್ಸಹಾಯೇ, ।
ಮಾಯಾತೀತಸ್ವರೂಪೇ, ಮತಿಮಯೆ, ಜಡತಾಹಾನಿಕೃಚ್ಛಕ್ತ್ಯುಪಾಯೇ ॥
ನ್ಯಾಯಾಧಿಷ್ಠಾತ್ರಿ, ನಿತ್ಯೋತ್ಸವೆ, ನಿಗಮನುತೇ, ಚಿನ್ಮಯೇ, ಬ್ರಹ್ಮಜಾಯೇ।
ಬಾಯೆನ್ನೀ ಜಿಹ್ವೆಯೊಳ್ನೀಂ ನೆಲೆಸಿ ಕವಿತೆಯಂ ಪೇಳಿಸುತ್ತೆನ್ನ [2]ಕಾಯೆ ॥ ೫ ॥

ಕರ್ಣಾಟನಾಯಕಚರಿತ್ರೆಯ ಗಾನಮಾಳ್ಪಂ ।
ಕರ್ಣಾಟಭಾಷೆಯ ವಿಲಾಸದಿ [1]ತೋರುತೊಳ್ಪಂ ॥
ಕರ್ಣಾಟಭೂಪದಸರೋರುಹಧೂಳಿಸಖ್ಯಂ ।
ಕರ್ಣಾಟಭೂಷಣಮಿದಾಗೆ ಚಿದಂಬರಾಖ್ಯಂ ॥ ೬ ॥

[1] ಹರಿಹರಾದಿಕವೀಶ್ವರಪಾದವಂ ।
ಸ್ಮರಿಸಿ ಪೇಳ್ವಿದ ಮೆಚ್ಚಲಿ [2]ಮಾಧವಂ ॥
[3] ಹರಿಹರಾದಿನರೇಂದ್ರರ ವೈಭವಂ ।
ನೆರೆ ವಿರಾಜಿಸೆ ಗೆಯ್ವುದ [4] ಮಾಧವಂ ॥ ೭ ॥

---

೩— 1 ಇದು ಪಂಪಾಕ್ಷೇತ್ರದಲ್ಲಿರುವ ಆದಿಶಕ್ತಿಯ ಹೆಸರು.

೪— 1 ಮಹಿಷಾಸುರನನ್ನು.

೫— 1 ತಾ+ಎನ್ನ+ಅಭಿಮತವ 2 ಕಾಪಾಡು ಅಥವಾ ಕಾಪಾಡುವದಕ್ಕೆ.

೬— 1 ಒಳ್ಳೆಯ ಸ್ಥಿತಿಯನ್ನು.

೭— 1 ಗಿರಿಜಾಕಲ್ಯಾಣದ ಕರ್ತನಾದ ಹರಿಹರನೇ ಮೊದಲಾದ 2 ವಿಷ್ಣು 3 ಹರಿಹರ, ಬುಕ್ಕ— ಮೊದಲಾದ 4 ಮಾಧವಾಚಾರ್ಯರು (ಇದು ಶ್ರೀವಿದ್ಯಾರಣ್ಯರ ಪೂರ್ವಾಶ್ರಮದ ಹೆಸರು).

ಧರೆಯೊಳಗಾ ಮಾಧವನೇ ।
ನೆರೆ ವಿದ್ಯಾರಣ್ಯವೆಸರ ಪಡೆದಿರೆ ಕೊನೆಯೊಳ್ ||
ಕರೆದಪೆನೀಕೃತಿ ಪೆಸರಾಂ ।
ತಿರೆ ವಿದ್ಯಾರಣ್ಯಕಾವ್ಯವೊಂದಾದರದೊಳ್ || ೮ ||

ಗುರುವಂ ಸ್ತೋತ್ರವಗೆಯ್ಯದಿಂತು ಕಥೆಯಂ ಪ್ರಾರಂಭಿಸಲ್ ಪೂರ್ವದೊಳ್ ।
ಗುರುಗಳ್ಗಿಯ್ದಿಹ ಸಾಂಪ್ರದಾಯಿಕೆ ವಿರೋಧಂ ಕಾಣ್ಬುದೆಂದೆಂಬಿರಾ? ||
ಗುರುವೆಂದಿರ್ಪವರೆಲ್ಲರುಂ ಜಗದೊಳಂತರ್ಭೂತರಾದೀ ಜಗ ।
ದ್ಗುರುವರ್ಯಂ ಸಲೆ ಕಾವ್ಯನಾಯಕನೆನಲ್ಮತ್ತೆಂತು ಬೇಕಪ್ಪುದೊ! || ೯ ||

[1] ಹರಿಹರನುತಿಯುಲ್ಲಿದು ಸುರ ।
ವರನುತಿಯುಲ್ತೆಂಬಿರೆಂತೊ! ಇದರಲ್ಲಿ ||
[2] ಹರಿಹರಗುರು ಮೋಣ್ಪಾ ಸುರ ।
ವರನಪ್ಪ ಕಥಾಧಿದೇವನಿದಿರಲ್ಲಿ || ೧೦ ||

ಅಂತಸಾಮಾನ್ಯರಾದವರ ವಿಚಾರವೆಂತುಂ ಸಾಮಾನ್ಯನಾದೆನಗೆ ಸುದೂರಮಿರ್ಪ ಸಂಭವಮಿರ್ದೊಡಂ ದೈವಯೋಗದಿಂದದರ ಸಮೀಪ ಸಂಬಂಧಮೆನಗಿರ್ಪುದದೆಂತೆನೆ—

ಮೆರೆದಿರೆ ವಿದ್ಯೆಯಾತನೊಳರಣ್ಯದವೊಲ್ಬಹುದೊಡ್ಡದಾಗಿ ತಾಂ ।
ಮೆರೆವುದು ವಿದ್ಯೆಯೆನ್ನೊಳುಮರಣ್ಯದವೊಲ್ಸಲೆ ಮುಂದುಗಾಣದೆ ||
ಪರಿಕಿಸಲಿಂತು ನಾಮಮಿರಲೆನ್ನೊಳಗನ್ವಯಿಸುತ್ತಮಿನ್ನುಮ ।
ಚ್ಚರಿ [1]ಬೆಡಗೊಂದೆ [2]ಗೋತ್ರಮುಮದೊಂದೆನಗಾರಯೆ ಕಾವ್ಯನಾಥನೊಳ್ ||

---

೧೦— 1 ಹರಿಯು ಮತ್ತು ಹರನ 2 ರಾಜನಾದ ಹರಿಹರನ ಗುರು.

೧೧— 1 ಬೆಡಗೆಂದರೆ ಜಾತಿಯ ಒಳಭೇದ. ಶ್ರೀವಿದ್ಯಾರಣ್ಯರು 'ಉಂಚುಕವ್ವಿ' ಎಂಬ ಬೆಡಗಿನವರೆಂದು ಈ ಕಾವ್ಯಕರ್ತನ ಅಭಿಪ್ರಾಯ. ಹೀಗೆ ಪ್ರತೀತಿಯೂ ಉಂಟು. 2 ಭಾರದ್ವಾಜಸಗೋತ್ರ.

[1] ಬುಧಕುಲಜನ್ಮಂ ಕವಿಯುಂ ।
[2] ಬುಧನನ್ವರ್ಥದೊಳುಮಾತನಾಗಿರಲೀಗಳ್ ॥
[3] ಬುಧಕವಿಸಂಗಮಮೊಳಿತೆಂ[4] ।
ಬುಧನರಿತೀ ಕೃತಿಯು ಸಮದೆನಾಂ [5]ಬುಧಂದಿರೊಳ್ ॥೧೨॥

[1] ಕೃತಿಗಳ್ ಲಘುತ್ವವ ಮಹತ್ತ್ವಮಪ್ಪವೊಲ್ ।
[2] ಕೃತಿಯುಂ ಸಮೆಂತು ರಚಿಪರ್ಧರಿತ್ರಿಯೊಳ್ ॥
ಮತಿಹೀನನಾಂ ಸೆರೆ ಮಹಾತ್ಮವೃತ್ತಮಂ ।
[3] ಕೃತಿಗೆಯ್ವೆ[4]ನಾಂ ಕೃತಿಯಿರಲ್ಲಘುತ್ವದಿಂ ॥ ೧೩ ॥

ನಾಮಮೇಕಿದಕೆ ಕಾವ್ಯಮೆಂದೆನ ।
ಲ್ಕಾವ್ಯನಂ ತಣಿಯಲಿಟ್ಟೆನೀಗ ಕೇಳ್ ॥
ಭೂಮಿಯಲ್ಲಿ ಬಲಹೀನಪುತ್ರನಂ ।
ಭೀಮನೆಂದು ಕರೆವಂದದಿಂ ಜನಂ ॥ ೧೪ ॥

ಪಿರಿದಾಗಿ ಕೃತಿಯು ಬೆಳೆಸದ ।
ಪರಿಯೇಕೆನೆ ಪೇಳ್ವೆನಿದರ ಮರ್ಮವನಾಂ ॥
ಪಿರಿಯರ ಪರಿಯಿಂ ಕಿರಿಯರ ।
ಪರಿ ಪಿರಿದೆನಿಸಿರ್ಪ ಬಗೆಯು ನೆರೆ ನೆನೆ ನೀಂ ॥ ೧೫ ॥

---

೧೨— 1 ಬ್ರಾಹ್ಮಣಜಾತಿಯಲ್ಲಿ ಹುಟ್ಟಿದವನು. 2 'ಉಂ' ಎಂಬ ಸಮುಚ್ಚಯಪ್ರತ್ಯಯದಿಂದ ಆತನು ಜನ್ಮದಿಂದಲೂ ಬ್ರಾಹ್ಮಣನಲ್ಲದೆ ಯೋಗ್ಯತೆಯಿಂದಲೂ— ಜ್ಞಾನವನ್ನು ಪಡೆದಿರೋಣದರಿಂದಲೂ— ಬ್ರಾಹ್ಮಣನೆಂದರ್ಥ. 3 ಜ್ಞಾನಿಯ ಮತ್ತು ಕವಿಯ ಸಂಗಮವು ಅಂದರೆ ಕವಿಯು ಜ್ಞಾನಿಯನ್ನು ವರ್ಣಿಸುವದು ಎಂದು ಒಂದರ್ಥ; ಬುಧ ಮತ್ತು ಶುಕ್ರ (ಕವಿ) ಗ್ರಹಗಳ ಸಂಗಮವೆಂದು ಇನ್ನೊಂದರ್ಥ. 4 ಜ್ಞಾನಿಯನ್ನು ವರ್ಣಿಸುವದು ಕವಿಗೆ ಶ್ರೇಯಸ್ಕರವೆಂದು ಒಂದರ್ಥ. "ಬುಧಶುಕ್ರೌ ಸಮೀಪಸ್ಥೌ ಕುರ್ಯಾದೇಕಾರ್ಣವಂ ಜಗತ್" ಎಂಬ ಜ್ಯೋತಿಶ್ಶಾಸ್ತ್ರವಚನದಂತೆ ಬುಧಶುಕ್ರಸಂಗವು ಸರ್ವೇಷ್ಟಫಲದಾಯಕವೆಂದಿನ್ನೊಂದರ್ಥ 5 ವಿದ್ವಾಂಸರ ಎದುರಿಗೆ.

೧೩— 1 ಪಂಡಿತನು (ಕೃತಾರ್ಥರಾದವರು) 2 ಕಾವ್ಯವನ್ನು 3 ಕಾವ್ಯವನ್ನು ಮಾಡುತ್ತೇನೆ 4 ಆಕಾರವು.

ಎತ್ತೆತ್ತಲುಮತಿಸಾಮಾ ।
ನ್ಯಾರ್ಥದ ಕೃತಿಯೊಳಗಿದೆನ್ನದಭಿಮಾನಂ ॥
ಹೆತ್ತವರಿಂಗೆ ಹೆಗ್ಗಣವೆ ।
ತೆತ್ತಂ ಮುದ್ದಾಗಿ ತೋರ್ಪ ಸುಮ್ಮಾನಂ ॥ ೧೬ ॥

ಹಿಂದೆ ಪೇಳದುದರಿಂದಿದು ನವ್ಯಂ ।
ಹಿಂದುಗಳ್ಗೆ ಬಹು ಮೆಚ್ಚಿನ ಕಾವ್ಯಂ ॥
ಇಂದು ಕನ್ನಡಿಗರಲ್ಲಿದು ಸೇವ್ಯಂ ।
ಮುಂದುಮಿಂದಿನವೊಲೇ ಸುವಿಭಾವ್ಯಂ ॥ ೧೭ ॥

[1] ಪ್ರಾಸಾದಿಯಿನಿದು ವಿಹಿತಂ ।
[2] ಪ್ರಾಸಾದ್ಯಾಯುಧಕುಲಪ್ರಭಾವಯುತಂ ॥
[3] ಪ್ರಾಸಾದವಾಸಿವಾಚ್ಯಂ ।
[4] ಪ್ರಾಸಾದಿಕವಾಣಿಯಾಗಿ ಸುವಿವೇಚ್ಯಂ ॥ ೧೮ ॥

[1] ಯತಿಯು ವೃತ್ತದ ಭಾಗದೆ ನೋಡಿ ನೀಂ ।
ವ್ಯಥೆಯು ಪೊಂದದಿರ್ಕೆ ನೆರೆ ಪೇಳ್ವೆನಾಂ ॥
[2] ಯತಿ [3] ಸಮಸ್ತಸುವೃತ್ತದೆ ಪೂರ್ಣನೀ ।
ಕೃತಿಯೊಳೆಂದರಿಯೆಂದುರೆ ಬೇಳ್ವೆನಾಂ ॥ ೧೯ ॥

ಮೂಗು ಹರಿದಿರ್ಪ ಮುದುಕಿಯ
ಮೂಗಿಗೆ ಮೂಗುತಿಯು ತೊಡಿಸೆ [1] ಫಲವಹುದೆ? ॥
ನೀಗಿ ನಿಯಮಗಳನರ್ಥದ ।
ಭಾಗದಿ ಬೀಗುವದು ಕಾವ್ಯದೊಲವಹುದೆ? ॥ ೨೦ ॥

---

**೧೮**— 1 ಪ್ರಾಸ, ಗಣ– ಮೊದಲಾದವುಗಳಿಂದ. 2 ಪ್ರಾಸ, ತೋಮರ– ಮೊದಲಾದ ಆಯುಧಗಳ ಪ್ರಭಾವದಿಂದ ಕೂಡಿದ ಕಥೆಯುಳ್ಳದ್ದು. 3 ಉಪ್ಪರಿಗೆಯಲ್ಲಿ ಕುಳಿತವರು ಓದತಕ್ಕದ್ದು. 4 ದೈವಾನುಗ್ರಹದಿಂದ ಕೂಡಿದ ವಾಣಿ.

**೧೯**— 1 ವಿರಾಮಸ್ಥಾನವನ್ನು 2 ಕಾವ್ಯನಾಯಕನಾದ ಸಂನ್ಯಾಸಿಯು 3 ಒಳಿಯವಾದ ಎಲ್ಲಾ ಆಚಾರಗಳಲ್ಲಿ ಅಥವಾ ಶುದ್ಧವಾದ ಎಲ್ಲಾ ವೃತ್ತಗಳಲ್ಲಿ.

**೨೦**— 1 ಮನಸ್ಸಿಗೆ ಆಹ್ಲಾದರೂಪವಾದ ಫಲವಾಗುವದೆ?

ತಲೆಯಂ ಬಾಚಿದನಾಗಳಾ ಹರಿಹರಂ, ಕಸ್ತೂರಿಯಿಂ ಫಾಲದೊಳ್ ।
ನಲವಿಂ ರೇಖೆಯನಾಷಡಕ್ಷರಿಯಿ ಗೆಯ್ದಂ, ಭೂಷಮಂ ದೇಹದೊಳ್ ॥
ನಿಲೆ ಪಂಪಾದಿಗಳಿಟ್ಟು ಪೆರ್ಮೆವಡೆದವರ್ಗ್ದೇವಿಗೊಪ್ಪಲ್ಚಿರಂ ।
ಘಲಿರೆಂಬಂತಿರಲೆನ್ನದೀ ಕವಿತೆ ತಾನಿರ್ಕ್ಕೊಂದು ಕಾಲುಂಗುರಂ ॥ ೨೧ ॥

ಪರಿಕಿಸೆ ಧರ್ಮಜಂ ಕನಕನಿಷ್ಕದ ಯಾಗವ ಪೂರ್ಣಗೆಯ್ದಿರಲ್ ।
ಭರದೊಳಗೀಗ ತಾಮ್ರಧನದಿಂ ಮನುಜರ್ ಕೃತಕೃತ್ಯರಪ್ಪವೋಲ್ ॥
ವರಕವಿಯಂತೆ ದಿಟ್ಟತನದಿಂದಲೆ ಕಾವ್ಯವನೀಗ ನೆಯ್ವನಾಂ ।
[1] ನರಕವಿಯಾದೊಡಂ [2] ನರಕವಿಭ್ರಮಮಂ ನೆರೆ ಗೆಲ್ಲದಿರ್ಪನೇ? ॥ ೨೨ ॥

ಅಕ್ಷರವಿದ್ಯೆಯೊಳ್ನಿಪುಣನಾಗದೆ ಕಾವ್ಯವನೀಗ ಗೆಯ್ವೆನಂ ।
ದೀಕ್ಷಿಪು [1]ದಕ್ಷವಿಲ್ಲದ ಕವಿತ್ವದ ಯಂತ್ರದ ಮಾಳ್ಕೆಯೆಂತೊ! [2]ಪಂ ॥
ಚಾಕ್ಷರಿಯಿಂ [3]ಷಡಕ್ಷರಿಯಿನಕ್ಷರಭಿಕ್ಷವ ಪೊಂದುತೀಗಳಾ ।
[4] ನಕ್ಷರವೇಗದಿಂದೆ [5] ವಿಧಿತಾತ್ರದೆ ವರ್ಣಿಪೆನಾ[6]ಜಿತಾಕ್ಷನಂ ॥ ೨೩ ॥

ಅಕ್ಷರಕೆ ಲಕ್ಷವಂ ಕುಡು ।
[1] ವಾಕ್ಷಿತಿಪರಭಾವರೂಪದಾಪದದಿಂದಂ ॥
ಅಕ್ಷರಕೆ ಲಕ್ಷ್ಯವಂ ಕುಡ ।
ದಾ ಕ್ಷಿತಿಭಾರಕರೆ ಕವಿಗೆ ದುಃಸಹರೆಂದುಂ ॥ ೨೪ ॥

ಜನಪರಿದಕೆ ಸಾಹ್ಯಂಗೆಯ್ವರಿಲ್ಲೆಂದು ಬಲ್ಲೆಂ ।
ಜನಗಳೆ ಇದನೋದಲ್ಬಾರರೆಂದಾ[1]ನೊರಲ್ವೆಂ ॥
ಧನಕನಕಮುಖಪ್ರೋತ್ಸಾಹಮಂ ಕೇಳಲೊಲ್ಲೆಂ ।
ಮನದ ಚಪಲದಿಂದಾಂ ಗೆಯ್ವುದಂ ಬಿಟ್ಟು ನಿಲ್ಲೆಂ ॥ ೨೫ ॥

---

೨೨— 1 ಮನುಷ್ಯಮಾತ್ರದ ಕವಿಯಾದರೂ 2 (ನರ+ಕವಿ+ಭ್ರಮಮಂ) ಮನುಷ್ಯಮಾತ್ರದ ಕವಿಗಳ ತಪ್ಪುತಿಳುವಳಿಕೆಯನ್ನು ಅಥವಾ (ನರಕ+ವಿಭ್ರಮಮಂ)ನರಕದಲ್ಲಿ ಸುತ್ತುವದನ್ನು.

೨೩— 1 ಅಚ್ಚು ಇಲ್ಲದ 2 ಪಂಚಾಕ್ಷರಿ ಎಂಬ ಮಂತ್ರದಿಂದಲೂ 3 ಷಡಕ್ಷರಿ ಎಂಬ ಕವಿಯಿಂದಲೂ 4 ತಡೆಯಿಲ್ಲದ ವೇಗದಿಂದ 5 ತಾನಾಗಿ ಸ್ಫೂರ್ತಿಯಾದ ಹಾಗೆ 6 ಜಿತೇಂದ್ರಿಯನಾದ ಕಾವ್ಯನಾಥನನ್ನು.

೨೪— 1 ಕ್ಷಿತಿಪರ+ಅಭಾವರೂಪದ.

೨೫— 1 ಕೂಗಿಕೊಳ್ಳುವೆನು.

ಅರಸತನದೀ ಕೃತಿಯನಾ ।
1 ವರಸಿಕೆಯಿಲ್ಲದವರರಿಯೆವೆಂದೆನಬೇಡಿಂ ॥
ಅರಸರ ಕೃತಿಗಳ ರಸವಾ ।
2 ಅರಸಿಕರಿಂದರಸಲಪ್ಪುದೇ ನೀಂ ನೋಡಿಂ ॥ ೨೬ ॥

ಬಹುಕೃತಿಗಳಿನ್ನ ಮುಂಗಡೆ ।
ಬಹುಬಾಲ್ಯದಿ ಕಣ್ಣ ಮುಚ್ಚೆ ಬಹುಕಾಲವಿರಲ್ ॥
ಬಹುಪೂರ್ಣಾರ್ಯುರ್ಯೋಗದ ।
ಬಹುನುಹಿಮರ ನುಡಿಪೆನಿಲ್ಲಿ ಬಹುಶಾಂತಿ ಬರಲ್ ॥ ೨೭ ॥

1 ಕವಿಯಂತೆ ಹಾರಲಾರೆಂ ।
2 ಕವಿಯಂತಾಂ ನೀತಿಬೋಧೆಗೆಯ್ಯಲುವಾರೆಂ ॥
3 ಕವಿಯದೆ ಪರರರ್ಥವನೀ ।
ಕವಿತೆಯು ಸತ್ಕವಿತೆಗೆಯ್ಯೆ ಯತ್ನವ ಗೆಯ್ವೆಂ ॥ ೨೮ ॥

ಬರೆದಿರೆ ಸರಿ ಕಾವ್ಯವ[1]ನರೆ ।
ಬರೆ ಅರಿವಂತಿರದೆ ಕೇಳ್ವ ಸರ್ವರ ಮನದೊಳ್ ॥
2 ಬರೆವಂತಾ ಸ್ಥಿತಿ ಬರದಿರೆ ।
3 ಬರೆಯೇ ಸರಿ ಕಾಗದಕ್ಕೆ ಬರಹದ ಜನರೊಳ್ ॥ ೨೯ ॥

ತೊಡರುತ್ತೆ ಬರೆದೆನಾನಿನಿ ।
ತೊಡಂಬಡಲ್ ಕಾವ್ಯವೆಂದು ಜನನಿಕರಂ ॥
1 ತೊಡರೆಂದಿದ ಮೇಣ್ಮಾಳೆಯು ।
ತ್ತೊಡನೆ ಸುಖಂಬೊಂದೆ ನುಡಿಯು ಜನನಿ ಕರಂ ॥ ೩೦ ॥

---

೨೬— 1 ಅರಸ+ಇಕೆ (ಗೌಡಿಕೆಯೆಂಬಂತೆ) 2 ರಸವನ್ನರಿಯದವರಿಂದ
೨೮— 1 ನೀರಹಕ್ಕಿಯ ಹಾಗೆ 2 ಶುಕ್ರಾಚಾರ್ಯರ ಹಾಗೆ 3 ಮುತ್ತದೆ.
೨೯— 1 ಕೆಲವರೆ 2 ಒಡೆದು ಮೂಡುವಂತೆ 3 ಕಾದ ಕಬ್ಬಿಣದಿಂದ ಎಳೆದ ಗೆರೆ.
೩೦— 1 ಪಾದಭೂಷಣವೆಂದು.

ಪಂಪ ಮೊದಲಾದವರವೊಲ್ ।
ಪೆಂಪಂ ಪಡೆಯುದೊಡಮೀಗ ಕವಿಗಳೊಳಿಹದೊಳ್ ॥
ಪಂಪಾಪುರೀಶನಿಂ [1] ಸ ।
ಯ್ಪಂ ಪಡೆವೆಂ ಭಕ್ತವೃತ್ತಕಥನದಿ ಪರದೊಳ್ ॥ ೩೧ ॥

ಕವಿರತ್ನಾಖ್ಯೆಯುನಿತ್ತರಾಗ ಕೆಲಬರ್ವಿದ್ವಾಂಸರೊಂದಾಗಿ ಸ ।
ತ್ಕವಿತಾಪ್ರೌಢಿಮೆದೋರ್ಪಮುನ್ನಮದನಾಗಳ್ತಾಳಲಾಂ ನಾಣ್ಚಿದೆಂ ॥
ಕವಿತಾರತ್ನಮಿದೀಗಳೆಂದೆನಿಸಿಕೊಳ್ವೀ ಗ್ರಂಥಮೋ ಮುಂದಿರಲ್ ।
ಕವಿರತ್ನಾಖ್ಯೆಯುದೇತಕೆಂದದನುಪೇಕ್ಷಾದೃಷ್ಟಿಗೀಡಾಗಿಪೆಂ ॥ ೩೨ ॥

ಝುರಿಯಂತೆ ಯಾತ್ರಿಕರ ಜ ।
ರ್ಝರಗೊಳಿಪಾ ಪ್ರೌಢಿಯಿದರೊಳಿಲ್ಲೆಂದುಂ ॥
ಜರಿಯದಿರಿ ಕಾಲಹೊಳೆ ಹಿಂ ।
ಜರಿಯಲ್ಕೊಡದಲ್ತೆ ದಾಂಗರನೆಂದುಂ ॥ ೩೩ ॥

[1] ವ್ಯಂಗ್ಯಮೆ ತುಂಬಿರದೊಡನು ।
[2] ವ್ಯಂಗಮಿದೆನಿಸಿರ್ದ ವಿವಿಧ ಬೋಧನೆಯಿಂ ಶ್ರಾ ॥
ವ್ಯಂ ಗಂಭೀರಪದಂ ಕಾ ।
ವ್ಯಂ ಗುಣಮಯಮಾಗಿ ತೋರದಿರ್ದಪುದೆಂತೋ! ॥ ೩೪ ॥

ಸಂಸ್ಕೃತಮಂ ಕೆಲಕಿರಿಸುತ[1] ।
ಸಂಸ್ಕೃತಮೆಂದೆನಿಸಲೆಂದು ಯತ್ನಿಸೆನಾಂ ॥
ಸಂಸ್ಕೃತಸಹಾಯದಿಂ ಜನ ।
ಸಂಸ್ಕೃತಿ ಮುಂಬರಿಯೆ ಗೆಯ್ವೆನೊಲಿಯೆ ಮನಂ ॥ ೩೫ ॥

---

೩೧ — 1 ಪುಣ್ಯವನ್ನು.

೩೪ — 1 ಧ್ವನಿಯೆ 2 ಅಂಗಹೀನವಾಗದೆ ಇರುವದು.

೩೫ — 1 ಕೆಲಕೆ+ಇರಿಸುತ+ಅಸಂಸ್ಕೃತಮೆಂದೆನಿಸಲ್.

[1] ಹರಿಹರರೈಕ್ಯದಿನೈಕ್ಯವ ।
[2] ಹರಿಹರದೊಳ್ತಿಳಿಯಪೇಳ್ವನೆಂದೆನಲಿಂದುಂ ॥
[3] ಹರಿಹರನುಂ [4] ಹರಿಹರರತ ।
[5] ಹರಿಹರಗುರುವರನುಮೆಮ್ಮ ರಕ್ಷಿಸಲೆಂದುಂ ॥ ೩೬ ॥

## ಎರಡನೇ ನೆಲೆ- ಜನ್ಮದೇಶವರ್ಣನೆ.

ಶ್ರೀಮನ್ನಾರಾಯಣಗರ್ಭ ।
ರಾಮತೆಯಿಂದಂ ವಿಹಾರಭೂಮಿಯೆನೆ ॥
ಶ್ರೀಮಂತೆಯಾದ ಭಾರತ ।
ಭೂಮಾತೆಯೆ ಪೊರೆ ವದಾನ್ಯಜನಸದನೆ ॥ ೧ ॥

ಈ ಬ್ರಹ್ಮಾಂಡಕರ್ತನಾದಾ ಆದಿನಾರಾಯಣಂ ತನ್ನಾಡುಂಬೊಲ ವಾಗಿ ಮೇಲೇಳುಲೋಕಂಗಳುಮಂ ಕೆಳಗೇಳುಲೋಕಂಗಳುಮಂ ಹರಡಿದೊಡಮವುಗಳೊಳ್

ಸುರಲೋಕಂ ವಿಷಯೋಪಭೋಗಫಲಮಾತ್ರಕ್ಕಾಸ್ಪದಂ ನೋಡಲೀ ।
ಧರೆಯೊಳ್ಭಾರತಭೂಮಿ ತಾಂ ವಿಷಯಭೋಗಂಗೊಟ್ಟು ಮೋಕ್ಷಾರ್ಥಮಂ ॥
ನೆರೆ ವೃದ್ಧಿಂಗತಮಾಗೆ ಗೆಯ್ದು ಜನಮಂ ಮೋಕ್ಷಕ್ಕೆ ಸತ್ಪಾತ್ರಮಾ ।
ಗಿರೆ ಮಾಳ್ಕುಂ ದಿಟಮೆಂದು ದೇವತತಿ ಬೇಳ್ಕುಂ ಭಾರತೀಯತ್ವಮಂ ॥ ೨ ॥

ಇದು ಭರತಭೂಮಿ, ನಿಜಮಾ ।
ಗಿದು ಶುಭರತಭೂಮಿ ಧಾರಿಣಿಯೊಳಿಲ್ಲ ॥
ಇದು [1] ದೇವನಿಭರ ತವರೂ ।
ರಿದು [2] ಜನಿಭರತಾಪಹಾರಿ ಸಟೆಯಲ್ಲ ॥ ೩ ॥

---

೩೬— 1 ಹರಿಯು ಮತ್ತು ಹರನ 2 ಹರಿಹರವೆಂಬ ಕ್ಷೇತ್ರದಲ್ಲಿ 3 ಹರಿಹರೇಶ್ವರನೂ 4 ಹರಿಯಲ್ಲಿಯೂ ಹರನಲ್ಲಿಯೂ ಅಥವಾ ಹರಿಹರೇಶ್ವರನಲ್ಲಿ ಆಸಕ್ತನಾದ 5 ರಾಜನಾದ ಹರಿಹರನ ಗುರುವಾದ ಶ್ರೀವಿದ್ಯಾರಣ್ಯರೂ.

೩— 1 ದೇವತೆಗಳಿಗೆ ಸಮಾನರಾದವರ 2 ಹುಟ್ಟುವಿಕೆಯ ರೋಗದ ತಾಪವನ್ನು ಕಳೆಯುವದು.

ಭರತನೃಪಪಾಲಿತಂ ಮೇಣ್ ।
ಭರತಕಲಾಪ್ರೌಢಿಮಾತಿಶಯಸಹಿತಂ ॥
[1] ಭರತಾಗ್ರಜಭಕ್ತಿರತಂ ।
ಭರತಧರಾತಲಮಿದೊಪ್ಪುಗುಂ ನಿರುತಂ ॥ ೪ ॥

ವಿಷಯಸುಖಸಾರರಿಂ ನಿ ।
ರ್ವಿಷಯಕಸುಖಧೀರರಿಂದಮಿದು ಭರತಂ ॥
ವಿಷಯಸುಖಿ ಭರತನಿರೆ ನಿ ।
ರ್ವಿಷಯಕಸುಖಿಯಿರ್ದನಿಲ್ಲಿ ಜಡಭರತಂ ॥ ೫ ॥

ಭಾರತರಣರಂಗಂ, ಜಂ ।
ಭಾರಿಸುತೋದ್ದಾಮಶೌರ್ಯಮಹಿತಾಂಗಂ ॥
ಭೂರಿಕರುಣಾಂತರಂಗಂ ।
ಭಾರತಧರೆ ಭಜಕಲೋಕಭವಭಂಗಂ ॥ ೬ ॥

ಪೂರ್ವಾರ್ಧಗೋಲದಿ ಮುಖಾತ್ಮಕಮಾಗಿ ತೋರ್ಪಾ ।
ಪೂರ್ವಾದ್ರಿ ಯಾವುದೆನಲುತ್ತರಮಾದುದಪ್ಪಾ ॥
ಪೂರ್ವಪ್ರಸಿದ್ಧವಹ ಭಾರತಭೂಮಿ, ನಿನ್ನೀ ।
[1] ಪೂರ್ವೋತ್ತರಂ ತಿಳಿಯಲಚ್ಚರಿ ಲೋಕಕಿನ್ನುಂ ॥ ೭ ॥

ರಾಮನೃಪನಾಳುವಿಕೆ, [1] ಬಲ ।
ರಾಮಾನುಜನೊಲಿದು ಪೇಳುವಿಕೆ, [2] ಪೇಳಿದುದಂ ॥
[3] ರಾಮಮುನಿ ಕೇಳುವಿಕೆಯುಭ ।
ರಾಮತೆವೆತ್ತಿರುತೆ ರಾಮರಾಜ್ಯಮಿದೆನಿಕುಂ ॥ ೮ ॥

ಮುಖಮೇ ಪ್ರಧಾನಮೆನಿಪಂತೆ ದೇಹದೊಳ್ ।
ಮುಖಮಾಗಿ ಭಾರತಧರಿತ್ರಿ ಲೋಕದೊಳ್ ॥
[1] ಸುಖಸರ್ವಸಾರಸದನಾಯಮಾನಳುಂ ।
[2] ಸುಕಥಾಪ್ರಸಂಗಸುಯಶೋನಿದಾನಳುಂ ॥ ೯ ॥

---

೪ — 1 ಶ್ರೀರಾಮನ ಭಕ್ತಿಯಲ್ಲಿ ಆಸಕ್ತವಾದದ್ದು.

೭ — 1 ಹಿಂದುಮುಂದಿನ ವಿಚಾರಗಳು.

೮ — 1 ಕೃಷ್ಣನು 2 ತಂದೆಯಾದ ಜಮದಗ್ನಿಯು ಹೇಳಿದ್ದನ್ನು 3 ಪರಶುರಾಮನು

೯ — 1 ಮುಖವು ಜ್ಞಾನೇಂದ್ರಿಯಗಳುಳ್ಳದ್ದಾಗಿ ಸರ್ವಸುಖಗಳ ಆವಾಸಸ್ಥಾನವಾಗಿರುವಂತೆ ಭರತಖಂಡವು ಲೋಕದಲ್ಲಿ ಸರ್ವಸುಖಗಳ ಆವಾಸಸ್ಥಾನವೆಂದು ತಾತ್ಪರ್ಯ 2 ಮಹಾಭಾರತಯುದ್ಧದ ಕಥೆಯಿಂದ ಹೆಸರನ್ನು ಪಡೆದಿರುವದು.

ದುರುಳರ ತುಳಿವಾ ವ್ರತಸ್ಥಳಾನೆಂ ।
ದರುಹುತೆ ರಾಕ್ಷಸರಾಜಲಂಕೆಯುಂ ತಾಂ ॥
ನೆರೆ ಪದತಲದಿಂದ ಮೆಟ್ಟ ನಿಂತೀ ।
ಭರತಧರಿತ್ರಿಯಿಹಳ್ವಿಲಾಸದಿಂದಂ ॥ ೧೦ ॥

[1] ಬಹುಪೀಡಿಸಲಲ್ಪಮೀವ ಭಾಗಂ ।
ಬಹುವಾಗಿರೆ ಭೂಮಿಯಲ್ಲಿ ನೋಡಲ್ ॥
ಬಹುಭೋಗಮುದಲ್ಪಪೀಡೆಯಿಂದಂ ।
ಬಹುದೀ ಭರತೋರ್ವಿಯಲ್ಲಿ ನಿಚ್ಚಂ ॥ ೧೧ ॥

ಧರೆಯೆಲ್ಲಕೆ ಭಾಗ್ಯಮೀಯುತು ।
ದ್ಧರಿಕುಂ ತಾನೆನೆ ಗೌಣಗೌರವಂ ॥
ಧರೆಯೆಲ್ಲಕೆ ಧರ್ಮಮೀಯುತು ।
ದ್ಧರಿಕುಂ ತಾನೆನೆ ಮುಖ್ಯಗೌರವಂ ॥ ೧೨ ॥

ಮಹತ್ತ್ವಮಂ ಭೌತಿಕಭಾಗ್ಯಭೋಗದೊಳ್ ।
ಬಹುಸ್ಥಲಂ ತೋರ್ದೊಡಮೀ ಧರಿತ್ರಿಯೊಳ್ ॥
ಮಹತ್ತ್ವಮಂ ಧಾರ್ಮಿಕಭಾಗ್ಯಭಾಗದೊಳ್ ।
ಬಹುತ್ವದಿಂ ತೋರ್ಪುದಿದೇ ವಿಚಾರಿಸಲ್ ॥ ೧೩ ॥

ಸಿರಿಯ ಭೋಗದಿ ಬೀಗುವ ಭಾಗ್ಯಮಂ ।
ಸರಿಯೆನುತ್ತಿದು ಮನ್ನಿಸದೈ ಧ್ರುವಂ ॥
ಸರಳವರ್ತನಮಂ ಸುವಿಚಾರಮಂ ।
ಸಿರದಿ ವಂದಿಪುದೀ ಧರೆಗುತ್ಸವಂ ॥ ೧೪ ॥

ಕ್ಷಾತ್ರತೇಜದ ವಿಶೇಷವ ತೋರಲ್ ।
ಧಾತ್ರಿಯಲ್ಲಿ ಬಹುದೇಶಗಳಿರ್ಕುಂ ॥
ಚಿತ್ರಮೀಗ ಭರತೋರ್ವಿಯಿದೊಂದೇ ।
ಕ್ಷಾತ್ರಮಂ ವಿಬುಧತೇಜದಿನಾಳ್ಗುಂ ॥ ೧೫ ॥

---

೧೧— 1 ನೆಲವನ್ನು ಆಳವಾಗಿ ಉತರೆ ಮಾತ್ರ.

ಕಾಲಕ್ಕೆ ತಕ್ಕಂತೆನೆ ಧರ್ಮವೆಲ್ಲಂ ।
ಕೋಳಾಗಿ ಪೋಯ್ತು ಬಹುದೇಶದೊಳತ್ತಾಂ ॥
ಧೂಳಿಟ್ಟೊಡಂ ದುರ್ನೃಪರಿಂದಮಿಲ್ಲೀ ।
ಕಾಲಕ್ಕುಮಿರ್ಕುಂ ವರಧರ್ಮವೆಂತುಂ ॥ ೧೬ ॥

ಧರೆಯೆಲ್ಲವ ಕೊಂದು ಸೂರೆಗೊಂ ।
ಡಿರೆ ತಾಂ ಯುತ್ನಿಸಲೆಲ್ಲ ದೇಶಮುಂ ॥
ವರಧರ್ಮವ [1] ಕೊಟ್ಟವರ್ಗಳಂ ।
ಚಿರಜೀವರ್ಕಳ ಮಾಳ್ಪುದೀ [2] ಜಗಂ ॥ ೧೭ ॥

ಎಷ್ಟು ಸಾಧನಗಳಿರ್ದೊಡಮಿನ್ನುಂ ।
ತಿಷ್ಟು ಬೇಕೆನೆ ವಿದೇಶದಿ ಮೋಹೊಂ ॥
ದಿಷ್ಟು ಸಾಧನಗಳಿಲ್ಲದೊಡಂ ಸಾ ।
ಕಿಷ್ಟಮೆಂಬುದುರೆ ಭಾರತದೇಶಂ ॥ ೧೮ ॥

ಧನದಿಂದಲೆ ವರ್ಗಭೇದಮಾಯಾ ।
ಜನದಲ್ಲಿರ್ದು ವಿದೇಶದಲ್ಲಿ ತೋರ್ಕುಂ ॥
ಮನುಧರ್ಮದಿ ವರ್ಣಭೇದಮಾಯಾ ।
ಜನರಾಚಾರದೊಳಿಲ್ಲಿ ಭದ್ರಮಿರ್ಕುಂ ॥ ೧೯ ॥

ಕಲ್ಲಿದ್ದಲಿರ್ಪ ಬಹುದೇಶದ ಮಧ್ಯದಲ್ಲೀ ।
ಕಲ್ಲೆಲ್ಲ ರತ್ನಮೆನಲಾಯ್ತಿದು ರತ್ನಗರ್ಭೆ ॥
ಕಲ್ಲಲ್ಲಿ [1] ಸುಂದರಿಯು ತೋರಿದ ಧಾತ್ರಿಯಿಲ್ಲೀ ।
ಕಲ್ಲಂತೆ ನೀಂ ಚಿರಮಿರೌ [2] ಕವಿರತ್ನಗರ್ಭೆ ॥ ೨೦ ॥

ಪರಿಪೂರ್ಣಧರಾತಲಪ್ರದೇಶ ।
ಸ್ಫುರದತ್ಯುಜ್ಜ್ವಲಭಾರತಾಂಬೆ ತೋರ್ಪಳ್ ॥
ಪುರುಷೋತ್ತಮಪುಣ್ಯಭೂಮಿಕಾಂತಾ ।
ವರಕಂಠಸ್ಥಿತಮಾದ ತಾಳಿಯೆಂಬೊಲ್ ॥ ೨೧ ॥

---

೧೭ — 1 ಕೊಟ್ಟು+ಅವರ್ಗಳಂ 2 ಈ ಭರತಭೂಮಿಯು.

೨೦ — 1 ಅಹಲ್ಯೆಯನ್ನು 2 ಅನೇಕ ಕವಿರತ್ನರ ಜನ್ಮಭೂಮಿ ಅಥವಾ ಕವಿರತ್ನಪದವಿಯನ್ನು ಪಡೆದಿರುವ ಈ ಗ್ರಂಥಕರ್ತನ ಜನ್ಮಭೂಮಿ.

ಧರೆಯೊಳೆಂತು ನೋಡಲ್ಕೆಲ್ಲಿಯುಂ ಬೀಳದಷ್ಟೀ ।
ಭರತಭುವನದೊಳ್ಸದ್ವೃಷ್ಟಿ ತಾನಾಗಲಿಂದುಂ ॥
ಹೊರಗುಳಿದಿಹ ದೇಶಾನೀಕದಲ್ಲಿಲ್ಲದಷ್ಟೀ ।
ಧರೆಗೆ ಹಂಕಟಾಕ್ಕಾಲೋಕಮುಂಟೆಂಬರೆಂದುಂ ॥ ೨೨ ॥

ಈ ಭೂಮಿಯೊಳ್ಕುಶಲರಾದವರೆಲ್ಲ ನೆಯ್ವಾ ॥
ಶೋಭಾವಹಂ ನಿಖಿಲಮಾನವಭೋಗ್ಯವಸ್ತ್ರಂ ॥
1 ಕ್ಷೋಭಾತಿರೇಕಮುಹ ಯಂತ್ರಗಳಿಂದ ನೆಯ್ವಾ ।
ಲೋಭಾತಿರೇಕರೆದೆಗುರ್ಕಿನ ತೀಕ್ಷ್ಣಶಸ್ತ್ರಂ ॥ ೨೩ ॥

1 ಉತ್ತರೋತ್ತರ ಮಹತ್ತ್ವದಿಂದ ಲೋ।
ಕೋತ್ತರಂ ಭರತಮೆಂತು ಪೇಳಲೊ? ॥
2 ಉತ್ತರಸ್ಥಹಿಮವದ್ಗಿರೀಂದ್ರವೇ ।
3 ಉತ್ತರಂಗುಡುತೆ ತೋರ್ಪುದಿಲ್ಲವೆ? ॥ ೨೪ ॥

ಗೋಪಾಲಕತ್ವಂ ತಳೆದಾದಿದೇವಂ ।
ಭೂಪಾಳಿಗಾಗುತ್ತಿರಲಿಲ್ಲಿ ಕಾವಂ ।
ಪಾಪಾತಿದೂರರ್ಗದರ ಪ್ರಭಾವಂ ।
ಗೋಪಾಲಕತ್ವವ್ರತವೇ[1] ಸ್ವಭಾವಂ ॥ ೨೫ ॥

ವ್ಯವಸಾಯವೆ ಮುಖ್ಯಜೀವವೀ ।
ಭುವಿಗೆಂದೆಂಬುದ ತೋರಲೆಂದು ತಾಂ।
ತವೆ ಮೋಡವನೆಲ್ಲ ಶೈಲವೇ ।
ಪವಣಿಂ ನಿಲ್ಲಿಪುದಿಲ್ಲಿ ಸಂತತಂ ॥ ೨೬ ॥

ಮೂರುದಿಕ್ಕಿನೊಳಗಾಧಜಲಂ ಮೇಣ್ ।
ಭೂರಿಪರ್ವತಮುಮೊಂದೆಡೆಯೊಳ್ತಾಂ ॥
ಮೇರೆಗೊಂಡು ಮೆರೆವೀ ಸ್ಥಿತಿಯಿಂದಂ ।
ಭಾರತಾಂಬೆಗೆ [1]ವಿವಿಕ್ತತೆ ಶೀಲಂ ॥ ೨೭ ॥

---

೨೩ — 1 ಹೆಚ್ಚು ಹಾನಿಯನ್ನುಂಟುಮಾಡುವಂಥ.

೨೪ — 1 ಹೆಚ್ಚುಹೆಚ್ಚು 2 ಉತ್ತರದಿಕ್ಕಿನಲ್ಲಿರುವ 3 ಉತ್ತರವನ್ನು ಕೊಡುತ್ತ.

೨೫ — 1 ಗೋಪಾಲಕೃಷ್ಣನು ಇಲ್ಲಿ ಅವತರಿಸಿ ಆಳಿದ್ದರ ಫಲವಾಗಿ ಇಲ್ಲಿಯ ಜನರು ಸ್ವಭಾವವಾಗಿ ಗೋಪಾಲಕವ್ರತಸ್ಥರಾಗಿರುವರು.

೨೭ — 1 ಒಂಟಿಯಾಗಿರುವಿಕೆ.

ಹಿಮವತ್ಪರ್ವತರಾಜಿ ಕೇಶನಿಚಯಂ, ಗಂಗಾಂಬೆಯುಂ ಸಿಂಧುವುಂ ।
ಕಮನೀಯಾಕೃತಿವೆತ್ತಬಾಹುಯುಗಲಂ, ವಿಂಧ್ಯಾದ್ರಿ ಮಧ್ಯಸ್ಥಲಂ ॥
ಕ್ರಮದಿಂ ಸೇರಿಹ ಪೂರ್ವಪಶ್ಚಿಮನಗಂಗಳ್ನಿನ್ನ ಪಾದಂಗಳಿಂ ।
ತಮಮಾ! ಭಾರತಮಾತೆ, ನಿನ್ನಿರವ ನೋಡಲ್ಕೀಗಳತ್ಯದ್ಭುತಂ ॥ ೨೮ ॥

ಕುರುಪಾಂಡವರಿರ್ದಾಳಿದ ।
[1] ಕರಿನಗರಿಯೆ ನಿನ್ನ ನಾಸಿಕಸ್ಥಾನಂ ॥
ನೆರೆ ವಂಗಂ [2]ಪಂಚನದಂ ।
ಮೆರೆವಕ್ಷಿಗಳಿಂತು ನಿನಗೆ ಬಹುಮಾನಂ ॥ ೨೯ ॥

[1] ಕಲೆಗಳನಿನಿತಿನಿತರಿವುದು ।
[2] ಕಲೆ[3]ಯೊಕ್ಕಲೆ ಪೂರ್ಣವಾಗಿರಲ್ಕದೇ [4]ಕಲೆ ತಾಂ ॥
ಕಲಿತಿಲ್ಲಿ ಕೃಷಿಯೊಳಿರ ।
[5] ಒಕ್ಕಲಿಗರ್ ಮೇಣ್ಕೊರತೆಯೇನದವರೊ[6]ಳ್ಕಲೆತುಂ ॥ ೩೦ ॥

ಪರಿಮಳಿಪ ಪುಷ್ಪಫಲಗಳ ।
ಪರಿಪರಿತರುಲತೆಗಳಿಂದ ತುಂಬಿರ್ದೀ ॥
ಪರಿಯಿಂ ಗಂಧವತೀತ್ವದ ।
ಪರಮಾವಧಿದೋರ್ಪ ಭೂಮಿಯಿದು ಜಗದೊಳ್ ॥ ೩೧ ॥

ಮತ್ತಂ ನೆತ್ತಿಯ ಮೇಲೆ ನೆಳಲೀಯುತ್ತೆ ಬಾನೆಡೆಯೊಳ್ಕರ್ಮೋಡಗಳ ಹಿಂಡುಗಳಂಡಲೆವುದಂ ಕಂಡೊಡನೆ ತನ್ನ ಪದತಲದಲ್ಲಿರ್ಪವರ್ಗಗತ್ಯಮಾದನ್ನೋದಕಂಗಳ ಬನ್ನಮಂ ನೀಗಲ್ಕೆರವಪ್ಪುವಿವೆಂದಡ್ಡಗಟ್ಟುತ್ತಮಂ ತನ್ನೆಡೆಗೆ ಸೆಳೆದುಕೊಳ್ಳಲ್ನೀಡಿದ ಭೂದೇವಿಯ ನಳಿತೋಳ್ಗಳೆಂಬಂತೆ ಮುಗಿಲಂ ಮುಟ್ಟು[1]ದಗಂಗಳ ಕೋಡುಗಲ್ಗಳುಂ । ಆ ಬೆಟ್ಟಂಗಳ ತಪ್ಪಲಂ ತಪ್ಪದಂತಪ್ಪುಗೆಯ್ದು ನೆಲಮೆಲ್ಲಮಂ ಕತ್ತಲೆಯಿಂ ಕಪ್ಪಾಗಿಸಿ ನಿಟ್ಟಿಸಿದವರ ದಿಟ್ಟಿ ಮಟ್ಟಾಗುವಂತೆ ದಟ್ಟವಾಗಿ ಬೆಳೆದ ಸಾಲರಸಾಲತಾಲಹಿಂ

೨೯— 1 ದಿಲ್ಲಿ (ಹಸ್ತಿನಾವತಿ) 2 ಪಂಜಾಬ್.

೩೦— 1 ವಿದ್ಯೆಗಳನ್ನು 2 ಕಲಂಕವು 3 ಒಂದು+ಕಲೆ (ವಿದ್ಯೆ) 4 ವಿದ್ಯೆ 5 ಒಂದು+ಕಲೆ+ಇಗ= ಒಂದು ಕಲೆಯನ್ನು ಚೆನ್ನಾಗಿ ಕಲಿತವರು 6 ಸೇರಿಯೂ.

೩೧— 1 ಪರ್ವತಗಳ.

ತಾಲಮಾವುಬೇವರಳಿಯುರನೆಲ್ಲಿಹೊನ್ನೆಸುರಹೊನ್ನೆ ಗುರ್ಗುಳಮತ್ತಿಯುಂ ಕೋಲೆತೇಗಸಿಂಗಂದದೇವದಾರು ಮೊದಲಾದ ಭೂರಿತರುನಿಸರದಿಂದ ಮುಂ ಸಿಂಹಶರಭಸಾಳ್ವಗಂಡಭೇರುಂಡಖಡ್ಗಮೃಗಾದಿ ಹಿಂಸ್ರಪಶು ಸಮೂಹದಿಂದಮುಂ ದೆಸೆಗಾಣದಂತೆ ಮಾಡುವ ಕಗ್ಗಾಡುಗಳುಂ । ಆ ಕಾಡುಗಳಂ ನುಸುಳಿ [2]ಜನ್ಮಗೋತ್ರಮುಂ ಬಿಟ್ಟು ಗಂಡನೆಡೆಗೈದುವ ಸಡಗರದಿಂ ಸರಭಸರಪ್ಪ ಗರತಿಯರಂತೆ ಓರೆಯಾಗಿ ನಿಮ್ನಪ್ರದೇಶದೊಳ್ನಡೆದು ಕ್ರಮಕ್ರಮವಾಗಿ ವೇಗಮುಂ ಪಡೆದು ದಾರಿಯೊಳ್ತನ್ನ ಭೀರುತ್ವಂ ದೂರಮಾಗಲೆಂಬ ಹರಕೆಯಿಂ ಬಳಿಗೈದಿದವರ್ಗೆ ತನ್ನ [3]ಜೀವನದಾನಮ ನೀಯುತ್ತೆ ಮುಂದೆ ಸಾಗಿ ಕೊನೆಗೆ ಸರಿತ್ಪತಿಯ ಚರಣತಲದೊಳೈಕ್ಯ ದಿಂದುಡುಗುವ ನದೀನಾರಿಯರುಂ । ಆ ದೇವನಿರ್ಮಿತನದಿಗಳಿಂದಮುಂ ಮತ್ತಂ ಮನುಷ್ಯನಿರ್ಮಿತವಿಪುಲತಟಾಕಂಗಳಿಂದಮುಂ ಕಾಲುವೆಗಳೆಂಬ ಕಾಲುಗಳಿಂ ಪರಿದ ನೀರ್ ಸುತ್ತಮುತ್ತಣ ದೇಶಮನೆಲ್ಲಮುಂ ಸುತ್ತಿ ತಣ್ಪು ಗೆಯ್ಯಲದರಿಂ ಸೊಂಪಾಗಿ ಬೆಳೆದು ಪಾಲ್ದುಂಬಿ ನೋಳ್ಪವರ ಕಣ್ಮನಂಗಳಂ ರಂಜನೆಗೊಳಿಪ ಬತ್ತಗಬ್ಬುಗಳ ಬೆಳೆಗಳುಂ ಅಡಿಕೆತೆಂಗು ಮೊದಲಾದ ಧ್ರುವಫಲವೃಕ್ಷಂಗಳುಂ । ಅವುಗಳ್ಗನತಿದೂರದೊಳ್ಮೆಲ್ನಡಿಯಿಂದಮುಂ ಮೆಲ್ನಡೆಯಿಂದಮುಮುಲ್ಲಾಸಕರಮಾದ ಪರಪುಟ್ಟಪಂಡಿತಮಕ್ಕಿಕೊಂಚೆ ಪಾಂಮಗೀಜಗನಂಚೆ ಮೊದಲಾದ ಮುದ್ದುವಕ್ಕಿಗಳಿಂ ಕೂಡಿ ಮೊಲ್ಲೆ ಮಲ್ಲಿಗೆಜಾಜಿಸಂಪಗೆಸುರಗಿಪಾಟಲಿಯುಸುಗೆಪುನ್ನಾಗನಾಗಕೇಸರ ಮೊದ ಲಾದ ನರುಗಂಪನೀವ ತರುಲತಾರಾಜಿಯಿಂ ನಿಬಿಡಮಾದ ಪುರೋಪ ವನಂಗಳುಂ । ಎತ್ತ ನೋಡಿದೊಡತ್ತ ಭಗವಂತನಸ್ತಿತ್ವಮುಂ ಶಿಲ್ಪಕಲೆಯು ನಲ್ಪತ್ವಮುಂ ಚಿತ್ತಕ್ಕೆ ತಂದುಕೊಡುವ ದೇವಾಲಯಂಗಳುಂ ತಮ್ಮ ಜನ್ಮ ಭೂಮಿಯ ಪುಣ್ಯಭೂಮಿನಾಮಧೇಯಮನನ್ವರ್ಥಮಾಗಿ ಮಾಡಲೆಳಸು ತ್ತತಿಥಿಸತ್ಕಾರನಿರತರಾದವರ್ನಿರ್ಮಿಸಿರ್ಪ ಸತ್ರಮಂಟಪಂಗಳ ಸಾಲು ಗಳುಂ ಪೇಳಲಳವಲ್ತೆಂಬವ್ರೊಲ್ವಿಶಾಲಮಾಗಿ ಮೆರೆವ ಪುರಂಗಳುಂ । ಪಂಶೋಭಿಸೆ ಬಸಿರಲ್ಲಿರ್ಪ ಚಿನ್ನರನ್ನಂಗಳಿಂ ಬಣ್ಣಗೊಂಡು ಭವ್ಯಮಾ ಗಿರ್ಪೀ ಭರತಮಾತೆಯ ಮುದ್ದುಗುಮರಿಯಾದ ಕನ್ನಡನಾಡ ತಾಯುಂ ನಿಟ್ಟಿಸಿದೊಡೆ—

ಟಿ ೨— 2 ಹುಟ್ಟಿದ ಪರ್ವತ ಅಥವಾ ಹುಟ್ಟಿದ ವಂಶ 3 ತನ್ನ ಪ್ರಾಣವನ್ನು ಕೊಡುವದು ಅಥವಾ ನೀರನ್ನು ಕೊಡುವದು.

ಸ್ವಭಾವದಿಂ ಕನ್ನಡ ನಾಡ ತಾಯ್ತಾಂ ।
ಸುಭದ್ರ ಪೀಠಾಧಿಪಳೆಂದುವೆಂಬೋಲ್ ॥
ಶುಭಾಕರಂ ನೀಲಗಿರೀಂದ್ರಮೇ ತಾಂ ।
ಸುಭಾಗ್ಯ ಪೀಠಸ್ಥಲಮಾಕೆಗೆಂದುಂ ॥ ೩೨ ॥

ಭಾರತಮಾತೆಗೆ ಮುದ್ದಂ ।
ಬೀರುವ ತೊಡೆಗೂಸಿದೆಂಬ ಪ್ರೊಲ್ವಣ್ಣಾಟಂ ॥
ರಾರಾಜಿಸು [1] ತೌಚಿತ್ಯದಿ ।
ಸೇರಿರ್ಪರ್ಂತಿರ್ಪುದೀ ಪ್ರದೇಶದ ಮಾಟಂ ॥ ೩೩ ॥

ಮತ್ತಮೀಕೆಯು ಪ್ರಭಾವಮಾದರೊ—

ವೀರರ್ಗೆ ಮೇಣ್ ಲೋಕಹಿತೈಷಿಗಳ್ಗಂ ।
ಭೂರಿಪ್ರದಂ ತಾನಹ ತಾಮ್ರಪತ್ರಂ ।
ರಾರಾಜಿಕುಂ [1] ಲಂಡನವಾಸಿಗಳ್ಗಂ ।
ತೋರುತ್ತಮಾದರ್ಶಮನಲ್ಪಮಿತ್ರಂ ॥ ೩೪ ॥

ಕೌಶಲ್ಯಮಂ ಬಗೆಯೆ ವೇರುಳದಲ್ಲಿಯಾ ಕೈ ।
ಲಾಸೇಶಮಂದಿರಮಜಂಟದ ಚಿತ್ರಮಿನ್ನುಂ ॥
ಭೂಷಾವಿಶೇಷಮಿಳೆಗೆಂದಿಹ ಮಾತೆ ಸಾಕ್ಕೆ ।
ಲೇಸೆಲ್ಲಮೀ ಧರೆಯು ಮೀಸಲೆ ನೋಡಲಿನ್ನೇಂ ॥ ೩೫ ॥


ರತ್ನಂಗಳಿಲ್ಲ ಕಲ್, ಕಲಿ ।
ರತ್ನಂಗಳ್ [1] ವೀರಗಲ್ಗಳುಂ ಮೇಣಬಲಾ ॥
ರತ್ನಂಗಳ್ [2] ಮಾಸತಿಗಲ್ ।
ರತ್ನಂಗಳೆನಿಪ್ಪುವಿಲ್ಲಿ ನೋಡೆ ಭಲಾ! ॥ ೩೬ ॥

---

೩೩— 1 ಒಪ್ಪುವ ರೀತಿಯಿಂದ.

೩೪— 1 ಲಂಡನ್ ಪಟ್ಟಣದ ಜನರಿಗೂ.

೩೬— 1 ಯುದ್ಧದಲ್ಲಿ ಸತ್ತವರ ನೆನಪುಗೊಡುವ ಕಲ್ಲುಗಳು 2 ಯುದ್ಧದಲ್ಲಿ ಸತ್ತ ಗಂಡಂದಿರೊಡನೆ ಸಹಗಮನವನ್ನು ಮಾಡಿದವರ ನೆನಪುಗೊಡುವ ಕಲ್ಲುಗಳು.



“ ಕೌಶಲ್ಯಮಂ ಬಗೆಯೆ ವೇರುಳದಲ್ಲಿಯಾ ಕೈ ।

ಲಾಸೇಶಮಂದಿರ…………………… …”

—ಶ್ರೀವಿದ್ಯಾರಣ್ಯಕಾವ್ಯ ೨-೩೫

ದಕ್ಷಿಣಮುಮನಲ್ಲದೆ ಬಹು ।
ದಕ್ಷತೆಯಿಂದುತ್ತರಮುಮನಂಜಿಪ ರಣದೊಳ್ ॥
ದೀಕ್ಷಿತನಹ [1]ಪುಲಿಕೇಶಿಯ ।
ದೀಕ್ಷೆಯ ನೆಲನಿದಕೆ ಸರಿಯದಾವುದೊ? ಧರೆಯೊಳ್ ॥ ೩೭ ॥

ನಲವಿಂ ಹಿಂದುಸ್ಥಾನಿಯು ।
ಬಲವಾಳ್ದಿರೆ ತನ್ನ ರಾಗದಿಂದುತ್ತರಮಂ ॥
ಸಲೆ ಕರ್ಣಾಟಕಿ ತನ್ನಯ ।
ಕಲರವದಿಂದಾಳುತಿರ್ಪಳೀ ದಕ್ಷಿಣಮಂ ॥ ೩೮ ॥

ಭರತೋರ್ವಿಯೊಳಾರಿಸುತಾ ।
ಭರತಾಗ್ರಜನೊಲಿಯುತಾಗ ರಾಘವನೆಂದೇ ॥
ಬರುದಿತ್ತ [1]ನರಿದಲೆಗನೇ ।
ಭರದಿಂದಂ ರಾಗಿಯೆನಿಸುತಿಹುದೀ ನಾಡೊಳ್ ॥ ೩೯ ॥

ಭಾರತಜನನಿಯುದಾರತೆ ।
ಏರಿರೆ ಕರ್ಣಾಟಸುತೆಯು ಕೊರಳೊಳಗೆ ॥
ಹಾರವಿಟ್ಟಂತೆ ಕೃಷ್ಣಾ ।
ಪೂರಂ ಶೋಭಿಪುದು ನೋಡೆ ಧರೆಯೊಳಗೆ ॥ ೪೦ ॥

---

೩೭— 1 ಚಾಲುಕ್ಯರ ಎರಡನೇ ಪುಲಿಕೇಶಿಯು ದಕ್ಷಿಣ ದೇಶವನ್ನೆಲ್ಲಾ ಗೆದ್ದದ್ದಲ್ಲದೆ ಉತ್ತರದ ಸಮ್ರಾಜನಾಗಿದ್ದ ಹರ್ಷವರ್ಧನನನ್ನೂ ಕೂಡ ಗೆದ್ದನೆಂದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ.

೩೯— 1 ಈಗ ರಾಗಿಯೆಂದು ಕರೆಯುವ ಧಾನ್ಯಕ್ಕೆ ಪೂರ್ವದಲ್ಲಿ ನರಿದಲೆಗನೆಂದು ಹೆಸರಿತ್ತೆಂದೂ ಶ್ರೀರಾಮಚಂದ್ರನು ಇತ್ತಕಡೆಗೆ ಬಂದಿದ್ದಾಗ ಋಷಿಗಳಿಂದ ಅದನ್ನು ಆತಿಥ್ಯ ರೂಪವಾಗಿ ಸ್ವೀಕಾರಮಾಡಿ ಅದಕ್ಕೆ ಮೆಚ್ಚಿ ತನ್ನ 'ರಾಘವ' ಎಂಬ ಹೆಸರನ್ನು ಬಿರುದಾಗಿ ಕೊಟ್ಟನೆಂದೂ ಆ ಹೆಸರು ಈಗ ರಾಗಿಯೆಂದಾಗಿದೆಯೆಂದೂ ಕನಕದಾಸರು ಒಂದು ಗ್ರಂಥವನ್ನು ಬರೆದಿದ್ದಾರೆ.

ಗಂಗೆಯುದಿರ್ಪುತ್ತರಭಾ ।
ಗಂ ಗೌರವಕರ್ಹಮಾಗೆ ಪಿರಿದೇನೊ ತಿರುಳ್? ॥
ಗಂಗಾಸಮಾನೆ ದಕ್ಷಿಣ ।
ಗಂಗೆಯೆ ತಾನೆನಿಪ ಕೃಷ್ಣೆ ದಕ್ಷಿಣದೊಳಿರಲ್ ॥ ೪೧ ॥

ಕೃಷ್ಣಪ್ರಿಯೆಯೊಕೆಯೆನಲ್ ।
ಕೃಷ್ಣಾನಾಮವನೆ ತಾಳ್ದು ದಕ್ಷಿಣದೊಳ್ ॥
[1] ಕೃಷ್ಣಾತ್ಮಳಾಗಿ ಜನತೆಗೆ ।
ಕೃಷ್ಣನ ಭಕ್ತಿಯನೆ ಕೊಡುವಳೀಕ್ಷಣದೊಳ್ ॥ ೪೨ ॥

[1] ಕೃಷ್ಣನೊಳಗಿಹುದರಿಂದಲೊ ।
ಕೃಷ್ಣೇ ಎನೆ ಕೊಂಡ ಪಾಪದಿಂದಲೊ ನೀಂ ॥
ಕೃಷ್ಣಜಲರೂಪಳಾಗಿಹೆ ।
ಕೃಷ್ಣೇ ನಿನ್ನಿರವನರಿವೆನೆಂತೌ ನಾಂ ॥ ೪೩ ॥

ಮಧುರೆಯೊಳಿರ್ದಂ ಕೃಷ್ಣಂ ।
ಮಧುರತೆ ಕೃಷ್ಣನೊಳಗಿತ್ತೊ ಇಲ್ಲವೊ ಕಾಣೆಂ ॥
ಮಧುರೆಯೊಳಿಲ್ಲದೊಡಂ ನೀಂ ॥
ಮಧುರತೆ ನಿನ್ನೊಳಗೆ ತೋರ್ಪುದಚ್ಚರಿ ಕೃಷ್ಣೇ ॥ ೪೪ ॥

ಅತ್ಯಲ್ಪಭಾಗದೊಳ್ಚರಿ ।
ಸುತ್ತಿರ್ದಂ ಕೃಷ್ಣನುತ್ತರದೊಳಾಗಳ್ ॥
ಅತ್ಯಮಿತಭಾಗದೊಳ್ಚರಿ ।
ಸುತ್ತಿಹೆ ನೀಂ ಕೃಷ್ಣೆ ದಕ್ಷಿಣದೊಳೀಗಳ್ ॥ ೪೫ ॥

ಕೃಷ್ಣಂ ಪಿತೃಸ್ವರೂಪಂ ।
ಕೃಷ್ಣೇ ನೀಂ ಮಾತೃರೂಪಿಯಾದುದರಿಂ ॥
ಕೃಷ್ಣಂಗಂ ಮಿಗಿಲೆನಲೀ ।
ಕೃಷ್ಣೆಯೆ ದಯೆದೋರ್ವಳೆಂಬುದಿಳೆ ಚದುರಿಂ ॥ ೪೬ ॥

---

೪೨— 1 ಕಪ್ಪುಬಣ್ಣವಾಗಿ ಅಥವಾ ಕೃಷ್ಣನಲ್ಲಿ ಮನಸ್ಸಿಟ್ಟವಳಾಗಿ

೪೩— 1 ಕೃಷ್ಣಂ+ಒಳಗಿಹುದರಿಂದಲೊ.

ಕೃಷ್ಣನ ಕರುಣಾರಸವೋ ।
ಕೃಷ್ಣೇ ನೀನಾಗಿ ಹರಿವೆಯಲ್ಲವೆ ತಾಯೇ ॥
ಕೃಷ್ಣಸಂಬಂಧವಿರದಿರೆ ।
ಕೃಷ್ಣಾಖ್ಯೆಯದೆಂತು ಪೇಳ್ಕಹಾವರಾಯೆ ॥ ೪೭ ॥

ಕೃಷ್ಣ ಎನೆ ಮಾತ್ರೆ ಮೂರೇ ।
ಕೃಷ್ಣಾ ಎನೆ ಮಾತ್ರೆ ನಾಲ್ಕುಮಿರೆ ನಿನ್ನೊಳ್ ॥
ಕೃಷ್ಣಂ [1]ಮಾತ್ರಾತ್ರಿತಯಂ ।
ಕೃಷ್ಣೇ ನೀನೌ [2]ತುರೀಯೆ ಬುಧಮನದೊಳ್ ॥ ೪೮ ॥

ಮಹನೀಯೆ ಗಂಗೆ ತಾನೇ ।
ಮಹೇಶಜಟೆಯಿಂದಲಿಳಿದು ಬರ್ಪಂತೆ ॥
ಮಹಿತಾಂಗಿ ಈಗ ನೀನಾ ।
ಮಹಾಬಲೇಶ್ವರದಿನಿಳಿವೆ ಗುಣವಂತೆ ॥ ೪೯ ॥

ಕರ್ನಾಟಕದೊಳಂತು ಕೃಷ್ಣೆಯುಮಲ್ಲದೆ ಕಾವೇರಿಯುಮತ್ಯಂತ ಮನೋಜ್ಞಳಾಗಿಹುದಂ ಮನಂದಂದೊಡೆ—

ಹೇ ಕಾವೇರಿಯೆ, ಹೇ ಕವೇರಮುನಿಕನ್ಯೇ, ನಿನ್ನ ಚಾರಿತ್ರದಿಂ ।
ಲೋಕಂ ತಾಂ ಬೆರಗಪ್ಪುದೌ [1]ಪತಿಯಗಸ್ತ್ಯಂ ಕಾಣದಾವೇಳೆಯೊಳ್ ॥
ಶೋಕಾವೇಶದಿ ನೀಂ ಸರೋವರದಿ ಬಿಳ್ದಾಗಳ್ನದೀರೂಪದಿಂ ।
ದೀ ಕರ್ನಾಟಕದಲ್ಲಿ ತೋರ್ಪೆ ಭಳಿರೇ ನಿನ್ನಂತದಾರ್ಧಾತ್ರಿಯೊಳ್ ॥ ೫೦ ॥

---

**೪೮** — 1 ಎಚ್ಚರ, ಕನಸು, ನಿದ್ರೆ— ಎಂಬ ಮೂರವಸ್ಥೆಗೊಳಪಟ್ಟವನು. 2 ಆ ಮೂರವಸ್ಥೆಗಳನ್ನೂ ಮೀರಿದ ನಾಲ್ಕನೆಯವಳು.

**೫೦** — 1 ಬ್ರಹ್ಮಗಿರಿಯಲ್ಲಿದ್ದ ಕವೇರಮುನಿಯ ಮಗಳಾದ ಕಾವೇರಿಯು ತಾನೊಂದು ನದಿಯಾಗಿ ಲೋಕೋಪಕಾರಕಳಾಗಬೇಕೆಂದು ತಪಸ್ಸುಮಾಡಿ ಹಾಗೆ ಆಗಬಹುದೆಂದು ದೇವರಿಂದ ವರವನ್ನು ಪಡೆದಳು. ಹೀಗಿರುವಾಗ ಅಗಸ್ತ್ಯಮುನಿಯು ಆ ಕನ್ಯೆಯನ್ನು ಮದುವೆಯಾಗಬೇಕೆಂದಪೇಕ್ಷಿಸಿದನು. ತನ್ನನ್ನು ಕ್ಷಣವಾದರೂ ಅಗಲಕೂಡದೆಂದೂ ಅಗಲಿದರೆ ತಾನು ಅದೃಶ್ಯಳಾಗುವೆನೆಂದೂ ಹೇಳಿ ಕಾವೇರಿಯು ಅಗಸ್ತ್ಯನನ್ನು ಮದುವೆಯಾದಳು. ಒಂದು ದಿನ ಅಗಸ್ತ್ಯನು ಆಕೆಯನ್ನಗಲಿ ಸ್ನಾನಾರ್ಥವಾಗಿ ನದಿಗೆ ಹೋದಾಗ ಆಕೆ ಒಂದು ಸರೋವರದಲ್ಲಿ ಧುಮುಕಿ ನದಿಯಾಗಿ ಹೊರಬಿದ್ದಳು. ಅಷ್ಟರಲ್ಲಿ ಪತಿಯು ಬಂದು ಆಕೆಯನ್ನು ಹಂಬಲಿಸಿದ್ದರಿಂದ ಆಕೆ ತನ್ನದೊಂದಂಶದಿಂದ ಸ್ತ್ರೀರೂಪವನ್ನು ಧರಿಸಿ ಆತನ ಪತ್ನಿಯೂ ಆಗಿದ್ದು ಮತ್ತೊಂದಂಶದಿಂದ ನದಿಯಾಗಿಯೂ ಹರಿದು ಹೋದಳು.

ಇನಿಯನಗಲ್ದೊಡನೆಯೆ ಮು ।
ನ್ನಿನ ಜನರಸುವಳಿಯುತಿರ್ದುದೆಂಬುದನೀಗಳ್ ॥
ಜನಕರುಪಲಿರ್ಪೆ ನೀಂ ಮೇ ।
ದಿನಿಯೊಳ್ಪೂರ್ವಿಕರ ವರ್ತನೆಯ ನೆನಪುಳಿಯಲ್ ॥ ೫೧ ॥

ಪರಹಿತಕೆ ನದಿಯ ರೂಪದಿ ।
ಪರಿವಂದದಿ ವರವ ಪಡೆದ ನೀಂ ಸ್ತ್ರೀಜನವಂ ॥
ಪರಹಿತಪರರೆಂದೆನಿಸುವ ।
ಪರಿಯಿಂದೀ ಭುವಿಯ ಗೆಯ್ದೆ ಸುಖಭಾಜನವಂ ॥ ೫೨ ॥

ಹರಶಿರದ ಗಂಗೆಯುಳಿದವ ।
ರರಿಯದವೊಲ್ಗುಪ್ತದಿಂ [1]ತುಲಾಮಾಸದೆ ತಾಂ ॥
ಹರಿತಂದು ಸೇರ್ವಳೆಂದೆನೆ ।
ಲರರೇ! ಕಾವೇರಿಯಿರವ ಬಣ್ಣಿಪೆನೆಂತೊ? ॥ ೫೩ ॥

ಸಲಿಲಸ್ವರೂಪೆ, ನಿನ್ನಿಂ ।
ಬೆಳೆದುದದಿನ್ನೆಷ್ಟೊ ಕಾಣೆ ಕಾವೇರಿ ॥
ಸಲೆ [1]ನಾಲ್ದೋಳಂ ಮುಗಿಹ ।
ನಳಿದಳೆದಾಯಾಸಮಾಗಿ [2]ಕಾವೇರಿ ॥ ೫೪ ॥


ಉದಧಿಯನುಂ ಕುಡಿದವನೆಂ ।
ಬುದ ನೋಡದೆ ವಿರತಿಯಿಂದಗಸ್ತ್ಯನ ಬಿಡುತಂ ॥
ಉದಧಿಯನೆ ಸೇರ್ವ ನದಿಯಾ ।
ದುದು ತೋರ್ಪುದು ನಿನ್ನ ಪರಹಿತೇಚ್ಛೆಯ ನಿರುತಂ ॥ ೫೫ ॥

---

೫೩— 1 ಗಂಗಾನದಿಯು ಅನೇಕಜನರ ಸ್ನಾನದಿಂದ ತನಗುಂಟಾದ ಪಾಪವನ್ನು ನಿವಾರಣೆ ಮಾಡಿಕೊಳ್ಳುವದಕ್ಕಾಗಿ ವರ್ಷಕ್ಕೊಂದುಸಲ ತುಲಾಮಾಸದಲ್ಲಿ ಗುಪ್ತಗಾಮಿನಿಯಾಗಿ ಕಾವೇರಿಗೆ ಬರುವದೆಂದು ಪುರಾಣದಲ್ಲಿ ಹೇಳಿದೆ.

೫೪— 1 ರಂಗನಾಥನೆಂಬ ಹೆಸರಿನ ವಿಷ್ಣು. 2 ಕಾವು+ಏರಿ = ಸೆಕೆ ಹೆಚ್ಚಾಗಿ.

K.P.W.D. 348, 21, C-1000



" ಶರದಂತೆ ಗೇರಸೊಪ್ಪೆಯು।
ಶರಾವತೀಪಾತಸೊಪ್ಪುತಿಹುದಿಳೆಯೊಳ್ "

—ಶ್ರೀವಿದ್ಯಾರಣ್ಯ ಕಾವ್ಯ ೨–೫೮

ಗೋರಕ್ಷಕದೇಶವ ಕಾ ।
ವೇರಿಯೆ ನೀಂ ಬಯಸಿ ಬಂದೆ ಚದುರಿಂದ ॥
ತೀರುವದು ಗೋಕಥೆಯ ಸುವಿ ।
ಚಾರದೊಳೀ ನಿನ್ನ [1]ಹಬ್ಬವದರಿಂದ ॥ ೫೬ ॥

ಪರಮಾತ್ಮನ ಕಂಡೊಡನೆಯೆ ।
ಪರಿಯುತ ಬಲವರ್ಪುದೆಂಬ ಬಲುನಿಯಮದಿ ನೀಂ ॥
ಪರಿದಿರಲಾ [1]ಶ್ರೀರಂಗದ ।
ಪರಿ ತಾಂ ದ್ವೀಪತ್ವವಾಂತುದೇವೇಳಲಿ ನಾಂ ॥ ೫೭ ॥

ಇಂತು ಕರ್ಣಾಟಕಂ ನದಿಗಳ ವಿಲಾಸಭೂಮಿಯೆಂಬರ್ಥಂ ಮನದೊಳ್ಮೂಡುವಂತಿರ್ಪ್ಪ ಶರಾವತಿಯೆಂಬೊಂದು ನದಿಯ ಬೆಡಂಗನೀಕ್ಷಿಸಿದೊಡೆ—

ಸುರನದಿ ದಿವದಿಂ ಭೂಮಿಗೆ ।
ಸರಭಸದಿಂ ಬಂದ ಮಾದರಿಯ ತೋರಲ್ ॥
ಶರದಂತೆ [1]ಗೇರಸೊಪ್ಪೆಯ ।
ಶರಾವತೀಪಾತವೊಪ್ಪುತಿಹುದಿಳೆಯೊಳ್ ॥ ೫೮ ॥

---


೫೬ — 1 ಕೊಡಗುದೇಶದಲ್ಲಿ ತುಲಾಮಾಸದಲ್ಲಿ ಕಾವೇರೀಹಬ್ಬವೆಂದು ಒಂದು ಹಬ್ಬ ಉಂಟು. ಆ ದಿನ ಅಲ್ಲಿ ಎಲ್ಲರೂ ಗೋಕಥೆಯನ್ನು ಹೇಳಿಸುತ್ತಾರೆ ಆಕಥೆ ಏನೆಂದರೆ— ಒಂದು ಹಸು ತನ್ನ ಗುಂಪಿನ್ನಗಲಿ ಒಂದು ಹುಲಿಯ ಕೈಗೆ ಸಿಕ್ಕಿ ಅದು ತನ್ನನ್ನು ತಿನ್ನಲಿಕ್ಕೆ ಬಂದಾಗ ತಾನು ತನ್ನ ಹಟ್ಟಿಗೆ ಹೋಗಿ ಕರುವಿಗೆ ಹಾಲುಕೊಟ್ಟು ಎಲ್ಲರಿಗೂ ಹೇಳಿಬರುವೆನೆಂದು ಕಾವೇರಿಯ ಮೇಲೆ ಆಣೆಮಾಡಿ ಹಿಂದಕ್ಕೆ ಬಂದು ತನ್ನ ಉದ್ದೇಶವನ್ನು ಪೂರ್ಣಮಾಡಿಕೊಂಡು ಮತ್ತೆ ಹುಲಿಯ ಬಳಿಗೆ ಹೊರಟಿತು. ಆಗ ಉಳಿದ ಆಕಳುಗಳು ಎಷ್ಟು ಅಡ್ಡಗಟ್ಟಿದರೂ ಕಾವೇರಿಯ ಮೇಲಿನ ಆಣೆಯನ್ನು ಮುರಿಯಲಾರೆನೆಂದು ಆಹಸು ಮತ್ತೆ ಹುಲಿಯ ಮುಂದೆ ಬಂದು ನಿಂತಿತು. ಅದರ ಸತ್ಯಸಂಧತೆಯನ್ನು ನೋಡಿದಾಗ ಆ ಹುಲಿಗೆ ಅನೇಕ ಗೋವಧೆಗಳನ್ನು ಮಾಡಿದ ಪಾಪದ ನೆನಪಾಗಿ ಅದು ಆ ಹಸುವಿಗೆ ಸುರಕ್ಷಿತವಾಗಿ ಹೋಗೆಂದು ಹೇಳಿದ್ದಲ್ಲದೆ ಅದರ ಕಾಲಿನ ಮೇಲೆ ಬಿದ್ದು ತನ್ನ ಪ್ರಾಣವನ್ನು ಬಿಟ್ಟಿತು.

೫೭ — 1 ಇದು ತಿರುಚನಾಪಲ್ಲಿಯೆಂಬ ಜಿಲ್ಲೆಯಲ್ಲಿದೆ.

೫೮ — 1 ಶರಾವತೀನದಿಯ ಜಲಪಾತವಾಗುವ ಬಳಿ ಇರುವ ಊರ ಹೆಸರು.

ಇಂತು ಪಡುವೆಟ್ಟದೊಳ್ಪುಟ್ಟುತಾಗ್ನೇಯವಾಹಿನಿಯಾಗಿ ತನ್ನಂ ಸೇವಿಸಿದವರಂ ಹಿರಿಹಿರಿ ಹಿಗ್ಗಿಸುತ್ತಂ ಕನ್ನಡನಾಡಿನ ನದೀನಾರಿಯರೊಳ್ ಯಾಜಮಾನ್ಯಮಂ ಪೊಂದುತಂ ಹಿರೀಹೊಳೆಯೆಂಬ ಬಿರುದಿನಿಂ ಮೆರೆಯುತ್ತೆ ಭೂಮಿಯೊಳುದ್ದಾಮಕ್ಷೇತ್ರಮೆನಿಸಿರ್ಪ ಪಂಢರಪುರಮಂ ಪವಿತ್ರಮಾಗಿ ಮಾಳ್ಪ ಭೀಮಾನದಿಯುಮಂ ತನ್ನಡಿಯೆಡೆಯನ್ನೈದುವ ಸಡಗರದಿಂ ಗೋಕಾವಿಯ ಬಳಿಯೊಳತ್ಯುನ್ನತಪ್ರದೇಶದಿಂ ಧುಮ್ಮಿಕ್ಕಿ ಪರಿದು ಬರುತಿರ್ಪ ಘಟಪ್ರಭಾನದಿಯುಮಂ ಪೂರ್ವವಾಹಿನಿಯಾಗುತ್ತೈತರ್ಪ ಮಲಪ್ರಭೆಯುಮಂ ವರದಾವೇದವತಿಯರನೊಡಗೊಂಡು ಸಸಂಭ್ರಮಳಾಗಿ ಸೇವೆಗೆಯ್ಯೆ ಬಂದ ತುಂಗಭದ್ರೆಯುಮನೊಳಕೊಂಡು ವಿಜೃಂಭಿಸುತ್ತಿರ್ಪ ಕೃಷ್ಣೆಯುಂ। ಆಪಡುವೆಟ್ಟದ ತೆಂಕಣಿಂದೊಗೆದು ಪಾಪಭೀರುವಾದ ಸ್ತ್ರೀಯಂತೆ ಕೆಲವೆಡೆಯೊಳ್ಮುಡಣ್ಗೆ, ಕೆಲವೆಡೆಯೊಳ್ಪಡುವಣ್ಗೆ. ಕೆಲವೆಡೆಯೊಳ್ತೆಂಕಣ್ಗೆ, ಕೆಲವೆಡೆಯೊಳ್ಬಡಗಣ್ಗೆ ತಿರುತಿರುಗುತ್ತೆ ತನ್ನ ರಕ್ಷಣೆಗಾಗಿ ಅರ್ಕಾವತಿ, ಲೋಕಪಾವನಿ, ಕಪಿಲಾ, ಹೇಮವತಿ — ಮೊದಲಾದ ಸಖಿಯರಿಂ ಕೂಡಿದವಳಾಗಿ ತಾಂ ಗಂಗೆಯಿಂದಮ್ಮಿಗಿಲೆಂಬಂತೆ ಶಿವನ ಸಮುದ್ರದ ಬಳಿಯೊಳ್ ಗಗನಚುಕ್ಕಿಬರಚುಕ್ಕಿಗಳೆಂಬೆರಡು ಜಲಪಾತಂಗಳನುಂಟುಮಾಡಿ ತನ್ನದೊಂದು ಪಥಮಂ ಮಾಡಿಕೊಂಡು ಪರಿವುತಿರ್ಪ ಕಾವೇರಿಯುಂ। ಮತ್ತಂ ಅಘನಾಶಿನೀ, ಕಾಳೀ. ಚಿತ್ರಾ, ನೇತ್ರವತೀ, ಪೆನ್ನಾರು, ಪಾಲಾರು, ಶಾಲ್ಮಲೀ, ಶರಾವತೀ— ಮೊದಲಪ್ಪ ಪುಣ್ಯನದಿಗಳ ರೂಪಮಾದ ಶುದ್ಧರಕ್ತನಾಳಗಳಿಂದಮುಂ ಎಲ್ಲಮ್ಮನಗುಡ್ಡ, ಕಪ್ಪತ್ತಗುಡ್ಡ, ಕುದುರೇಮುಖ, ಬಾಬಾಬುಡನಗಿರಿ, ಮೈಲಾರಲಿಂಗನಗುಡ್ಡ, ಶಿವಗಂಗಾ— ಮೊದಲಾದ ಗಿರಿಗಳ ರೂಪಮಾದಸ್ಥಿಗಳಿಂದಮುಮಂಗಪುಷ್ಟಿಯಂ ಪೊಂದಿ ಉಡಪಿಯುಳವಿಗೋಕರ್ಣಶೃಂಗೇರಿಶ್ರೀರಂಗಪಟ್ಟಣಹರಿಹರಹಂಪೆ ಮೊದಲಾದ ಕ್ಷೇತ್ರಂಗಳಿಂ ತನ್ನ ಪವಿತ್ರತೆಯಂ ಬೀರುತ್ತೆ ಬುದ್ಧಜಿನಶಂಕರರಾಮಾನುಜಬಸವೇಶ್ವರ ಮೊದಲಾದ ವಿವಿಧಮತಾನುಯಾಯಿಗಳ್ಗಾಯತನಳಾಗಿ ಸಮಸ್ತಸಾರಸಸ್ಯಂಗಳಂ ಬೆಳೆಸುತ್ತೆ ಸರ್ವಸಂಪತ್ಸಮೃದ್ಧೆಯೆನಿಸಿ ಅರಿಜನರ್ಗಭೇದ್ಯಮಾದನೇಕಗಿರಿದುರ್ಗಗಳಿಂದೆಯುಂ ಆಸ್ತಿಕಜನಾನೀಕಮನಾಕರ್ಷಣೆಗೆಯ್ವ ಜಗದ್ವಿಖ್ಯಾತಮಾದ ದೇವಾಲಯಂಗಳಿಂದೆಯುಂ ಜಗತ್ತಿನ ಸ್ಥಿತಿಗತಿಗಾಧಾರಮಾದ ಧರ್ಮನು

(ಹಂಪೆಯ ಶ್ರೀವಿರೂಪಾಕ್ಷದೇವಾಲಯ)



"ಶಿವನ ರಜತಗಿರಿಪೀಠವಿದೇ" ಶ್ರೀವಿದ್ಯಾರಣ್ಯಕಾವ್ಯ ೩—೩

ನಾಳ್ವ ವಿವಿಧಧರ್ಮಪೀಠಂಗಳಿಂದೆಯುಂ ಸಾಟಯಿಲ್ಲದುದೆನಿಸಿ, ಗಂಗಕದಂಬ ಚಲುಕ್ಯರಾಷ್ಟ್ರಕೂಟಕಲಚೂರ್ಯಚೋಳಹೊಯ್ಸಳಬಲ್ಲಾಳಯಾದವ ಮೊದಲಾದರಸರೊಡನೆ ಸರಸವಾಡಿ ವಿಜಯಿಯಾಗಿರ್ಪುದೀ ಕರ್ಣಾಟಕಂ.

ಹರಿಹರರೈಕ್ಯದಿನೈಕ್ಯವ ।
ಹರಿಹರದೊಳ್ತಿಳಿಯುಪೇಳ್ವನೆಂದೆನಲಿಂದುಂ ॥
ಹರಿಹರನುಂ ಹರಿಹರರತ ।
ಹರಿಹರಗುರುವರನುಮೆಮ್ಮ ರಕ್ಷಿಸಲೆಂದುಂ ॥

## ಮೂರನೇ ನೆಲೆ- ಹಂಪೆಯ ವರ್ಣನೆ.

ಶ್ರೀಮತ್ಪಂಪಾಧ್ಯಕ್ಷಂ ।
[1] ಪ್ರೇಮಾನುಗ್ರಹನಿಬದ್ಧಕಮಲಾಕ್ಷಂ ॥
ಹೈಮವತೀಗುಣಪಕ್ಷಂ ।
ಕಾಮಿತಮಂ ಕುಡುಗೆ ತಾಂ ವಿರೂಪಾಕ್ಷಂ ॥ ೧ ॥

ಕರ್ಣಾಟಕ ಜನಪದದೊಳ್ ।
[1] ಕರ್ಣಂ ಕುಡಲರಿದೆನಿಪ್ಪ ನಿಧಿ ಮೆರೆಯಲ್ ॥
[2] ಕರ್ಣಮಿತಿಹಾಸಗಳನಾ ।
ಕರ್ಣಿಸಿ ಬೆರಗಾಗೆ ಹಂಪೆಯಿಹುದರಿಯಲ್ ॥ ೨ ॥

ಹಂಪೆಯೆನಲಾಗಳೇ ಮೋ ।
ಹಂ ಪರಿವುದು ಮೇಣ್ಸ್ವದೇಶದಭಿಮಾನದಿ ದೇ ॥
ಹಂ ಪೆರ್ಚುವುದಾ ವೃಷವಾ ।
ಹಂ ಪೂರೆವಂ ಶಿವನ ರಜತಗಿರಿಪೀಠವಿದೇ ॥ ೩ ॥

೧— 1 ವಿಷ್ಣು ನೂರೆಂಟು ಕಮಲಗಳನ್ನಿಟ್ಟುಕೊಂಡು ಪೂಜೆಗೆ ಕೂತಾಗ ಈಶ್ವರನು ಅವನ ಭಕ್ತಿಯ ದಾರ್ಢ್ಯವನ್ನು ನೋಡಬೇಕೆಂದು ಒಂದನ್ನು ಕಾಣದಂತೆ ಮಾಡಿದನೆಂದೂ ವಿಷ್ಣು ಹೂವಿಗೆ ಬದಲಾಗಿ ತನ್ನ ಕಣ್ಣನ್ನೇ ಕಿತ್ತಿಟ್ಟು ತನ್ನ ಪೂಜೆಯನ್ನು ಸಾಂಗಮಾಡಿದನೆಂದೂ ಆಗ ಶಿವನು ಪ್ರಸನ್ನನಾಗಿ ವಿಷ್ಣುವಿನ ಇಷ್ಟಾರ್ಥವನ್ನು ಕೊಟ್ಟನೆಂದೂ ಶಿವಪುರಾಣದಲ್ಲಿದೆ.

೨— 1 ಕುಂತಿಯ ಮಗನಾದ ಕರ್ಣನು. 2 ಕಿವಿಯು.

ಪಂಚಾನನಕ್ಷೇತ್ರಮಿದಿಲ್ಲಿ ದೋಷಂ ।
[1] ಪಂಚತ್ವಮಂ ಪೊಂದುವದೆಂಬರೆಲ್ಲ ॥
[2] ಪಂಚೀಕೃತಾಂಗಂಬೊಲಿದೇ ಸ್ವದೇಶಂ ।
[3] ಪಂಚೇಷುಶಾಸ್ತ್ರಂಗೆನದಿರ್ಪರಿಲ್ಲ ॥ ೪ ॥

ಪರಮಪುಣ್ಯಕರಂ ನೆರೆ ಕಾಶಿ ತಾಂ ।
ಮೆರೆಯಲುತ್ತರದೇಶಪತಾಕೆವೊಲ್ ॥
ಇರುವುದಷ್ಟೆ ಮಹತ್ತ್ವದ ಹಂಪೆ ತಾಂ ।
ಭರದೆ ದಕ್ಷಿಣದೇಶಪತಾಕೆವೊಲ್ ॥ ೫ ॥

ಇಂತಪ್ಪ ಹಂಪೆಯ ಸೊಂಪಿಗೆ ಮನವಂ ಸೋತು ಪಂಚಾಕ್ಷರಾಧಿಷ್ಠಿತನಾದ ಪಂಚಶರವೈರಿ ಇಲ್ಲಿ ಸುಪ್ರತಿಷ್ಠಿತನಾಗಿ ತೋರ್ಪಂದವಂ ನಿಟ್ಟಿಸಿದೊಡೆ—

ಮೆರೆಯಲ್ ಪೂರ್ವದಿ ಕಿನ್ನರೇಶ್ವರಮುಖಂ, ಮೇಣ್ಪಶ್ಚಿಮಾಶಾಂತದೊಳ್ ।
ಮೆರೆವಾ ಸುಂದರವಾನಭದ್ರಮಿರಲ್ತೆಂಕಕ್ಕೆ ತಾಂ ಜಂಬುಕೇ ॥
ಶ್ವರನುಂ ಮೇಣ್ಬಡಗಣ್ಗೆ ಸೋಮಮುಖಮುಂ ಸೆಂಪಾಗೆ ಪಂಪಾಪುರೀ ।
ಶ್ವರ ನೀಂ ಮಧ್ಯದಿ ಶೋಭಿಸುತ್ತಿಹೆ [1]ನಿಲಿಂಪಾಧೀಶ, ಪಂಚಾಸ್ಯದಿಂ ॥ ೬ ॥

ಪಿಂದೇನೀಕ್ಷೇತ್ರದೊಳಿನ ।
ಲೆರಡೇ ಕಣ್ಣುಳ್ಳ ದೇವರುಳಿದೆಡೆಯೊಳಿರಲ್ ॥
ನೆರೆ ಮೂರುಕಣ್ಗಳಿರ್ಪೀ ।
ಶ್ವರ, ನೀನಿಹೆಯಿಲ್ಲಿ ಭಕ್ತತತಿ ಮನಕೆ ತರಲ್ ॥ ೭ ॥

ಅಶಿವಮಿದೆಂಬ ಬೂದಿಯೊಡಗೂಡಿದೊಡಂ ಶಿವನೇ, ಕಪಾಲದೊಳ್ ।
ದೆಸೆದೆಸೆಯಲ್ಲಿ ಬೇಡಿದೊಡಮ್ಮೊದೆ ಮಹೇಶ್ವರನೇ, ನಿರಂತರಂ ॥
ಮಿಸುಕದೆ ಗೌರಿಯೊಂದಿಗಿರೆಯುಂ ಮದನಾರಿಯೊ, ಯಜ್ಞಭೋಕ್ತನೆಂ ।
ದೆಸೆವನೆನಲ್ಕೆ ಯಜ್ಞಹರನೇ, ತಿಳಿಯಲ್ಕಹುದೆಂತೊ ನಿನ್ನನಾಂ ॥ ೮ ॥

---

೪— 1 ನಾಶವನ್ನು. 2 ಐದು ಭೂತಂಗಳಿಂದಾದ ವ್ಯಕ್ತ ಶರೀರದ ಹಾಗೆ. 3 ಮನ್ಮಥನನ್ನು ಶಾಸನಮಾಡಿದ ಈಶ್ವರನಿಗೆ.

೬— 1 ದೇವತೆಗಳೊಡೆಯ.

ಪರಮವಿರಕ್ತಿಯ ವೃತ್ತಿಯ ।
ಪರಿಯಂ ಸಕುಟುಂಬನಾಗಿ ಪಾಲಿಸುವೆ ॥
ನರರಿದನರಿತಿರಲೆಂಬುದ ।
ನರುಹುತೆ ಹರ ನೋಡಲಿಂತು ಶೋಭಿಸುವೆ ॥ ೯ ॥

ನಾರೀಜನದಭ್ಯುದಯವ ।
ನಾರಯ್ವ ಸಹಾನುಭೂತಿ ತೋರ್ಪುದು ನಿನ್ನೊಳ್ ॥
ನೀರೆ ಗಿರಿಜಾತೆ ಸಿಂಹವ ।
ನೇಱರೆ ವೃಷವಾಹ ನಿನಗೆ ಸಂತಸವಾಗಲ್ ॥ ೧೦ ॥

ಭವನೆಂದೆನಿಸಿರ್ಪೆ, ಮನೋ ।
ಭವನಂ ಸುಟ್ಟಿರ್ಪೆ, ತುಂಬಿರುವೆ ನಭವಂ ॥
ಭವಬಂಧವ ಕಡಿದತಿವ್ಯೆ ।
ಭವದಾಯುಕನಪ್ಪೆ ನೋಡೆ [1]ನೀನಭವಂ ॥ ೧೧ ॥

ಹರನೆಂಬ ಪೆಸರದೇಂ ಸ್ಮರ ।
ಹರ ಪುರಹರ ಎಂಬ ಹೆಸರ ತಿರುಳಾಗಿರ್ಪಾ ॥
ಹರನೆಂಬಾ ಸಂಜ್ಞೆಗುದಾ ।
ಹರಣೆಯೊ ಪೇಳೊಲಿಯುತೆನಗೆ ಜಿತಕಂದರ್ಪಾ ॥ ೧೨ ॥

[1] ಕ್ಷಯರೋಗಿಯುಮಂ [2]ಕಮಲಾ ।
ಕ್ಷಿಯುಮಂ ತಲೆಯಲ್ಲಿ ತಾಳ್ದು ಶರಣಾಗತರ ॥
ಕ್ಷಯ ದೀಕ್ಷೆಗೆ ಮೆಯ್ಗೊಡುತ ।
ಕ್ಷಯಫಲದಾತೃತ್ವದಿಂದೆ ಶೋಭಿಸುವೆ ಹರ ॥ ೧೩ ॥

ಧರೆಗಧಿನಾಥಂ ನೀನೆಂ ।
ದೊರೆವುದರೊಳದೇಂ ವಿಶೇಷವೋ [1]ರಜತಧರಾ ।
ಧರಕಧಿನಾಥಂ ನೀನೆಂ ।
ದೊರೆಯುತ್ತಿರೆ ಲೋಕವೆಲ್ಲ ಗಜಚರ್ಮಧರಾ ॥ ೧೪ ॥

---

೧೧— 1 ನೀಂ+ಅಭವಂ.

೧೩— 1 ಚಂದ್ರನನ್ನೂ. 2 ಗಂಗೆಯನ್ನೂ.

೧೪— 1 ಭೂಮಿಯನ್ನು ಹೊತ್ತಿರುವ ಪರ್ವತಕ್ಕೇ ಒಡೆಯನೆಂದ ಮೇಲೆ ಭೂಮಿಯೊಡೆಯನೆಂದು ಹೇಳಬೇಕಾದ್ದೇ ಇಲ್ಲವೆಂದು ತಾತ್ಪರ್ಯ.

ತಪದಲ್ಲಿರ್ದ೯ಂಗಜನಂ ।
ಸ್ವಫಾಲನೇತ್ರದೊಳಿ ಸುಟ್ಟ [1]ತಾಪವಯೋಧ್ಯಾ ॥
ಧಿಪನಭಿಷೇಕದಿನಡಗಿತೆ? ।
ಕೃಪಾಳು ನೀಂ ಸ್ವಸ್ಥನಾಗಿಹೆಯು ಪೇಳೀಗಳ್ ॥ ೧೫ ॥

ಉಡುವುದು ಚರ್ಮವಾಗಿರೆಯುಮಿತ್ತಪೆಯುತ್ತಮವಸ್ತ್ರಜಾಲಮಂ ।
ಕುಡಿವುದು ಗಂಜಿಯಾದೊಡೆಯುಮಿತ್ತಪೆ ಬಾಯ್ಗಿನಿದಾದ ಬೋನಮಂ ॥
ನಡೆವೊಡೆ ಎತ್ತೆ ವಾಹನಮಿರಲ್ಕೊಡುವೈ ಗಜವಾಜಿರಾಜಿಯಂ ।
ಕೊಡುವುದಕುಂಟು ಭೋಗಿಪುದಕಿಲ್ಲ ವಿಚಾರಿಸಲೀಂ ವಿಚಿತ್ರಮೋ ॥ ೧೬ ॥

[1]ಬಿಳಿಗಳಿಯುನ [2]ಬಿಳಿಪಾವಂ ।
[3] ಬಿಳಿದೊರೆಯುಮನೊಲವಿನಿಂದಲಿಟ್ಟಿಹೆ ತಲೆಯೊಳ್ ॥
ಬಿಳಿಬೂದಿಯು ಮೆಯ್ಗೆಲ್ಲಂ ।
ಬಳಿದಿಹೆ ಪೇಳ್ಸತ್ತ್ವಚಿಹ್ನಮೆಂಬೊಲವಿಂದೇಂ ॥ ೧೭ ॥

ಮಾಯಾಧಿನಾಥನೊಲವಿಂ ।
ಮಾಯೆಯ ಬಂಧನವ ಕಳೆದುಕೊಳಬೇಕೆನುತಂ ॥
ಆಯುಸವ ತಳೆದು ಮೌನಿನಿ ।
ಕಾಯಂ ನೆರೆ ಭಜಿಕುವುಲ್ತೆ ನಿನ್ನಂ ಸತತಂ ॥ ೧೮ ॥

ಪೊಳೆವಾ ಸ್ಯಮಂತರತ್ನದ ।
ಕಳವಿನ ದೂರಳಿಯೆ ಬಂದು ವರವಂ ಪಡೆದಾ ॥
ಸಲೆ [1]ಗುಂಜಾಮಾಧವನಿಹ ।
ನಿಳೆಗರುಪಲ್ಕಿಲ್ಲಿ ನಿನ್ನ ಪೇರ್ಮೆಯನಭವಾ ॥ ೧೯ ॥

---

೧೫ — 1 ಶ್ರೀರಾಮಚಂದ್ರನು ಕಿಷ್ಕಿಂಧಾವಾಸದಲ್ಲಿದ್ದಾಗ ಶ್ರೀ ವಿರೂಪಾಕ್ಷನಿಗೆ ಅಭಿಷೇಕ ಮಾಡಿದನೆಂದು ಪುರಾಣದಲ್ಲಿ ಹೇಳಿದೆ.

೧೭ — 1 ಚಂದ್ರನನ್ನು. 2 ಆದಿಶೇಷನನ್ನು. 3 ದೇವಗಂಗೆಯನ್ನು.

೧೯ — 1 ಕೃಷ್ಣನು ತನಗೆ ಸ್ಯಮಂತಕಮಣಿಯ ದೆಸೆಯಿಂದ ಬಂದ ಅಪವಾದವನ್ನು ಕಳೆದುಕೊಳ್ಳುವದಕ್ಕಾಗಿ ಹಂಪೆಗೆ ಬಂದು ಶ್ರೀವಿರೂಪಾಕ್ಷನನ್ನು ಕುರಿತು ತಪಶ್ಚರ್ಯವನ್ನು ಮಾಡಿ ತನ್ನ ಇಷ್ಟಸಿದ್ಧಿಯಾಗುವಂತೆ ವರವನ್ನು ಪಡೆದು ಆ ಈಶ್ವರನು ತನಗಿಂತ ಒಂದು ಗುಂಜಿತೂಕ ದೊಡ್ಡವನೆಂದು ತೋರಿಸುವದಕ್ಕಾಗಿ ಗುಂಜಾಮಾಧವನಾಗಿ ಅಲ್ಲಿ ನೆಲಸಿರುವನೆಂದು ಕಥೆಯುಂಟು.

ಅಂಧಕನೆಂಬಸುರಗೆ ಬಹು ।
ಬಂಧಕನೆನಿಸಿರ್ಪ ನಿನ್ನ ಚರಿತೆಯು ನೋಡಲ್ ॥
ಅಂಧಕವೃತ್ತಿಯು ಜನರಿಗೆ ।
ಬಂಧಕನಾಗಿರ್ಪೆ ಸಾಧುಗಳ ಕಾಪಾಡಲ್ ॥ ೨೦ ॥

'ಹಾವೆಂದರೆ ಹರ ನಡುಗಿದ' ।
ನೀವೇಳ್ದಪೆವೆಂಬುದುಚಿತಮೋ ಪೇಳ್ದಗದೊಳ್ ॥
ಹಾವುಗಳುಗ್ರತೆ ಕಿಡುವಂ ।
ತಾವಿಭುವಹ ನಿನ್ನ ಸಾತ್ತ್ವಿಕತ್ವವನರಿಯಲ್ ॥ ೨೧ ॥

ತನತನಗೆ ಮಾನವಂ ನ ।
ರ್ತನಗೆಯ್ವುದು ನಿನ್ನ ಭಜನೆಯಿತ್ತಾನಂದಂ ॥
ತನು ಝುಂ ಝುಂ ಝುಮ್ಮೆನೆ [1] ಪಿರಿ ।
ತಿನಿಯಾಣ್ಮ ನಿನ್ನ ಕುಣಿತಮೇಂ ಸ್ವಾನಂದಂ! ॥ ೨೨ ॥

ಲಯಕೃದೆನಲ್ನೀಂ ದುಷ್ಟರ ।
ಲಯಕಾರಕನೆಂಬುದರ್ಥವಹುದೆನಗೆ ॥
[1] ಲಯಕೃದ್ಯಮಲಯಕೃನ್ನೀಂ ।
ಲಯಕೃಜ್ಜಗಕೆಂದೊಡಾಗ ಬಹುದು ನಗೆ ॥ ೨೩ ॥

ಪಡೆದವನುಂ ಪೊರೆದವನುಂ ।
ಪೊಡವಿಯೊಳೀಶ್ವರನೆನುತ್ತ ಹೆಸರಾಗದಿರಲ್ ॥
[1] ಪುಡಿಗುಟ್ಟಯುವೀಶ್ವರನೆನಿ ।
ಪೊಡೆ ನಿನ್ನ ಮಹತ್ತ್ವವೆಂತು? ಪೇಳಾಂ ತಿಳಿಯಲ್ ॥ ೨೪ ॥

ಇಂತಿರ್ಪ ನಿನ್ನೆಡಭಾಗದೊಳ್ ಕಡುನೇಹದಿಂ ಕುಡಿನೋಟಮನೊಡರ್ಚುತಿರ್ಪ ಗೌರಿಯುನವಲೋಕಿಸಿದೊಡೆ—

---

೨೨— 1 ಭೂತಗಳೊಡೆಯ.

೨೩— 1 ಲಯವನ್ನು ಮಾಡುವ ಯಮನನ್ನೇ ಲಯವನ್ನು ಮಾಡಿದವನು.

೨೪— 1 ನಾಶಮಾಡಿಯೂ.

ಗಿರಿಯು ಸುತೆ ತನಗೆ ಪತಿಯಾ ।
ಗಿರಿ ತಿರುಕನ ಕರವ ಪಿಡಿದಳೆಂಬುದು ಮಿಥ್ಯಂ ॥
ಗುರುಭಾವಂ ಮೇಲ್ವರಿದಿರೆ ।
[1] ಗಿರೀಶನರ್ಧಾಂಗಿಯಾದಳೆಂಬುದು ಸತ್ಯಂ ॥ ೨೫ ॥

ಅಂತಲ್ಲದೊಡಂ

ಗಿರಿರಾಜನ ಸುತೆ ತಾನಾ ।
ಗಿರಿಯುಂ ಮಸಣದೊಳೆ ವಸತಿಯಾಗಿರ್ದಪನಂ ॥
ಗುರಿಯಿಟ್ಟು ಸತಿಯೆನಿಸಿ ತಾಂ ।
ಗರುವವ ಬಿಟ್ಟಿರ್ಪಳೆಂದು ಬೆರಗಹುದು ಮನಂ ॥ ೨೬ ॥

ಭುವನಂಗಳನೀರೇಳಂ ।
ಭವನವನೇ ಮಾಡಿಕೊಂಡ ಬಹುಕರುಣೇ ॥
ಭವನರ್ಧಾಂಗದಿ ಶೋಭಿಪ ।
ಭುವನೇಶ್ವರಿ ಮೆರೆವಳಿಲ್ಲಿ ಭವತರಣೆ ॥ ೨೭ ॥

ಭಂಡಾಸುರಮರ್ದಿನಿಯುಹ ।
[1] ಬಂಡುಣಿಗುರುಳಾಕೆಯಾದ ನಿನ್ನುದ್ದೇಶಂ ॥
ಭಂಡರ ದೆಸೆಯಿಂ ಜನರಿಗೆ ।
ಭಂಡತ್ವದ ಬಾಧೆಯಿರದೆ ಸುಖಮಿರೆ ದೇಶಂ ॥ ೨೮ ॥

ಎರಡೇ ಕರಮಿವೆ ತಾವ್ಯೆ ।
[1] ದೆರಡಾಗುತೆ ತೋರ್ಪುದಮಮ! ನಿನ್ನಲ್ಲಿ ॥
[2] ಎರಡೆಣಿಸೆ ಬಂದವರ ಮೇ ।
[3] ಲೆರಕದ ಸೆಲೆಯಿಲ್ಲದಿರಿವ ಸಮಯದಲಿ ॥ ೨೯ ॥

ಹೊಟ್ಟೆಯೊಳೆಲ್ಲರನುಂ ನೀ ।
ನಿಟ್ಟಹುದೇ ಶೀಬಮೆಂಬವೊಲ್ ದುರುಳರುಮಂ ॥
ಹುಟ್ಟಿಲ್ಲದವೊಲೆ ಗೆಯ್ಯುತೆ ।
ಹೊಟ್ಟೆಯೊಳೇ ಇಟ್ಟುಕೊಳ್ವೆ ನಿನಗುಂಟೆ ಸಮಂ? ॥ ೩೦ ॥

---

೨೫— 1 ಗಿರಿಯ ಮಗಳು ಗಿರೀಶನ ಪತ್ನಿಯಾದಳೆಂದು ತಾತ್ಪರ್ಯ.
೨೮— 1 ಭ್ರಮರದಂತೆ ಮುಂಗುರುಳುಳ್ಳ ದೇವಿಯು.
೨೯— 1 ಹತ್ತು ಸಂಖ್ಯೆಯಾಗಿ. 2 ಕೆಡುಕನ್ನು ಮಾಡುವದಕ್ಕೆ. 3 ಪ್ರೀತಿಯ.

ಸರ್ವಸ್ವತಂತ್ರೆ ನೀನೆನೆ ।
ಶರ್ವಾಣೀ ಎನಗಿದೊಂದು ಸಂದೇಹಂ ॥
ಗರ್ವಿತನನೆಂತು ತೊರೆದಪೆ? ।
ಉರ್ವೀತಲವೆಲ್ಲ ನಿನ್ನದೇ ದೇಹಂ ॥ ೩೧ ॥

ಇಂತಿರ್ಪ ಗೌರಿಯಂತೆ ಗಂಗೆಯುಂ ಬಂದು ಶಿವನನಾಶ್ರಯಿಸಿರ್ಪಳೆಂಬಂತೆ

ಶಿವಶಿರವನಡರ್ದು ತೋರ್ದ ತನ್ನಾ ।
ಅವಿನಯವಿಂದಳಿಯಲ್ಕೆ ಗಂಗೆಯಿನ್ನಾ ॥
ಶಿವಪದಯುಗಸೇವೆಗೆಯ್ಯುತಿರ್ಪಳ್ ।
ಸುವಿಮಲೆಯೆನೆ ತುಂಗಭದ್ರೆ ತೋರ್ಪಳ್ ॥ ೩೨ ॥

ಶರಣರ್ಗೆ [1]ಜೀವನವನೀವ ದೇವಿ ತಾಂ ।
ಕರೆಯಲ್ಕೆ ಕಾಲುವೆಗಳಿಂದ ಪೋಗುತಂ ॥
ಚರಿಸುತ್ತಮೆಲ್ಲೆಡೆಯ ತಣ್ಪುಮಾಡುತಂ ।
ನೆರೆ ತುಂಗಭದ್ರೆಯಿಹಳಿಲ್ಲಿ ಸಂತತಂ ॥ ೩೩ ॥

ಖಲರ ದುರಿತೌಘಕಿದು [1]ಶೃಂ ।
ಖಲೆ ಮೇಣ್ ಕರ್ಣಾಟಮಾತೆಗಳವಟ್ಟಿಹ ಮೇ ॥
ಖಲೆ, ತುಂಗಭದ್ರೆ ಹೀರ್ವರ ।
ಕಲಿತಸದ ಕಲಾಭಿಮಾನಿಯೆನೆ ಸಂಶಯಮೆ? ॥ ೩೪ ॥

ಮಹಾದ್ರಿಗಳ್ತಾವ್ಬಿಡದಡ್ಡಗಟ್ಟಲ್ ।
ಮಹಾಪ್ರಯತ್ನಂ ಬಿಡದೈದುತಿರ್ಪಳ್ ॥
ಮಹಾತ್ಮರಾಚಾರಮಿದೆಂದು ತೋರಲ್ ।
ಮಹೋದಯಳ್ಕೃಷ್ಣೆಯನಾಕೆ ಸೇರಲ್ ॥ ೩೫ ॥

---

೩೩— 1 ನೀರನ್ನು ಅಥವಾ ಜೀವವನ್ನು.

೩೪— 1 ಸಂಕೋಲೆ (ತುಂಗಭದ್ರೆಯು ಪಾಪಗಳಿಗೆ ಸಂಕೋಲೆಯನ್ನು ಹಾಕಿ ಅವುಗಳನ್ನು ಸೆರೆಯಲ್ಲಿಡುವದೆಂದು ತಾತ್ಪರ್ಯ).

ಕಡೆಯುಲಿ ನಿಂತು ನೋಡಿದೊಡಮುಪ್ಪುದು ಶಾಂತತೆ ಚಿತ್ತಕಿನ್ನದಂ ।
ಕುಡಿದೊಡೆ ಬೇಕುಬೇಕೆನುತೆ ಪೀರ್ವುದು ನಾಲಿಗೆ, ಮತ್ತೆ ನಾಮಮಂ ॥
ನುಡಿದೊಡೆ ಪೋದೆಪೋದೆನೆನುತೋಡುವುದೆಲ್ಲರ ಪಾಪಸಂಚಯಂ ।
ಬಿಡದೆ ಮುಳುಂಗೆ ತಾಂ [1]ಶಿವನೆ ಆದಪನಾರ್ಸರಿ ತುಂಗಭದ್ರೆಗೆ! ॥ ೩೬ ॥

ಜವದಿ ಪರಿವ ಮಾರ್ಗಕ್ಕಡ್ಡವಾಗಿರ್ಪ ಕಲ್ಗಳ್ ।
ಸವೆವ ತೆರದಿ ಗೆಯ್ವಾ ಘರ್ಷಣಂ ತೀವ್ರಮಾಗಲ್ ॥
ರವಮುದಹುದು ನೋಡಲ್ತುಂಬೆ ತಾಂ ಕರ್ಣಮೆಲ್ಲಂ ।
ಶಿವ, ಶಿವ, ಶಿವ, ಕಾಪಾಡೆಂದು ತಾಂ ಪೇಳ್ವ ಸೊಲ್ಲಂ ॥ ೩೭ ॥

ಮಹಾವೇಗಂ ಬೆತ್ತುಂ ನಡುವೆ ಸುಳಿಗಳ್ತೋರ್ಪುದಂಯುಲ್ ।
ಮಹೋತ್ಸಾಹಂ ಮೀರಲ್ ಶಿವನ ಬಲವರ್ಪಂದಮೆನಿಕುಂ ॥
ಮಹಾಕಾರ್ಯಾವೇಶಂ ಮನದೊಳಿರೆಯುಂ ಪುಣ್ಯಮೊದಗಲ್ ।
ಮಹೇಶಾಂಘ್ರಿದ್ವಂದ್ವಾರ್ಚನೆಯ ಫಲಮೋ ಸಿದ್ಧಿಜನಕಂ ॥ ೩೮ ॥

ಹರಿವ ಭರದೊಳ್ತಾನಲ್ಲಲ್ಲಲ್ಲಿಯೋ ಮಡುವಾಗಿ ತ ।
ನ್ನಿರವ ಪಡೆದಿರ್ದೆಂಬುಂ ಶಾಂತಸ್ವಭಾವದೊಳಿರ್ದಪಳ್ ॥
ಪರಿಕಿಸೆ ಮಹೇಶಾಂಘ್ರಿಧ್ಯಾನಸ್ಥಳೆಂದೆನಲಾಕೆ ತಾಂ ।
ಶರಣಜನಕೀ ಶೈವಶ್ರದ್ಧಾಪರತ್ವವ ಬೋಧಿಪಳ್ ॥ ೩೯ ॥

ಬೆಟ್ಟಂಗಳಾಕೆಯೊಳಿರಲ್ಪ್ರತಿಬಿಂಬದಿಂ ಹಿಂ ।
ದಟ್ಟಿರ್ದ ವಜ್ರಮುವ ಕಾಣದೆ ತಾನೆ ಮೇಣ್ ಹಿ ॥
ನ್ಮೆಟ್ಟಲ್ ನಗಂಗಳಿಹವೆಂಬವೊಲಲ್ಲಿ ತೋರ್ಕ್ಕುಂ ।
ಕಷ್ಟಾತ್ಮರಕ್ಷಣೆಯಿದೀಪರಿಯಾರೊಳಿರ್ಕುಂ? ॥ ೪೦ ॥

ಅಡ್ಡಬಂದ ಗಿರಿಯನ್ನೆ ಪೊಯ್ದುನೀ ।
ನಡ್ಡಬೀಳ್ದುರುಳಗೆಯ್ವ ಮಾನಿನಿ ॥
ಅಡ್ಡವಲ್ತು ಗೆಲೆ ಕಾಯಶಕ್ತಿಯಿ ।
ನ್ನಡ್ಡಮೇನಹುದಿರಲ್ಮನೋಜಯಂ? ॥ ೪೧ ॥

---

೩೬— 1 ಈಶ್ವರನೆ ಅಥವಾ ಮಂಗಲಸ್ವರೂಪನೆ.

ಈ ಪರಿಯೊಳ್ತುಂಗಭದ್ರೆ ತನ್ನ ಮನದನ್ನನಾದ ವನನಿಧಿಯ ಸನಿಯಮಂ ಸಾರಲೆಂದಾತನಡಿಯುಂ ಬಿಡದೆ ಪಡೆವ ಸಡಗರದೊಳ್ ತನ್ನಂ ಪೆತ್ತ ವರಾಹಪರ್ವತನನೊರ್ಮೆಯುಂ ಪಿಂದಿರುಂಗಿ ನೋಡದೆ ತನ್ನ ನೆರವಂ ಬಯಸಿ ಬರ್ಪ ವೇದವತಿ ಮೊದಲಾದ ಸಖಿಯರಂ ಕೈವಿಡಿದು ತನ್ನೊಳಗು ಮಾಡಿಕೊಂಡು ಬಳೆದ ಮೆಯ್ಯುವಳಾಗಿ ತನ್ನ ಮಹಿಮೆಗೆ ಬೆರಗಾಗಿ ಬಂದ ಮಾನವರಿಂದ ಬಗೆಬಗೆಯ ಮಾನನಂ ಕೊಂಡು ತನ್ನ ತೀರಪತ್ತನಂಗಳ ನೆಲ್ಲ ಪುಣ್ಯಕ್ಷೇತ್ರಂಗಳಾಗಿ ಮಾಡಿ ಹರಿಶ್ಚಂದ್ರಮಹಾರಾಜಾ ಪ್ರದಕ್ಷಿಣೆಯುಂ ಗೆಯ್ದು ಮಾಲ್ಯವಂತ, ಮತಂಗ, ಋಷ್ಯಮೂಕ, ಕಿಷ್ಕಿಂಧ, ಹೇಮ ಕೂಟ– ಎಂಬ ಪಂಚಶೈಲಂಗಳಂ ನೆಗೆನೆಗೆದು ನೋಳ್ಪಳೆಂಬಂತೆ ಚಿಗಿಯು ತ್ತಿರ್ಪ ಪನಿಗಳಿಂ ಸೊಬಗುವಡೆದವಳಾಗಿ ಶ್ರೀರಾಮದೂತರ ಪ್ರೇಮಾಯ ತನಂಗಳಾದಾಪರ್ವತಂಗಳ ಪದತಲವಂ ತನ್ನಲೆಗೆಯ್ಗಳಿಂ ತೊಳೆಯುತ್ತೆ ಕೋಟಲಿಂಗತೀರ್ಥ, ಚಕ್ರತೀರ್ಥ, ಸೀತಾಸರೋವರ, ಮಾನಸಸರೋವರ– ಮೊದಲಾದ ತೀರ್ಥವಿಶೇಷಂಗಳ್ಗಾವಾಸಸ್ಥಾನಳಾಗಿ ಪರಿಯುತ್ತಿರ ಲಾಕೆಯ ನೆರೆಯಲ್ಲೆಲ್ಲಿ ನೋಡಿದೊಡಂ—

ಎಳೆಯ ಕಳವೆಗಳ ಜಾಲವು ।
ನೊಳಗೊಂಡೀ ಭೂಮಿದೇವಿ ಪಸುರುಡೆಯುಂ ॥
ಒಲಿದುಟ್ಟಮರಸ್ತ್ರೀಯರ ।
[1] ನಿಳಿಕೈವಳ್ ಸೊಗಸತೋರುತಿಮ್ಮಡಿಯುಂ ॥ ೪೨ ॥

ಎಳೆದೆನೆಗಳ್ಮಡಿಯೊಳಗಣ ।
ತಿಳಿನೀರೊಳ್ಗಗನದೊಡನೆ [1]ಮೂಡಿದ ಮಾಟಂ ॥
[2]ಎಲೆವಸುರ ಮೇಲುಕಟ್ಟಿಗೆ ।
ಸಲೆ ಪಚ್ಚೆಯಗುಚ್ಛವಿಟ್ಟರೆನಲಿಹ ನೋಟಂ ॥ ೪೩ ॥

---

೪೨— 1 ತಿರಸ್ಕರಿಸುವಳು

೪೩— 1 ಪ್ರತಿಬಿಂಬಿಸಿದ. 2 ಎಲೆಗಳಂತೆ ಹಸುರಾಗಿರುವ.

ಬರೆ ಸುಗ್ಗಿಯು ಹಬ್ಬವದತಿ ।
ಭರದಿಂದಂ ನೆಲ್ಗಳೆಲ್ಲ ಗೋಮೇಧಿಕಮಂ ॥
[1]ಬಂದೆನಿಸಿ ತಾಯ್ಗೆ ಪೀತಾಂ ।
ಬರದುಡಿಗೆಯು ಗೆಯ್ದು ತೋರ್ಪುವಾಕೆಗೆ ಸೊಗಮಂ ॥ ೪೪ ॥

[1]ಕಳಮೆಗಳಿಂ ಪಕ್ಷಿಗಳಂ ।
ಗಳಗಳನೋಡಿಸುವ [2]ಕೆಳದಿಯರ್ಕಳಗೆ ॥
ಕಳಮೆಗಳ ಮೇಲೆ ಪಕ್ಷಿಯು ।
ಕಲಕಲವಿವು ಹರ್ಷಕಾರಿಯುಹವಿಳಿಗೆ ॥ ೪೫ ॥

ಮೆಟ್ಟಿಲಪರಿಯಿಂ ಕ್ರಮದಿಂ ।
ಕಟ್ಟದ ಗದ್ದೆಗಳನರಿಯೆ ಭೂದೇವಿಯೆ ತಾಂ ॥
ನೆಟ್ಟನೆ ಲಕ್ಷ್ಮಿಯೊಡನೆ ಕಾ ।
ಲಿಟ್ಟಿತರ್ಪಂತೆ ತೋರುತಿರ್ಪುದು ಸತತಂ ॥ ೪೬ ॥

ಒಂದೆಡೆ ನೇಗಿಲಿಂದುಳಿಮೆಗೆಯ್ವವರೊಂದೆಡೆ ಬಿತ್ತುವರ್ಪವಂ ।
ತೊಂದೆಡೆ ಕೀಳುವರ್ಕಳೆಯನೊಂದಡೆ ಗೊಬ್ಬರವಿಟ್ಟಪರ್ಮಗು ॥
ಳ್ದೊಂದಡೆ ಕೊಯ್ವರೊಂದಡೆಯುದೆಲ್ಲವ ರಾಶಿಯುಗೆಯ್ವರಂತೆಯಿ ।
ನ್ನೊಂದೆಡೆಯೊಕ್ಕಿ ಕಾಳಪಡೆವರ್ಜನರೀ ಪರಿಯೊಳ್ನಿರಂತರಂ ॥ ೪೭ ॥

ಉಳದಿಹ ಭೂಮಿಯಿಲ್ಲ, ಬೆಳೆ ಬಾರದ ಭೂಮಿಯುದಿಲ್ಲ, ನೋಡೆ ತ ।
ಣ್ಪಳಿಯುದ ಭೂಮಿಯಿಲ್ಲ, ಕಳೆಗೀಳದ ಭೂಮಿಯುದಿಲ್ಲ, ಗೊಬ್ಬರಂ ॥
ಕೊಳೆಯುದ ಭೂಮಿಯಿಲ್ಲ, ಜಲವೇರದ ಭೂಮಿಯುದಿಲ್ಲ, ಮಾನವ ।
ಗೊರ್ಪಲಿಯುದ ಭೂಮಿಯಿಲ್ಲವಮುಮಾ! ತಟದೊಳ್ಸಲೆ ತುಂಗಭದ್ರೆಯಾ ॥ ೪೮ ॥

ಪರಶಿವಗೆ ಮೂರು ಕಣ್ಗಳ್ ।
ಪೆರರಾರಿಗುಮಿಲ್ಲಮೆಂಬಿರೇ ಬೇಗ ॥
ಪರಿಕಿಸಿರಿ ಮೂರುಕಣ್ಗಳ ।
ಪರಿಯೆನ್ನೊಳಗೆಂಬುದಿಲ್ಲಿ ತೆಂಗೀಗ ॥ ೪೯ ॥

---

೪೪ — 1 ವ್ಯರ್ಥವೆನಿಸಿ— ಹಣ್ಣಾದ ಬತ್ತದ ಬಣ್ಣವು ಗೋಮೇಧಿಕಕ್ಕಿಂತ ಚೆನ್ನಾಗಿತ್ತೆಂದು ತಾತ್ಪರ್ಯ.

೪೫ — 1 ಬತ್ತದ ಗದ್ದೆ. 2 ಸ್ತ್ರೀಯರು

ಸುರಲೋಕದೊಳಿರ್ಪಮೃತದ ।
ಸಿರಿಯೊಳಗೇನುಂಟು? ತನ್ನೊಳಿಹ ಫಲದಿಂದಂ ॥
ಸುರಿವ [1]ರಸದಿಂಪಿಗಾವುದು ।
ಸರಿ? ಎಂದೇರಿಹುದು ತೆಂಗು ತಾಂ ಫಲದಿಂದಂ ॥ ೫೦ ॥

ಇಳೆಯವರ ಭಾಗ್ಯದೇವಿಯು ।
ನಿಲಯದ ನಡುಗಂಬವೆಂಬ ತೆರದಿಂದಂ ॥
ಬೆಳೆದಿರ್ಪ ತೆಂಗು ದೈನ್ಯವ ।
ಕಳೆವುತ್ತಿಹುದಲ್ಲಿ ನೋಡೆ [1]ತರದಿಂದಂ ॥ ೫೧ ॥

ಬಾಳಿದುದಕೊಮ್ಮೆ ಹಡೆದರೆ ।
ಬಾಳೀ ತಾಂ ಮುಗಿಯಿತೆಂಬ [1]ಧರ್ಮದೊಳಿಹವೊಲ್ ॥
ಬಾಳೆ ಫಲಮಿತ್ತೊಡನೆಯೇ ।
ಬಾಳಂ ಮುಗಿಸುವವು ನೋಡಲೀ ಭೂತಲದೊಳ್ ॥ ೫೨ ॥

ತಣ್ಪಿಂ ಬೆಳೆದುಪಕಾರಕೆ ।
ತಣ್ಪಂ ತಾನುಳಿದವರ್ಗೆ ತೋರ್ಪೆನೆನುತ್ತಂ ॥
ತಣ್ಪಿಂ ಬೆಳೆದಾ ಬಾಳೆಯೆ ।
ತಣ್ಪಿತ್ತಪುದುಳಿದ ಸಸ್ಯಕುಲಕನವರತಂ ॥ ೫೩ ॥

ಹೊರಗೊರಟರಾಗಿ ತೋರ್ದೊಡ ।
ಮಿರದೊಳಗತಿನಯವಿದರ್ಕಳಿಹರೆನುತಂ ॥
ಹೊರಗೊರಟೊಳಗತಿಮಧುರತೆ ।
ಯಿರೆ ತೋರ್ಪುದು ಕಬ್ಬು ನೀತಿಯಂ ನಿರುತಂ ॥ ೫೪ ॥

---

೫೦— 1 ರಸದ ಮನೋಹರತೆಗೆ.

೫೧— 1 ಕ್ರಮವಾಗಿ.

೫೨ — 1 ಒಮ್ಮೆ ಹಡೆಯುವ ತನಕ ಮಾತ್ರ ಗೃಹಸ್ಥಾಶ್ರಮದಲ್ಲಿದ್ದು ಆ ಮೇಲೆ ವಾನಪ್ರಸ್ಥನೋ ಸಂನ್ಯಾಸಿಯೋ ಆಗಬೇಕೆಂಬುದೊಂದು ಪಕ್ಷವಿದೆ.

ಪರರೆಂತು ಹಿಂಸಿಸಿದೊಡಂ ।
ನರನವಗುರ್ಪಕಾರವನ್ನೆ ಗೆಯ್ವುದೆನುತ್ತಂ ॥
ಒರೆವುದು ಕಬ್ಬದು ಹಿಂಡಲ್ ।
ಭರದಿಂ ಸಿಹಿಯಾದ ರಸವ ತಾನೀಯುತ್ತಂ ॥ ೫೫ ॥

ಇಂತು ಫಲವತ್ತಾಗಿರ್ಪೆಡೆಯ ನಡುವೆ—

ಇದು ತಾಂ ದುಂದುಭಿಯಿರ್ದ ತಾಣಮಿದು ರಾಮಂ ಸಪ್ತತಾಲಂಗಳಂ
ನದೆದಾ ಭೂಮಿಯಿದೇ ರಘುಪ್ರವರನಿಂದಂ ವಾಲಿ [1] ಸತ್ತಿಕ್ಕೆ ಮೇಣ್ ॥
ಇದೆ ಸುಗ್ರೀವನ ಸಖ್ಯವಾದೆಡೆಯಿದೇ ಭೂಜಾತೆ ಭೂಷಂಗಳಂ।
ಚದುರಿಂ ವಸ್ತ್ರದಿಂ ಕಟ್ಟಿ ತಾನೆಸೆದ ಗುರ್ತೆಂದೆಂಬರಾ ಹಂಪೆಯೊಳ್ ॥ ೫೬ ॥

ಇದು ತಾಂ ಪ್ರಸ್ರವಣಂ ವಿರ ।
ಹದೆ ರಾಮಂ ಬರೆದ ಸೀತೆಯಿಲ್ಲಿಹಳೆನುತಾ ॥
ಹೃದಯುವ ಭೇದಿಪ ಹಂಪೆಯಿ ।
ದದುಭುತಮೆನೆ ಮನಕೆ ನೆನಹನೀವುದು ಸತತಂ ॥ ೫೭ ॥

ಮತ್ತಮಲ್ಲಿರ್ಪ ಪಂಪಾಸರಸ್ಸನೀಕ್ಷಿಸಿದೊಡೆ—

ಪಂಪಾಸರಸ್ಸಿನಿಂದಂ ।
ಪಂಪಾಪುರಿಯೆಂಬ ಪೆಸರೊ ಪಂಪಾಪುರಿಯಿಂ ॥
ಪಂಪಾಸರಮೆಂದೋ ಈ ।
ಪೆಂಪಾರದೊ ತಿಳಿಯಲಾಗದಿಹುದಾಶ್ಚರ್ಯಂ ॥ ೫೮ ॥

ಸೀತಾನಾಥನ ಹೃದಯಕೆ ।
ಶೀತಲಮೆಂದೆನಿಸಿ ತಾಪವಂ ಕಳೆದಿಹ ನೀಂ ॥
ಸೀತಾಭಕ್ತರ ತಾಪವ ।
ಶೀತಲಮಂ ಗೆಯ್ಯದಿರೆಯೆನುತ್ತಿರಿದಪೆನಾಂ ॥ ೫೯ ॥

---

೫೬— 1 ಸತ್ತ+ಇಕ್ಕೆ = ಸತ್ತ ಸ್ಥಳ.

ಅಲೆಯಿಲ್ಲದ ಮುನಿಗಳ ಮನ ।
ದಳವಂತದರಂತೆ ಕಲಿತುಕೊಂಡೆಯು? ಹಂಪೆ ॥
ಅಲೆಯಿಲ್ಲದೆ ಶಾಂತತೆಯಿಂ ।
ದಲೆಯಿರ್ಪುದ [1]ರಕ್ಷಿತಾಖಿಲಾಢ್ಯನಿಲಿಂಪೆ ॥ ೬೦ ॥

ಶ್ರೀರಾಮಪಾದಾಬ್ಜದಿ ಮತ್ತೆಯುಂ ತಾ ।
ನಾರಾಮಣೀಯತ್ವವ ನೋಡಲೆಂದಾ ॥
ನೀರೇಜವರ್ಗಂ ತಪವಿರ್ಪವೆಂತುಂ ।
ನೀರಲ್ಲಿ ನಿಂತಿರ್ದತಿಭಕ್ತಿಯಿಂದ ॥ ೬೧ ॥

ಇದು ಶಂಭುಪದಪ್ರಭಾವವೋ ।
ಇದು ತಾಂ ರಾಮನ ಮೈಮೆಯಿಂದವೋ ॥
ಇದು ನಿನ್ನ ನಿಜಸ್ವಭಾವವೋ ।
ಇದ ಪೇಳ್ತಣ್ಪಿನ ಹಂಪೆ ಈಗ ನೀಂ ॥ ೬೨ ॥

ಕಷ್ಟದಿಂದ ಧರಣೀತಲವೋ ತಾ ।
ನೆಷ್ಟು ಗಾಸಿವಡೆದಿರ್ದೊಡಮೆಂತುಂ ॥
ನಿಷ್ಠೆಯಿಂದ ನಿಜರೂಪದ ಪೆಂಪಿಂ ।
ದಿಷ್ಟು ಶಾಂತಳಿಹೆಯೆಂತುಟು ಹಂಪೆ? ॥ ೬೩ ॥

ತಿಳಿಯಲಿಂದೆನಗೆ ನಿನ್ನಯ ।
[1]ತಿಳಿನೀರಿನ ಪೆಂಪದೇಂ ಸ್ವಭಾವದ [2]ತಿಳಿಯೊ? ॥
ತಿಳಿಯೆ ರಘುವರನ ಪಾದವ ।
ತೊಳೆದುದರಿಂದೀಚೆಗಾಗಿರುವ ತಿಳಿಯೊ? ॥ ೬೪ ॥

ರಾಮಪದತೀರ್ಥವೆನಗಿ ।
ನ್ನೀಮಹಿಯೊಳ್ಸಿಕ್ಕದೆನ್ನಲೇಕಿನ್ನು ನರಂ ॥
ರಾಮಂ ಬಳಸಿದ ಪಂಪಾ ।
ನಾಮಕಮಾದೀ ಸರಸ್ಸು ತೋರ್ಪನ್ನೆವರಂ ॥ ೬೫ ॥

---

೬೦— 1 ರಕ್ಷಿಸಲ್ಪಟ್ಟ ಪ್ರಬಲರಾದ ಸಮಸ್ತ ದೇವತೆಗಳನ್ನುಳ್ಳವಳು.

೬೪— 1 ನಿರ್ಮಲವಾದ ನೀರಿನ. 2 ನಿರ್ಮಲತೆ

ಈ ಬಗೆಯ ಪವಿತ್ರಸ್ಥಲಂಗಳಿಂ ಕೂಡಿ ಚಂದ್ರಹಾಸ ಮೊದಲಾದ ಧರ್ಮಾಭಿಮಾನಿಗಳಪ್ಪ ಚಕ್ರವರ್ತಿಗಳಾಳಿಕೆಯುಂ ಕಂಡುದಾಗಿಯುಂ ವೇದವ್ಯಾಸವಶಿಷ್ಠಮತಂಗಭರದ್ವಾಜಾದಿಮಹರ್ಷಿಗಳ ತಪೋಭೂಮಿಯಾಗಿರ್ದುದೆನಿಸಿಯುಂ ಸ್ಕಾಂದಪುರಾಣೋಕ್ತಪಂಚಕ್ರೋಶಕ್ಷೇತ್ರಮೆಂದು ಪೆಸರ್ಗೊಂಡ ಪಂಪಾಕ್ಷೇತ್ರದ ಪೆರ್ಚುಗೆಗೆ ಮೆಚ್ಚಿ ಸಚ್ಚರಿತ್ರರಾದ ಬ್ರಾಹ್ಮಣರ್ ನಿಚ್ಚಮುಮಲ್ಲಿ ನಿವಾಸಿಸುತ್ತಿರ್ದರ್.

ಹರಿಹರರೈಕ್ಯದಿನೈಕ್ಯವ ।
ಹರಿಹರದೊಳ್ತಿಳಿಯುಪೇಳ್ವನೆಂದೆನಲಿಂದುಂ ॥
ಹರಿಹರನುಂ ಹರಿಹರರತ ।
ಹರಿಹರಗುರುವರನುಮೆಮ್ಮ ರಕ್ಷಿಸಲೆಂದುಂ

## ನಾಲ್ಕನೇ ನೆಲೆ ಬಾಲ್ಯವೃತ್ತಾಂತ.

[1]ಶ್ರೀಷಣ್ಮುಖಗಜಮುಖರಭಿ ।
ಲಾಷೆಗಳಂ ತೀರ್ಚುತನ್ನಪೂರ್ಣೆಯ ಜೊತೆಯೊಳ್ ॥
ತೋಷಿಪ ಪಂಚಮುಖಾ ಸಂ ।
ತೋಷಮನಿತ್ತೆಮ್ಮ ಕಾಯಲೆಂದುಂ ಕ್ಷಿತಿಯೊಳ್ ॥ ೧ ॥

ಅಂತಿರ್ದ ಪಾರ್ವರ ಕೇರಿಯ ಕಡೆಯುಂ ನಿಟ್ಟಿಸಿದೊಡೆ—

ಗೋಮಯದ ಸಾರಣೆಯಿನಭಿ ।
ರಾಮಾಕೃತಿವೆತ್ತ ರಂಗವಲ್ಲಿಗಳಿಂದಂ ॥
ಭೂಮಾತೃಪೂಜೆಯಾಯ್ತೆನ ।
ಲಾ ಮನೆಮನೆಯೊಳ್ಜನಕ್ಕೆ [1]ತೋರ್ದತ್ತಂದಂ ॥ ೨ ॥

೧ – 1 ಶ್ರೀಷಣ್ಮುಖಗಜಮುಖರ+ಅಭಿಲಾಷೆಗಳಂ

೨ — 1 ತೋರ್ದತ್ತು+ಅದಂ.

ಪರರೊಡನನುರಾಗದಿ ತ ।
ತ್ಪರರಾವೆಂಬುದರ ನೆನಪುಗೊಡುವಂತೆ ॥
ಪರಿಕಿಸೆ ಹೊಸ್ತಿಲ ಕೆಮ್ಮಣ್ ।
ಪರಿಶೋಭಿಪುದವರ ಮನೆಯೊಳಿರ್ಪರಂತೆ ॥ ೩ ॥

ವನದೇವಿ ತನ್ನ ತಳಿರ್ಗಳ ।
ಗೊನೆಯಿಂ ದ್ವಿಜಗೃಹವ ಪೂಜೆಗೆಯ್ದಿಹವೊಲ್ ॥
ಮನೆಮನೆಗಳ ಮುಂದಿನ ತೋ ।
ರಣಮೆಸೆವುದು ಹರ್ಷಮೊಗೆಯೆ ಮಾನಸದೊಳ್ ॥ ೪ ॥

ವಟುಗಳ ವೇದಘೋಷಮುಬಲಾಜನಗಾಯನಘೋಷಮೆಲ್ಲಿಯುಂ ।
ಸ್ಫುಟಮುಹಪಾಠಘೋಷಮುರೆಘಂಟೆಯುಘೋಷಮುಮಾಪುರಾಣದೊಳ್ ॥
ಪಟುತರವಾಕ್ಯಘೋಷಮತಿಥಿಪ್ರಕರಂ..ಳ ಬನ್ನಿರೆಂಬ ಧ್ವ ।
ಜಟಶರಣಾಳಿಘೋಷಮಿಡಿದಂತಿರುತಿರ್ಪುವು ನಾಡೆ ಹಂಪೆಯೊಳ್ ॥ ೫ ॥

ನಡೆ ನಡೆ ಹೂವೆತ್ತುವುದಕೆ ।
ನಡೆ ನಡೆಯೊ ಸಮಿತ್ಪಲಾಶಗಳನೆಲ್ಲ ತರಲ್ ॥
ನಡೆ ದರ್ಭೆಯ ಕೊಯ್ಯೆಂದೀ ।
ಹುಡುಗರ ಗಡಿಬಿಡಿಯುದಲ್ಲಿಹುದು ತಾಂ ಕೇಳಲ್ ॥ ೬ ॥

ಭಸಿತತ್ರಿಪುಂಡ್ರದಿಂ ಶೋ ।
ಭಿಸುತಿಹ ರುದ್ರಾಕ್ಷಮಾಲೆಯಿಂ ಭೂದಿವಿಜರ್ ॥
ಶಶಿಧರನೊಡನಾ ಪ್ರಮಥ ।
ಪ್ರಸರಮುದವತರಿಸಿದಂತೆವೊಲ್ ಕಣ್ಗೊಳಿಪರ್ ॥ ೭ ॥

ನೊಸಲೊಳ್ಕುಂಕುಮವಿಟ್ಟು, ನೇತ್ರಯುಗಳಂಗಳ್ಗೊಪ್ಪೆ ಕಪ್ಪಿಟ್ಟು, ಶೋ।
ಭಿಸೆ ಕೈಕಾಲ್ಗಳನೆಲ್ಲ ಪೂಸುತೆ ಹರಿದ್ರಾಚೂರ್ಣದಿಂ, ಭೂಷಣಂ ॥
ವಸನಂ ಮೆಯ್ಗರದೊಪ್ಪೆ ಸೇರಿ ನಡೆಯುತ್ತಾ ವೀಥಿಯೊಳ್ನಾಡೆ ಸಂ ।
ತಸಮಿರ್ಪರ್ ಭುವನೇಶ್ವರೀಸಖಿಯರೆಂಬಾತಲ್ಲಿ ಮುತ್ತೈದೆಯರ್ ॥ ೮ ॥

ಪಶುತುಲ್ಯಜೀವವರ್ಗಂ ।
ಪಶುಪತಿಯಿಂ ಸುಖದೊಳಿಹುದನರಿಪುವವೊಲ್ ॥
ಪಶುತತಿ ಸುಖದಿಂದಿರ್ಕುಂ ।
ಪಶುಪತಿಶರಣರ್ಕಳಿರ್ಪ ಮನೆಮನೆಯೊಳ್ ॥ ೯ ॥

ಸುರತತಿಗಿಟ್ಟಾಜ್ಯಾಹುತಿ ।
ಸುರರ ಹವಿಷ್ಯಾನ್ನವಾಸನೆಯ ರುಚಿಯಂ ॥
ಸರಸಂ ಗೆಯ್ವುಪುದನುಸರಿ ।
ಸಿರೆ ಮನುಜರ ಕರ್ಮವಾಸನೆಯ ರುಚಿಯುಂ ॥ ೧೦ ॥

ಕಾಡಿನ ಕಲ್ಲನೇ ಶಿವನ ಮಾಡುತೆ, ಮಣ್ಣಿನ ಮುದ್ದೆಯನ್ನೆ ತಾಂ ।
ನೀಡುತೆ ತಿನ್ನಲೆಂದು, ತಲೆಯೊಳ್ಳಿಗೆ ನೀರೆರೆಯುತ್ತೆ, ಮುದ್ದಿನಿಂ ॥
ಪಾಡಿದಪ 'ಶಿವಾಯ ನಮ ಓಂ ಶಿವ ಶಂಕರ' ಎಂಬ ನಾಮಮಂ ।
ಕೂಡಿದ ಬಾಲಕರ್ಸತತವೀಪರಿ ಹಂಪೆಯ ಪುಣ್ಯವೀಥಿಯೊಳ್ ॥ ೧೧ ॥

ಎಲ್ಲಿದೆ? ಎನ್ನದಾ ಬಳಪವೆಲ್ಲಿದೆ? ಎಲ್ಲಿದೆ? ಎನ್ನದೋಲೆ; ಮ ।
ತ್ತೆಲ್ಲಿದೆ? ಎನ್ನಲಿಂಗಮದದೆಲ್ಲಿದೆ? ಎಲ್ಲಿದೆ? ಎನ್ನ ಪುಸ್ತಕಂ; ॥
ಎಲ್ಲಿದೆ? ಎನ್ನ ಭಸ್ಮದ ಕರಂಡಕಮೆಲ್ಲಿದೆ? ಅಕ್ಷಮಾಲೆಯೆಂ ।
ದಲ್ಲಿಯ ಮಕ್ಕಳಿಂತಳುವರಲ್ಲದಳರ್ಗಡ! ಬೇರದೇತಕಂ ॥ ೧೨ ॥

ಒಂದೆಡೆ ಶೈವಪೂಜೆಯಿಹುದೊಂದೆಡೆ ಶೈವಪುರಾಣಮಾಗೆ, ಮ ।
ತ್ತೊಂದೆಡೆ ಶೈವಕೀರ್ತನಮದೊಂದೆಡೆ ಶೈವವಿಚಾರಘೋಷಮಿ ॥
ನ್ನೊಂದೆಡೆ ಶೈವದಾಸ್ಯಮಿರಲೊಂದೆಡೆ ಶೈವರ ಗೋಷ್ಠಿ ತೋರ್ಪುದಿಂ ।
ತೆಂದೊಡೆ ಶೈವವೈಭವವದೆಂತುಟೊ ಪೆರ್ಮೆಯದೆಂತೊ! ಹಂಪೆಯ ॥ ೧೩ ॥

ಇಂತಿರ್ಪ ಪಾರ್ವರೋಣಿಯೊಳ್ ಸರ್ವವ್ಯಾಪಿಯಾದ ಪಂಪಾಪುರೀಶ್ವರನ ಕೊರಲ ಮಾಲೆಯ ನಡುವಣ ಮಣಿಯೆಂಬಂತೊಪ್ಪುತಿರ್ದೊಂದು ಮನೆ ಸ್ಥೂಲರೂಪದಿಂ ಕಿರಿದಾದೊಡಂ ತನ್ನೊಳೆಡೆಬಿಡದೆ ಹೊರಹೊಮ್ಮುತ್ತಿರ್ದ ಹೋಮಧೂಮದಿಂ ಮುಗಿಲಂ ಮುಟ್ಟುತ್ತಿರಲದರೊಳ್—

ಮಾಯೆಗೊಳಗಾಗದಿರ್ಪನು ।
ಮಾಯುತ ಸತ್ಕೀರ್ತಿವಂತನೆನೆ ಲೋಕಂ ॥
ಮಾಯಿಯಹ ಶಿವನ ಭಕ್ತಂ ।
ಮಾಯಣನೆಂದೆಂಬನಿರ್ದನಕಲಂಕಂ ॥ ೧೪ ॥
ಹರಿಹರರೊಂದೆಂದೊಡಮೇಂ ।
ಹರಪ್ರಿಯಂ ಮಾಯಣಾಖ್ಯನಾದುದರಿಂದಂ ॥
ಹೊರಗಿರ್ಪನಿವನಿನೆನುತಂ ।
ಹರಿಪ್ರಿಯಾದೇವಿ ಪೋದಳಾಃ! ಚದುರಿಂದಂ ॥ ೧೫ ॥

ಒಳಗಣ್ಣನಾಗೆ ಮಾಯಣ ।
ನೊಳಗೇ ಸಂತೃಪ್ತಿದೋರಲೆಂದು ಶಿವಂ ತಾಂ ॥
ತಿಳಿದು [1]ಹೊರಗಣ್ಣ ವಿಷಯವ ।
ಬಳಿಗೈದಿಸದಿರ್ಪನೆಂಬುದೀ ಇಳೆ ಸತತಂ ॥ ೧೬ ॥

ಶ್ರೀಮದ್ಗುಣಾಭಿರಾಮಂ ।
ಶ್ರೀಮಚ್ಛೀಲೈಕನಿಲಯನಹ ಮಾಯಣನಂ ॥
ಶ್ರೀಮತಿ ವಿಷ್ಣುವ ಸೇರ್ದಾ ।
ಶ್ರೀಮಾನಿನಿಯಂತೆ ಸೇರ್ದಳಂದೊಲಿಯೆ ಮನಂ ॥ ೧೭ ॥

ಇಂತಾ ಪಾರ್ವರೊಡೆಯನಾದ ಮಾಯಣಂ ತನ್ನ ಮೆಚ್ಚಿನ ಸತಿಯೊಡನೆ [1]ನಚ್ಚಿನ ದೇವನಾದ ಶ್ರೀಪಂಪಾಪುರಾಧೀಶ್ವರನಂ ಮೂರುಂ ಕಾಲದೊಳುಂ ನಿಯಮದಿಂದುಪಾಸನಂಗೆಯ್ಯುತ್ತ ಶ್ರೌತಸ್ಮಾರ್ತಕರ್ಮನಿಷ್ಠಾಗರಿಷ್ಠನಾಗಿ ಪ್ರಪಂಚದೃಷ್ಟಿಯಂ ಹಿಮ್ಮೆಟ್ಟಿಸಿ ಪರಮಾರ್ಥದೃಷ್ಟಿಯಂ ಮುಂದುವರಿಸುತ್ತಿರಲಾತನ ಮಡದಿ ಪ್ರಪಂಚಸುಖದ ಪರಮಾವಧಿಯಂ ಸೂರೆಗೊಳ್ಳಲೆಂದು ಲೋಕರೀತಿಯಿಂ ಪೆಣ್ಗಳ್ಗುಚಿತವಾದ ಚಿಂತೆಯನಾಂತು—

ಪತಿ ತನ್ನ ತಪಸ್ಸಿನಿಂದಮಾ ।
ಪತಿಯಿಂದಂ ಪಡೆವಂ ಸ್ವಸೌಖ್ಯಮಂ ॥
ಸತಿಯರ್ಗದು ನೋಡೆ ಸಾಧ್ಯಮೇ? ।
ಸುತರೇ ಇಲ್ಲದವರ್ಗೆ ಸೌಖ್ಯಮೇ? ॥ ೧೮ ॥

ಸುಖದುಃಖಗಳಂಟದಂತೆ ಮಾಳ್ಪಾ ।
ಸುಖರೂಪಂ ಗಿರಿಜೇಶನೆಂಬರೆಲ್ಲ ॥
ಸುಖಮಂ ತರುಣೀಜನಕ್ಕೆ ಮಾಳ್ಪಾ ।
ಸುಖಸಂಪತ್ತು ಸುತರ್ಕಳಲ್ಲದಿಲ್ಲ ॥ ೧೯ ॥

೧೬ — 1 ಪ್ರಾಪಂಚಿಕವಾದ ಸುಖಸಾಧನಗಳನ್ನು.

೧೮ — 1 ನಂಬಿಕೆಯ.

ಆನಂದರೂಪವೆ ತಪಸ್ಸಿಗೆ ಕಾಣ್ಬುದಿನ್ನೆಂ ।
ದೇನೆಂದೊಡಂ ಮನದೊಳಾನದನೀಗ ನಂಬೆಂ ॥
ಆನಂದವಾಗಲಬಲಾಜನಕೀಗಳಿನ್ನೇ ॥
ನೇನೆಂದೊಡಂ ಸುತರೆ ಕಾರಣವಪ್ಪರೆಂಬೆಂ ॥ ೨೦ ॥

ಅಹೇತುಕಪ್ರೇಮದ ದೇವನೇ ನಿಂ ।
ತಿಹಂ ತಪೋನಿಷ್ಠರ ಮುಂದೆನಲ್ಕೇಂ? ॥
ಆ ಹೇತುಕಪ್ರೇಮದ ಮೂರ್ತಿ ತಾನಿಂ ।
ದಹೋ! ಸುತಂ ನಿಂತಿರೆ ಮುಂದೆ ಬೇಕೇಂ? ॥ ೨೧ ॥

ಮಡಿಯೆಂದೊಡಂ ಬಿಡದೆ ಧೂಲಿ ಸೇರುತಿ ।
ರ್ಮ್ಮಡಿಯಾಗಿ ಮಕ್ಕಳುರೆ ಮುಟ್ಟಲಾ ಸುಖಂ ॥
ಮಡಿಯಾದ ವಸ್ತ್ರದ ಬೆಡಂಗ ಮೀರುತಿ ।
ರ್ಮ್ಮಡಿಯಾದ ಸೌಖ್ಯಮೆನಿಕುಂ ಮನಕ್ಕೆ ತಾಂ ॥ ೨೨ ॥

ಇಟ್ಟ ವಸ್ತುಕುಲಮಿಟ್ಟ ತಾಣದೊಳ್ ।
ನೆಟ್ಟನಿರ್ದ್ದ ಸುಖಮೀಯುವೆಂದಿಗುಂ ॥
ಪುಟ್ಟ ಮಕ್ಕಳದ ದಿಟ್ಟಸುತ್ತ ಚೆ ।
ಲ್ಲಿಟ್ಟ ಸೌಖ್ಯಕೆಣೆಯಿಲ್ಲವೆಂದಿಗುಂ ॥ ೨೩ ॥

ಸಂಗಮಪದಮಂ ಸುಕಂಠದಿಂ ತಾಂ ।
ಸರಿ, ಸರಿ, ರಮ್ಯಮಿದೆಂದೆನಲ್ಕೆ ಹಾಡಲ್ ॥
[1]ಸರಿವ ಶಿಶುವ ರೋದನಕ್ಕದೆಂತುಂ ।
ಸರಿಯೆನೆ ತೋರದ: ಲೋಕದಲ್ಲಿ ನೋಡಲ್ ॥ ೨೪

ಎಷ್ಟುಂಡರೇನೊ ಒಬ್ಬಳಿ ।
ಎಷ್ಟುಟ್ಟರದೇನೊ ಎಷ್ಟು ನುಡಿದೇನೊ? ॥
ಇಷ್ಟದ ಮುದ್ದೆಯು ಮಗುವಿಂ ।
ಗಿಷ್ಟುಣಿಸಿಷ್ಟುಡಿಸುತಿಷ್ಟು ನುಡಿಸದೆ ನಾಂ ॥ ೨೫ ॥

---

೨೪— 1 ಹತ್ತಿರಕ್ಕೆ ಬರುವ.

ಎಂದಿಗೆ ಕಾಣ್ಬೆನೋ ನಗುವನೆಂದದ ಮುದ್ದಿಸುತೆತ್ತಿಕೊಳ್ವೆನಿ |
ನ್ನೆಂ[1]ದದಕೂಡುವೆಂ ಪೋಲೆಯುನೆಂದದ ಲಾಲಿಸಿ ಲಲ್ಲೆಗೆಯ್ವೆನಿ ||
ನ್ನೆಂದದ ಮಾತನಾಡಿಸುವೆನೆಂದದರಾಟವ ನೋಡುತಿರ್ಪೆನಿ |
ನ್ನೆಂದದನಂಕದಲ್ಲಿಡುವೆ ಪೇಳದ ನೀಂ ಭುವನೈಕಮೋಹಿನೀ || ೨೬ ||

ನೋಡದ ಕಣ್ಣೇತಕೆ? ಮಾ |
ತಾಡಿಸದಿಹ ಬಾಯದೇಕೆ? ಮುದ್ದಿಸುತಂ ಮೆ ||
ಯ್ದೂಡದ ಶರೀರವೇತಕೆ? |
ರೂಢಿಯೊಳೊಡಲೊಳಗೆ ಹುಟ್ಟುತಾಡುವ ಸುತರಂ || ೨೭ ||

ಇಡಲಂಬೆಗಾಲ ಶಿಶುಗಳ್ |
ನಡುಗುಂಡಿಗಳಾಗುತಲ್ಲಿ ಸುರಿದಿಹ ಜೊಲ್ಲಿಂ ||
ನಡುಮನೆ ಕೆಸರಾಗಿಹುದೇ |
ಮಡದಿಯು ಗೃಹಕಿಟ್ಟ ಭೂಷಣಂ ಪೆರತಲ್ಲಂ || ೨೮ ||

[1]'ದಾ' ಎನೆ ಪಿತನೆಡೆಗೈದದೆ |
'ದಾ' ಎನ್ನುತೆ ತಾನೆ ಮಾತೆಯೆಡೆಗೈತರ್ಪಾ ||
[2]ದಾಯದ ಸಂತತಿಯಿರದಾ[3] |
ದಾಯದ ಫಲವೇನೊ ಕಾಣೆನಿಳೆಯೊಳ್ಗೌರೀ || ೨೯ ||

ತೊಟ್ಟಿಲೊಳಗಿಟ್ಟು ಪಾಡಲ್ |
ತಟ್ಟನೆ ಕಣ್ಮುಚ್ಚಿ, ಮುಂದೆ ಸುಮ್ಮನಿರಲ್ಕಾಂ ||
ದಿಟ್ಟಿಸುವ ಕಳ್ಳನಿದ್ದೆಯು |
ಪುಟ್ಟಂ ಪುಟ್ಟುವನದೆಂತೊ ಶಿವೆಯೋ ಪೇಳ್ವೀಂ || ೩೦ ||

ಆವಾಹಿತವಿಗ್ರಹದಾ |
ನೈವೇದ್ಯವ ತನಗಿಡೆಂದು ಬಾಯ್ಬಿಡುತಂ ||
ಧಾವಿಸುತ ಬಂದು ನಿಂದಾ |
ದೇವತ್ವವ ತೋರ್ಪನೆಂದಿಗೆನಗೆ? ಸುತಂ || ೩೧ ||

---

**೨೬**— 1 ಅದಕೆ+ಊಡುವೆಂ (ಬಾಯಲ್ಲಿಡುವೆನು)

**೨೯**— 1 ಮಕ್ಕಳನ್ನು ಕರೆಯುವಾಗ ಉಪಯೋಗಿಸುವ ಮುದ್ದಿನ ಮಾತು, ಇದಕ್ಕೆ ಬಾ ಎಂದರ್ಥ. 2 ರೀತಿಯ 3 ಇರದ+ಆದಾಯದ

ಕುಲದೇವರ, ಮನೆದೇವರ, ।
ಬಲುವೈಭವಗಳ ವಿಲಾಸಮಂ ಬಿಡದೆ ॥
ಬೆಳೆಸುವುದಕೆ ಬಳೆವೆನ್ನಯು ।
ಮೊಳೆಹಲ್ಲಿನ ಸುತರನೇಕೆ ಶಿವೆ ತಡೆದೆ? ॥ ೩೨ ॥

ಸೆರಗಿನೊಳಗಡಗುತ್ತೊಳಗೇ ।
ಸೂರಸೊರಗುಟ್ಟುತ್ತೆ ಗುಮ್ಮನೆಂದೆನಿಸಿ ॥
ಸರಿಯುವರನಂಜಿಸುವ ಕೇ ।
ಸರಿ ತಾನೆನಗಪ್ಪನೆಂದೊ ಮಗನೆನಿಸಿ! ॥ ೩೩ ॥

ಪಿಡಿಯುತ ಬಾಲನ ಬೆರಳಂ ।
ನಡೆಸುತ ನಡುನಡುವೆ ಮುದ್ದುಮುದ್ದಾಗಿ ॥
ನುಡಿಯುತದರಿಂದಲೆ ತೊದಳ್ ।
ನುಡಿಗೆಯ್ಯುತ ಬಾಳ್ವೆನೆಂತೊ ತಾಯಾಗಿ! ॥ ೩೪ ॥

ಜಗಮಂ ನೋಡುತೆ ಸುಖಕ ।
ಷ್ಟಗಳಂ ಭಾವಿಸದೆ ಸಾಕ್ಷಿಯಾಗಿರುತನಿಶಂ ॥
ನಗೆಮೊಗದಿಂ ನಲಿಯುತ್ತಿಹ ।
ಮಗುವೆನಗೆಂದಪ್ಪುದಮ್ಮ ಭುವನೇಶ್ವರಿಯೇ? ॥ ೩೫ ॥

ಈ ರೀತಿಯಾದ ಹಂಬಲಿಕೆಯಿಂ ಹರನರಸಿಗೆ ಹಂಕೆಯುಂ ಹೊತ್ತು ತನ್ನ [1]ಹದಿಬದೆಯ ಧರ್ಮಮಂ ತೀರ್ಚಿ ಆ ಆಯಾಸದಿಂದಡ್ಡಮಾಗಿರ್ದ ಪೊಳ್ತಿನೊಳ್ ಕನಸಿನೊಳ್ಮಾಯಾಸ್ವರೂಪೆಯೈತಂದಿಷ್ಟಾರ್ಥಮಪ್ಪುದೆಂದು ವರಮನಿತ್ತು ಮಾಯಮಾಗಲೊಡಂ ಕಣ್ಬಿಟ್ಟ ಶ್ರೀಮತೀದೇವಿಗೆ—

ದೆಸೆದೆಸೆಗಳೆಲ್ಲಮಾಗಳ್ ।
ಪ್ರಸನ್ನತೆಯನಾಂತು ತೋರ್ದುವಾದಿನದೊಳ್ ॥
ಅಸಿತೇಕ್ಷಣೆಗಾ ಕನಸಿಂ ।
ಪ್ರಸನ್ನತೆಯೆ ತುಂಬಿ ತುಳ್ಕುತಿರೆ ಮನದೊಳ್ ॥ ೩೬ ॥

---

೩೬ — 1 ಪತಿವ್ರತೆಯ.

ದ್ವಿಗುಣಿಸೆ ತೇಜಂ ಮುಖದೊಳ್ ।
ದ್ವಿಗುಣಿಸಲುತ್ಸಾಹವೇಗಮುಂ ಮಾನಸದೊಳ್ ॥
ದ್ವಿಗುಣಿಸೆ ಗರ್ಭಂ ಜೀವಂ ।
ದ್ವಿಗುಣಂಗೊಂಡಂತೆ ತೋರ್ದುದಾಕೆಯ ಬಸಿರೊಳ್ ॥ ೩೭ ॥

ನಡೆ ಮಂದತೆಯಾಂತುದು ಮೇಣ್ ।
ನುಡಿ ತಾನಾಯಾಸಪೂರ್ವಮೆನಿಸಿದುದು ॥
[1] ನಿಡಿದಾಗಿತ್ತುಸಿರಾಕೆಯ ।
ನಿಡುಗಣ್ಬೆಳ್ಪೇರಿ ಮನವ ನಲಿಸಿದುದು ॥ ೩೮ ॥

ಕರಮಂ ನೀಡುವಳೈದೆ ಪುಸ್ತಕಕೆ, ಮೇಣಾರಾದೊಡಂ ಪ್ರಾರ್ಥಿಸಲ್ ।
ನೆರವಾಗಲ್ನೆರೆ ಯತ್ನಿಪಳ್ಸಖಿಯರೊಳ್ತನ್ನಾಜ್ಞೆಯಂ ತೋರ್ದಪಳ್ ॥
ಪರರಂ ಬೋಧಿಸುತಿರ್ಪಳೊಲ್ದು ಮನದೊಳ್ಧ್ಯಾನಸ್ಥಳಾಗಿರ್ದಪಳ್ ।
ಪರಮಾಶ್ಚರ್ಯಕರಂ ಕರಂ ಬಯಕೆಯಿಂತೀ ಶ್ರೀಮತೀದೇವಿಯಾ ॥ ೩೯ ॥

ನವಮಾಸಂ ತುಂಬಿದವಾ ।
ನವೀನಮೆನೆ ಗರ್ಭಮಾಂತ ಮಾನಿನಿಗೆ ॥
ನವವಿಧಭಕ್ತಿಗಳಂದದಿ ।
ನವೀನಸಾಧನಮನೋಜ್ಞನಹ ಸೂನಿಗೆ ॥ ೪೦ ॥

ಬಿಳಿಮೋಡದಿಂದ ಹೊರಡುತೆ ।
[1] ಬಿಳಿಗಳೆಯಂ ಬೆಳಗುತಿರ್ಪ ಪರಿಯಿಂದಂ ॥
ಬೆಳೆದಿರ್ದ ಗರ್ಭದಿಂ ತ ।
ಣ್ಬೆಳಗಿನ ಶಿಶು ಪುಟ್ಟೆ ತೋರ್ದುದೊಲವಿಂದಂ ॥ ೪೧ ॥

ಪುರುಷಶಿಶುಜನನವಾಯ್ತೆನೆ ।
ಸರಿತ್ತಿನೊ[1]ಳ್ಧುಮುಕಿ ಮಾಯಣಂ ನಲಿದಂ ॥
ಪುರವಾಸಿಗಳಾನಂದದ ।
ಸರಿತ್ಪತಿಯೊ[1]ಳಾಳ್ದ[2]ರರಿದು ಪೇಳಲದಂ ॥ ೪೨ ॥

---

೩೮— 1 ಉದ್ದವಾಗಿತ್ತು.

೪೧ 1 ಬಿಳಿದಾದ ಕಳೆಯುಳ್ಳವನು– ಚಂದ್ರ.

೪೨— 1 ಧುಂ ಎಂದು ಶಬ್ದವಾಗುವಂತೆ ನೀರಿನೊಳಕ್ಕೆ ಹಾರುವದು. ೨ ಮುಳುಗಿದರು ೩ ಅಸಾಧ್ಯ.

ಮಾತೆಗೆ ಮಿಗಿಲೆನಲೀ ಭೂ ।
ಮಾತೆಯೆ ನಲಿದಂತೆ ಲೋಕಮಿರ್ದುದ ನೋಡಲ್ ॥
ಮಾತೆಯುವೊಲಿವಂ ತಾಂ ಭೂ ।
ಮಾತೆಯ ರಕ್ಷಿಸುವನಾದಪಂ ಧರೆಯುರಿಯಲ್ ॥ ೪೩ ॥

ರತ್ನವನೊರೆಸುತೆ ಧೂಲಿಯ ।
ಯುತ್ನದಿ ಕಳೆವಂತೆ ಜಾತಕರ್ಮಾದಿಗಳಂ ॥
ನೂತ್ನಕುಮಾರಗೆ ಮಾಡೆ ವಿ ।
ನೂತ್ನಪ್ರಭೆ ಕೂಡಿತಾಗ [1]ಧರ್ಮಾದಿಗಳಂ ॥ ೪೪ ॥

ಭೋಗವಿರಾಗಂಗಳನುಪ ।
ಭೋಗಿಪನಿವನೇಕಕಾಲದೊಳಗೆಂದೆಂಬೊಲ್ ॥
ಬೇಗುತ್ತೆರಡುಂ ಕೈಗಳ ।
ಭಾಗವ ಬಾಯೊಳಗೆ ತುಂಬುವಂ ನೆರೆ ನೋಡಲ್ ॥ ೪೫ ॥

ಕರಚರಣಂಗಳನಾಡಿಸು ।
ತರಿಪುವುದಾ ಕೂಸು ಕರ್ಮದಾದರವುಂ ॥
ನೆರೆ ಬೆಳಕಂ ನಿಟ್ಟಿಸುತದು ।
ಪರಿಕಿಸುಗುಂ ಜ್ಞಾನಯೋಗವೈಭವವುಂ ॥ ೪೬ ॥

ಭೂದೇವರ್ಶಿಶುವಿದರೊಳು[1] ।
ಮಾಧವಲಕ್ಷಣವುುಮಿರ್ದು ಬಡತನವೆಂತುಂ ॥
ಪೋದಪುದೆನೆ [2]ಕಳೆದುತ್ಸವ ।
ಮಾಧವನಿವನೆಂದರಾಗ ನಲಿಯುಲ್ಸ್ವಂತಂ ॥ ೪೭ ॥

---

೪೪— 1 ಧರ್ಮ, ಅರ್ಥ, ಕಾಮ, ಮೋಕ್ಷ— ಈ ನಾಲ್ಕು ಪುರುಷಾರ್ಥಗಳನ್ನು.

೪೭— 1 ಇದರೊಳ್+ಉಮಾಧವಲಕ್ಷಣವುು. ೨ ಕಳೆದು+ಉತ್ಸವ (ಉಮಾಧವ ಎಂಬದರ ಆದಿಯ ಉಕಾರವನ್ನು)

ಇಂತಿರ್ಪಾ ಕೂಸಂ

ಅರಸರ್ಗೆ ಕಪ್ಪವಿತ್ತು ।
ದರದಿಂ ದರ್ಶನವ ಕೊಳ್ವ ಜನರಂತೆ ॥
[1] ನೆರೆದೆಣ್ಣೆಬೆಣ್ಣೆಯಿತ್ತು ।
ದರದಿಂ ನೋಳ್ಪವರದಾಯ್ತು ಬಲುಸಂತೆ ॥ ೪೮ ॥

ಬಾರೆನ್ನ ಮುದ್ದುಕಂದನೆ, ।
ಬಾರೆನ್ನಯ ಭಾಗ್ಯನಿಧಿಯೆ, ಬಾ ಕೂಸೇ, ॥
ಬಾರೆನ್ನ ಪೂರ್ಣಚಂದ್ರನೆ, ।
ಬಾರೆಂಬರ್ಮೇರೆ ಮೀರೆ ತಮಗಾಸೆ ॥ ೪೯ ॥

ಇಂತು ನೋಳ್ಪವರಿಂ ದೃಷ್ಟಿ ತಾಕೀತೆಂದು—

ರಕ್ಷಿಸು ಶಂಭು, ರಕ್ಷಿಸು ಪಿತಾಮಹ, ರಕ್ಷಿಸು ಚಕ್ರಪಾಣಿಯೇ, ।
ರಕ್ಷಿಪುದೈ ಷಡಾನನನೆ, ರಕ್ಷಿಸು ರಕ್ಷಿಸು ದಂತಿವಕ್ತ್ರನೇ, ॥
ರಕ್ಷಿಸು ದೇವಿ ಪಾರ್ವತಿಯೆ, ರಕ್ಷಿಪುದಿಂದಿರೆ, ವಾಣಿ ರಕ್ಷಿಸಾ, ।
ರಕ್ಷಿಸೆನುತ್ತೆ ತಾಯ್ಭರದಿ ರಕ್ಷೆಯನಿಟ್ಟರೆ ಕೂಸದೊಪ್ಪುಗುಂ ॥ ೫೦ ॥

ಪೊಳೆವಾ ಕೂಸಿನ ದೇಹಕೆ ।
ಘಳಿಲನೆ [1] ತಾಯಿಟ್ಟ ಕರ್ಪು ನೋಳ್ಪುದಕೆ ॥
ನೆಲೆಯಾದುದು ವಿಧುಬಿಂಬವ ।
ಬಳಸಿರ್ಪ ಕಲಂಕವೆಂಬ ಸಂಶಯಕೆ ॥ ೫೧ ॥

ನೋಡಿದವರ್ಧನ್ಯರ್ಮ ।
ದ್ದಾಡಿದವರ್ಧನ್ಯರದಕೆ ಜೋಗುಳವಂ ॥
ಪಾಡಿದವರ್ಧನ್ಯರ್ಮೊಲಿ ।
ಯೂಡಿದವರ್ಧನ್ಯರವರಿಗಾರೊ ಸಮಂ! ॥ ೫೨ ॥

ಇಂತಿರಲಾಗಳ್

---

೪೮ — 1 ನೆರೆದು(ಗುಂಪುಕೂಡಿ)+ಎಣ್ಣೆ ಬೆಣ್ಣೆ ಯಿ ತ್ತು

೫೧ — 1 ತಾಯ್+ಇಟ್ಟ

ಅನಿಮಿತ್ತಪ್ರೇಮುವ ತ ।
ಣ್ಣನೆ ಹಾಯಿಸುತವರ ಕಣ್ಣುಕಿವಿಗಳನೆಲ್ಲಂ ॥
[1]ಬಿನದದಿ ತುಂಬುತಲಿಹ ಶಿಶು ।
ವಿನ ನೋಟಂ ಬೆರಗುಮಾಡಿತವನಿಯನೆಲ್ಲಂ ॥ ೫೩ ॥

ಮತ್ತಮೀ ಶಿಶುವಂ ನೋಡಿದ ದೈವಜ್ಞರ್
ಗುರು ತಾನೊಲಿದಿರ್ಪನುಚ್ಚನಾ ।
ಗಿರುತೀ ಕುಂಡಲಿಯಲ್ಲಿ ತೋರುತಂ ॥
ಗುರುವೇ ಇವನಾಗಿ ಮಾನ್ಯನಾ ।
ಗಿರುತಿರ್ಪಂ ಧರೆಯಲ್ಲಿ ಸಂತತಂ ॥ ೫೪ ॥

ಎಂದು ಪೇಳುತ್ತಿರಲ್
ಬಹುರತ್ನಾಸುತನೀ ಶಿಶು ।
ವಹುದೆನೆ ಮಾಧವನ ಹಿಂದೆಯೇ ಶ್ರೀಮುತಿಯಿಂ ॥
ಮಹಿಗವತರಿಸಿದರಚ್ಚರಿ ।
ಯಹ ಸಾಯಣಭೋಗನಾಥರತುಲಸ್ಥಿತಿಯಿಂ ॥ ೫೫ ॥
ತ್ರಿಲೋಕಮಂ ಗೆಲ್ವೊಡೆ ಸಾಲ್ವೆವೆಂಬಾ ।
ಬಲಾಢ್ಯರಂತೊಪ್ಪುವ ಮೂವರಿಂದಂ ॥
ಇಳಾಧಿದೇವಂ ನೆರೆ ಮಾಯಣಂ ತಾಂ ।
ಭಲೇ! ಕೃತಾರ್ಥಾಗ್ರಣಿ ತಾನೆಯೆಂದಂ ॥ ೫೬ ॥
ಮಾಯಣತನಯರ್ಮೂವರು ।
ಮಾಯತದೇಹಪ್ರಭಾತಿಶಯದಿಂದಿಳೆಯೊಳ್ ॥
[1]ಮಾಯೆ! ಎನೆ ಬೆಳಗುತಿರ್ದರ್ ।
[2]ಮಾಯಿಯ ನಯನತ್ರಯಂಗಳೈತಂದಿಹವೊಲ್ ॥ ೫೭ ॥
ಭಾರದ್ವಾಜಂ ಗೋತ್ರಮೀಧಾತ್ರಿಯೊಳಾತ್ತಂ ।
ತೋರಲ್ಮೂರುಂ ಕೋಡುಗಳ್ಮಾಡಿದಂತೆ ॥
ಮೂರುಂ ಮಕ್ಕಳ್ಮಾಯಣಂಗಾಗುತೆಂತುಂ ।
ತೋರುತ್ತಿರ್ದರ್ನೋರ್ಕಳ್ಪರಾನಂದಿಪಂತೆ ॥ ೫೮ ॥

---

೫೩— 1 ವಿನೋದದಿಂದ
೫೭— 1 ಆಶ್ಚರ್ಯವು. ೨ ಈಶ್ವರನ.

ಚಿಣಿಕೋಲುಚೆಂಡುಬುಗುರಿಯು ।
ವಿನೋದದಾಟದಲಿ ಹುಡುಗರೆಲ್ಲರಲಿ ॥
ಘನತೆಯು ಪಡೆದಂ ಮಾಧವ ।
ನನಿಬರುಮಂ ಬೆರಗುಮಾಡಿ ಚಳಕದಲಿ ॥ ೫೯ ॥

ಎಲೆಲೇ ನಾರಾಯಣ, ಪೇಳ್ವೆನೀಗ ಬರೆ ನೀಂ, ಹೇ ಬಾಲರೇ ಕೇಳಿ ನೀ ।
ವೆಲೆಲೇ ಲಕ್ಷಿಸು ಭೋಗನಾಥ ನೆರೆದೀ ಬಾಲರ್ಕಳಾಚಾರಮುಂ, ॥
ಕೆಲಸಾದುರ್ನಿಸ್ಕೃತಿಗೆಯ್ದೆ [1]ಕೇಶವನೆ, ನೀಂ ಸತ್ಕರ್ಮಮುಂ ಗೆಯ್ದೆಯಾ ।
ಬಳಿಸಾ[2]ಶಂಕರ, ಎಂದು ಭೋಗರೆಯುತಿರ್ಪಂ ಲೀಲೆಯಿಂ ಮಾಧವಂ ।

ಎಲೆ ಮಾಧವ, ನಮ್ಮೊರ್ವರ ।
ಕಲಹವ ನೀಂ ಕೇಳಿ ತೀರಿಸುವುದೀಗ ॥
ಬಲುಹುಂಟು ನಿನಗೆನುತ್ತಾ ।
ಗಳೆ ಬರ್ಪರ್ ಹುಡುಗರಲ್ಲಿ ಬಹು ಬೇಗ ॥ ೬೧ ॥

ಚಿನ್ನಕ್ಕೆ ನಾಡೆ ಪುಟವಿಟ್ಟದಕೊಪ್ಪವಿಟ್ಟಂ ।
ತಿನ್ನಾಸುತರ್ಗೆ ನೆರೆ ಮೌಂಜಿಯು ಬಂಧಮಾಗಲ್ ॥
[1]ಸಣ್ಣಗ್ನಿಕಾರ್ಯದಿ ಹರಿದ್ರದ ವಸ್ತ್ರದಿಂದಂ ।
ಚಿಣ್ಣರ್ವಿರಾಜಿಸಿದರುಜ್ಜ್ವಲರಾಗುತಾಗಳ್ ॥ ೬೨ ॥

ಶ್ರವಣಾದಿತ್ರಯದಿಂದುಳಿ ।
ದವರೆಂತುಂ ತಿಳಿದೆವೆನಿಸೆ ಯುಕ್ತಿಸಲಾಗಳ್ ॥
ಶ್ರವಣಮುದೊಂದೇ ಆ ಮಾ ।
ಧವಂಗೆ ಸಾಕಾಗಲೊಲಿದುವಾ ಶಾಸ್ತ್ರಂಗಳ್ ॥ ೬೩ ॥

ಕಲಿತು ಮರೆತಿರ್ದ ಶಾಸ್ತ್ರವ ।
ಬಲುಸುಲಭದಿ ನೆನೆದು ತಳೆವ ಪರಿಯುಂತೆ ॥
ನೆಲೆಯರಿತಂ ಮಾಧವನಾ ।
ಪಲವುಂ ವಿದ್ಯೆಗಳ ಧರಣಿ ನುತಿಪಂತೆ ॥ ೬೪ ॥

---

೬೦— 1,2 ಕೇಶವ ಮತ್ತು ಶಂಕರ ಎಂಬ ಹೆಸರುಗಳು ಮಾಧವನ ಜೊತೆಯಲ್ಲಿ ಆಡುತ್ತಿದ್ದ ಹುಡುಗರ ಸಂಬಂಧವಾದವುಗಳು.

೬೨— 1 ಅವರು ಮುಂದೆ ಮಾಡುವ ಯಜ್ಞದ ದೃಷ್ಟಿಯಿಂದ ಉಪನಯನಕಾಲದಲ್ಲಿ ಆದ ಅಗ್ನಿಕಾರ್ಯವು ಸಣ್ಣದು.

ಕುಡಿದು ಕುಡಿದು ಮಾತೃಸ್ತನ್ಯಮಿನ್ನಿಲ್ಲದಂತಾ ।
ಸಡಗರವನೆ ತೋರ್ದಾಮಾಧವಂ ತಂದೆಯಿಂದಂ ॥
ಪಡೆದು ಪಡೆದು ವಿದ್ಯಾಸರ್ವಸೌಭಾಗ್ಯವುಂ ತಾಂ ।
ಬಿಡದೆ ಮುಗಿಸಿದಂ [1]ಮತ್ತಿಲ್ಲವೆಂಬಂದದಿಂದಂ ॥ ೬೫ ॥

ಸರ್ವಜ್ಞವಿಷ್ಣುಗುರುವಿಂ ।
ಸರ್ವಾರ್ಥವನರಿದು ದರ್ಶನಂಗಳೊಳಾಗಳ್ ॥
ಸರ್ವಜ್ಞನಿನನುವೊಂದೆನೆ ।
ಸರ್ವಂಸಹೆಯಲ್ಲಿ ಪೆಸರನಾಂತಂ ಬುಧರೊಳ್ ॥ ೬೬ ॥

ತೀರ್ಥವಿಶೇಷದೊಳ್ಪೆಸರನಾಂತಿರುತೊಪ್ಪುವ ತುಂಗಭದ್ರೆಯಾ ।
ತೀರ್ಥದೆ ಮಿಂದು, ತಂದೆಯು ಹೃದಬ್ಜಮರಂದಮಿದೆಂಬ ಬೋಧೆಯಾ ॥
ತೀರ್ಥವ ಪೀರ್ದು, ವಿಷ್ಣುಗುರುಗೈದುಪದೇಶವಿಶೇಷರೂಪದಾ ।
ತೀರ್ಥದೊಳೀಸಿಯುಂ ಬಯಸಿದಂ ಮಿಗೆ ತೀರ್ಥವ ಬೇರೆ ಮಾಧವಂ ॥ ೬೭ ॥

ಸುತರ ಬಿಟ್ಟಿರಲಾರದೊಡಂ ಬಹು ।
ಶ್ರುತರೆನುತ್ತೆ ಯಶಸ್ವಿಗಳಪ್ಪದಂ ॥
ಮತಿಗೆ ತಂದದಕೊಪ್ಪಿದನಾಗಳಾ ।
ಪಿತನದೇಂ ಪಿರಿದೋ ಸಲೆ ಕೀರ್ತಿ ತಾಂ ॥ ೬೮ ॥

ತೀರ್ಥೀಕೃತನಾಗಲ್ವಿ ।
ದ್ಯಾರ್ಥಿತ್ವದೆ ಮಾಧವಂ ಸಹೋದರರೊಡನೆ ॥
ಪ್ರಾರ್ಥಿಸಿ ಪಡೆದಂ ವಿದ್ಯಾ ।
ತೀರ್ಥರನಾ ಕಂಚಿಗಾಗ ಬರುತೊಡನೆ ॥ ೬೯ ॥

[1]ಗುರುಗಳ ಬಯಕೆಯುದಿನ್ನುಳಿ ।
ದಿರದಂತಹ ಗುರುವ ಪಡೆಯಬೇಕೆಂದು ॥
ನೆರೆ ಮಾಧವನಾಗ ಜಗ ।
ದ್ಗುರುಗಳನೇ ಪಡೆದನುರೆ ಮನಂದಂದು ॥ ೭೦ ॥

---

೬೫ — 1 ತಂದೆಯಲ್ಲಿ ಇನ್ನು ಉಳಿದಿಲ್ಲವೆಂಬಂತೆ.

೭೦ — 1 ತನಗೆ ಗುರುಗಳ ಆಶ್ರಯವು ಬೇಕೆಂಬ ಬಯಕೆ.

ಸಾರ್ಥಂ ತಾನಿರೆ ನೆರೆ ನಾವುದಲ್ಲಿ ವಿದ್ಯಾ ।
ತೀರ್ಥತ್ವಂ ಗುರುವರನಲ್ಲಿ ನೋಡೆ ಮೇಣುಂ ॥
ಸಾರ್ಥಂ ತಾನೆನಿಸಿರೆ [1] ಕಾಮಕೋಟಪೀಠಂ ।
ಸಾರ್ಥಂ ತಾನೆನಿಸದೆಂತೊ! ಈ ಪ್ರಯತ್ನಂ ॥ ೭೧ ॥

ಇಂತಿರ್ದ ವಿದ್ಯಾತೀರ್ಥರ ಸನ್ನಿಧಿಯನೈದಿ

ಗುರುಗಳ ಬಾಗಿಲಲ್ಲಿರುತ್ತೆ, ಮೇಣ್ಗುರುಪಾದವ ಸೇವೆಗೆಯ್ಯುತಂ ।
ಗುರುಗಳ ವಸ್ತ್ರಮಂ ತೊಳೆಯುತಾಗುರುಶಯ್ಯೆಯನೊಲ್ದು ಹಾಸುತಂ ॥
ಗುರುಗಳ ಚಿತ್ತಮಂ ತಿಳಿದು ನಿರ್ವಹಿಸುತ್ತೆ ಸಮಸ್ತಕಾರ್ಯಮಂ ।
ಗುರುಗಳನುಗ್ರಹಂಬಡೆದನಪ್ರತಿಮಂ ಪ್ರತಿಯಾಗಿ ಮಾಧವಂ ॥ ೭೨ ॥

ಪಾರಮಿರ್ಪ ಜಲರೂಪಸಿಂಧುವಂ ।
[1] ಪೀರಿದಾತನ ಮಹತ್ತ್ವಮೇನೊ ಪೇಳ್ ॥
ಪಾರಮಿಲ್ಲದಿಹ ಶಾಸ್ತ್ರಸಿಂಧುವಂ ।
ಪೀರಿದೀತನ ಮಹತ್ತ್ವಮೇ ದಿಟಂ ॥ ೭೩ ॥

ಇಂತಪ್ರತಿಮಪಾಂಡಿತ್ಯಮಂ ಪಡೆದ ಮಾಧವನಂ ನೋಡಿ ಸಹಪಾಠಿಗಳೆಲ್ಲರುಂ—

ಪೇಳೈ ಮಾಧವ, ಅರ್ಥವೇನಿದಕೆ, ಪೇಳೈ ಮಾಳ್ಪುದೇನೀಗ ನಾಂ ।
ಪೇಳೈ ಯೋಗ್ಯಮದಾವುದೀ ಕೃತಿಗಳೊಳ್ಪೇಳ್ಶ್ರೇಯಮಿನ್ನೇತರಿಂ ॥
ಪೇಳೈ ಯೋಗರಹಸ್ಯಮಂ, ನಮಿಪೆ ಪೇಳ್ಸಿದ್ಧಾಂತಮಾದರ್ಥಮಂ ।
ಪೇಳೈ ಮಾಧವ, ಎಂದು ಕೇಳುತಿಹರೆಲ್ಲರ್ಗುಂಪುಗುಂಪಾಗುತಂ ॥ ೭೪ ॥

ಪ್ರೀತಿಯಿಂದ ಗುರುಸೇವೆಯಂ ಗೆಯ್ದಾ ।
ರೀತಿಯಿಂದ ಕರಗಲ್ ಗುರುಚಿತ್ತಂ ॥
ನೀತಿವಂತನಹ ಮಾಧವನಂದಾ ।
ಜ್ಞಾತತತ್ತ್ವನೆನಲಾಯ್ತು ವಿಚಿತ್ರಂ ॥ ೭೫ ॥

---

೭೧— 1 ಕಂಚಿಯಲ್ಲಿರುವ ಶ್ರೀಶಂಕರಾಚಾರ್ಯರ ಪೀಠದ ಹೆಸರು.

೭೩— 1 ಅಗಸ್ತ್ಯನ.

ನೆರೆ ಚಿಗುರಿದುದಾಜ್ಞಾನದ ।
ಭರದಿ ಯಜುಶ್ಶಾಖೆಯಾಗ ಮಾಯಣನ ॥
ವರಬೋಧಾಯನಸೂತ್ರಂ ।
ಮೆರೆದುದು ಮುಪ್ಪುರಿಯದೆನಿಸುತಾಹದನ ॥ ೭೬ ॥

ಇಂತಪಾರವಾದ ವಿದ್ಯೆಯು ಪಾರಂಗಂಡ ಸಚ್ಛಿಷ್ಯರಾದ ಮಾಧವ ಸಹೋದರರಂ ನೋಡಿ [1]ಆಮುಸ್ಕರಿವರ್ಯರವುಂದಾನಂದತುಂದಿಲರಾಗುತ್ತಂದು ತಮ್ಮ ವಿದ್ಯೆ ಕುಡಿವರಿಯಿತೆಂದರಿದು ಸಂತುಷ್ಟರಾಗಿ ನಡುವರೆಯುದವರಾದವರ್ಗೆ ಗೃಹಸ್ಥಾಶ್ರಮುಕ್ಕಪ್ಪಣೆಯುಂ ಕೊಟ್ಟು ಗುರುಕುಲವಾಸದಿಂದನುಜ್ಞೆಯುನೀಯಲಾ ವಿದ್ಯಾಥವಂ ಮಾಧವಂ ತನ್ನೊಳ್ಬಿತ್ತಿದ ವಿದ್ಯೆ ವೀರ್ಯವತ್ತರಮಪ್ಪಂತೆ ಗುರುದಕ್ಷಿಣೆಯುಂ ಕೊಟ್ಟು ಸಾಂಪ್ರದಾಯಮುಂ ಸಂರಕ್ಷಿಸಬೇಕೆಂಬ ತನ್ನ ಮನೋಗತಮನಾಡಿ ತೋರಿಸಲಾ ಪರಮಹಂಸರ್—

ಗುರುಗಳ್ಗೆ ಭರೆಯ ಧಾರೆಯ ।
ನೆರೆದೊಡಮದು [2]ಪಾದಪೂಜೆಯೋ ಎಂದೆನಿಕುಂ ॥
ಅರಿಯಲ್ಧರ್ಮದವೃದ್ಧಿಗೆ ।
ನೆರವಪ್ಪುದೆ ಪೂಜೆ ಜನಕುಮೆನ್ನಯ ಮನಕುಂ ॥ ೭೭ ॥

ಇಂತೊರೆದ ಗುರುಗ[1]ಳಾಣತಿಯುಂ ತಲೆಯೊಳ್ಪೊತ್ತದಂ ಮಾಡಿ ಮುಗಿಸುವ ಕುತೂಹಲದಿಂ ಕೂಡಿ ಮನೆಗೆಯ್ದಿದ ಮಕ್ಕಳ ಮುದ್ದಾದ ಮುಖಮನೀಕ್ಷಿಸಿದಾಗಳಾ ತಾಯ್ತಂದೆಗಳ್ಗೆ —

ಸ್ವಭಾವದಿಂ ನಿರ್ಮಲವಾದ ದರ್ಪಣಂ ।
ಪ್ರಭಾಕರಚ್ಛಾಯೆಯ ಕೂಡಿ ತೋರ್ಪವೊಲ್ ॥
ಶುಭಾವಹಂ ಪುತ್ರಶರೀರತೇಜಂ ।
ಪ್ರಬೋಧಯುಕ್ತಂ ನೆರೆ ತೋರ್ದುದಾಗಳ್ ॥ ೭೮ ॥

೭೭— 1 ಆ ಸಂನ್ಯಾಸಿ. ಶ್ರೇಷ್ಠರು.

೭೭— 2 ಪಾದ = ನಾಲ್ಕರಲ್ಲಿ ಒಂದು ಭಾಗ ಅಥವಾ ಚರಣ (ಕಾಲು).

೭೮— 1 ಅಜ್ಞಪ್ತಿ (ಅಪ್ಪಣೆ).

ಸತಿಯು ಗರ್ಭದಿ ಬಂದ ತನೂಜರಿಂ ।
ಪಿತನ ಚಿತ್ತಕೆ ತೋರದ ಸಂತಸಂ ॥
ಪ್ರಥಿತಪಂಡಿತರೆಂಬ ಪೊಗಳ್ಕೆಯಿಂ ।
ದತಿಯೆನಲ್ಕೆರೆ ತೋರ್ದುದಹರ್ನಿಶಂ ॥ ೭೯ ॥

ಇಂತು ಬಿಜ್ಜೆಯಿಂದವುಂ ಹರೆಯದಿಂದವುಂ ಮೆಯ್ಗೊಡಿರ್ಪ ಮುಖಮುದ್ರೆಯ ಮಾಟದಿಂ ಕಣ್ಗಳ್ಗೆ ಹಬ್ಬಮಂ ಮಾಡಿಕೊಂಡಾ ತಾಯ್ತಂದೆಗಳಾನಂದಸಾಗರದೊಳ್ಮುಳುಂಗಿ ಮೈಮರೆದಿರ್ದರ್

ಹರಿಹರರೈಕ್ಯದಿನೈಕ್ಯವ ।
ಹರಿಹರದೊಳ್ತಿಳಿಯಪೇಳ್ವೆನೆಂದೆನಲಿಂದುಂ ॥
ಹರಿಹರನುಂ ಹರಿಹರರತ ।
ಹರಿಹರಗುರುವರನುಮೆಮ್ಮ ರಕ್ಷಿಸಲೆಂದುಂ ॥

## ಐದನೇ ನೆಲೆ- ಸಾಮಾನ್ಯವ್ಯವಹಾರವರ್ಣನೆ.

ಶ್ರೀಗಿರಿಜೆ ತೊಡೆಯೊಳೊಪ್ಪೆ ವಿ ।
ರಾಗದ ವಿಗ್ರಹನುಮೆನಿಸಿ ತಾಂ ಮೆರೆದಿರ್ಪಂ ॥
ಯೋಗೇಶನಾದ ಶಿವನೆಮ ।
ಗೀಗಳ್ಕೊಡುಗತುಲಸುಖವ ಜಿತಕಂದರ್ಪಂ ॥ ೧ ॥

ಅಂತಾ ಶ್ರೀಮತೀಮಾಯಣರಾನಂದದೊಳಿರಲ್

ಪರಿಪರಿಯ ಶಾಸ್ತ್ರಮರ್ಮದ ।
ಪರಿಯನೆ ನಿರುಕಿಸುತಲಿರ್ದ ಮಾಧವನೀಗಳ್ ॥
ಪುರಜನರ ಬಾಳುವೆಯೊಳಿಹ ।
[1]ಪುರುಡಂ ನಿರುಕಿಸುವನಾದನದ ತಾಂ ತಿಳಿಯಲ್ ॥ ೨ ॥

---

೨ — 1 ತಿರುಳನ್ನು.

ಇನಿತರೊಳ್ಕಲಿಪ್ರಾಬಲ್ಯದಿಂದಾರ್ಯಧರ್ಮದೇವತೆಯ ಮೂಳಿಗಳ್ಮಿಕ್ಕಾಗುತಿರ್ದು ಹಿಂದುಸ್ಥಾನದ ಸರ್ವಪಾಪದ ಫಲವಾಗಿ ಉತ್ತರದೊಳ್ ಮುಸಲ್ಮಾನರ ದಾಳಿ ಮೇಲ್ವರಿದಿರಲದರ ಮೆಯ್ಮೆಯಿಂ—

[1]ಜನರಾಚಾರದ ನಿಷ್ಠೆದುರ್ಬಲತೆಯುಂ ತಾಳ್ದಿರ್ದುದೆಲ್ಲೆಲ್ಲಿಯುಂ ।
ಮನದೊಳ್ನೋಡೆ ವಿಚಾರದುರ್ಬಲತೆಯುಂ ತುಂಬಿರ್ದುದೆಲ್ಲೆಲ್ಲಿಯುಂ ॥
ದಿನಕೊಂದೊಂದೆಡೆಯಿಂದ ಬಂದಿತಹಹಾ! ದುರ್ವಾರ್ತೆಯೆಲ್ಲೆಲ್ಲಿಯುಂ ।
ತನು ತಾಂ ಕಂಪಮನಾಂತು ವೈರಿಭಯದಿಂ ಬೆಚ್ಚಿರ್ದುದೆಲ್ಲೆಲ್ಲಿಯುಂ ॥೩॥

ದೇವರ ಮೂರ್ತಿಯುಂ ಕೆಡಹಿ ದೇವರ ಸರ್ವವ ಕೊಂಡರೆಂದಪರ್ ।
ಜೀವರನೆಲ್ಲರಂ [1]ಮುಡುಹಿ ಜೀವರ ಸರ್ವವ ಕೊಂಡರೆಂದಪರ್ ॥
ಸ್ತ್ರೀವಿಷಯಕ್ಕೆ ಮೋಹಿಸುತೆ ಮಾನದ ಸರ್ವವ ಕೊಂಡರೆಂದಪರ್ ।
ಕಾವರೆ ಇಲ್ಲದಂತೆಸಗಿ ಸಿಕ್ಕಿದ ಸರ್ವವ ಕೊಂಡರೆಂದಪರ್ ॥ ೪ ॥

ಉತ್ತರದ ಬೇಗೆ ಹತ್ತಿರ ।
ಲಿತ್ತಲ್ ದಕ್ಷಿಣದೊಳದರ ಸೆಕೆ ತಟ್ಟದ ಪೊಲ್ ॥
ಚಿತ್ತಂ ತಳಮಳಮಂ ಪೊಂ ।
ದಿತಪ್ಪಗ ತುರುಷ್ಕವಾರ್ತೆಯಿಂದೆಲ್ಲೆಡೆಯೊಳ್ ॥ ೫ ॥

ಇಂತಾಗಲಿನ್ನು ಧರ್ಮದ ಗತಿಯೇನೆಂದು ಮಾಧವಂ ಗುರುದಕ್ಷಿಣೆಯಂ ಸಲಿಪುಪಾಯದೊಳ್ಮಗ್ನನಾಗಿರಲೀ ಜಗತ್ತಿನ ಹಣೆಯ ಬರೆಪವೆ ಆವಾಗಳುಮೀರೀಶಿಯೊಳ್ನಾಯ ಬಾಲದಂತೆ ಡೊಂಕಾಗಿರ್ಪುದೆಂದದಂ ತು-ಚ್ಛಂಗಂಡು ಸಾಕ್ಷಾದ್ಗುರುಚರಣಸೇವೆಯೇ ಗುರುದಕ್ಷಿಣೆಯೆಂದು ಭಾವಿಸಿ ಹಂಪೆಯ ಸೊಂಪಂ ಲಕ್ಷಿಸದೆ ಪಂಪಾಪುರೀಶ್ವರನ ಅಪರವಿಗ್ರಹವಾದ ಚಂದ್ರಮೌಳೀಶ್ವರನುಪಾಸನೆಯುಂ ಸಾಗಿಸಿ ಕೃತಾರ್ಥನಪ್ಪೆನೆಂದು ಭೋಗನಾಥಂ ಹಂಪೆಯಿಂದಡಿಯುಂ ಕಿತ್ತು [1]ಕಿತ್ತಡಿಯಪ್ಪೆನೆಂದು ಶೃಂಗೇರಿಗೆಯ್ದಿ ಕಂಚಿಯಿಂದಲ್ಲಿಗೈತಂದಿರ್ದ ಶ್ರೀವಿದ್ಯಾತೀರ್ಥಸ್ವಾಮಿಗಳ ಕರಕಮಲದಿಂದೆ ಸಂಜಾತನೆನಿಸಿ ಪರಮಹಂಸನಾಗಿ ಶ್ರೀಭಾರತೀಕೃಷ್ಣತೀರ್ಥರೆಂಬ ಗುರುಪುತ್ರನಾಮಧೇಯದಿಂ ಸ್ವಾನಂದಾನುಭವದೊಳ್ಇಂದಿರಲಿತ್ತಲ್ —

೩— 1 ಜನರ+ಆಚಾರದ.
೪— 1 ಕೊಂದು.
೬— 1 ಸಂನ್ಯಾಸಿ.

ಕಿರಿಯನಹ ಭೋಗನಾಥಂ ।
ಭರದಿಂದೆ [2] ವಿರಕ್ತನಾಥನಾಗೆ ಪಿತಂ ತಾಂ ॥
ಮರುಗುತ್ತುಳಿದೀರ್ವರ್ಮನೆ ।
ಗಿರೆ ಮನದೊಳ್ತಂದನವರ ಮದುವೆಯ ಮಾತಂ ॥ ೬ ॥

ಹೊಟ್ಟೆಯಿಂದಲಿದು ಗಂಡೆನಿಸುತ್ತಂ ।
ಹುಟ್ಟಿತೆಂದೊಗೆದ ಸಂತಸದಿಂದೇಂ ॥
ಪುಟ್ಟ ಹೆಣ್ಣನೊಡಗೂಡಲವಂ ತ ।
ಪ್ಪಿಷ್ಟಪೂರ್ಣಮಬಲಾಜನಕೆಂದುಂ ॥ ೭ ॥

ಇಂತೆಂಬ ಶ್ರೀಮತಿಯಭಿಪ್ರಾಯಮುಮಂ ಮನದೊಳ್ನೆನೆದ ಮಾಯಣಂ ಮಾಧವಂಗೆ ಮುದಮಂ ಕೊಡಬಲ್ಲ ಕನ್ಯೆಯನನ್ವೇಷಿಸುವವನಾಗಿ ನೆರೆಯೂರ್ಗಳಂ ತಿರುಗಿ ಕುಲೀನನಾದೊಬ್ಬ ಸದ್ಗೃಹಸ್ಥನ ಮನೆಯೊಳ್ಸಜ್ಜ ವಿಶೇಷಂಗಳಿಂ ಪ್ರೀತನಾದ [1] ವೀತಿಹೋತ್ರನನುಗ್ರಹದಿಂದುದಿಸಿರ್ದ ವೈತಿಹೋತ್ರಿಯೆಂಬ ಸರ್ವಲಕ್ಷಣಲಕ್ಷಿತಕನ್ಯೆಯಂ ಕಂಡಾಸ್ತ್ರೀರತ್ನಮಂ ತನ್ನ ಮಗಂಗೆ ತಂದುಕೊಳ್ವಲ್ ಸರ್ವಸನ್ನಾಹಮಂ ಸಾಗಿಸಲದರಂತೆ—

ಧರಣಿಯೊಳ್ವ್ಯವಹಾರಕೆ ಮಾಯೆಯುಂ ।
ವರಿಸಿ ತೋರ್ದಿಹ ರೀತಿಯೊಳೀಶ್ವರಂ ॥
ಧರಣಿಯೊಳ್ವ್ಯವಹಾರಕೆ ಜಾಯೆಯಂ ।
ವರಿಸಿದಂ ಸಲೆ ಮಾಧವಭೂಸುರಂ ॥ ೮ ॥

ಮನುಜಂ ಕೃತಾರ್ಥತೆಯ ಕಾಣಲೊಬ್ಬನೇ ।
ಘನಯತ್ನಗೆಯ್ವುದುರೆ ಕಷ್ಟಕಾರಕಂ ॥
ಎನುತಾಗ ನೋಡುತನುರೂಪಳಂ ಮನೋ ।
ಜ್ಞನೆನಿಪ್ಪವಂ ಮದುವೆಯಾದನುತ್ಸುಕಂ ॥ ೯ ॥

ಎಂತಿರ್ದೊಡೇಂ ಪ್ರತಿಭೆ ಮಾಯೆಗೆ ಸಿಲ್ಕಲಾತಂ ।
ನಿಂತಿರ್ಪನಪ್ಪನುರೆ ಸಂಸೃತಿಯಲ್ಲಿ ನೋಡಲ್ ॥
ಎಂತಿರ್ದೊಡಂ ಸ್ಥಿತಿ ವಿವಾಹಿತನಾಗಲಾತಂ ।
ನಿಂತಾತನಲ್ತೆ ಮನೆಯಲ್ಲಿ ವಿಚಾರಮಾಡಲ್ ॥ ೧೦ ॥

---

೬— 2 ಯತೀಶ್ವರ.
೮— 1 ಅಗ್ನಿಯ.

ಸರ್ವಾತಿರೇಕಪ್ರಭುಶಕ್ತಿಯಿಂದಾ ।
[1] ಗುರ್ವಾಜ್ಞೆಯಿಂ ಧರ್ಮವ ಕಾಯಲೆಂದುಂ ॥
ಸರ್ವಾಶ್ರಮಾಧಾರಕವೃತ್ತಿಯುಂ ತಾಂ ।
[2] ಗುರ್ವಾಜ್ಞೆಯಿಂ ಮಾಧವನೀಗ ತಾಳ್ದಂ ॥ ೧೧ ॥

ಕಷ್ಟವಿರ್ಪುದು ಗೃಹಸ್ಥಗೆಂಬರೊಂ ।
ದಿಷ್ಟನೋಳ್ಪೆನದನೆಂಬ ರೀತಿಯಿಂ ॥
ಶಿಷ್ಟಕನ್ಯೆಯೊಡನಾತನಿಷ್ಟರಿಂ ।
[1] ದಿಷ್ಟನಾಗಿ ಗೃಹಿಯಾದನರ್ಥಿಯಿಂ ॥ ೧೨ ॥

ಹಿತಮಾದ ವಿವಾಹಕಾರ್ಯದಿಂ ।
ಘೃತಧಾರಾಹುತಿಗಂಧವೊಮ್ಮೆಗೇ ॥
ಕ್ಷಿತಿಯೆಲ್ಲವ ತುಂಬಿ ತೋರ್ದುದಾ ।
ಸ್ಥಿತಿಹರ್ಷಪ್ರದಮೆಂದು ಭೂಮಿಗೆ ॥ ೧೩ ॥

ಬೆಳೆಯಲ್ಕೆ ತಂದೆಯ ಕುಲಂ ವಿವಾಹದಿಂ ।
ತಳೆದರ್ಥಿಯಿಂದೆ ಗೃಹಿಯಾದ ಮಾಧವಂ ॥
ಬೆಳೆಯಲ್ಕೆ ತನ್ನ [1]ಗುರುವಂಶಮುತ್ಸವಂ ।
ದಳೆದಾಗ ಪೇಳ್ದನುರೆ ಶಾಸ್ತ್ರಪಾಠಮಂ ॥ ೧೪ ॥

ಹರಡಿತಾಗಲೆ ಮಾಧವನುದ್ಯಮಂ ।
ಭರದಿ ಪಾಠವ ಪೇಳ್ವ ವಿಧಾನದಿಂ ॥
ಕರೆಯಲೇತಕೆ ತುಂಬಿಯ ವೃಂದಮಂ ।
ನೆರೆ ಸುಮಕ್ಕಿರೆ ವಾಸನೆ ಚೆಂದದಿಂ ॥ ೧೫ ॥

ಸುರರ ನಿವಹಮಾ ಸುಧಾರ್ಥಮೆಂದಾ ।
ಸುರಗುರುಸನ್ನಿಧಿಗೆಯ್ದಿ ಸೇರ್ವರೆಂಬೊಲ್ ॥
ಸ್ಫುರದುರುತರವಿದ್ಯೆಗಾಗಿ ತಾಂ ಭೂ ।
ಸುರತತಿ ಮಾಧವನಂಘ್ರಿಗೆಯ್ದಿ ತೋರ್ಕುಂ ॥ ೧೬ ॥

---

೧೧— 1 ವಿದ್ಯಾತೀರ್ಥರಾಜ್ಞೆಯಿಂದ 2 ತಂದೆಯಾಜ್ಞೆಯಿಂದ.
೧೨— 1 ಅಪ್ಪಣೆಯನ್ನು ಹೊಂದಿದವನಾಗಿ.
೧೪— 1 ವಿದ್ಯಾಗುರುಗಳ ಪರಂಪರೆಯು.

ಒಂದೆಡೆ ಕಾವ್ಯಮೊಂದೆಡೆಯಲಂಕೃತಿಯೊಂದೆಡೆ ವೇದಪಾಠಮಿ ।
ನ್ನೊಂದೆಡೆ ತರ್ಕಮೊಂದೆಡೆ ನಿರುಕ್ತಮದೊಂದೆಡೆ ಸಾಂಖ್ಯಶಾಸ್ತ್ರಮಿ ॥
ನ್ನೊಂದೆಡೆ ತಾಂ ದಶೋಪನಿಷದರ್ಥಮದೊಂದೆಡೆ ಸೂತ್ರಭಾಷ್ಯಮಿ ।
ನ್ನೊಂದೆಡೆ ಪಾಣಿನೀಯಮೆನೆ ನರ್ತನಶಾಲೆಯದಾಯ್ತು ವಾಣಿಯಾ । ೧೭ ॥

ಸರಭಸದಿಂ ಕಲಿವಾ ಶಿ ।
ಷ್ಯರ ರಸನಾಗ್ರದಲಿ ವಾಣಿಯಿರ್ಪುದು ಪಿಂದೇಂ ॥
ಹೊರಗಣವರ್ಕೇಳುತೆ ಶಿ ।
ಷ್ಯರ ಮರೆಪರ್ ವಾದಮಧ್ಯದೊಳಗೆನಲಿನ್ನೇಂ ॥ ೧೮ ॥

ಜನರೆಲ್ಲರುಂ ಬಳಸೆ ಬತ್ತುಗುಂ ಜಲಂ ।
ಘನಮಾದ ವಾರಿಧಿಯೊಳುಂ ವಿಚಾರಿಸಲ್
ಜನರೆಲ್ಲರುಂ ಬಳಸೆ ಪೆರ್ಚುಗುಂ ಬಲಂ ।
ಘನಮಾದ ಮಾಧವಕಲಾಸಮುದ್ರದೊಳ್ ॥ ೧೯ ॥

ಧ್ವನಿಯು ನೇಮವಿದ್ದೈ ಧ್ವನಿಯೋ ಪ್ರತಿ ।
ಧ್ವನಿಯೊಳ್ಳೈತಹುದಿಂತಿರಲೀತನ ॥
ಧ್ವನಿಗೆ ಶಿಷ್ಯಜಯಧ್ವನಿಯೋ ಪ್ರತಿ ।
ಧ್ವನಿಯಿದಾವ ವಿಶೇಷಮೊ ಕಾಣೆನಾಂ ॥ ೨೦ ॥

ವಿಧಿಯು ಸತಿಗೆ ವಿದ್ಯಾವೈಭವಾಧಿಕ್ಯಮಂ ತಾಂ ।
[1] ವಿಧಿಸಿದನಿವನೆಂಬೊಲ್ಮಾಧವಂ ಸ್ಫೂರ್ತಿಯಿಂದಂ ॥
ವಿಧವಿಧಮಹ ಸದ್ಗ್ರಂಥಂಗಳಂ ನಿರ್ಮಿಸುತ್ತಂ ।
ವಿಧಿಸಿದನವನೋದಲ್ ಶಿಷ್ಯರು ಪ್ರೀತಿಯಿಂದಂ ॥ ೨೧ ॥

ತಿರುಗಿ ತಿರುಗಿ ಭಿಕ್ಷಾವೃತ್ತಿಯಿಂ ಬ್ರಹ್ಮಚರ್ಯಂ ।
ಧರೆಯನುಕೃತಿಗಾಗಲ್ಗೆಯ್ದು ಭೂದೇವರಾಜಂ ॥
ನೆರೆದಗಣಿತಶಿಷ್ಯರ್ಗನ್ನವಿತ್ತೀ ಗೃಹಸ್ಥಂ ।
ಧರೆಗನುಕರಣೀಯಂ ಸತ್ಯಮೆಂಬಂತೆ ಗೆಯ್ದಂ ॥ ೨೨ ॥

---

೨೧— 1 ಸರಸ್ವತಿಯ ಅದೃಷ್ಟದಲ್ಲಿ ಇನ್ನೂ ಹೆಚ್ಚು ವಿದ್ಯಾವೈಭವವಿರುವಂತೆ ಮಾಡಿದನು.

ಅತಿಥಿಗನ್ನವ ನೀಡುವ ರೀತಿಯಿಂ ।
ಕ್ಷಿತಿಗೆ ಮಾತ್ರಮೆ ಸತ್ರಮಿದಾಗದೆ ॥
ಕ್ರತುಗಳಿಂ ಸುರಲೋಕಕುಮಾಯಿತೀ ।
ಕ್ಷಿತಿಸುರೇಂದ್ರಗೃಹಂ ಪರಮಾದ್ಭುತಂ ॥ ೨೩ ॥

ಕರ್ಮಿಗಳೆಂಬೊಳಜಾತಿಯು ।
ಕರ್ಮಿತ್ವಂ ರೂಪುಗೊಂಡವೊಲ್ಗೆಯ್ದಾಗಳ್ ॥
ಕರ್ಮಶ್ರದ್ಧಾಭರದಿಂ ।
ಕರ್ಮಕೆ ಚೇತನವನಿಟ್ಟನವನಿಳೆ ನುತಿಸಲ್ ॥ ೨೪ ॥

ಪ್ರತಿಯೊಂದು ವಸಂತದಲ್ಲಿಯುಂ ।
ಕೃತುವಿಂದಂ ನರರುಂ ಸುರರ್ಕಳುಂ ॥
ಹಿತದಿಂ ನೆರೆ ತಿಂದು ತೇಗಲಾ ।
ಸ್ಥಿತಿಯೇ ದುಂದುಭಿಯಾಯಿತಂದು ತಾಂ ॥ ೨೫ ॥

ನೆರೆ ಯಜ್ಞದೊಳಾಜ್ಯಧಾರೆ ಮುಂ ।
ಬರಿಯಲ್ಕಗ್ನಿಯು ಭೂಸುರಾಳಿಯು ॥
ವರ ಜಿಹ್ವೆಗಳಿಲ್ಲ ಪೀರ್ದುವ ಚ ।
ಪ್ಪರಿಸುತ್ತಾಂತವಮುಂದತೃಪ್ತಿಯು ॥ ೨೬ ॥

ಸುರನರತತಿ ತೃಪ್ತಿಯಿಂದಲಾ ಭೂ ।
ಸುರವರಯಜ್ಞವ ಮೆಚ್ಚಿ ಹಾಡಲಾಗಳ್ ॥
ಸುರಪತಿ ಕಿವಿಗೊಟ್ಟು ಕೇಳ್ದನಾ ಭಾ ।
ಸುರಯಶಮುಂ ಹೃದಯುಂ [1]ವಿದೀರ್ಣಮಾಗಲ್ ॥ ೨೭ ॥

ವಾದಮಾತ್ರದಲಿ ಜೀವಿಸಿಕೊಂಡಾ ।
ವೇದದಲ್ಲಿ ನೆಲಸಿರ್ದ ವಿಧಾನಂ ॥
ಮಾಧವಾರ್ಯಕೃತಯಜ್ಞವ ಕಂಡಾ ।
ಸಾಧುವಿಂಗೊಲಿಯುತಾದುದಧೀನಂ ॥ ೨೮ ॥

---

೨೭— 1 ಶತಕ್ರತುವನ್ನು ಮಾಡಿ ಮಾಧವನು ತನ್ನ ಇಂದ್ರಪದವಿಗೇ ಬರುವನೆಂದು ಆ ಇಂದ್ರನಿಗೆ ಎದೆಯೊಡೆಯಿತು.

ಕಲಿತಕಾಲದಿ ನಾಲಿಗೆಯಲ್ಲಿ ತಾ ।
ನೊಲಿದು ನಿಲ್ಲದ ಮಂತ್ರವಿಶೇಷಗಳ್ ॥
ಪಲವು ಯಜ್ಞದಿ ತಪ್ಪದೆ ಪೇೞಲಾ ।
ಬಲದಿ ನಿಂತವು ಕಂಠದಿ ವಿಪ್ರರೊಳ್ ॥ ೨೯ ॥

ಇಂತು ಯಜ್ಞಂಗಳ್ಸಾಂಗಮಾಗುತ್ತಿರಲಿವನೇಕನಿಷ್ಠೆಯಂ ಪಱೀಕ್ಷಿಸಲೆಂದು—

ಮಳೆಬೆಳೆಗಳನೀಯದಿರ್ದು ಶಕ್ರಂ ।
ಬಲುಬಗೆಯಾದೞಲಿತ್ತುದಲ್ಲದಿನ್ನುಂ ॥
ಮುಳಿದವಳೆನೆ ಭೂಸುರೇಂದ್ರನಿಂದಂ ।
ತೊಲಗೆನುತಿಂದಿರೆಗಾಗ ತಾನೆ ಪೇೞ್ದಂ ॥ ೩೦ ॥

ಆಗಳ್—

ವಾಣಿಯಿರ್ಪೆಡೆಯ ಸೇಱಿದೊಡಾದಂ ।
ಕ್ಷೋಣಿಯೊಳ್ಸೊಸೆಯ ಸೇವೆಯ ಗೆಯ್ವಳ್ ॥
ಮಾನಮಲ್ಲಮದಱಿಂದೆನುತಾ ದು ।
ಮ್ಮಾನದಿಂ ಕಮಲೆ ಹಿಂಗಡೆಗಾದಳ್ ॥ ೩೧ ॥

ಎಷ್ಟು ರೂಪದಲಿ ಸೇರ್ದೊಡಮಾನಿಂ ।
ದಷ್ಟನೆಲ್ಲಮುರೆ ದಾನವ ಗೆಯ್ವಂ ॥
ಶಿಷ್ಟರೊಳ್ಬೆಳಗದೆನ್ನಯ ಮಾನಂ ।
ಕಷ್ಟಮೊಂದುದಹ! ಲಕ್ಷ್ಮಿಯ ಭಾವಂ ॥ ೩೨ ॥

ಪರಮಭಕ್ತನೆನುತ್ತಿವನಲ್ಲಿ ನಾಂ ।
ಮೆರೆವೆನೆಂದೊಡೆ ತನ್ನ ಸಮೀಪಕೇ ॥
ಕರೆವನಲ್ಲಿವನಾದುದಱಿಂ ಮನಂ ।
ಬರದಿವಂ ಗುಱಿಯೆನ್ನಯ ಕೋಪಕೆ ॥ ೩೩ ॥

ಸುರನರರೊಳಗಿಲ್ಲ ಸಾಟಿಯೆಂಬೀ ।
ಗರುವದೊಳಿರ್ಪಗೆ ಸಾಹ್ಯಮೇತಕೆನ್ನಿಂ ॥
ಪಱಿಪಱಿಯಲಿ ದೈನ್ಯದಿಂದ ಕಾಣ್ಬಾ ।
ಪಱಿಯಲಿ ಕಂಡೊಡನೀವೆನೆಲ್ಲ ಪೊನ್ನಂ ॥ ೩೪ ॥

ಎಲೆಲೆ ಭೂಸುರ ಮತ್ಪತಿನಾಮಮಂ ।
ಛಲದಿ ತಾಳ್ದಿರೆ ಸೈರಿಪೆನೆಂತು ನಾಂ ॥
[1] ತಿಳಿದು ಜನ್ಮದ ಬಂಧದ ಭಾವಮಂ ।
ಕಳೆಯದಿರ್ದೊಡೆ ಕಷ್ಟದ ಪಾಲು ನೀಂ ॥ ೩೫ ॥

ಎಂದಾಕೆ ಹಿಮ್ಮುಖಳಾಗಲ್ —

ಬರದಾಯ್ತೆಂದಿನ ವಸ್ತುರಾಜಿ, ಬರದಾಯ್ತಿಲ್ಲಿಂದೆಯುಂ ಸಂಪದಂ ।
ಬಂದಾಯ್ತಾಗಲೆ ಧಾನ್ಯಶಾಲೆ, ಬರಿದಾಯ್ತಾ ದೊಡ್ಡ ಭಂಡಾರಮುಂ ॥
ಬಿರುದಾಯ್ತೈ ಬರಿತೋರ್ಕೆಯೆಂದು ಬಿರುದೆಂದಾಯ್ತೀಗ ದಾರಿದ್ರ್ಯಮುಂ ।
ಬುರುಕಷ್ಟಂ, ಬರಿಮಾತೆ ಆಯ್ತು ತೊಲಗಲ್ಲಕ್ಷ್ಮೀಕಟಾಕ್ಷೇಕ್ಷಣಂ ॥ ೩೬ ॥

[1]ಕೋಶಂ ತುಂಬಿರೆ ಹೃದಯಾ ।
ಕಾಶದ ಭೂಸುರನೊಳೆಂದು ಮೊದಲಂತೆ ।
[2]ಕೋಶಂ ಬರಿದಾಯ್ತು ಗೃಹಾ ।
ಕಾಶದೆ ಸಿರಿಯಾಗ ಮುನಿದಳೆಂಬಂತೆ ॥ ೩೭ ॥

ಇಂತು ಮೂಗುಕಟ್ಟಿದಂತಾಗಲಾಗಳೆಂತಾದೊಡಮಿ [1]ಅಂತರಾಯಮಂ ಪಿಂತೆಸಗದಿರ್ದೊಡತಿಥಿಗಳ ಮನ್ನಣೆಯು[2]ಮಂತೇವಾಸಿಗಳ ಚಿಂತಾನಿವಾರಣೆಯುಂ ಸತ್ಕರ್ಮಂಗಳ ಪೆರ್ಮೆಯುಂ [3]ಕೈಗಣ್ಮವೆಂದು ಮನದೊಳ್ನಿಶ್ಚಯಿಸುತ್ತವು ಸಾಧ್ಯಮಾಗಲ್ ಭೌತಿಕಪ್ರಯತ್ನಕ್ಕೆಶರಣು ಪೋಗುವುದರಿಂ ದೇವತೋಪಾಸನೆಯುಂ ಕೈಕೊಳ್ವುದೇ ಮೇಲೆಂದು ನೆನೆದು ತನ್ನುಪಾಸ್ಯದೇವತೆಯಾದ ಶ್ರೀಭುವನೇಶ್ವರಿಯುಂ ಕುರಿತು ಮಹೋಗ್ರತಪಶ್ಚರ್ಯೆಯುಂ ಮಾಡಲ್ಮಹಾಸಂಕಲ್ಪಮಂ ಗೆಯ್ದು ಗೃಹವ್ಯವಸ್ಥೆಯುಂ ತಮ್ಮನಾದ ಸಾಯಣಂಗೊಪ್ಪಿಸಿ ಪ್ರಯತ್ನದಿಂ ಮೂಗುಹಿಡಿದು ತಪಶ್ಚರ್ಯೋದ್ಯೋಗಮಂ ಕೈಕೊಂಡ ಮಾಧವಂ ಮನದೊಳ್ —

---

೩೫— 1 ನಿಜಸ್ವರೂಪವನ್ನು ತಿಳಿದು ನಿನ್ನ ಹುಟ್ಟಿನ ಕೋಟಲೆಯನ್ನು ಕಳೆದುಕೊಳ್ಳದಿದ್ದರೆ.

೩೭— 1 ನಿಘಂಟು. 2 ಭಂಡಾರವು.

೩೮— 1 ವಿಘ್ನವನ್ನು. 2 ಶಿಷ್ಯರ. 3 ಸಾಧ್ಯವಾಗಲಾರವು.

[1] 'ಮಾ'ಯಿಲ್ಲದೆ ಧವನಾರಿಗೆ? ।
ಮಾಯಣಸುತಗಿಟ್ಟ [2]ಹೆಸರಿನೀದುರ್ಯಶವುಂ ॥
ಮಾಯಿಸಿ ಮೇಲ್ವರಿಸಿದಪೆಂ ।
[3] ಮಾಯಾತೀತಮಿದೆನಲ್ಪುರೋಹಿತವಚವುಂ ॥ ೩೮ ॥

ಎಂದು—

ಬಲುಹಿಂದೆ ಮನವ ವಿಷಯದ ।
ಬಲೆಯಿಂ ಕಿತ್ತಿಟ್ಟನಾಗ ಭುವನೇಶ್ವರಿಯೊಳ್ ॥
ಬೆಲೆಯುಳ್ಳದಿದೆನಿಪ ತಪೋ ।
ಬಲಮಂ ಪಡೆಯಲ್ಕೆ ಮಾಧವಂ ತಾಂ ಜವದೊಳ್ ॥ ೩೯ ॥

ಕುಲಗುರು ತಪದೊಳ್ನಿಂದಿರೆ ।
ಸಲೆ [1]ಗುರುವಿಗೆ ವಜ್ರಿಯಂತೆ ಹರಿಹರನೆಂಬಂ ॥
[2]ಒಲಿದವಗೆ ಪಾಲ ಕುಡುತವ ।
ನೊಲಿಮೆಯೆ ಸರ್ವಸ್ವಮೆಂದು ಮನದೊಳ್ಕಣ್ಬಂ ॥ ೪೦ ॥

ಶಬರಿ ರಘುವರಗೆ ನೀಡಿದ ।
ಶುಭಫಲಗಳ ಕೊಟ್ಟ ಮರಗಳಲ್ಲಿಹ ಫಲಮಂ ॥
ಕಬಳಿಸುತಾತನ ಯತ್ನಂ ।
ಪ್ರಬಲಿಸೆ ತಾಂ ಮರೆದನಶನವಸನಂಗಳುಮಂ ॥ ೪೧ ॥

ಕೆಲಕಾಲಂ ತಾಂ ಫಲಾಹಾರದೊಳಿರೆ, ಕೆಲಕಾಲಂ ಜಲಾಹಾರಮಾಗಲ್।
ಕೆಲಕಾಲಂ ವಾಯುವಂ ಸೇವಿಸುತಿರೆ, ಕೆಲಕಾಲಂ ನಿರಾಹಾರಮಾಗಲ್ ॥
ಕೆಲಕಾಲಂ ಕಾಯಿಕಂ ತಾಂ ನಡೆದಿರೆ ಕೆಲಕಾಲಂ ತಪಂ ವಾಚಿಕಂ ಮೇ ।
ಣ್ಕೆಲಕಾಲಂ ಧ್ಯಾನದಿಂ ಮಾನಸಿಕತಪದೊಳಿರ್ದಂ ಮಹೀದೇವದೇವಂ॥೪೨॥

ಸೆಳೆದು ವಾಯುವ ಕುಂಭಕಮಾಗಿಸಲ್ ।
ಬಲುಹಿನಿಂದದರಿಂ ಹೊರಗೆಲ್ಲಮುಂ ॥
ಅಲುಗದಾದುದು ವಾಯು ನಿರೀಕ್ಷಿಸಲ್ ।
ತಳೆದುದೆಂದೆನೆ ಯೋಗಿಯ ದಾಸ್ಯಮಂ ॥ ೪೩ ॥

---

೩೮ — 1 ಲಕ್ಷ್ಮಿ (ಐಶ್ವರ್ಯವು). 2 ಹೆಸರಿನ+ಈ ದುರ್ಯಶವುಂ. 3 ಸುಳ್ಳಲ್ಲದ್ದು.
೪೦ — 1 ಬೃಹಸ್ಪತಿಗೆ. 2 ಒಲಿದು + ಅವಗೆ

ತಪದಿಂದೆ ಪುಟ್ಟ ಬೆಳೆದಿರ್ಪ ತಾಪವುಂ ।
ತಪನಂ ಮಹಾಭಯದಿ ಸೋಂಕಲಾರದೆ ॥
ಸ್ವಪರಾಕ್ರಮಂ ಮುಗಿಯೆ ಯೋಗಿಯುಂದಮಂ ।
ಕೃಪೆಯಿಂದೆ ನೋಳ್ಪನೊಲವಿಂ ಸುದೂರದಿಂ ॥ ೪೪ ॥

ಅಶನವಿರದದೆಂತು ಯೋಗಿ ತಾಂ ಜೀ ।
ವಿಸಿದಪನೆಂಬುದದೇಕೆ ಚಿಂತೆ ನೋಡಲ್ ॥
ಎಸೆದಿಹ ಹೃದಯಸ್ಥ [1]ಚಂದ್ರನಿಂ ಸೇ ।
ವಿಸಿದಪನೆ ಅಮೃತಾನ್ನಮಂ ನಿತಾಂತಂ ॥ ೪೫ ॥

ಬಡವನೆಂದೆನೆಸಿರ್ದ ಬುಧೇಡ್ಯನೊಳ್ ।
ಬಡತನಂ ಮಿಗೆ ತೋರ್ದೊಡಮಂಗದೊಳ್ ॥
ಬಿಡದೆ ಗೆಯ್ದ ತಪಸ್ಸಿನ ತೇಜಮುಂ ।
ಬಡೆದಮಂ ಬೆಳಗುತ್ತಿಹನೆಲ್ಲಮಂ ॥ ೪೬ ॥

ಹಸಿವುಂ ಪೀಡಿಸಿ ಸೋತುಪೋಗಿ, ತೃಷೆಯುಂ ಕೈಮೀರಿ ಹಿಂದಾಗೆ, ಭಾ ।
ವಿಸಲೆಂದುಂ ತನು ಕಾರ್ಶ್ಯದಿಂ ಸೊರಗಿ ಸೊಪ್ಪಾಗಿದೋರ್ಡಂ, ನೋಡದೆ ॥
ವಶದೊಳ್ನಿಲ್ಲದೆ ಚಿತ್ತಮತ್ತ ಚಲಿಸಲ್ಬಾಯೆಂದಮಂ ತಂದು ನಿ ।
ತ್ಯಸಮಾಧಿಸ್ಥಿತಿಯಲ್ಲಿ ನಿಲ್ಲಿಸಿವನಾ ಯೋಗೋತ್ಸವಂ ಮಾಧವಂ ॥ ೪೭ ॥

ಬಹುಕಾಲಮಿಂತು ತಪದಲ್ಲಿ ನಿಂದಿರಲ್ ।
ಬಹು ಲಂಬಮಾದ ಮುಖರೋಮರಾಜಿ ತಾಂ ॥
ಬಹು ಧರ್ಮನಿಷ್ಠೆಯ ಪತಾಕೆಯೆಂಬವೊಲ್ ।
ಬಹುಮಾನಕಾದುದು ಮುನೀಶ್ವರಸ್ಥಿತಂ ॥ ೪೮ ॥

ಭಳಿರೇ ಯೋಗಿವರೇಣ್ಯ, ಗಣ್ಯ, ಭಳಿರೇ ಬ್ರಾಹ್ಮಣ್ಯಸಂರಕ್ಷಕಾ ।
ಭಳಿರೇ ಮೌನಿವದಾನ್ಯ, ಧನ್ಯ, ಭಳಿರೇ ಧರ್ಮಜ್ಞರುದ್ಧಾರಕಾ ॥
ಭಳಿರೇ ಜ್ಞಾನಿಸಮೂಹನಾಥ, ಭಳಿರೇ ಶಾಸ್ತ್ರಾಳಿಸಂವರ್ಧಕಾ ।
ಭಳಿರೇ ಮಾಧವ, ಎಂದು ಮೆಚ್ಚುಗೆಯ ತೋರುತ್ತಿರ್ಕುಮೆಲ್ಲಾ ಜನಂ ॥೪೯॥

---

೪೫ — 1 ಪ್ರಾಣಾಯಾಮಕಾಲದಲ್ಲಿ ಯೋಗಿಗೆ ಚಂದ್ರಬಿಂಬದ ದರ್ಶನವಾಗಿ ಅವನು ಅದರ ಅಮೃತವನ್ನು ಪಾನಮಾಡುವನೆಂದು ಯೋಗಶಾಸ್ತ್ರದಲ್ಲಿ ಹೇಳಿದೆ.

ಮನೆಯುಂ ಸ್ವಬಂಧುಕುಲಮಿಷ್ಟೆ ಯೋಗಿಯಾ ।
ಮನದಿಂದೆ ದೂರಮೆನೆ ತಕ್ಕುದಲ್ತು ಮೇಣ್ ॥
ಮನದೊಳ್ಜಗತ್ತೆ ಲಯಮಾಗಿ ಹೋಗಿಯಾ ।
ಮನಮುಂ ವಿಲೀನಮೆನಿಸಿತ್ತು ಪೇಳಲೇಂ ॥ ೫೦ ॥

ಬಗೆಯದೆ ಜಗಮಂ ತಾಂ ಧ್ಯಾನದೊಳ್ನಿಂತ ಧೈರ್ಯಂ ।
ಬಿಗಿವಡೆಯುತೆ ಯೋಗಾರೂಢತಾಪ್ರಾಪ್ತಿಯಾಗಲ್ ॥
ಹಗಲಿರುಳುಗಳುಂ ವರ್ಷಾತಪಂಗಳ್ಸಮೀರಂ ।
ಮಿಗೆ ಬಡಿದೊಡಮೇನುಂ ತೋರದಾಯ್ತಾತಗಾಗಳ್ ॥ ೫೧ ॥

ಇರೆ ಮಾಧವನಾಸಮಾಧಿಯೊಳ್ತಾಂ ।
ನೆರೆ ಕಣ್ಕುಂದಕೆ ಬಂದುದೊಂದು ತೇಜಂ ॥
ಮರೆಯಾಗಿಹ ಮೋಡದಿಂದಲೇಳ್ತಂ ।
ದಿರೆ ತೋರ್ಪಂತಿರೆ [1]ವಾಸರಾಧಿರಾಜಂ ॥ ೫೨ ॥

ಇಂತು ಮುಂದೆ ಬಂದ ತೇಜದೊಳಗಣಿಂದೊಂದಶರೀರವಾಕ್ಯ ಕೇಳ ಬಂದುದದೆಂತೆನೆ—

ತಳಮಳಿಸದಿರೆಲೆ ಭೂಸುರ ।
[1]ಕಲಿಯಿಂದಲೆ ನಿನಗೆ ಶಾಂತಿಯೂಜನ್ಮದಿ ಕೇಳ್ ॥
ಕಳೆಯುಲಿದು ಬಹಳ ಭಾಗ್ಯವ ।
ತಳೆವೈ ಸತ್ಕೀರ್ತಿವಂತನಾಗುತೆ ಜಗದೊಳ್ ॥ ೫೩ ॥

ಇಂತೊರೆದು ಹಾರಿಕೆಯ ಮಾ ।
ತಿಂ ತನ್ನಾಧ್ಯಾನದಳವ ಕದಲಿಸಿ ಬಳ್ಪಿಂ ॥
ಅಂತರ್ಧಾನವ ಪೊಂದಿದು ।
ದೆಂತುಂ ತೇಜಂ ಬುಧೇಡ್ಯನೆಚ್ಚರಗೊಂಡಂ ॥ ೫೪ ॥

ಈ ರೀತಿಯೊಳ್ತನ್ನಿಷ್ಟಾರ್ಥಂ ನೆರವೇರದುದಂ ಕಂಡೊಡನೆ ಖಿನ್ನನಾದ ಮಾಧವಂ ತನ್ನ ಮನಮನೆಂತಾದೊಡಂ ನೆಲೆಗೆ ನಿಲ್ಲಿಸಬೇಕೆಂದು ನಿಶ್ಚಯಿಸಿ—

೫೨— 1 ಸೂರ್ಯನು.
೫೩— 1 ವಿದ್ಯೆಯಿಂದಲೆ.

ಗೃಹದಲ್ಲಿರ್ಪೊಡೆ ನಿಚ್ಚಂ ।
ಗೃಹಿಗಳ್ಗಾದರ್ಶನಪ್ಪೆನಲ್ಲದೊಡೆ ॥
ಗೃಹಮಂ ಬಿಟ್ಟು ತಪಸ್ವಿಂ ।
ಗುಹೆಯೊಳ್ಸಂನ್ಯಾಸಿಯಾಗುತಿರದೆ ಬಿಡೆ ॥ ೫೫ ॥

[1]ದೇಹಿಯೆನಿಸಿರ್ದುಮಾಂ ನೆರೆ ।
[2]'ದೇಹೀ'ಯೆನಲಾರೆನಾರ ಮುಂಗಡೆಯುಂ ॥
ದಾಹಕಮೆನಗದು ನೋಡೆ [3]ವಿ ।
ದೇಹತ್ವದ ಹೊರತು ಕಾಣೆನಾಂ ಕಡೆಯುಂ ॥ ೫೬ ॥

ಅದರಿಂದಾನೀಗಲೆ ದೇ ।
ಹದ ಸಂಬಂಧವನೆ ಗುರ್ವನುಗ್ರಹದಿಂ ॥
ಮುದದಿಂ ತೊರೆದಾ ಸಂನ್ಯಾ ।
ಸದ ದೀಕ್ಷೆಯ ಪೊಂದಿ ಮೆರೆವೆನುತ್ಸವದಿಂ ॥ ೫೭ ॥

ಇಂತು ದೃಢಸಂಕಲ್ಪಂಗೆಯ್ದು ಪೊಳ್ತಂಗಳೆಯದಲ್ಲಿಂ ಪೊರಮಟ್ಟು ತನ್ನ ದೀಕ್ಷಾದಾತರಾಗಬಲ್ಲ ಶ್ರೀವಿದ್ಯಾತೀರ್ಥಸ್ವಾಮಿಪಾದಂಗಳಾಗಳ್ಶ್ರೀಶೃಂಗೇರಿಯೊಳ್ವಿರಾಜಿಸುತ್ತಿರ್ಪರೆಂಬ ಸುದ್ದಿಯಂ ಕೇಳ್ದು ತೀವ್ರದಿಂದವರ ಪಾದದರ್ಶನಮಂ ಪಡೆಯಬೇಕೆಂಬುತ್ಕಟಮಾದಿಚ್ಛೆಯ ಬಲದಿಂ ಮಾರ್ಗಾಯಾಸಮಂ ಮನಕ್ಕೆ ತಂದುಕೊಳ್ಳದೆ ಕಾಲ ನಡಿಗೆಯಿಂ ಕಲ್ಮುಳ್ಗಳಿಂ ತಗ್ಗುದಿಣ್ಣೆಗಳುಮಿರ್ಪ ದಾರಿಯೊಳ್ನಡೆದನೇಕ ಜನಪದಂಗಳುಮಂ ವಿವಿಧ ವೃಕ್ಷಲತಾಗುಲ್ಮಂಗಳಿಂದಿಡಿದು ಗಜವ್ಯಾಘ್ರಾದಿಗಳಿಂ ವ್ಯಾಪ್ತಮಾಗಿರ್ಪ ಮಹಾರಣ್ಯಂಗಳುಮಂ ಸಿದ್ಧಸಾಧ್ಯರ್ಗಾವಾಸಯೋಗ್ಯಮಾದ ಗುಹೆಗಳಿಂ ತುಂಬಿದನೇಕ ಪರ್ವತಂಗಳುಮಂ ಮುನಿಜನಮಾನನೀಯಂಗಳಾದನೇಕ ಮಹಾನದಿಗಳುಮಂ ದಾಂಟ—

---

೫೬— 1 ದೇಹವುಳ್ಳವನು 2 'ಕೊಡು' ಎಂದು ಬೇಡಲಾರೆನು. 3 ದೇಹಾಭಿಮಾನವನ್ನು ಬಿಡುವದರ ಹೊರತು.

ಮಾಧವನೆಯ್ದಿದಂ ಭರದಿ ಶೃಂಗಗಿರೀಂದ್ರಕೆ, ಋಷ್ಯಶೃಂಗರುಂ ।
ಸಾಧಿಸಿ ನಿಷ್ಠೆಯಿಂ ತಪವ ಗೆಯ್ದಿಹ ತಾಣಕೆ, ಶಾರದಾಂಬೆ ತಾ ॥
ನಾದರದಿಂದೆ ನಿಂತೆಡೆಗೆ, ಶಂಕರದೇಶಿಕಪೀಠಭೂಮಿಗು ।
ದ್ಬೋಧಕಸದ್ಗುರೂತ್ತಮಪದಾಂಬುಜಯುಗ್ಮಮುಮಿರ್ಪ ದೇಶಕೆ ॥ ೫೮ ॥

ಇಂತತಿಕುತೂಹಲದಿಂ ಬಂದು ಮಾಧವಂ ಚರಣತಲದೊಳ್ಮೆಯ್ಯಿಕ್ಕ ಲೊಡನೆ ತಿಳಿಗಣ್ಣಿಂದೆಲ್ಲವುಂ ತಿಳಿದಾ ಶ್ರೀವಿದ್ಯಾತೀರ್ಥಸದ್ಗುರು ವ್ಯವಹಾರದೃಷ್ಟಿಯಿಂ—

ಪುಟಕಿಟ್ಟ ಸುವರ್ಣದಂತೆ ಶಿಷ್ಯಂ ।
ಸ್ಫುಟವಾಗಿರ್ದುದ ನೋಡಿ ಕಾಂತಿಯಿಂದಂ ॥
ದಿಟವಾಗಿರೆ ಸಂತಸಂ ರಹಸ್ಯಂ ।
[1]ಪಟುವಕ್ಕೆಂದು ಕೃಪಾಳು ತಾನೆ ಕೇಳ್ದಂ ॥ ೫೯ ॥

ಆಗಳಾ ಮಾಧವನವರಡಿಯೆಡೆಗೆ ತಲೆಯುಂ ಬಾಗಿಸಿ—

ಅನಲನಂದದಿ ತೋರ್ದಪುದೀ ಜಗಂ ।
ಮಿನುಗುತಲ್ಪಸುಖಂಗಳ ರೂಪದಿಂ ॥
ಮನದಿ ಮೆಚ್ಚುತೆ ಮುಟ್ಟದೊಡಾವಗಂ ।
ಕ್ಷಣದೊಳೇ ಸುಡುಗುಂ ಬಹುತಾಪದಿಂ ॥ ೬೦ ॥

ಇಳೆಯು ವಸ್ತುಗಳಿಂ ಚಿರಸೌಖ್ಯಮುಂ ।
ತಳೆವೆನೆಂಬುದು ಸಲ್ಲದದೆಂದಿಗುಂ ॥
ಮಳಲ ಬಾವಿಯು ತೋಡುವ ಸಂಭ್ರಮುಂ ।
ಜಲವ ಕಾಣಿಸದೆಲ್ಲಿಯುಮಾರಿಗುಂ ॥ ೬೧ ॥

ಯಾಗಾದಿಗಳಿಲ್ಲದ ಗೃಹಿ ।
ಯಾಗದೆ ಸಂನ್ಯಾಸಿಯಾಗೆ ದೀಕ್ಷೆಯು ಬೇಳ್ಪಿಂ ॥
[1]ಯೋಗದಿ ಸದ್ಧರ್ಮಕ್ಕೆ ಸು ।
ಯೋಗವ ತರೆ ಯತ್ನವೆಲ್ಲಮುಮನಾಂ ಮಾಳ್ಪೆಂ ॥ ೬೨ ॥

---

೫೯— 1 ಹೊರಬೀಳಲಿ (ಒಳಗೆ ಸೂಕ್ಷ್ಮರೂಪದಲ್ಲಿರುವದು ಹೊರಗೆ ಸ್ಥೂಲರೂಪವನ್ನು ಪಡೆಯಲಿ).

೬೨— 1 ಯೋಗಶಾಸ್ತ್ರಾನುಸಾರವಾದ ನಡವಳಿಕೆಯನ್ನು ಪ್ರಸಾರ ಮಾಡುವುದರಿಂದ.

ಇಂತತ್ಯಂತ ದೀನತೆಯಿಂ ಬೇಡಿದಾಶಿಷ್ಯನ ಮನೋದ್ವೇಗಂಗಂಡದಂ ತಳಕ್ಕಿಳಿಸಲೆಂದವನಂ ಕುರಿತು ಶಾಂತಿಯಿಂ ಕೆಲದಿವಸಂ ಶ್ರೀಮದ್ಭಗವತ್ಪಾದರುಪಾಸನಂಗೆಯ್ಯುಲವರೇ ಮುಂದಿನ ದಾರಿಯಂ ತೋರ್ಪರೆಂದು ನಿರೂಪಿಸಲದಂ ತಲೆಯೊಳಾಂತು ಮಾಧವಂ ನಿಶ್ಚಿಂತನಾಗಿ ಗುರುಸನ್ನಿಧಿಯ ವಾತಾವರಣವಿಶೇಷದಿಂ ಪ್ರಬುದ್ಧಮಾದಾತ್ಮಾನಂದದಿಂ ಪರವಶೀಕೃತಮಾದಂತಃಕರಣಮುಳ್ಳಾತನಾಗಿ ಸುಖಮಿರ್ದಂ.

ಹರಿಹರರೈಕ್ಯದಿನೈಕ್ಯವ ।
ಹರಿಹರದೊಳ್ತಿಳಿಯಪೇಳ್ವನೆಂದೆನಲಿಂಬುಂ ॥
ಹರಿಹರನುಂ ಹರಿಹರರತ ।
ಹರಿಹರಗುರುವರನುಮೆಮ್ಮ ರಕ್ಷಿಸಲೆಂದುಂ ॥

## ಆರನೇ ನೆಲೆ— ಹರಿಹರಬುಕ್ಕರು ಶರಣುಬಂದದ್ದು.

ಶ್ರೀಶೈಲಮಂದಿರಂ ಕುಂ ।
ತೀಸುತವರದಾನನಿರತನಹ ಶಬರಂ ॥
ಪೋಷಿಸುತಿರಲೆಮ್ಮಂ ಕರು ।
ಣಾಶರನಿಧಿ ಪಾರ್ವತೀವಿಲಾಸಭರಂ ॥ ೧ ॥

ಇತ್ತಲ್—

ಗುರು ಶೃಂಗಗಿರಿಯನೆಯ್ದಲ್ ।
ಗುರುಭಕ್ತಂ ಹರಿಹರಾಖ್ಯನತಿಖಿನ್ನತೆಯಿಂ ॥
ಗುರಿಯರಿಯದ ಭಟಗೆಣೆಯಾ ।
ಗಿರುತಿರ್ದಂ ಯೋಚಿಸುತ್ತೆ ತನ್ನುನ್ನತಿಯಂ ॥ ೨ ॥

ಆನೆಯಗೊಂದಿಯೊಳ್ಪ್ರಮುಖನೆಂಬುದನೂರ್ಜಿತಗೆಯ್ವೆನೆಂದಿಗೋ ।
[1] ಆನೆ ಯಥಾರ್ಥರಾಜನೆನೆ ದೇಶದ ರಕ್ಷೆಯ ಗೆಯ್ವೆನೆಂದಿಗೋ ॥
ಆನೆ ಯಥೋಕ್ತಯೋಧನೆನೆ ಶತ್ರುಸಮೂಹವ ಗೆಲ್ವೆನೆಂದಿಗೋ ।
ಆನೆ [2]ಯಮೀಂದ್ರರಂ ಮಗುಳೆ ಪೂಜಿಸಿ ಧನ್ಯನೆನಿಪ್ಪೆನೆಂದಿಗೋ ॥ ೩ ॥

ಎನುತಾ ಹರಿಯಪ್ಪೊಡೆಯಂ ।
ಮುನೀಂದ್ರನಿಂ ತನ್ನ ಮೇಲ್ಮೆಯಪ್ಪುದೆನುತ್ತಂ ॥
ಮನದೊಳ್ಭಾವಿಸುತಿರ್ದಂ ।
[1] ಘನಗಜನಗರಾಭಿಮಾನಿಜನಕುಲವಿನುತಂ ॥ ೪ ॥

ಇಂತಿರಲೊಮ್ಮೆ ಬೇಡಪಡೆ ಬೇಂಟೆಯನಾಡುವ ತೀಂಟೆಯಾಗಳೆಂ ।
ತುಂ ತಲೆಗೇರಿರಲ್ಕೆ ಹರಿಯಪ್ಪೊಡೆಯಾ ತೆರಳೆಂದು ಯಾಚಿಸಲ್ ॥
ಬಂತತಿವೇಗದಿಂದವರ ಬೇಡಿಕೆಯಂ ನೆರೆ ಮನ್ನಿಸುತ್ತಲಾ ।
ತಂ ತವಕಂ ಮಿಗಲ್ ಪೊರಡಲುಜ್ಜುಗಿಸಿರ್ದನಮೋಘವಿಕ್ರಮಂ ॥ ೫ ॥

ತಮ್ಮನಹ ಬುಕ್ಕನಾಗಳ್ ।
ತಮ್ಮವರೊಡಗೂಡಿ ಸಂತಸಂ ಮಿಗೆ ಬಂದಂ ॥
ತಮ್ಮರೊಳ್ತಮ್ಮಯ ಮಾ ।
ತಮ್ಮನ್ನಿಸಲಾಗೆ ಜನರೊಳಿರೆ ಸಂಬಂಧಂ ॥ ೬ ॥

ಬಿಗಿದುಟ್ಟರ್ಕಾಸೆಯಂ, ಮೇಣ್ಬಿಗಿಯ ಕವಚಮಂ ತೊಟ್ಟರೋರೋರ್ವರುಂ
ಮಂ ।
ದಿಗೆ ಪೇಳ್ದರ್ವೀರವಾಕ್ಯಂ, ಬಲೆಗಳ ಹೆಗಲಲ್ಲಿಟ್ಟರೊಂದಾಗಿ ಕೈಯೊಳ್ ॥
ಮಿಗೆ ತಾಳ್ದರ್ ಕೋಲ್ಗಳಂ, ಬಾಣಗಳ, ಧನುಗಳಂ ಕತ್ತಿಮುಂತಾದುವಂ ನೆ।
ಟ್ಟಗೆ ನಿಂತರ್ದಕ್ಷಿಣಾಶಾಧಿಪಭಟರ ವೊಲಾಗಳ್ಪುಳಿಂದಾಧಿನಾಥರ್ ॥ ೭ ॥

ಬಲುಜವದಿ ಮೃತ್ಯುದೇವತೆ ।
ನಲವಿಂ ನಾಲಗೆಯ ನೀಡಿಕೊಂಡೈದುವ ವೊಲ್ ॥
ಸುಳಿದವು ಮುಂಗಡೆ ನಾಯ್ಗಳ್ ।
ಪಲಬಗೆಯಹ ಬೇಂಟೆವಡೆವ ಹರ್ಷದೊಳಾಗಳ್ ॥ ೮ ॥

---

೩— 1 ನಾನೆ. 2 ಮಾಧವಮುನೀಂದ್ರರನ್ನು.
೪ — 1 ಘನವಾದ ಆನೇಗೊಂದಿಯ ಜನರೆಲ್ಲರಿಂದ ಹೊಗಳ್ಪಟ್ಟಂಥ.

ಕೂಗುವರೊರ್ಮೆ, ಕೇಕೆಗಳ ಹಾಕುವರೊರ್ಮೆ, ಮಹಾರ್ಭಟಂ ಮಿಗಲ್ ।
ಬಾಗುವರೊರ್ಮೆ, ಚಪ್ಪಳೆಯನಿಕ್ಕುವರೊರ್ಮೆ, ಮೃಗಂಗಳಿಕ್ಕೆಯಂ ॥
ಬೇಗದಿ ಕಾಣ್ಬರೊರ್ಮೆ, ಬಡಿಕೋಲ್ಗಳಿನಿಟ್ಟಪರೊರ್ಮೆ, ಪಕ್ಕದೊಳ್ ।
ರೇಗುವರೊರ್ಮೆ, ಬೀಗಿದಪರೊರ್ಮೆ, ನಿಷಾದರಮಂದಹರ್ಷದಿಂ ॥ ೯ ॥

ಇದೆ ನೋ[1]ಡೆಕ್ಕಲನಿಲ್ಲಿ ತಾಂ ಕೆದರ್ದ ತಾಣಂ, ಮುಂದೆ ಬಂದೀಗ ನೋ ।
ಡಿದೆ ನೋಡೀಕಡೆ ಜಿಂಕೆ ಪೋದ ಕುರುಹಿಲ್ಲಿಂದತ್ತ ನೋಡಲ್ಲಿ ಕಾ ॥
ಣ್ಬುದು ನೋಡಾಕಡೆಗೋಡುತಿರ್ಪುದು ಶಶಂ ಕೈಮಾಡು ನೀನೀಗಳಿಂ ।
ದೊದರುತ್ತಿರ್ದಪುದಾ ಪುಳಿಂದನಿಚಯಂ ಕಾಂತಾರದೊಳ್ಸಂತತಂ ॥ ೧೦ ॥

ಬೇಡರವನಲ್ಲವೇ ಬಿಡ ।
ಬೇಡೆಲೊ ನೀಂ ಮೃಗವನತ್ತಕಡೆಗೀಗಳ್ ॥
ಬೇಡಿದರೆ ಸಿಕ್ಕದೀ ಗುರಿ ।
ಬೇಡಿಯುಗೆಯ್ ನಿನ್ನ [1]ಕೈಮೆ ಮೇಲಾಗಲ್ ॥ ೧೧ ॥

ಹೊಡೆ, ಬಡಿ, ಕಡಿ, ಜಡಿ, ಮೃಗಗಳ ।
ತಡೆ, ನಡೆ, [1]ಪುಡಿಗುಟ್ಟು ತೂರೆಯಬೇಡೆಂಬೀ ॥
ನುಡಿಗಳ ಗಡಣದ [2]ಪಡಿನುಡಿ ।
ಯಿಡಿದಿರ್ದುದು ನೋಡಲಡವಿಯೊಳ್ತುಂಬಿ ॥ ೧೨ ॥

ಕ್ಷಣದೊಳ್ಬಿದ್ದವು ಪಕ್ಷಿಗಳ್ಬಲೆಗೆ, ಸಾರಂಗಂಗಳಾ ವ್ಯಾಧರಾ ।
ಕಣೆಗಳ್ಗಂದೊಡಲಿತ್ತವೆಕ್ಕಲದ ಗುಂಪೆಲ್ಲೆಲ್ಲಿಯುಂ ಶಸ್ತ್ರದಿಂ ॥
ವ್ರಣಮಂ ಪೊಂದುತೆ ಸತ್ತುಪೋದುದು, ಶಶಂಗಳ್ಕೋಲಪೆಟ್ಟಂಗೆ ತೂ ।
ಟ್ಟನೆ ಜೀವಂಗೊಡುತಿರ್ದುವಾ ಅಡವಿಯಲ್ಲೀ ರೀತಿಯೊಳ್ಬೇಂಟೆಯೊಳ್ ॥ ೧೩ ॥

ಬಯಲಾದುವಲ್ಲಿ ಪೊದೆಗಳ್ ।
ಬಯಲಾದುವು ಗುಹೆಗಳೆಲ್ಲವುಂ ತತ್ಕ್ಷಣದೊಳ್ ॥
ಬಯಲಾದುವು ಬಿಲಗಳ್ಮೇಣ್ ।
ಬಯಲಾದುದು ನಭವುಮಂದು ಬೇಂಟೆಯ ಭರದೊಳ್ ॥ ೧೪ ॥

---

೧೦— 1 ಹಂದಿ.
೧೧— 1 ಕೈಚಳಕವು
೧೨— 1 ಪುಡಿಪುಡಿಮಾಡು. 2 ಪ್ರತಿಧ್ವನಿ.

ಇಂತಿರಲವರೊಳಗೋರ್ವನ ।
ದೆಂತೋ ಪುಲಿಯೊಂದು ಮೆಳೆಯೊಳಡಗಿಹುದಂ ॥
ತಾಂ ತಿಳಿದಾ ಹರಿಹರನಂ ।
ಸಂತಸವಡಿಸಲ್ಕೆ ತೋರ್ದನದು [1]ಬಹುದಂ ॥ ೧೫ ॥

ಅದ ಹಿಡಿಯೆಂದಟ್ಟದನು ।
ಗ್ರದ ಶುನಕನ ಹರಿಹರೊಡೆಯನಾಕ್ಷಣದೊಳ್ ॥
ಅದುಬುತದ [1]ಗಾವಸಿಂಗವು ।
ಮೆದಗೊಟ್ಟೋಡಿದುದು ಪುಲಿಯೆಡೆಗೆ ವನದೊಳ್ ॥ ೧೬ ॥

ಓಡುತಿಹ ನಾಯನಾಗಲೆ ।
ಕಾಡಿನ ಮೊಲವೊಂದು ಬಂದು ಹಿಂಗಡೆಯಿಂ ॥
ಪಾಡರಿತು ಹಿಡಿದು ಕಾಲಂ ।
ಕಾಡುತೆ ನಿಲ್ಲಿಸಿದುದೋಡುತಿಹ ನಡೆಯುಂ ॥ ೧೭ ॥

ಅದ ಕಂಡಚ್ಚರಿಯಿಂ ತಾಂ ।
ಕದಲದೆ ನೋಡುತಿರೆ ಹರಿಹರಂ, ಮತ್ತೋರ್ವಂ ॥
ಸದೆದಂ ಹುಲಿಯುಂ ಕ್ಷಣದೊಳ್ ।
[1] ಮುದದೊಳ್ಪರಿಣಮಿಸಲಂದಿನಾಟಂ ಸರ್ವಂ ॥ ೧೮ ॥

ಮೊಲವುಂದು ನಾಯ ಹಿಡಿದುದ ।
ರಳವರಿಯದೆ ಹರಿಹರೊಡೆಯನದನೇ ಮನದೊಳ್ ॥
ಅಳೆದಳೆದು ನೋಡುತಲ್ಲಿಂ ।
ಪೊಳಲ್ಗೆ ಪೊರಮಟ್ಟನೆಲ್ಲ ಬೇಡರ ಜೊತೆಯೊಳ್ ॥ ೧೯ ॥

ಕೆಲವಂ ಬೇಂಟೆಯ ಕೊಲ್ಗೆ ಕಟ್ಟ ಪೆಗಲೊಳ್ಪೇತಾಡಬಿಟ್ಟರ್ದು ವೋಣ್ ।
ಕೆಲವಂ ಬಂಡಿಯೊಳಿಟ್ಟು ಭಾಪು! ಮಝು!! ಎಂದಾರ್ದೆಲ್ಲರುಂ ಕೂಗುತಂ॥
ನಲವಿಂ ಪಾಡುತೆ ಸೊರ್ಕಿನಿಂ ತವುಟವುಂ ಭೋರ್ಗೈಸುತಂ ನರ್ತಿಸು ।
ತ್ತೊಲೆದಾಡುತ್ತ ಪುರಕ್ಕೆ ಬಂದುದು ಕಿರಾತಾನೀಕಮುತ್ಸಾಹದಿಂ ॥ ೨೦ ॥

---

೧೫— 1 ಆ ಹುಲಿಯು ಬೇಟೆಗಾರರ ಮೇಲೆ ಬೀಳುವದಕ್ಕೆ ಬರುವಂತಿರುವದನ್ನು.

೧೬— 1 ಗ್ರಾಮಸಿಂಹ (ನಾಯಿ).

೧೮— 1 ಹುಲಿಯ ದೆಸೆಯಿಂದ ಯಾರಿಗಾದರೂ ಗಾಸಿಯಾಗಿ ಅಂದಿನ ಬೇಂಟೆಯ ಉತ್ಸಾಹಕ್ಕೆ ಕೊರತೆ ಬರದಂತೆ ಎಲ್ಲವೂ ಸಂತೋಷದಲ್ಲಿಯೇ ಮುಗಿಯಲು.

ಅಂತಾ ಪೊಳಲಂ ಪುಗುವುದರ್ಕೆ ಕಿರಿದುಂ ಮುನ್ನಮೆ—

ಇದಿರೊಳೆ ಕವಿದತ್ತು ನೋಡೆ ಕೆಂಧೂ ।
ಳಿದು ನಿಜಮಾಗಿಹ ರಕ್ತವೃಷ್ಟಿಯೋ ಮೇ ॥
ಣಿದು ಮುಗಿಲಿಗಡರ್ದ ಬೆಂಕಿಯೋ ಪೇ ।
ಳಿದು ಜನಹಾನಿಯ ಚಿಹ್ನೆಯೇನೊ ಎಂಬೊಲ್ ॥ ೨೧ ॥

ಧಡ ಧಡ ಧಡ ಶಬ್ದಂ ದೂರದಲ್ಲಿರ್ದೊಡಂ ತಾಂ ।
ಗಡ ಗಡ ಗಡ ಪೃಥ್ವೀಕಂಪಮಾಗಿರ್ದುದಾಗಳ್ ॥
ತಡೆಯಲರಿಯೆನಿಂತೀಭಾರಮಂ ತಾನೆನುತ್ತಂ ।
ಪೊಡವಿ ತಲೆಯನಿಷ್ಟಲ್ಲಾಡಿಸುತ್ತಿರ್ಕ್ಕುಮೆಂಬೊಲ್ ॥ ೨೨ ॥

ಅನುವಿಂ ತುರುಷ್ಕದಲಮೂರ ಮುಂದೆ ತಾಂ ।
ರಣಭೇರಿಯಂ ಪೊಡೆಯಲೊರ್ಮೆ ಕೋಲಿನಿಂ ॥
ಘನಭಾರತೀಯಹೃದಯಂಗಳಲ್ಲಿ ತ ।
ಟ್ಟನೆ ಛಿದ್ರಮಾದುದಹ ಪೇಳಲೇನನಾಂ ॥ ೨೩ ॥

ಪುಲಿಬರ್ಪುದೆನುತ್ತೆ ವೇಗದಿಂ ।
ದಲಿ ಗೋಗಳ್ಮನೆಗೆಯ್ದುವಂದದಿಂ ॥
ಗೆಲೆ ಬರ್ಪರ ಭೀತಿಯಿಂ ಜನಂ ।
ಸಲೆ ಸಾರ್ತಂದುದು [1]ಜಂಬುಕೇಶನಂ ॥ ೨೪ ॥

ಇಂತು ಬರ್ಪ ದಿಲ್ಲೀಶ್ವರನಾದ ಮುಹಮ್ಮದ ತೊಗಲಕನ ಸೇನೆಯು ಬ್ಬಟೆಗಳ್ಗೆ ಬೇಡಪಡೆ ಸರಭಸದಿಂದೂರಂ ಪೊಕ್ಕು ಪದ್ಧತಿಯಂತೆ ಹರಿಹರೊಡೆಯನ ಮನೆಗೆ ಮೊದಲ ಕಾಣ್ಕೆಯಂ ಮುಟ್ಟಿಸಲ್ಕೆ ಬಂದು ಮುಂಗಡೆ ಬುಕ್ಕನರಸಿ ಹೊನ್ನಮಾಂಬೆ ದುಗುಡದಿಂದಿರ್ಪುದಂ ನೋಡಿ, ಹೆಚ್ಚು ವಿಚಾರಮಾಡುವ ಮನಃಸ್ಥಿತಿಯಿಲ್ಲದುದರಿಂ ತಮ್ಮ ಕಾರ್ಯಮಂ ತೀರ್ಚಿ ಪಾರಾಗುವ ತವಕದಿಂದೆ—

---

೨೪— 1 ಜಂಬುಕೇಶನಂ ಎಂಬ ಶಬ್ದದಿಂದ ಹುಲಿಗೆ ಹೆದರಿದವರು ನರಿಯ ಮರೆ ಹೊಕ್ಕಂತಾದುದೆಂಬ ಧ್ವನಿ ತೋರುತ್ತದೆ.

ಬೇಡಪಡೆ ಬುಕ್ಕನರಸಿಯು ।
ಪಾಡರಿಯುದೆ ಮೊದಲ ಕಾಣ್ಕೆ ಇದೆಕೊಳ್ಳೆನುತಂ ॥
ಕೊಡಿಸಿದ ಹುಲಿಯುಗುರುವಂ ।
ಕಾಡಾನೆಯ ಮುತ್ತುಗಳುಮನಿಟ್ಟಿರ್ದುದು ತಾಂ ॥ ೨೫ ॥

ಅದನೆಂತುಂ ನೋಡದೆ ಬಾ ।
ಷ್ಪದ ಭಾರದಿ ಹೊನ್ನಮೂಂಬೆ ಮಾತಾಡದಿರಲ್ ॥
ಬೆದರ್ದಾಕೆಯು ಕೇಳ್ದಂ ದುಃ ।
ಖದ ಕಾರಣಮೇನೆನುತ್ತೆ ಬುಕ್ಕಂ ಮೊದಲೊಳ್ ॥ ೨೬ ॥

ಇಂತಾ ಬುಕ್ಕಂ ತನ್ನರಸಿಯುಂ ಸಂತಯಿಸಿ ಕೇಳ್ವುದುಮಾಕೆ ಕಣ್ಣೀರನೊರೆಸಿಕೊಳ್ಳುತ್ತೆ ಗದ್ಗದಸ್ವರದಿಂದೆ—

ಹೇ ನಾಥ, ಪೌರುಷದಿ ಬಹು ।
ಮಾನವ ಪಡೆದಿರ್ಪ ನಿನ್ನ ತೋಳ ಬಲಂ ॥
ಕ್ಷೋಣಿಗುಪಯೋಗವಾಗದೆ ।
ದೀನತೆವಡೆದಿಹುದೆ ಮಾಳ್ಪುದೆನ್ನಳಲಂ ॥ ೨೭ ॥

ನಿನ್ನ ಕರವಿಡಿದ ಸತಿ ನಾ ।
ನಿನ್ನೀ ಪರಿ ಜಂಬುಕೇಶ್ವರಂ ಸಕುಟುಂಬಂ ॥
ನನ್ನಿಯೊಳನಲನೊಳಿಳಿವುದ ।
ನಿನ್ನೇಂ ನಾಂ ನೋಡಲಾರೆನದನೇನೆಂಬೆಂ ॥ ೨೮ ॥

ಅರಸನ ದುರ್ದಶೆಯುಂ ಕೇ ।
ಳ್ದುರುಭರದಿಂದೆನ್ನ ಮನವ ಸುಡುತಿಹ ಕಿಚ್ಚಂ ॥
ಅರಿಗಳ ಬಡಿದಾಂಸಲೇ ।
ಕಿರಿಸನೊ ಹರಿಯೆನ್ನ ತೋಳ್ಗಳೊಳಗೇ ಕೆಚ್ಚಂ ॥ ೨೯ ॥

ಹಿಮಕರನ ವಂಶಜಲಧಿಗೆ ।
ಹಿಮಕರನಹ ನಿನ್ನ ಪಾಣಿಯುಂ ಪಿಡಿದುಂ ॥
ಹಿಮಕೆ ರವಿಯುಂತೆ ತಾಪವ ।
ನಮಮಾ! ವಸುಮತಿಯೊಳೀಗ ನಾಂ ಪಡೆದೆಂ ॥ ೩೦ ॥

ಪಾಂಡವಸಂಬಂಧದ ನೀಂ ।
ಗಂಡನಿರಲ್ಸ್ತ್ರೀಸಮಾಜರಕ್ಷಣೆಯುಂ ॥
ಕಂಡರಿಯದಾದೆನಲ್ಲದೆ ।
ಕಂಡೆಂ ಹಾಳಾದ [1]ಹಸ್ತಿನಾವತಿಯುಂ ॥ ೩೧ ॥

ಯದುವಂಶಜವರ ವೀರನ ।
ಮದುವೆಯ ಪಡೆದಿರ್ಪ ಮಡದಿಯೊಂದೆನಿಸಿರೆಯುಂ ॥
ಇದಿರಾಗುವ ಧರ್ಮಾಂಧರ ।
ಸದೆದುದ ನಾಂ ಕಾಣಲಿಲ್ಲ ಪೊರೆಯಲ್ಧರೆಯಂ ॥ ೩೨ ॥

ಸಂದೋರ್ಪುದೆ ನಿಮಗಿದು ಕೇ ।
ಸರಿ ತಾನೇ ಶುನಕನೆನಿಸಿಕೊಳ್ವುದು ನೋಡಲ್ ॥
ಸರಿಯಿಲ್ಲದ ಬಲಮಿರ್ದುಂ ।
ಸರಿಯೇ ನೀಂ ಕುರುಬನೆನಿಸಿಕೊಳ್ವುದು ನಾಡೊಳ್ ॥ ೩೩ ॥

[1]'ಹೊಯ್, ಸಳ್' ಎನುತಲೆ ಹುಲಿಯಂ ।
ಹೊಯ್ಸಿರ್ದ ಸಮರ್ಥನಾದ ಗುರುವಿರ್ದ ॥
ಹೊಯ್ಸಳನಾಗಿರುತರಿಗಳ ।
ಹೊಯ್ಯುವ ಗುರುವಿಂದೆ ಪಡೆಯದಿಹೆ ಬಿರುದ ॥ ೩೪ ॥

ವರ [1]ಚಂದ್ರಹಾಸಮುಖರಿಂ ।
ಪರತರ ಧರ್ಮಾಭಿವೃದ್ಧಿಯಾದೀ ನಾಡೊಳ್
ನೆರೆ [2]ಚಂದ್ರಹಾಸಮುಖದಿಂ ।
ಪರಿಕಿಸೆ ಮೇಣ್ಧರ್ಮಹಾನಿಯಾದಪುದೀಗಳ್ ॥ ೩೫ ॥

---

೩೧— 1 ಆನೆಗೊಂದಿಯನ್ನು.

೩೪— 1 ಒಬ್ಬ ಗುರು ಮುಂದೆ ಬರುತ್ತಿರುವ ಹುಲಿಯನ್ನು ನೋಡಿ ಸಳನೆಂಬ ತನ್ನ ಶಿಷ್ಯನನ್ನು ಕುರಿತು 'ಹೊಯ್, ಸಳ್' ಎಂದನಂತೆ. ಸಳನು ಒಡನೆ ಗುರ್ವಾಜ್ಞೆಯಂತೆ ಅದನ್ನು ಹೊಯ್ದನಂತೆ. ಇದರಿಂದ ಅವನ ಮನೆತನಕ್ಕೆ 'ಹೊಯ್ಸಳ' ಎಂದು ಹೆಸರಾಯಿತಂತೆ ಬುಕ್ಕನು ಆ ಹೊಯ್ಸಳರ ಮನೆತನದವನಂತೆ.

೩೫— 1 ಚಂದ್ರಹಾಸ ಮೊದಲಾದ ರಾಜರ ಮೂಲಕವಾಗಿ. 2 ಕತ್ತಿಯ ಮೂಲಕವಾಗಿ.

ವಾಲಿಯು ಭಂಡಾರಂ ನಿಧಿ ।
ವೋಲಿರ್ದೀ ದೇಶದಲ್ಲಿ ವಾಸಿಸುವವರೊಳ್ ॥
ವಾಲಾಗ್ರದ ಮಾತ್ರವುಮಿಾ ।
ವೇಳೆಯೊಳಿರಬಾರದೇಕೆ ಭಾಗ್ಯಂ? ಜನರೊಳ್ ॥ ೩೬ ॥

ಕಾಮಾಂಬಾಸಂಗಮಕುಲ ।
ಕಾಮದ್ರುಮಪಂಚಶಾಖೆಯೊಳ್ಪಡುಮಿರೆ ನೀಂ ॥
ಕ್ಷಾಮಮಿರಬಹುದೆ ಧರೆಯೊಳ್ ।
ಕ್ಷೇಮಕೆ ನಿನ್ನಾಶ್ರಿತರ್ಗದೇವೇಳ್ದಪೆನಾಂ ॥ ೩೭ ॥

ಎದೆಯುಂ ತುಳಿಯಲ್ಪರ್ವ ।
ರೆದೆಯುಬ್ಬಿಸಿಕೊಂಡು ನಲಿಯುತಿರ್ಪವಸರದೊಳ್ ॥
ಎದುರಾಗಿ ಬರದ ಮೃಗಗಳ ।
ನೆದೆಗೆಡಿಸುವದಾವ ಪೌರುಷವೊ ತರತರದೊಳ್! ॥ ೩೮ ॥

ಜಯಲಕ್ಷ್ಮೀದೇವಿಯು ಜಗು ।
ಲಿಯವೋಲ್ವಿಸ್ತಾರವಾದ ನಿನ್ನೆದೆಯೊಗಳ್ ॥
ಜಯಸೂಚಕವೋ ಮೋಣ್ಪೆ ।
ರ್ದಯಶತ್ರುಗಳಡಿಗೆ ಮೆಟ್ಟಿಲೋ? ನೀನದ ಪೇಳ್ ॥ ೩೯ ॥

ನಿನ್ನಯ ಬಾಹುದ್ವಂದ್ವಕೆ ।
ಚೆನ್ನಾಗಿಹ ಬಲವ ಕೊಟ್ಟ ವಿಶ್ವಂಭರೆ ತಾಂ ॥
ಕಣ್ಣೆದುರಿಗೆ ಧೂಳಿದ್ದಿರ ।
ಲಿನ್ನುಂ ನೀಂ ಸುಮ್ಮನಿರ್ದೊಡಾದಪುದೆ ಹಿತಂ ॥ ೪೦ ॥

ಮನುಜರ್ಗಮೃತಪ್ರಾಯಮಿ ।
ದೆನಿಪಾ ಪಾಲುಕ್ಕಿ ಕೋಡಿವರಿವೀಯೆಡೆಯೊಳ್ ॥
ಜನರ ಬಲಿಯಾಗಿ ರಕ್ತದ ।
ಪೊನಲಿಡೆ ಪರಿಣಾಮಮೇನಹುದೊ ತಿಳಿ ಕಡೆಯೊಳ್ ॥ ೪೧ ॥

ಜಗಕಾದರ್ಶಮಿದೆಂದೆನೆ ।
ಝಗಝಗಿಪ ಪತಿವ್ರತಾಯಶಃಪಟಮುಂ ॥
ಜಗುಳಲ್ಸೆರೆಯಗೊಳ್ವ ।
ಜ್ಜಗಮಿದುವೇಕಾಪ್ಪರ್ಹವೆಂತು ಪೇಳ್ದಿಟಮುಂ? ॥ ೪೨ ॥

ಧರ್ಮಕ್ಕಾಗಿಯೆ ಜೀವಂ ।
ಧರ್ಮದ ಹೊರತದರವಶ್ಯಮಿಲ್ಲೆಂಬವರೊಳ್ ॥
ಧರ್ಮಂ ನೋಲುಸಿರಿಟ್ಟರೆ ।
ಧರ್ಮವೆ ಅದನುಳಿಸದಿರ್ಕುದು ನೀಂ ಮಾನವರೊಳ್ ॥ ೪೩ ॥

ಪರಮರ್ಷಿಗಳಿದ್ದೆಡೆಯಿದು ।
ಪರಸ್ಪರದ್ವೇಷಮಿಲ್ಲದಿರ್ದೆಡೆಯಿದು ತಾಂ ॥
ಪರಿಕಿಸದೊಬ್ಬರನೊಬ್ಬರ್ ।
[1] ಪರರೆಂದಿಂದಾಡೆ ದೇವಗಾಗದೆ? ವಿದಿತಂ ॥ ೪೪ ॥

ಧರೆ ಭಾರವೆನ್ನದೊಡವೋಂ ।
ಧುರವೋ ಪೇಳ್ಧರೆಯು ಹೊರೆಯು ಕೆಳಗಿಳಿಪರವೊಲ್ ॥
ಧರೆಯುವರಂ ಪೀಡಿಸೆ ಬಂ ।
ದಿರೆ ಶತ್ರುಗಳವರ ಕೇಳ್ವರಿಲ್ಲವೆ ನಿಮ್ಮೊಳ್ ॥ ೪೫ ॥

ಭಾರತಭೂಮಿಯು ಬೆಳೆಯಿಂ ।
ಭೂರಿಸುಪಕ್ವಾನ್ನಮುಂಡು ಬೆಳೆದಿರ್ಪ ॥
ಭಾರದ ಸಾಲವ ತೀರಿಸೆ ।
ಬಾರದ ಭೀರುಗಳಿಗೊಪ್ಪುವುದೆ? ದರ್ಪ ॥ ೪೬ ॥

ಹೆಂಡತಿಯುಂ ಸಂತಯಿಪಿರಿ ।
ಹೆಂಡತಿಯಿಂ ಮಾತೆ ಹೆಚ್ಚಿನವಳಲ್ಲವೆ ಪೇಳ್ ॥
ಹೆಂಡತಿಯಿಂದಿನವಳ್ಮೇಣ್ ।
ಹೆಂಡತಿಯುಂ ಪಡೆಯುಗೆಯ್ದು ತಾಯ್ಮೊದಲಿನವಳ್ ॥ ೪೭ ॥

ರಾಯನೆ ಕೇಳ್ನೀಂ ಶೌರ್ಯ ।
ಶ್ರೀಯುಂ ಹರಿಕೃಪೆಯೊಳೊಂದುಗೂಡಿರುವೈ ॥
ಆ ಯುವತಿಯು ಬಂಜೆಯು ಗೆ ।
ಯ್ದೊಯಿಳೆಯೊಳಗಪಯಃಶಸ್ಸ ನೀಂ ಪಡೆವೈ ॥ ೪೮ ॥

---

೪೪— 1 ಶತ್ರುಗಳು.

ಪ್ರಾಣಂ ಮಾನಮಿವೆರಡುಂ ।
ಕ್ಷೋಣಿಯೊಳತಿಮುಖ್ಯಮಾದೊಡಂ ನೆರೆ ನೋಡಲ್ ॥
ಪ್ರಾಣಕೆ ಜನ್ಮಾಂತರಮಿರೆ ।
ಮಾನಂ ತಾಂ ತಿರುಗಿ ಬಾರದಲ್ಲವೆ ಪೇಳಲ್ ॥ ೪೯ ॥

ಇಂತಾಕೆಯುದ್ವೇಗಯುಕ್ತಳಾಗಿ ಪೇಳಲ್—

ಕೇಳುತೆ ಕೇಳುತಾತನುರಮುಬ್ಬಿದುದೊಂದು ವಿನೂತ್ನಶಕ್ತಿಯಿಂ ।
ತೋಳ ಬಲಂ ವಿಶೇಷಮೆನಿಸಿರ್ದುದು ದೇಹಮುದೆಲ್ಲ ಕಂಪಿಸಲ್ ॥
ಪೇಳಿದನಾಗ ಬುಕ್ಕನೆಲೆ ಭಾಮಿನಿ, ಚಿತ್ತಕೆ ಬಂದುದೀಗಳೇ ।
ಊಳಿಗದಲ್ಲಿ ಕೈಯಿಡುವೆನೇಳಿದನೀಕ್ಷಿಸು ಮುಂದಿನಾಟವಂ ॥ ೫೦ ॥

ತರುಣೀಮಣಿ ಹೊರಟೆನಿಗೋ ।
ಸ್ಫುರದುಜ್ಜ್ವಲಬಾಹುಬಲವ ತೋರುತೆ ರಣದೊಳ್ ॥
ನೆರೆ ನಿನ್ನೀ ದುಃಸ್ವಪ್ನವ ।
ಪರಿಹರಿಪೆಂ ಜಯನಿನಾದದಿಂದೀಕ್ಷಣದೊಳ್ ॥ ೫೧ ॥

ಒರಸೊರಸು ಮುಖವ ಮೇಣ್ಕ ।
ಣ್ದೆರೆ, ದುಃಖಾಶ್ರುವಿನ ಕೋಡಿಯಂ ಪ್ರಿಯೆ ತಡೆ ನೀಂ ॥
ಭರದಿ ಸುಖಾಶ್ರುಗಳುಗಮುವ ।
ವಿರಚಿಪೆ ನಿನ್ನೊಳಗೆ ಚಿಂತೆಯಂ ಬಿಡಿಸುತೆ ನಾಂ ॥ ೫೨ ॥

ತೀರಿದುದು ಕೃಷ್ಣಪಕ್ಷಂ ।
ತೋರುತ್ತಿಹುದೀಗ ಶುಕ್ಲಪಕ್ಷದ ಚಿಹ್ನಂ ॥
ತೂರು ಮನದಳಲನಿನ್ನದ ।
ತಾರದೆ ಕಲ್ಪನೆಗೆ ನೋಡುತಿರು ನೀನೆನ್ನಂ ॥ ೫೩ ॥

ಕತ್ತಲೆಯ ರಾತ್ರಿ ಮುಗಿದುದು ।
ಬಿತ್ತರಿಸುತ್ತಿಹುದು ಹಗಲ ಲಕ್ಷಣಮೀಗಳ್ ॥
ಚಿತ್ತಕೆ ನಿನ್ನುಪದೇಶವ ।
ದೆತ್ತಂ ತಾಂ ಕೋಳಿಕೂಗಿದವೊಲಾಯಿತ್ತಳೆಯೊಳ್ ॥ ೫೪ ॥

ಬಲವಂ ತೋರ್ದಪೆನೀಗಳೆನ್ನ ಭುಜದೊಳ್ಳೀನೆನ್ನ ಕೈಸೇರ್ದಿಹಾ ।
ಫಲವಂ ತೋರುತೆ ನಿನ್ನ ತಾಪಶಮನಂಗೆಯ್ವೆಂ ಮಹಾಯತ್ನದಿಂ ॥
ಗೆಲವಿಂ ಪಾಂಡವಕೀರ್ತಿಯಂ ಪೊರೆದಪೆಂ, ಧೂಳೆದ್ದು ಮೇಲ್ಮೈದಿಹಾ ।
[1]ನೆಲನುಂ ಶ್ರೀಯೊಡನಿಲ್ಲಿಗೇ ತಿರುಗಿ ತಾ ಬಂದಿರ್ಪುದಂ ಕಾಣ್ಬೆನೀಂ ॥೫೫॥

ಕೆಚ್ಚಿಲ್ಲದೊಡಂ ನಿನ್ನಯ ।
ಮೆಚ್ಚಿನ ತೋಳ್ಗಳೊಳಗಂಗಳೆಂಬರನೆಲ್ಲಂ ॥
ಮುಚ್ಚುಮರಿಮಾಡಿ ಮನಸಿನ ।
ಕಿಚ್ಚೇ ಸುಟ್ಟುರುಹಬಲ್ಲದಿದ ನಾಂ ಬಲ್ಲೆಂ ॥ ೫೬ ॥

ಶಕ್ತಿಯ ಕವಿಗಳ್ಸ್ತ್ರೀಯೆಂ ।
ಬುಕ್ತಿ ಸಯುಕ್ತಿಕವೆನುತ್ತೆಯೇ ತಿಳಿದಪೆನಾಂ ॥
ವಕ್ತೃತ್ವದಿ ನೀಂ ಕೊಟ್ಟೇ ।
ಶಕ್ತಿ ಮಹತ್ಕಾರ್ಯದಲ್ಲಿ ತೊಡಗಿಪುದೆನ್ನಂ ॥ ೫೭ ॥

ಹೊನ್ನೆಂಬರ್ಜಡನಾಗಿಹ ।
ಹೊನ್ನಂ ಜನರೆಲ್ಲ ತಿಳಿಯದೆಯೆ ಅದರಿರವಂ ॥
ಹೊನ್ನಿ, ನಿನ್ನಂಥ ಹೆಣ್ಣೇ ।
[1]ಹೊನ್ನೀ ಕರ್ಣಾಟಕಕ್ಕೆನುತ್ತಾನರಿವೆಂ ॥ ೫೮ ॥

ಎಂದು ಭುಜಂಗಳಂ ಚಪ್ಪರಿಸಿ, ಹಗೆಗಳಿಗೆ ದಿಗಿಲಾಗುವಂತೆ ಹುಬ್ಬಂ ಗಂಟಿಕ್ಕಿ, ಕೆಂಗಣ್ಣನಾಗಿ ನಿಂತ ಮನೋವಲ್ಲಭನಂ ನೋಡಿ ಹೊನ್ನಮಾಂಬೆ ಮತ್ತುಂ—

ಮನದಿನಿಯನೆ ತೋಳ್ಬಲದೊಳ್ ।
ನಿನಗಾರುಂ ಜೋಡಿಯಿಲ್ಲಮಾದೊಡಮರಿಯಲ್ ॥
ಎನಗೆ ಗೆಲವೆನಿಸದದರಿಂ ।
ದೆಣೆಸಲ್ಧರ್ಮದ ಸಹಾಯಮೊಂದಿಲ್ಲದಿರಲ್ ॥ ೫೯ ॥

---

೫೫— 1 ಭೂಮಿಯು ತಿರುಗಿ ಬರುವದೆಂದರೆ ಭೂಮಿಯ ಮೇಲಿನ ಅಧಿಕಾರವು— ಅಂದರೆ ಸ್ವರಾಜ್ಯವು— ಮತ್ತೆ ತಮಗೆ ದೊರೆಯುವದೆಂದರ್ಥ

೫೮— 1 ಹೊನ್ನು+ಈ ಕರ್ಣಾಟಕಕ್ಕೆ

ಎಂದು ಕೊಟ್ಟ ಸೂಚನೆಯುನರೆಗಳಿಗೆ ಬುಕ್ಕಂ ಮನಂದಂದು ಸ್ಫೂರ್ತಿಗೊಂಡವನಾಗಿ

ಪ್ರಿಯೆ, ಕೇಳ್ನಿನ್ನಯ ವಾಕ್ಯರೂಪಮಹ ವಿದ್ಯುಚ್ಛಕ್ತಿ ತುಂಬಿರ್ಕುಮೆ ।
ನ್ನಯ ಹೃದ್ಯಂತ್ರದಿ, ನಿನ್ನ ಬೋಧನೆಯ ವಾಕ್ಛಲ್ಯಂ ಸುತೀಕ್ಷ್ಣಾಗ್ರಮೆ ।
ನ್ನಯ ಕಣ್ಣಿಳ್ಪರೆಯಿರ್ದುದಂ ತೆಗೆದು ಯುದ್ಧಕ್ಕೀಗ ಮುಂದಾಗಲೆ ।
ನ್ನಯ ದೇಹಕ್ಕರೆ ಕೀಲಕೊಟ್ಟ ತೆರನಾಯ್ತೇವೇಳ್ವೆನಾಂ ಮಾನಿನಿ ॥ ೬೦ ॥

ಮಾರಿಯದೊಂದು ಮುಂಗಡೆಯೊಳಿರ್ಪುದದಕ್ಕರೆ ಮೆಯ್ಗೊಡಲ್ಕೆ ತಾ ।
ನಾರದೊಡಾಗ ಮಾಧವಪದಾಬ್ಜವ ಪೊರ್ದಿ ಮಹಾತ್ಮರಾಗಿಹಾ ॥
ಧೀರರಿನಿಲ್ಲಿ ದೀನತೆಯ ನೀಗಿಸಿ ಗೆಯ್ದು ನವೀನರಾಜ್ಯಮಂ ।
ಭಾರತಮಾತೆಯಂ ಸಲಹಿ ಸಂತಯಿಪೆಂ ನೆರೆ ನಿನ್ನ ರೀತಿಯಂ ॥ ೬೧ ॥

ಇಂತು ಸತಿಯನೊಡಂಬಡಿಸಿದಿಂಬಳಿಯಂ ಅಣ್ಣನನುದ್ದೇಶಿಸಿ—

ಅಣ್ಣಾ ಕತ್ತಿಗೆ ಕೈಯ ನೀಡು ಭರದಿಂ ಪೋಗಲ್ಕೆ ಯುದ್ಧಕ್ಕೆ, ಮೇ ।
ಣಿನ್ನಾ ಧರ್ಮವಿಘಾತಕವ್ರಜಮನೆಂತುಂ ಹಿಂದಕಟ್ಟಲ್ಕೆ, ಬಲ್ ॥
ಬಣ್ಣಂಗುಂದಿದ ಧರ್ಮದೇವತೆಯುಮಂ ಸಂರಕ್ಷಿಸಲ್ದೇಶದೊಳ್ ।
ಬನ್ನಂದೋರದ ರೀತಿಗೆಯ್ಯೆ, ಋಣಮಂ ತೀರ್ಚಲ್ಕೆ ಭೂದೇವಿಯಾ ॥ ೬೨ ॥

ಇಂತವನಣ್ಣನನೊಡಗೊಂಡು ಆನೆಯಗೊಂದಿಯರಸನಾದ ಜಂಬುಕೇಶ್ವರನ ಬಳಿಗೈತರಲವನವರಂ ಕಂಡು—

ಬನ್ನಿರಿ ಬನ್ನಿರೀಗ ನಮಿಪೆಂ ನಿಮಗೀಗಿನ ಕಷ್ಟಕಾಲದೊಳ್ ।
ಮನ್ನಿಸುತೆನ್ನ ಬಂದಿಹಿರಿ ಯುದ್ಧದ ಸಿದ್ಧತೆಯಿಂದ ಸತ್ತ್ವಸಾ ॥
ಪನ್ನತೆದೋರಿ ನಾಡಿಗರ ಸೌಖ್ಯವ ರಕ್ಷಿಪ ಚಿಂತೆಯಿಂದ ಹಾ! ।
ಎನ್ನಯ ಫಾಲದೊಳ್ಬರೆಯಲಿಲ್ಲಕಟಾ! ವಿಧಿ ನಿಮ್ಮ ರೀತಿಯಂ ॥ ೬೩ ॥

ಕರೆಯಲ್ಕಳುಹುವ ಮುನ್ನಮೆ ।
ಕರೆಯಲ್ಬಂದಿರ್ಪಿರೆನ್ನ ಯುದ್ಧಕೆ ನೀವೇ ॥
ಕುರುಹಿದು ನಿಮ್ಮಯ ಶೌರ್ಯಕೆ ।
ಕೊರತೆಯೆ ನಿಮ್ಮನ್ನರಾಗಲೆಲ್ಲತರ್ಕಾವೇ ॥ ೬೪ ॥

ನಿಮ್ಮ ಹಡೆದಿರ್ಪ ನಾಡೊಳ್ ।
ನೆಮ್ಮದಿಯುಂ ಪಡೆಯದಿರದು ಜನವೆಲ್ಲಂ ॥
ನಿಮ್ಮಭ್ಯುದಯುವ ಕಂಡಾ ।
ನಿಮ್ಮಡಿಸುಖಿಯುಪ್ಪ ಭಾಗ್ಯವೆನಗಿಲ್ಲಂ ॥ ೬೫ ॥

ನೆರೆಯಲ್ಲಿರ್ಪರಸರ್ಕಳೆಲ್ಲ ನೆರವಾಗಲ್ಕೊಪ್ಪದಿರ್ಪತುರರು ।
ಷ್ಕರ ಶಸ್ತ್ರಾಹತಿಯಿಂದ ನೊಂದ ಸುಭಟರ್ನಿಸ್ತ್ರಾಣರಾಗಿರ್ದಪರ್ ॥
ನೆರೆ ನೋಡುತ್ತಿರಲೀಗ ಬಂದ ಪಡೆ ಪಾರಾವಾರದಂತಿರ್ಕುಮಿಂ ।
ತಿರೆ ಯುದ್ಧಂ ತರವಲ್ಲವೆಂದೆನೆಗೆ ತೋರುತ್ತಿರ್ಕುಮೇಗೆಯ್ದೊಡಂ ॥ ೬೬ ॥

ಅಪಜಯುವೆ ತೋರುತಿರಲಿಂ ।
ತಪಾಯಕರಳಾದ ಯುದ್ಧದೇವತೆಗೆ ॥
ಅಪರಿಮಿತ ಜನರ ಬಲಿಗೊ ।
ಟ್ಟಪಕಾರವ ಮಾಡಲಾರೆ ನಾಂ ನಿಮಗೆ ॥ ೬೭ ॥
ಪರಿಭವವ ಸಹಿಸಿ ಜೀವಿಪ ।
ಪರಿಯೊಲ್ಲದೆ ವಹ್ನಿಯುಂ ಪ್ರವೇಶಿಸುತೀಗಳ್ ॥
ಪರಲೋಕಕ್ಕೈದಿ ಪೇಳ್ವೆಂ ।
ಪರಮಾತ್ಮಗೆ ಕರುಣೆಯುಣ್ಮಲೀಗೆಮ್ಮವರೊಳ್ ॥ ೬೮ ॥

ಎಂದು ಜಂಬುಕೇಶ್ವರಂ ತನ್ನ ಹೆಂಡತಿಯುಂ ಪನ್ನೊಂದು ಮಕ್ಕಳುಮಂ ಸೊಸೆಯರುಮಂ ಕೂಡಿಕೊಂಡು ಯಜ್ಞನಾರಾಯಣಂಗೆ ಸಜೀವ ಪೂರ್ಣಾಹುತಿಯುಂ ಕುಡಲುಜ್ಜುಗಿಸಲ್ ಬುಕ್ಕಂ ತಡೆದು—

ನಿನ್ನನ್ನವ ನಾವೆಲ್ಲರು ।
ಮಿನ್ನೆವರಂ ತಿಂದು ನಿನ್ನನೀಪರಿಯುಳಿಯಲ್ ॥
ಮನ್ನಿಪನೆ ದೇವನೆಮ್ಮಂ? ।
ಚೆನ್ನಾಗುವದೆಲ್ಲರಳಿಯೆ ನಿನ್ನಯ ಜೊತೆಯೊಳ್ ॥ ೬೯ ॥

ಎಂದು ತಾನುಂ ಸನ್ನದ್ಧನಾಗೆ ಜಂಬುಕೇಶ್ವರಂ—

ಎಲೆ ವೀರಾಗ್ರಣಿ, ಬೇಡ ಬೇಡ, ತಡೆ ನಿನ್ನಿಂದಂ ಮಹಾಕಾರ್ಯಮಾ ।
ಗಲೆ ವೇಳ್ಕುಂ, ತಿರುಳುಂಟು ನಿನ್ನೊಳದಱಂ ನೀನೀಗ ಯಜ್ಞೇಶನೊಳ್ ॥
ಬಲಿಯಾಗಲ್ ಹಿತವಲ್ಲ ಕೇಳುಳಿದು ಮುಂದೀ ರಾಷ್ಟ್ರದೊಳ್ಸೌಖ್ಯಮಂ ।
ಬೆಳೆಸಲ್ಸಾಹಸದೋರೆ ಹರ್ಷಮೆನಗಕ್ಕುಂ ನೋಡೆ ನಿಮ್ಮೆಲ್ಲರಿಂ ॥ ೭೦ ॥

ಜನರೊಳಗೈಕ್ಯವ ಪುಟ್ಟಿಪು ।
ದೆನಗೆಂತುಮಶಕ್ಯಮಾದುದದ ನೀವೀಗಳ್ ॥
ಘನತರಯತ್ನದಿ ಸಾಧಿಸಿ ।
ಜನರ್ಗೆ ಸುಸ್ಥಿತಿಯು ಕಲ್ಪಿಪುದು ಸುಖಮಾಗಲ್ ॥ ೬೧ ॥

ನೆರೆ ನಾಂ ದೈವಾನುಗ್ರಹ ।
ವಿರಹಿತನದರಿಂದಸಾಧ್ಯಮೆನಗಾ ಕೃತ್ಯಂ ॥
ಗುರುಭಕ್ತಿಯುತರ್ನೀವುದ ।
ವಿರಚಿಸೆ ಕೈ ಹಾಕೆ ಸಾಧ್ಯಮಪ್ಪುದು ಸತ್ಯಂ ॥ ೬೨ ॥

ಪರಲೋಕದೊಳಿರುತಾಂ ನೀಂ ।
ವಿರಚಿಪ ಕಾರ್ಯಂಗಳಂ ಕುತೂಹಲದಿಂದಂ ॥
[1] ನಿರುಕಿಪೆನಾಂ ನಿಮ್ಮ ಸಹೋ ।
ದರರಂ ಬಿಟ್ಟನ್ಯರಿಲ್ಲವಿದಕದರಿಂದಂ ॥ ೬೩ ॥

ಇದ ನೀಂ ಪ್ರತಿಜ್ಞೆಗೆಯ್ದೊಡೆ ।
ಮುದದಿಂದಾಂ ಮುಗಿಪೆನೆನ್ನ ಜೀವಿತಮನೆನಲ್ ॥
ಅದ ಮೀರಲಾರದಾಗಳೆ ।
ಎದೆಯುನವರ್ತಟ್ಟುತಭಯಮಿತ್ತರ್ಭರದೊಳ್ ॥ ೬೪ ॥

ಅಲ್ಲಿಂ ಬಳಿಯುಂ ತಮ್ಮ ಪ್ರತಿಜ್ಞೆಯುಂ ಸಾಧಿಸಲಿನ್ನು ಬರಿಯ [1]ತೋಳ್ಬಲಂ ಸಾಗದೆಂದು ದಂದುಗಂಗೊಂಡು ಹೊನ್ನಮಾಂಬೆಯ ಸೂಚನೆಯುಂತೆ ದೈವಾನುಗ್ರಹದ ಸಂಪಾದನೆಯು ಪೆಂಪಂ ಮನಂಬಂದು ಅಣ್ಣನನುದ್ದೇಶ ಮಾಡಿ ಬುಕ್ಕಂ—

ಸುರನಾಥಂ ಗುರುವಿಂದೆ, ಪಾಂಡುತನಯರ್ಧೌಮ್ಯಾಖ್ಯನಿಂ, ಜಾನಕೀ ।
ವರನುಂ ನೋಡೆ ವಶಿಷ್ಠರಿಂ ಪಡೆಯುತಂ ಸ್ವಾರಾಜ್ಯಸೌಖ್ಯಂಗಳಂ ॥
ಚಿರಜೀವಿತ್ವವ ಪೊಂದಿದಂತೆ ಗುರುಕಾರುಣ್ಯೈಕಸತ್ಪಾತ್ರತಾ ।
ಭರವಂ ತಾಳ್ದು ಕೃತಾರ್ಥರಪ್ಪುದುಚಿತಂ ಬಾ ಪೋಗೆ ಶೃಂಗೇರಿಗೆ ॥ ೬೫ ॥

೬೩— 1 ನಿರೀಕ್ಷಿಸುವೆನು.

೬೫— 1 ತೋಳ+ಬಲಂ.

ನೆರೆ ನಮ್ಮ ನಾಡ ಮುಸುಕುತೆ ।
ಸುರಿಯುತ್ತಿರ್ಪೀ ಅಮಂಗಲದ ಮಂಜಂ ॥
ಗುರುವರಕಟಾಕ್ಷರವಿಯೀ ।
ಪರಿಹರಿಪನಿದರ್ಕೆ ನೋಡಲವನಂಜಂ ॥ ೭೬ ॥

ಭುಜಬಲದಿಂ ಗೆಲ್ದೊಡಮದು ।
ನಿಜದಿಂ ಜನಹಿತಕೆ ಪರಿಣಮಿಸಲಾಳಿಕೆಯೊಳ್ ॥
ಋಜುಧರ್ಮವನುಪದೇಶಿಪ ।
ನಿಜಗುರುವಿನವಶ್ಯಮೆಮಗೆ ತಪ್ಪದು ಧರೆಯೊಳ್ ॥ ೭೭ ॥

ಬರಿಯ ಭುಜಬಲದ ಯುದ್ಧದಿ ।
ತೆರತೆರದೊಳಪಾಯಮೊಂದೆ ತುಂಬಿರುತಿರ್ಕುಂ ॥
ನೆರೆ ಧರ್ಮದ ಬೆಂಬಲದಿಂ ।
ಬಿರೆ ಯುದ್ಧಮುಪಾಯದಿಂದೆ ಗೆಲವಂ ತೋರ್ಕುಂ ॥ ೭೮ ॥

ಇಂತೀರ್ವರುಂ ವಿಚಾರಮಾಡಿ ನಾಡಹಿತಕ್ಕಾಗಿ ಗುರ್ವನುಗ್ರಹಮಂ ಪಡೆವೆವೆಂದು ಪ್ರತಿಜ್ಞೆಯಂಗೆಯ್ದುಳಿದ ಯೋಚನೆಯಂ ತಂದುಕೊಳ್ಳದೆ, ಶೃಂಗಗಿರಿಯ ದಾರಿಯಂ ಹಿಡಿದೆಲ್ಲೆಲ್ಲಿಯುಂ ನಿಲ್ಲದೆ ತ್ವರೆಯಿಂ ನಡೆಯುತ್ತೆ, ಮಾರ್ಗಾಯಾಸದಿಂ ಬಿಸಿಯುಸಿರಂ ಬಿಡುತ್ತೆ, ಮೆಯ್ಬೆಮರ್ ಕೋಡಿಯಿಟ್ಟು ವಸ್ತ್ರಂಗಳುಂ ನಾಂದು ತೊಟ್ಟಿಕ್ಕುತ್ತಿರೆ, ದೇಹದ ಬೇಸರಮಂ ಲೆಕ್ಕಿಸದೆ, ಶೃಂಗಗಿರಿಯನ್ನೆಯ್ದಿ ತುಂಗಭದ್ರೆಯೊಳ್ಮಿಂದು ಮಠಕ್ಕೆ ಬರ್ಪುದರೊಳಗೇ ಶ್ರೀವಿದ್ಯಾತೀರ್ಥಸ್ವಾಮಿಗಳುಂ ಶ್ರೀಭಾರತೀಕೃಷ್ಣತೀರ್ಥರುಂ ಶ್ರೀಮಾಧವಾರ್ಯರುಂ ಪ್ರಾತರನುಷ್ಠಾನಂಗಳಂ ಮುಗಿಸಿ ಆತ್ಮವಿಚಾರದೊಳ್ತೊಡಗಿ ಕುಳಿತಿರಲವರ್ಗೆ ಸಾಷ್ಟಾಂಗವಂದನೆಯು ಗೆಯ್ದೊಡನೆ ಆ ದಾರಿಗರ್ಗಾಗಿರ್ಪ ಶ್ರಮಾಧಿಕ್ಯಮನವರ ಮುಖಭಾವದಿಂ ಕಂಡು ಮಾಧವಾರ್ಯನವರಂ ತಮ್ಮ ಗುರುಗಳ್ಗೆ ತೋರ್ದು ಕುಳ್ಳಿರವೇಳ್ದು ಯೋಗಕ್ಷೇಮಮಂ ವಿಚಾರಿಸಿ ಭೋಜನೋತ್ತರದೊಳ್ವಿಶೇಷವಿಚಾರಕ್ಕಾಸ್ಪದಮಪ್ಪುದೆಂದು ಪೇಳ್ದು ಗುರುಗಳೊಡನೆ ಮಾಧ್ಯಾಹ್ನಿಕಕ್ರಿಯಾವಿಶೇಷಂಗಳ್ಗಾಗಿ ಮಠದತ್ತ ತೆರಳ್ದಂ.

ಹರಿಹರರೈಕ್ಯದಿನೈಕ್ಯವ ।
ಹರಿಹರದೊಳ್ತಿಳಿಯೆ ಪೇಳ್ವನೆಂದೆನಲಿಂದುಂ ॥
ಹರಿಹರನುಂ ಹರಿಹರರತ ।
ಹರಿಹರಗುರುವರನುಮೆಮ್ಮ ರಕ್ಷಿಸಲೆಂದುಂ ॥

## ಏಳನೇ ನೆಲೆ— ಮಾಧವನು ರಾಜಕಾರ್ಯಕ್ಕೊಲಿದದ್ದು.

ಶ್ರೀಶಿವನೇ, ರಿಪುಗರ್ವಾ ।
ವೇಶೋಚ್ಚಾಟನಕೃತಪ್ರತಿಜ್ಞನೆ, ಸುಮಹಾ ॥
ದೋಷಾಂಧಕಾರಹಾರಕ ।
ಭಾಸುರರವಿಶಶಿಕೃಶಾನುನಯನನೆ, ಪೊರೆ ನೀಂ ॥ ೧ ॥

ಅಂತು ಮಾಧವಂ ತನ್ನ ಕಾರ್ಯಂಗಳಂ ತೀರಿಸಿಕೊಂಡು ಗುರುಗಳೊಡನೆ ಮತ್ತೆ ಬಂದು ಕುಳಿತು ಬುಕ್ಕನನುದ್ದೇಶಿಸಿ ಬಂದ ಕಾರ್ಯಮೇನೆನಲವಂ ಕೈಜೋಡಿಸಿಕೊಂಡು ಪೇಳ್ವನದೆಂತೆನೆ—

ಗುರುದೇವನೆ, ಈಚೆಗೆಮ್ಮ ಕಷ್ಟಂ ।
ಪಿರಿದಾಗಿರ್ಪುದ ಪೇಳಲೇನನೀಗಳ್ ॥
ಗುರುವಂ ತೊರೆದಿರ್ಪವರ್ಗನಿಷ್ಟಂ ।
ದೊರೆಕೊಳ್ಳಲ್ ಲಘುವಾಗದಿರ್ಪರೇ ಪೇಳ್ ॥ ೨ ॥

ಗುರುಚರಣದ ದರ್ಶನಕ್ಕೆನುತ್ತಂ ।
ನೆರೆ ಜನರೈತರುತಿರ್ದ ದೇಶಕೀಗಳ್ ॥
ತುರುಕರ ಪಡೆಯೊಂದು ಬಂತು ಮತ್ತೇ ।
ನಿರುವೆಯ ಗೂಡಿಗೆ ಬೆಂಕಿ ಪೊಕ್ಕುದಾಗಲ್ ॥ ೩ ॥

ಘಸನಿಮುಹಮದಂ ಕೃತಾಂತನೆಂಬೊಲ್ ।
ವಸುಧೆಯ ನುಗ್ಗುತೆ ಸೋಮನಾಥದೊಳ್ತಾಂ ॥
ಎಸಗಿದ ಕೃತಿಬೀಜಮೆಮ್ಮ ನಾಡೊಳ್ ।
ಪ್ರಸರಿಸಿ ಪಣ್ತಿರುತಿಂದು ತೋರ್ಪುದೆತ್ತಂ ॥ ೪ ॥

ಮಲ್ಲಿಕಕಾಫರಂ ಸುಲಿಸಿ ಚರ್ಮವನಾ [1]ರಣವೀರರುದ್ರನಂ ।
ಕೊಲ್ಲಿಸಲಾಗಳಾ ದಲಪತಿತ್ವವ ಕೈಬಿಡುತೋರಗಲ್ಲಿನಿಂ ॥
ಮೆಲ್ಲನೆ ಬಂದು ಕಾಲ್ಮುಂದ ಕೋಳಿಗಳಂತಿರೆ ದೈನ್ಯದಿಂದ ನಾ ।
ವಿಲ್ಲಿಯೆ ನಿಂತೆಪಷ್ಟ! ಇರೆ ಬಾಯೊಳಗಕ್ಕಿಯು ಕಾಳ್ಗಳಾವಗಂ ॥ ೫ ॥

ದಿಲ್ಲಿಗೀಚೆಗೆ ಮಹಮ್ಮದನೆಂಬಂ ।
ಖುಲ್ಲನಾದ ತೊಗಲಕ್ ಜನನಾಥಂ ॥
ಎಲ್ಲ ಮಾನವರ ಜೀವವ ಕೊಂಬಂ ।
ತಿಲ್ಲಿ ಗೆಯ್ವನಹ ಬೇಂಟೆಯನಾತಂ ॥ ೬ ॥

ಜೀವನಂ ತೆಗೆದುಕೊಳ್ವ ಮನುಷ್ಯಂ ।
ಭಾವಿಸಲ್ಕೆ ನೃಪನೆಂಬುವುದಾಗಲ್ ॥
ಈ ವಸುಂಧರೆಯೊಳಾರಿಸಲೆಂತುಂ ।
ಕೋವಿದಂ ಮಹಮದಂ ನೃಪನೀಗಳ್ ॥ ೭ ॥

ದಿಲ್ಲಿಯ ಬಿಟ್ಟು ದೇವಗಿರಿ ತನ್ನಯ ಮೆಚ್ಚಿನ ರಾಜಧಾನಿಯೆಂ ।
ದೆಲ್ಲರನಿಲ್ಲಿಗೇ ಪೊರಡಿಸುತ್ತಮಶಕ್ತರ ದಾರಿಯಲ್ಲಿಯೇ ॥
ಕೊಲ್ಲಿಸುತಂ, ವಿಚಿತ್ರಮಹ ಹಿಂಸೆಯನೀಯುತವರ್ಗೆ ದುಷ್ಟರೊಳ್ ।
ಬಲ್ಲಿದನಾದವಂ ಮೆರೆದಪಂ ಮಿತಿಯಿಲ್ಲದೆ ಹುಚ್ಚನೆಂಬವೊಲ್ ॥ ೮ ॥

ಕಡೆಗೆ ಮಹಮ್ಮದಂ ಪರರ ದೇಶವನಾಶಿಸಿ ದೇಶದೇಶಕುಂ ।
ಪಡೆಗಳನಟ್ಟೆ ದೇವಗಿರಿಯೊಳ್ಬಹುಕಾಲದಿನಾಳುತಿರ್ದವಂ ॥
ಕುಡಿವಂದಾಗಳಾ [1]ಬಹವುದೀನನದೀನತೆಯಿಂ ಸ್ವತಂತ್ರದಿಂ ।
ನಡೆಯುವನಾದನಾಂ ಸಹಿಪರೋ ತಲೆವಾಗಿರೆ ಪಾರತಂತ್ರ್ಯದೊಳ್ ॥೯॥

ಧರೆಯೆಲ್ಲಂ ತನ್ನ ಭೋಗಕ್ಕೆನುತೆ ತಿಳಿದು ಸರ್ವಸ್ವಮಂ ಸೂರೆಗೊಂಬಾ ।
ನರದೈತ್ಯಂ ಬಾಯಬಿಟ್ಟಿರ್ದಖಿಲಜಗವ ನುಂಗಿರ್ದೊಡಂ ಸಾಲದೆಂದೇ ॥
ಪರರಾಜ್ಯಕ್ಕಾಸೆವಟ್ಟಿರ್ಪುದರೊಳೆ ಬಹವುದ್ದೀನನೀರೀತಿಯೊಳ್ತ ।
ನ್ನಿರವಂ ಸ್ವಾತಂತ್ರ್ಯವೆಂದಾಗಿಸೆ ತೊಗಲಕಗಿನ್ನೆಂತು ತಾಂ ಸಹ್ಯಮಕ್ಕುಂ?॥

೫ — 1 ಅವನ ಹೆಸರು ಪ್ರತಾಪರುದ್ರ.

೯ — 1 ಮಹಮ್ಮದ ಬಿನ್ ತೊಗಲಕನ ಕಡೆಯವನಾಗಿ ದೇವಗಿರಿಯಲ್ಲಿ ಬಹವುದ್ದಿನನೆಂಬುವನು ಆಳುತ್ತಿದ್ದನು. ಇಲ್ಲಿ ಅವನ ವಿಚಾರ.

ಮುಸಲರ ಪೆಟ್ಟನಿಂ ಬಸಿದ ರಕ್ತದ ಗಾಯಮುದಾರದಿರ್ನೋಡಂ ।
ಮಸಗುವ ವೈರಮಂ ಮರೆದು ಹಿಂದುಗಳೆಲ್ಲರ ಕಾವರೆಂದು ಭಾ ॥
ವಿಸಿ ಶರಣೆಂದನಾ ಬಹವುದೀನನೆ ಎಮ್ಮಯ ಜಂಬುಕೇಶಗೀ ।
ವಸುಧೆಯೊಳೆಂತೊ ಹಿಂದುಗಳ ಪೆರ್ಮೆಯುದಾರತೆ ನೋಡೆ ರಕ್ಷೆಯೊಳ್ ॥೧೧॥

ನೆರೆ ಹಿಂದುತ್ವವೆ ಸಾಕಾ ।
ಗಿರೆ ಬಹುವುದ್ದೀನಗೀಯಲಾಶ್ರಯಮಂ ॥
ಉರಿಯುವ ಗಾಯದ ಮೇಲು ।
ಪ್ಪೆರೆದೆಬ್ಬಿಸಿದಂತುಟಾಯ್ತು ಮಹಮದನಂ ॥ ೧೨ ॥

ಅಲ್ಲಿಂ ಬಳಿಯುಮೇವೇಳ್ವುದೊ!

ಎಲ್ಲಿಯುಮಾ ತುರುಷ್ಕಪಡೆಯೆಲ್ಲಿಯುಮಾಜನರೇಳ್ಗೆ, ನೋಡಲೆ ।
ಲ್ಲೆಲ್ಲಿಯುಮಾ ಜನಾಂಗದವರುಬ್ಬಟೆಯಾಜನರಾರ್ಭಟಂ, ಸಮಂ ॥
ತೆಲ್ಲಿಯುಮಾ ಮದಾಂಧಜನರೊಟ್ಟನ ಕೂಗು ವಿಶೇಷಮಾಗೆ ಮೇ ।
ಣೆಲ್ಲಿಯುಮೆಮ್ಮ ನಾಡು ಯವದೂತರ ಬೀಡೆನಿಸಿರ್ದುದೊಮ್ಮೆಗೇ ॥೧೩॥

ಎಂತಹ ಸೈನ್ಯವೆಂತಹ ಭಯಂಕರ ಸಿದ್ಧತೆ! ಹಿಂದುವರ್ಗಕಿ ।
ನ್ನೆಂತಹ ಭೀತಿಯೆಂತಹ ನಿರಾಶೆಯದೆಂತಹ ಗಾಸಿಯೋ ಜಗ ॥
ಕ್ಕೆಂತಹ ದುರ್ದಶಾಫಲವದೆಂತಹ ಕಷ್ಟದ ಕಾಲವೋ ಶಿವಾ! ।
ಎಂತಹ ಕೇಡ ತಂದೆ ಎಲೆ ತಂದೆ, ಎನುತ್ತಿಳೆಯತ್ತುದಾವಗಂ ॥ ೧೪ ॥

ಧರೆಯುಂ ಸಾಲದು ಸರ್ವಸೈನ್ಯಮಿರದೊಂದೇಕಾಲಿನಿಂ ನಿಲ್ಲೆ, ಸಾ ।
ಗರಮುಂ ಸಾಲದದೋರ್ವರ್ಗೊರ್ಕುಡಿತೆಯಂತೆಲ್ಲರ್ಗೆ ಪಾನಕ್ಕಮಂ ॥
ಬರದೊಳ್ಮಾರುತನಿರ್ಕೆ ಸಾಲದವರುಚ್ಛ್ವಾಸಕ್ಕೆನಲ್ಕಾ ತುರು ।
ಷ್ಕರ ಸೈನ್ಯಂ ರಭಸಂ ಮಿಗಲ್ಪರಿದುದಾನೇಗೊಂದಿಯುಂ ವ್ಯಾಪಿಸಲ್ ॥೧೫॥

ಗುಡಿಯಂ ಕಿಳ್ತಿಟ್ಟವಂ ಬಂದಿಹನದರೊಳಗಿರ್ಪೆಲ್ಲವಂ ಸೂರೆಗೊಂಡಾ ।
ಕಿಡುಕಂ ಬಂದಿರ್ಪನಯ್ಯೋ, ಜನರ ತಲೆಯ ಚೆಂಡಾಡುವಂ ಬಂದನಪ್ಪಾ! ॥
ಕಡಿಯುತ್ತಂ ಹಿಂದುವೆಂದಿರ್ಪವರ ಸೆಲೆಗಳಂ ಸೀವವಂ ಬಂದನೆಂದೇ ।
ಬಿಡುತಿರ್ದತ್ತಾಗ ಬಾಯಂ ಜನನಿವಹಮಹೋ ಪೇಳಲೇಂ ಕಾಲನಾಟಂ॥೧೬॥

ನೆಲವೇ ಹಡೆಯಿತೊ ಇದನೀ ।
ನೆಲದವರಿಂದುವರೆಗೆ ಗೆಯ್ದ ಪಾಪದ ಮುನ್ನೀರ್ ॥
ನೆಲೆವೆರ್ಚ್ಚಿ ತೋರ್ಪುದೋ ಜವ ।
ನೊಲವ್ರೋ ಎನೆ ತೋರ್ದುದಾ ತುರುಷ್ಕರ ಸೈನ್ಯಂ ॥ ೧೭ ॥

ನೆಲವೇ ತೆರೆ, ತೆರೆ, ಬಾಯ್ದೆರೆ, ।
ನಿಲವಿಲ್ಲೆಮಗಿಲ್ಲಿ ಪೋಪೆವಿನ್ನೆಲ್ಲಿ? ॥
ನಲವಿಲ್ಲದ ಬಾಳೀಕಿ ।
ನ್ನಿಳಿದಪೆವೆಂದೆಂಬರೆಲ್ಲ ನೆಲದಲ್ಲಿ ॥ ೧೮ ॥

ಹಡೆದಾದ ಮೇಲೆ ಹೊಟ್ಟೆಯೊ ।
ಳಡಗಿಪುದರಿಂದೆಂಬೆಯೆಂತು ಭೂದೇವಿ? ॥
ಬಿಡುಬಿಡದು ನರರ ನುಡಿ ನೀ ।
ನಿಡಬಲ್ಲವಳೆಂದರಿರೆ ಭಯಂ ತೀವಿ ॥ ೧೯ ॥

[1]ಮಡಿ, ಮಡಿಯೆಂಬಾ ಶೀಲಂ ।
[2]ಮಡಿದಿರ್ಪುದು ಪಾರ್ಶ್ವದಲ್ಲಿ ತುರುಕರ ದೆಸೆಯಿಂ ॥
ಮಡಿಮಡಿಯೆನೆ ಸಾವೆಂದಿ ।
ನ್ಮಡಿಸಿಹುದಾಬಾಲವೃದ್ಧರೊಳ್ನಿರ್ದಯೆಯಿಂ ॥ ೨೦ ॥

ಅಡಗುವದಕ್ಕೆಡೆಯಂ ಕೊಡ ।
ದಡಿಗಡಿಗಾರಯ್ದು ಕೊಂದು ಹಿಂದುಗಳ ॥
[1]ಅಡಗಂ ಬೇಯಿಸಿ ಮಾಡಿ ।
ಟ್ಟಡಿಗೆಯ ತಿನೆಗೆಯ್ದರವರ ಬಂಧುಗಳ ॥ ೨೧ ॥

ಮಹಮದನ ಸೇನೆಗೊಪ್ಪುವ ।
ಮಹೋನ್ನತಧ್ವಜಮೆನುತ್ತೆ ಹಿಂದುಗಳ ॥
ಮಹನೀಯರ ರುಂಡವನೇ ।
ಮಹಿಯೊಳ್ಭಲ್ಲೆಯೊಳೆ ಚುಚ್ಚಿ ಹಿಡಿವರಲಾ! ॥ ೨೨ ॥

---

೨೦— 1 ಒಗೆದು ಒಣಗಿಸಿದ್ದಾಗಿ ಮೈಲಿಗೆಯವರ ಸಂಪರ್ಕವಿಲ್ಲದ ವಸ್ತ್ರ. 2 ಸತ್ತಿರುವದು.

೨೧— 1 ಮಾಂಸವನ್ನು.

ತೋರನವಂ ಮಂಗಳಮಂ ।
ತೋರಣಮಾದಪುದವಂಗೆ ಹಿಂದುಗಳ ॥
ತೋರನೆಯು ಮುಂಡಮೆನಲಿಂ ।
ತೋ ರಣಮದನರಿಯೆ ಹಿಂದುಮುಂದುಗಳ ॥ ೨೩ ॥

ಮಹಾಸ್ವಾಮಿ, ಏನಂ ಪೇಳ್ವೆನದರ ಪರಿಣಾಮಮಂ! ತಪಸ್ವಿಗಳ ಮುಂಗಡೆಯೊಳ್ ಕ್ರೂರವ್ಯವಹಾರಮಂ ಬಣ್ಣಿಪುದು ತಪ್ಪೆನಿಸೀತೆಂದಾಂ ಬೆದರ್ವೆಂ; ಸಂಕ್ಷೇಪವಾಗಿ ಪೇಳಬಹುದಾದೊಡೆ—

ಪನ್ನೀರಿನಿಂದಂ ಕೆಸರಾಗುತಿರ್ದಾ ।
ಚೆನ್ನಾದ ವೀಥಿವ್ರಜಮೀಗ ನೋಡಲ್ ॥
ಕೆನ್ನೀರಿನಿಂದಂ ಕೆಸರಾಗಿ ತೋರ್ದ ।
ತ್ರಿನ್ನೇನದಂ ನೋಳ್ಪೊಡೆ ಭೀತಿಗೂಡಲ್ ॥ ೨೪ ॥

ಜನರರ್ಚನೆಗೆಯ್ದ ಕುಂಕುಮಂ ।
ಮಿನುಗಲ್ಕೆಂಪಹ ತುಂಗಭದ್ರೆ ತಾಂ ॥
ಜನರಿಂದಲಿ ಸೋರ್ವ ರಕ್ತಮೊಂ ।
ದನೆ ತಾಳ್ದಿಂತಿಹುದೀಗ ಸಂತತಂ ॥ ೨೫ ॥

ಪನ್ನೀರ ಕಾಲುವೆಗಳೇ ಪರಿಯುತ್ತಲಿರ್ಪಾ ।
ಪುಣ್ಯಪ್ರದಂಗಳಹ ವೀಥಿಯು ನೋಡಲೆಲ್ಲಾ ॥
ಕಣ್ಣೀರ ಕಾಲುವೆಗಳೇ ಪರಿಯುತ್ತೆ ತೋರ್ಪಾ ।
ಅನ್ಯಾಯಮೇ ಜನಕೆ ಕಂಡಪುದಲ್ಲದಿಲ್ಲ ॥ ೨೬ ॥

ಗುಡುಗಿದಂಬುದದಿಂದಲೆ ವಾರಿ ತಾಂ ।
ಬಿಡದೆ ಬಂದುಪುದುಂಟು ಧರಿತ್ರಿಯೊಳ್ ॥
ಗುಡುಗಿದರ್ತುರುಕರ್ ಸಲೆ ವಾರಿ ತಾಂ ।
ಬಿಡದೆ ಬಂದುದು ಹಿಂದುವ ಕಣ್ಗಳೊಳ್ ॥ ೨೭ ॥

ಮಿತಿಮೀರ್ದ ಸೈನ್ಯದುರುಭೀತಿಯಿಂದೆ ಕ ।
ಣ್ಗತಿಯಾಗಿ ಕಳ್ತಲೆಯೆ ಕಂಡೊಡಂ ಮಹಾ ॥
ದ್ಯುತಿಯುಳ್ಳ ಕತ್ತಿಗಳ ಕಾಂತಿಯಿಂ ವ್ಯವ ।
ಸ್ಥಿತದೀಪದಂತೆ ಬೆಳಕಾದುದಲ್ಲಿ ಹಾ! ॥ ೨೮ ॥

ಹರಿವ ರುಧಿರದಲ್ಲಿ ಮಿಂಚಿ ತೋರ್ಪಾ ।
ಪರಿಪರಿ ಕಲ್ಗಳನಾ ತುರುಷ್ಕನಾಥಂ ॥
ಧರೆಯಿದು ನವರತ್ನಗರ್ಭೆಯಪ್ಪಾ ।
ಪರಿಯೆನುತೀಕ್ಷಿಸಿ ಬೆಪ್ಪನಪ್ಪನಾತಂ ॥ ೨೯ ॥

ಉರಿವಗ್ನಿಯ ಶಾಖದಿಂದೆ ಕಾ ।
ಳರಳೀಳ್ದಾಚೆಗೆ ಹಾರಿ ಬೀಳ್ವವೊಲ್ ॥
ನೆರೆ ತಾಳದೆ ಪೆಟ್ಟನಾಗ ಕಾ ।
ತರದಿಂ ಸತ್ತರಪಾರಹಿಂದುಗಳ್ ॥ ೩೦ ॥

ಪತಿಯುಳಿಯಲೊಡನೆ ಹರಿದಾ ।
ಸತಿಯರ ಹಾರಗಳ ಮುತ್ತು ಮುಸುಕಿರೆ ನೆಲದೊಳ್ ॥
ಕ್ಷಿತಿಯ ವಿನಾಶವ ಸೂಚಿಸೆ ।
ಪತನಂ ಬಡೆದಿರ್ಪ ತಾರೆಯೆನಿಸಿದುದಾಗಳ್ ॥ ೩೧ ॥

ಜನಗಳಿಂದಲೆ ತುಂಬಿ ತುಳುಂಕಿಹಾ ।
ಜನಪದಂ ನೆರೆ ನೋಡಲದೆಲ್ಲಿಯುಂ ॥
ಜನರ ಭಕ್ಷಿಪ ನಾಯ್ನರಿಯೋ ಮಹಾ ।
ಜನರೆನಲ್ನಿರೆ ಮಾಳ್ಪುದು ಭೀತಿಯುಂ ॥ ೩೨ ॥

ಸುಧೆಯುಂ ಸವಿಯಲ್ಕೆ ಯೋಗ್ಯಳಾದಾ ।
ಸುಧರಾದೇವಿಯ ರೀತಿಯಾಗ ನೋಡಲ್ ॥
ಮುದವಿಲ್ಲದೆ ರಕ್ತಪಾನದಿಂ ತೋ ।
ರ್ಪುದು ತಾಂ ದೈವವ ಮೀರಲಾಗದೆಂಬೊಲ್ ॥ ೩೩ ॥

ಹುಡುಗರಗಿದು ಬಿಟ್ಟಾ ಪಣ್ಗಳಿಂ ತುಂಬಿ ತೋರ್ದಾ ।
ಪೊಡವಿಯೊಳಡಿಯೊಂದಂ ನೀಡೆ ತಾವಿಲ್ಲದಂತೆ ॥
ಇಡಿದಿಹುದು ಯಮಂ ತಾಂ ತಿಂದು ಸಾಕೆಂದುಗುಳ್ದಾ ।
ಕಡಿದ ಶಿರದ ಮುಂಡಾ ಚೆಲ್ಲಿರಲ್ ಮಾಣದಂತೆ ॥ ೩೪ ॥

ಸರಸಿಜಸುಮಗಳ್ಚೆಲ್ಲಿರ್ದು ಕಣ್ಗೆಲ್ಲಿಯುಂ ತೋ !
ರ್ಪರುಣತೆಯ ಬೆಡಂಗಂ ಪೊಂದಿದಾ ಮಾರ್ಗವೆಲ್ಲಂ ॥
ತುರುಕರ ಹತಿಯಿಂದಂ ಸತ್ತ ವೀರರ್ಕಳಿಂತುಂ ।
ಸುರಿದ ರುಧಿರದಿಂ ಕೆಂಪಲ್ಲದಿನ್ನನ್ಯವಿಲ್ಲಂ ॥ ೩೫ ॥

ಎದೆಗೊಟ್ಟರಿಗಳ್ಗೆ ಪೊಯ್ಗಳಿಂ ।
ದಿದಿರೊಳ್ನಿಲ್ವುದು ಧೈರ್ಯಮಿತ್ತಿರಲ್ ॥
ಎದೆಗೆಟ್ಟಳಿದಿರ್ಪ ಮಕ್ಕಳಿಂ ।
ದೆದೆ ಸೀಳಪ್ಪುದು ನೋಳ್ಪರಾರಯಲ್ ॥ ೩೬ ॥

ಪತಿಗಳ್ ರಣಕ್ಕೆದೆ ನೋಡುವಾ ।
ಸತಿಯರ್ಸ್ವರ್ಗವನ್ನೈದಿದರ್ ಮೊದಲ್ ॥
ಪತಿಗಳ್ಬಹ ಮುನ್ನಮೇ ಅವ ।
ರ್ಗತಿಸೌಖ್ಯಸ್ಥಿತಿಯನ್ನೆ ಕಲ್ಪಿಸಲ್ ॥ ೩೭ ॥

ತುರುಕರ ರಣಯಜ್ಞಕ್ಕಂಬು ವೀರರ್ಕಳೆಲ್ಲಂ ।
ಸರಭಸದೊಳೆ ಹೋಮದ್ರವ್ಯದಂತಾದರಾಗಳ್ ॥
ನರಪತಿ ಸತಿಪುತ್ರಾನೀಕದಿಂ ಕೂಡಿ ವೈಶ್ವಾ ।
ನರನೊಳಿಳಿದನಂದಾ ಎಲ್ಲಮುಂ ಪೂರ್ಣಮಾಗಲ್ ॥ ೩೮ ॥

ಅಳಿಗಾಲವಿನ್ನು ಬರಲಿಂತು ಪೇಳಲೇ ।
ನಿಳೆಯೆಲ್ಲಮುಂ ಮಸಣಮಾದುದೊಮ್ಮೆಗೇ ॥
ಉಳಿದಿರ್ಪರೆಂಬ ಕೆಲಂರ್ದುಮೇಂ ಫಲಂ? ।
ಕಳೆಯಿಲ್ಲದಿರ್ಪವರದೇಕೆ ಭೂಮಿಗೆ? ॥ ೩೯ ॥

ಮನೆಗಳೊಳ್ನಲಿದಾಡುವ ಮುನ್ನಿನಾ ।
ಜನರ ಸಂದಣಿ ಕಾಣಿಸದಿರ್ದೊಡಂ ॥
ಮನೆಯ ಮೇಲಿಹ ಗೂಗೆಗಳಿಂದಿನಾ ।
ಜನರೆನಲ್ಕರನಾಕಡೆ ಕಣ್ಣಿಡಂ ॥ ೪೦ ॥

ಭರತನಾಟ್ಯವ ಗೆಯ್ವುವ ಜಂಬುಕೇ ।
ಶ್ವರನ ರಾಜಗೃಹಾಂಗಣವೀಗ ತಾಂ ॥
ನೆರೆ ಪಿಶಾಚಸಮೂಹದ ನಾಟ್ಯಕೇ ।
ಭರದಿ ಗೆಯ್ದಿಹುದಾದುದು ನಿಶ್ಚಿತಂ ॥ ೪೧ ॥

ತಾಳಮೇಳಗಳ ನಾದವಾವಗಂ ।
ಕೇಳುತಿರ್ದೆಡೆಯೊಳೀಗಳಾಲಿಸಲ್ ॥
ಗೋಳೆ ತುಂಬಿ ತುಳುಕಿರ್ಪುದಾವಗಂ ।
ಕೇಳಲೊರ್ಮೆಯೆದೆ ಸೀಳಿ ಪೋಪವೊಲ್ ॥ ೪೨ ॥

ನೆನೆದರೆ ದೇಹವೇ ನಡುಗುಗುಂ, ಬಿಡದೀಕ್ಷಿಸೆ ಕಣ್ಗೆ ಕತ್ತಲೇ ।
ಘನಮೆನೆ ಮುತ್ತುಗುಂ, ಕಿವಿಯುಗೊಟ್ಟರೆ ಸೀಸವ ಕಾಸಿ ಪೊಯ್ದವೊಲ್ ॥
ಎನಿಕುಮದಿನ್ನು ಪೇಳ್ವುದಕೆ ನಾಲಿಗೆ ಸೀಳಿಯೆ ಪೋಪುದಲ್ತೆ ಹಾ! ।
ಎನಿತಿದು ದುರ್ವಿಲಾಸವೊ ವಿಧಾತನ ಕಂಡರಿಯೆಂ ಶಿವಾ! ಶಿವಾ!! ॥ ೪೩ ॥

ಇದರ್ಪುದೆ ರಾಜವೈಭವಮುದಿರ್ಪುದೆ ಧರ್ಮದ ಪೆರ್ಮೆ ಪೇಳಲಿ ।
ನ್ನಿರ್ದುದೆ ಹಿಂದುಗಳ್ಗೆ ಬಲಿದಾಶ್ರಯಮಿರ್ದುದೆ ವೀರರಿಕ್ಕೆ ಮೇ ॥
ಣಿರ್ದುದೆ ಪೇಳ್ದಯಾಪರತೆಯಿರ್ದುದೆ ಧರ್ಮಸಹಾನುಭೂತಿಯಿ ।
ಲ್ಲಿರ್ದುದೆ [1]ಲಕ್ಷ್ಮಿಯೆಂದೆನಿಸಿತೀಗ ತುರುಷ್ಕರ ದೊಡ್ಡದಾಳಿಯಿಂ ॥ ೪೪ ॥

ತನ್ನಯ ಸೃಷ್ಟಿಯಂ ಕೆಡಿಪರೀ ಪರಿ ನಿರ್ಘೃಣರೆಂದು ನೋಡಿಯುಂ ।
ಕನ್ನಡನಾಡ ಮೇಲೆ ದಯೆ ಬಾರದದೇತಕೊ ದೇವದೇವಗೀ ॥
[1]ಬನ್ನವನೀವರೊಳ್ಮನಿದು ಶಾಸನಗೆಯ್ಯನದೇಕೊ ಶಂಭು ತಾ ।
ನಿನ್ನವರಂ ವಿಭಾಡಿಸುವೊಡೆನ್ನಳವೇ [2]ಗುರುಸಾಹ್ಯಮಿಲ್ಲದೆ ॥ ೪೫ ॥

ವೇದಾಂತದೇಶಿಕರುಮಾ ಮಳಲಲ್ಲಿಡುತ್ತಂ ।
ವೇದಾಂತಪುಸ್ತಕವ, ಮಕ್ಕಳ ಕೂಡಿ ತಾಮುಂ ॥
ಆ ದೊಡ್ಡಯುದ್ಧಧರೆಯೊಳ್ಮವದಂತಿರುತ್ತಂ ।
ಈ ಧಾತ್ರಿಯೊಳ್ಬದುಕಿದರ್ ಸುಖಿಯೆಂಬನಾವಂ! ॥ ೪೬ ॥

---

೪೪— 1 ಸಂಪತ್ತು.

೪೫— 1 ಕಷ್ಟವನ್ನು. 2 ಗುರುಗಳ ಸಹಾಯವಿಲ್ಲದೆ ಅಥವಾ ಹೆಚ್ಚಿನ ಸಹಾಯ ವಿಲ್ಲದೆ.

ಹಾ! ಹಾ! ಭಾರತಮಾತೆ ಸಾರ್ಥಕಮಹೋ ಸರ್ವಂ ಸಹಾಭಿಖ್ಯೆ ನೀ ।
ನೀಹಿಂದುಪ್ರಜೆಗಳ್ವಿಶೇಷಮೆನೆ ದುಃಖಾಕ್ರಾಂತರಾಗಿರ್ದೊಡಂ ॥
ಸ್ನೇಹಾಧಿಕ್ಯದ ಮಕ್ಕಳಂ ಕಳೆದುಕೊಂಡಾ ಪಾಮರಸ್ತ್ರೀಯವೊಲ್ ।
ಮೋಹಾವೇಶದಿ ಸಾಯದಿರ್ಪುದುಳಿದೆಮ್ಮೊಭಾಗ್ಯವೆಂದೆಂಬೆನಾಂ ॥ ೪೭ ॥

ಧರೆಯೊಳ್ನಿನ್ನನುರೂಪನಾದ ಪತಿ ವೀರಸ್ವರ್ಗಮಂ ಜಂಬುಕೇ ।
ಶ್ವರನೈದಲ್ಕೆ ಪತಿವ್ರತಾಪ್ರಥಮಳೆಂದೆಂಬಾಕೆ ನೀನೀಗಳ ॥
ಬ್ಬರದಿಂ ಬಂದ ತುರುಷ್ಕ [1]ಮಲ್ಲಿಕನಬೀ ಸಂದರ್ಶನಕ್ಕಂಜುತಂ ।
ಜ್ವರದಿಂ ಪೀಡಿತಳಾಗಿ ಬಾಯ್ಬಿಡುವೆಯಾ ಕರ್ಣಾಟಮಾತೇ, ಹಿತೇ ॥ ೪೮ ॥

ಆಡಿದುದಾಟವಾಗಿಹುದು ಮಲ್ಲಿಕನೆಂದೊರೆದಾಟವೆಲ್ಲಮುಂ ।
ಹೂಡಿದುದೆಲ್ಲ ಲೆಗ್ಗೆಯಹುದಾ ನಬಿಸಾಹೆಬ ಹೂಡಿದೆಲ್ಲಮುಂ ॥
ಮಾಡಿದುದೆಲ್ಲ ಮಾಟಮೆನಿಕುಂ ನೆರೆಗೆಯ್ಯೆ ತುರುಷ್ಕನಾಜ್ಞೆಯಿಂ ।
ನೋಡುವನಾರೊ ಪೇಳ್ಮಹಮದಂ ಬಹುದೂರದ ದಿಲ್ಲಿಯಲ್ಲಿರಲ್ ॥ ೪೯ ॥

ಕಲಿಗಳೆನಿಪ್ಪರೆಲ್ಲ ಬಲಿಯಾದರಹೋ ರಣದೇವಿಗಿನ್ನು ಮಿ ।
ಕ್ಕುಳಿದವರೆಲ್ಲ ನಾಶವಡೆದರ್, ಧನಧಾನ್ಯದ ಸೂರೆಯಾಯಿತು ॥
ಜ್ಜ್ವಲಮಹ ಧರ್ಮವೆಲ್ಲಿಹುದೊ ಕಾಣದು, ಮಾನಕೆ ಬೇನೆ ಬಂತು ಮುಂ ।
ದಿಳಿಯುದು ಸರ್ವನಾಶಮಿದಕೇಂ ಗತಿಯೋ ನೆರೆ ಕಾಣೆನೇನುಮಂ ॥ ೫೦ ॥

ರಕ್ಷಿಸು ಧಾತ, ರಕ್ಷಿಸು ಜನಾರ್ದನ, ರಕ್ಷಿಸು ಶಂಭು ಶಂಕರಾ ।
ರಕ್ಷಿಸು ದೇವಿ, ರಕ್ಷಿಸು ಮಹೇಶ್ವರಿ, ರಕ್ಷಿಸು ಸೌಖ್ಯದಾಯಿನೀ ॥
ರಕ್ಷಿಸು ಲಕ್ಷ್ಮಿ, ರಕ್ಷಿಸು ಸರಸ್ವತಿ, ರಕ್ಷಿಸು ಶೋಕಹಾರಿಣೀ ।
ರಕ್ಷಿಸು ಕಾರ್ತಿಕೇಯ, ಗಣನಾಥ, ಬಿಡೌಜ, ದಿಗೀಶಮುಖ್ಯರೇ ॥ ೫೧ ॥

ಎಳೆಯುತ್ತಿರ್ದಪರಯ್ಯೊ ಮಾತೆಯನವರ್ತಾಮೆಮ್ಮ ಕಣ್ಮುಂದೆಯೇ ।
ಅಳಿಸುತ್ತಿರ್ದಪರಯ್ಯೊ ಕುಂಕುಮವನೊಟ್ಟೈಗುತ್ತೆ [1]ಕಟ್ಟಾಸರಿಂ ॥
ಸೆಳೆಯುತ್ತಿರ್ದಪರಯ್ಯೊ ಸೀರೆಯ ಮಹಾದುರ್ಮಾರ್ಗಿಗಳ್ದೇವರೇ ।
ಉಳಿಯುತ್ತಿರ್ದಪೆವಯ್ಯೊ ನೋಡಲನಿತಂ ಧಿಕ್! ಧಿಕ್! ಮಿಡೀಜನ್ಮಮಂ ॥

---

೪೮ — 1 ಆನೇಗೊಂದಿಯಲ್ಲಿ ಜಂಬುಕೇಶ್ವರನು ಅಗ್ನಿಪ್ರವೇಶ ಮಾಡಿದ ಮೇಲೆ ಮಹಮ್ಮದಬಿನ್ ತೊಗಲಕನು ಅಲ್ಲಿಯ ಆಡಳಿತಕ್ಕೆ ತನ್ನ ಕಡೆಯ ಮಲ್ಲಿಕನಬಿಯನ್ನಿಟ್ಟನು.

೫೨ — 1 ಬಹಳ ರೋಷದಿಂದ

ಸುಡುತಿರ್ದಂ ನೆರೆ ಜಂಬುಕೇಶನೊಡನಾನೀ ದೇಹಮುಂ ಬೆಂಕಿಯೊಳ್ ।
ಬಿಡುತಿರ್ದಂ ತವೆ ಜೀವಮಂ ಕದನದೊಳ್ಮಾಗಾಂತು ಧೂರ್ತರ್ಕಳಂ ॥
ಹಡೆದೀ ತಾಯ್ಗೆ ತುರುಷ್ಕಪೀಡೆ ಕಳೆಯಲ್ಕೆಲ್ಲಾ ಪ್ರತೀಕಾರಮುಂ ।
ಪಡೆದಾಂ ತೋರದೆ ಸಾಯಲಾರೆನಹಹಾ! ಹಾ! ಗೆಯ್ವೆನೇನಂ ವಿಭೋ॥೫೩॥

ಏತಕೆ ಹೊತ್ತುದೋ ಧರಣಿಯೆನ್ನನದೇತಕೆ ಕೂಳನಿತ್ತುದೋ ।
ಏತಕೆ ಶೌರ್ಯಮಿತ್ತುದೊ, ಅದೇತಕೆ ದೇಹವ ಪುಷ್ಟಿಗೆಯ್ದುದೋ ॥
ಏತಕೆ ಬುದ್ಧಿಯಿತ್ತುದೊ, ಅದೇತಕೆ ರಾಜ್ಯದ ಸೌಖ್ಯಮಿತ್ತುದೋ ।
ಏತಕದಿನ್ನುಮೆನ್ನ ಕೊಲದಿರ್ಪುದೊ ನಿರ್ಘೃಣನೆಂಬ ಕೋಪದಿಂ ॥ ೫೪ ॥

ಪುರುಷಂ ತಾನಿಹೆನೆಂಬೆನೆಂತು ಜನರೊಳ್ಮಾಂ ಶೂರನೆಂದೆಂಬೆನೆಂ ।
ತರಿಗಳ್ಸರ್ವವ ಕೊಂಡರೆಂದು ನುಡಿವೆಂ ತಾನೆಂತು, ಮೋಣ್ಮೀಸೆಯುಂ ॥
ಹುರಿಯುಂ ಗೆಯ್ದಪೆನೆಂತು ಪಾಂಡವರೊಳಾಂ ಸಂಬಂಧಿಯೆಂದೆಂಬೆನೆಂ ।
ತರಿಯಲ್ಮೋರೆಯ ತೋರೆಲಾರೆನಹಹಾ! ಇದುರ್ಗಂ ವೃತಂ ಲೋಕದೊಳ್॥

ಪುರದಲ್ಲಿರ್ದಲ್ಲರುಂ ನಾಯ್ಗಳಗಳ ಗಡಣಕ್ಕಿತ್ತಿರಲ್ತಮ್ಮನಾನೆ ।
ನ್ನಿರಕೆಂದಿನ್ನನ್ನಮುಂ ಕೊಂಡಪೆನೆ? ಪುರಜನಂ ರಕ್ತಮುಂ ಭೂತಗಳ್ಗೆಂ ।
ದೆರೆದಿರ್ಪೀ ಕಾಲದೊಳ್ನೀಗರ್ಗುಡಿವೆನೆ? ಸುಡು! ಛೀ!! ದೋಷಶಾಂತ್ಯರ್ಥ ಮೆಂದಾ ।
ಗಿರೆ ಜೀವಜ್ಯೋತಿಯಿಂದಾರತಿಯನಿಳಿಗೆ ಗೆಯ್ದಲ್ಲದೆಂತಾಂ ಕೃತಾರ್ಥಂ ||

ಇಂತೆಂದು ಮತ್ತಂ ಗುರುವಂ ಕುರಿತು—

ಉಳಿಸುವುದಾದರೆ ನೀನೇ ।
ಉಳಿಪುದು ಭೂಮಾತೆಯಿರವನಲ್ಲದೊಡೆ ॥
ಅಳಿದಪುದೆಮ್ಮಯ ಮನೆತನ ।
ಮಿಳೆಯೊಳ್ಜನರೆಣಿಸಲಪ್ಪೆ ನಾನೆ ಕಡೆ ॥ ೫೭ ॥

ಬಿನ್ನವಿಸುತ್ತಿರ್ದನಿತಂ ।
ಮಾನ್ಯಪುರೋಹಿತರೊಳಾದೆ ಕೃತಕೃತ್ಯಂ ॥
ಇನ್ನಿದು ನಿಮ್ಮ ಗುರುತ್ವದ ।
ಬಣ್ಣಕ್ಕೊರೆಗಲ್ಲೆನಿಪ್ಪುದೇ ಸತ್ಯಂ ॥ ೫೮ ॥

ಇಂತು ಗದ್ಗದಸ್ವರದಿಂದೊರೆದ ಬುಕ್ಕನ ಮಾತುಗಳೊಂದೊಂದರಿ ನೆಲ್ಲರ ಹೃದಯಮುಂ ಕರಗಿ ನೀರಾಗಿ ಪರಿತಾಪದಿಂ ಕುದಿದು ಕಣ್ಗಳ ದ್ವಾರದಿಂ ಬೆನ್ನೀರ ಬುಗ್ಗೆಯಾಗಿ ಪರಿದು ಬರುತಿರ್ಪುದೆಂಬಂತೆ ಕರ್ಣಾಟಕ ಭೂಮಾತೆಗೊದಗಿದ ದುರ್ದಶೆಯಂ ಕೇಳಿ ತಳಮುಳಂಗೊಂಡವರಾದ ಶ್ರೀ ವಿದ್ಯಾತೀರ್ಥಮಹಾಮುನಿಗಳ್ತಮ್ಮ ನೀರ್ದುಂಬಿದ ಕಣ್ಣಿಂ ದೀನದೃಷ್ಟಿಯು ನೊರ್ಮೆ ತಮ್ಮಭಿಪ್ರಾಯಸೂಚಕಮಾಗಿ ಮಾಧವಪಂಡಿತರ ಕಡೆಗೆ ತಿರುಗಿಸ ಲವರದಂ ಕಂಡು ತಲೆವಾಗಲನಿತರೊಳ್ ಮತ್ತಮವರ್ ಪ್ರಪಂಚದೊಳ ನಾಸಕ್ತರಾದ ತಮಗೇ ಇನಿತು ಪರಿತಾಪಮುಂಟಾಗಿರಲಿನ್ನು ಪ್ರಪಂಚದೊ ಳಾಸಕ್ತರಾದ ಗೃಹಸ್ಥರ ಗತಿಯೇನಾಗಿರಬಹುದೆಂದದಂ ಮನಂದಂದು ಕನಿಕರದಿಂದದರ ಪ್ರತೀಕಾರಮಂ ಗೆಯ್ಯಲೆಳಸಿ ತಮ್ಮ ಮಹತ್ತರಮಾದ ವೈರಾಗ್ಯಪ್ರಭಾವದಿಂ ಕೂಡಿದ ಸರ್ವಸನ್ನಾಹದಿಂ ತಮ್ಮ ದುಃಖಮಂ ತಮ್ಮೊಳೇ ನಿಲ್ಲಿಸಿಕೊಂಡು ಧರ್ಮಗ್ಲಾನಿಯ ಶ್ರವಣಫಲಮಾಗಿ ಕಂಪಿಸು ತಿರ್ಪ ಸ್ವರದಿಂ ಮಾಧವಪಂಡಿತರನುದ್ದೇಶಮಾಡಿ—

ಜಗನ್ಮಿಥ್ಯೆಯೆಂಬರ್ಗೆ ಪಾಡಿಂತುಟಾಗಲ್ ।
ಜಗಕ್ಕೀಗ ಬಂದಿರ್ಪ ಕೇಡಿಂದೆ ಕ್ಷುಬ್ಧಂ ॥
ಜಗಂ ಸತ್ಯಮೆಂಬರ್ಗದಿನ್ನೆಂತೊ ನೋಡಲ್ ।
ಜಗಕ್ಕೆಲ್ಲಮಂ ಪೇಳಲಿನ್ನುಂಟೆ ಶಬ್ದಂ ॥ ೫೯ ॥

ವೇದಾಂತದೇಶಿಕರ ದುಃಸ್ಥಿತಿಯಿೂಗ ನೋಡಲ್ ।
ಖೇದಾಸ್ಪದಂ ಹೃದಯದಾರಕಮಾಗಿ ತೋರ್ಕುಂ ॥
ಈ ದುಃಖಮಂ ಸುಜನಚಿತ್ತ ತುರುಷ್ಕರಿನ್ನೇ ॥
ನೀ ಧಾತ್ರಿಯೊಳ್ಸುಚಿರಮಿರ್ಪರೊ ಕಾಣೆನೇನುಂ ॥ ೬೦ ॥

ಗುರುದಕ್ಷಿಣೆಯೀವೆನೆಂದು ನೀ ।
ನೊರೆದಿರ್ದ್ದೆ ಎನಗಾಗಿ ಮಾಧವ ॥
ಸ್ಮರಿಸುತ್ತದ ಕೇಳ್ವೆನೀಗ ನಾಂ ।
ನೆರೆ ನೀಂ ತೀರಿಪುದೀಗ ಸಾಲವ ॥ ೬೧ ॥

ಯತಿಗಳ್ಗೆ ನೋಡಲೇನುಂ ।
ಪ್ರತಿಗ್ರಹಂ ಸಲ್ಲದೆಂಬ ಮಾತಿಂದಿಂದೇಂ ॥
ಕ್ಷಿತಿಯೊಳಗಿದು ತಾಂ ಯೋಗ್ಯ ।
ಪ್ರತಿಗ್ರಹಂ ಬಯಸೆ ಧರ್ಮರಕ್ಷೆಯನೆಂದುಂ ॥ ೬೨ ॥
ವೇದಾಂತದೇಶಿಕರಿಗಾದುದೆ ಎನ್ನ ಭಾಗ ।
ಕ್ಕಾದಂತೆಯೇ ತಿಳಿಯೆ ಸಂಶಯಮಿಲ್ಲವೆಂದುಂ ॥
ಆದುರ್ಮದರ್ಶಿವಿದು ಕಣ್ಣನದೊಂದನೀಗಳ್ ।
ಖೇದಕ್ಕೆ ಭಾಗಿಯೆನಿಸೆಗೆಯ್ಯರೆ ಇನ್ನುವೊಂದಂ? ॥ ೬೩ ॥

ಧರ್ಮಸ್ಥಾಪನೆಗಂತರಂಗಕುರೆ ವೈದ್ಯಂ ಮುಖ್ಯಮಲ್ತೆಂದಿಗುಂ ।
ಮರ್ಮಂ ಕೇಳ್ಬಹಿರಂಗಕೊಪ್ಪುವುಪಚಾರಂಗೆಯ್ವುದೇ ಮುಖ್ಯಮೈ ॥
ಧರ್ಮಂ ರೋಗಕೆ ಹೊಟ್ಟೆಗೌಷಧಿಯನೀವಂದಂ ನಿಜಂ ಭೂಮಿಯೊಳ್ ।
ಮರ್ಮಂ ತಾನುಪಚಾರದಿಂದಮೆ ಸಮಂತಾವ್ಯಾಧಿ ಹಿಮ್ಮೆಟ್ಟುಗುಂ ॥ ೬೪ ॥

ಫಲಬರ್ತಿಳಿವವೈದ್ಯವ ।
ಕೆಲರೇ ಅರಿದಿರ್ಪರದರ ಪಥ್ಯಗಳಿರವಂ ॥
ಸಲೆ ವೈದ್ಯಮುಮಂ ಪಥ್ಯವ ।
ನಿಳೆಯೋಳ್ನೀಂ ಬಲ್ಲೆ ತೋರು ನಿನ್ನಾ ಅರಿವಂ ॥ ೬೫ ॥

ನಿಜಬಾಹುಬಲವ ಶೂರಂ ।
ವಿಜಯಕ್ಕುಪಯೋಗಿಸದೊಡೆ ತಪ್ಪೆನಿಸುವವೊಲ್ ॥
ನಿಜಬುದ್ಧಿಬಲವ ನೀನೀ ।
ವಿಜಯಕ್ಕುಪಯೋಗಿಸದೊಡೆ ತಪ್ಪೆನಿಸದೆ ಪೇಳ್? ॥ ೬೬ ॥

[1]ಇಂತೆಂದಪ್ಪಣೆಯುಂ ಕೇಳಿ ತನ್ನ ಸಂನ್ಯಾಸದ ಬಯಕೆ ಹಿಂದುಳಿದುದೆಂದು ತೊಳಲ್ವನಂತೆ ತೋರಿದ ಮಾಧವಪಂಡಿತನಂ ಶ್ರೀ ವಿದ್ಯಾತೀರ್ಥರ್ ಮೃದುವಾತಿನಿಂ ಮನ್ನಿಸಿ ಇನ್ನು ನಿನಗೆ ಪ್ರತಿಬಂಧಕ್ಷಯವಾದುದೆಂದು ತಮ್ಮ ವರದಹಸ್ತಮನವನ ತಲೆಯ ಮೇಲಿಟ್ಟುದಲ್ಲದೆ ಮನಸ್ಸಿಂ ಸಂನ್ಯಾಸದೀಕ್ಷೆಯುಮಂ ಕೊಟ್ಟಪೆರ್ವೆಂದನುಗ್ರಹಿಸಿ ಧರ್ಮಸ್ಥಾಪನೆಯ ಬಹಿರಂಗ ಸಾಧನವಾದ ಸ್ವರಾಜ್ಯಸ್ಥಿತಿಯುಂ ನೆಲೆಗೊಳಿಸಿದಿಂಬಳಿಯುಂ ವಿದ್ಯಾರಣ್ಯ

೬೭ — 1 ಇಂತೆಂದ+ಅಪ್ಪಣೆಯುಂ·

ನಾವುದಿಂದವನಂ ಜಗದ್ಗುರುಪೀಠದೊಳ್ಪಟ್ಟಾಭಿಷೇಕಂ ಗೆಯ್ಯಲ್ವೇಳ್ಕು ಮೆಂದು ಶ್ರೀಭಾರತೀತೀರ್ಥರಾಜಜ್ಞಾಪಿಸಿ—

ಜಯವಾಗಲಿ ಮಾಧವ, ಈ ।
ಭಯದಿಂದಿಳೆ ಮುಕ್ತವಾಗಲಾನುಂ ತಪಮುಂ ॥
ನಿಯಮದಿನಾಚರಿಪೆಂ ನಿ ।
ನ್ನಯ ಯತ್ನಂ ಸಿದ್ಧಿಗೆಯ್ದೆ ಮಾಡುತೆ ಜಪಮುಂ ॥ ೬೭ ॥

ಹೀಗೆಂದು ಶ್ರೀ ವಿದ್ಯಾತೀರ್ಥಸ್ವಾಮಿನಕ್ಕೈದಲಿತ್ತ ಮಾಧವಂ ಕ್ಷಣ ಕಾಲಮೇನೋ ಮುಸುಕಿದಂತುಸಿಕನಿರ್ದು ಅಲ್ಲಿಂದೊಮ್ಮೆಗೇ—

ಬಿಸಿಲಿನ ಬೇಗೆಯಿಂ ಬಸಿಯುತಂ ಬಡವಾಗುತಲಿರ್ದ ಗಂಗೆ ತಾಂ ।
ಬಿಸಿಲಿನ ಬೇಗೆಯಿಂ ಕರಗಿ ಬಂದ ಹಿಮಾಂಬುವಿನಿಂದಲುಬ್ಬುವಂ ॥
ತಸದೃಶತಾಪದಿಂದುರೆ ನಿರಾಶೆಯೊಳಿರ್ದ ಮುನೀಂದ್ರ ಮಾಧವಂ ।
ಕೃಶತೆಯ ನೀಗುತಾಗ, ಗುರುವಾಗ್ಭರಮಂ ನೆರೆ ಪೊಂದುತುಬ್ಬಿದಂ ॥೬೮॥

ಮೊನೆಯಾದವು ಕೂದಲ್ಮೇಣ್ ।
ಮಿನುಗಿದವು ನವೀನತೇಜದಿಂದವನ ॥
ಮನಮುತ್ಸಾಹಂಗೊಂಡುದು ।
ಮನೋಜ್ಞಮೆನಿಸಿದುದು ಮೂರ್ತಿ ಮಾಧವನ ॥ ೬೯ ॥

ಆಗಳವಂ—

ಬಾ, ಹರಿಹರ, ಬಾ, ಬುಕ್ಕನೆ ।
ಆ ಹಂಪೆಯೊಳೊಲಿದು ರಾಮಸುಗ್ರೀವರ್ಗಂ ॥
ಸ್ನೇಹಂ ಸೇರಿದ ತಾಣದ ।
ನೇಹಮಿದೆಮ್ಮದು ಜಗದ್ಧಿತಕ್ಕಿರೆಮಾರ್ಗಂ ॥ ೭೦ ॥

[1] ಎಂದವರ್ಗೆ ತಾಂ ನೆರವಪ್ಪೆನೆಂದಾಶ್ವಾಸನಮನಿತ್ತು ತಾನುಂ ಸಂಧ್ಯಾದಿಕ್ರಿಯೆಯುಂ ತೀರ್ಚಲ್ನದಿಯ ಕಡೆಗೆ ತೆರಳ್ದಂ.

ಹರಿಹರರೈಕ್ಯದಿನೈಕ್ಯವ ।
ಹರಿಹರದೊಳ್ತಿಳಿಯಪೇಳ್ವೆನೆಂದೆನಲಿಂದುಂ ॥
ಹರಿಹರನುಂ ಹರಿಹರರತ ।
ಹರಿಹರಗುರುವರನುಮೆಮ್ಮ ರಕ್ಷಿಸಲೆಂದುಂ ॥

೭೧— 1 ಎಂದು+ಅವರ್ಗೆ.

## ಎಂಟನೇ ನೆಲೆ— ರಾಜ್ಯಸ್ಥಾಪನೆ.

ಶ್ರೀಶರ್ವಂ ಸ್ವಾನಂದವಿ ।
ಲಾಸದ ಮಹಿಮೆಯೊಳಿ ದನುಜರಾಟನ ಕಳೆದುಂ ॥
ಲೇಸೆನೆ ಸುರಪತಿಪದವಿಯು ।
ಪೋಷಿಸಿದವನೆಮ್ಮ ಪೊರೆಯುಲಾವಗಮುಭವಂ ॥ ೧ ॥

ಅಂತಲ್ಲಿಯ ಕ್ರಿಯಾಕಲಾಪಂಗಳಂ ತೀರ್ಚಿದ ಮಾಧವನಲ್ಲಿಂ ಪೊರಮಟ್ಟು ಶಿಷ್ಯರೊಡನೆ ಅನೇಕಗಿರಿನದಿಗಳಂ ದಾಂಟಿ ಪಂಪಾಕ್ಷೇತ್ರದ ಗಡಿಯೊಳಪೊಕ್ಕು ಸುತ್ತಲುಂ ನಿಟ್ಟಿಸಿ ನಿಟ್ಟುಸಿರಿಟ್ಟು ಹರಿಹರನ ಕಡೆಗೆ ತಿರುಗಿ ಹರಿಹರ, ನೀನಾಡಿದುದೆಲ್ಲವುಂ ದಿಟವಾಗಿರ್ಪುದು —

ದಿಕ್ಕುಗಳೆಲ್ಲ ಶೂನ್ಯಮೆನೆ ತೋರ್ಪುವು, ಕಾಡಿನ ವೃಕ್ಷಮುಗ್ನಿಯೊಳ್ ।
ಸಿಕ್ಕಿದ ರೀತಿ ಕಾಣ್ಬುದು, ನಗಂಗಳ ಶೋಭೆಯು ಮಾಸಿ ತೋರ್ಪುದೀ ॥
ಪಕ್ಕದೊಳೀ ನದೀಜಲದ ಜೀವಮ ಹಾರಿದ ರೀತಿ ತೋರ್ಪುದೈ ।
[1]ನಿಕ್ಕುವಮೀ ಪ್ರದೇಶದಳವಾರಯೆ ಬೇರೆಯ ನೋಡಲೆಲ್ಲಿಯುಂ ॥ ೨ ॥

ಅಂತಚ್ಚರಿಗೊಂಡು ಬೆರಗಾಗಿರ್ದ ಮಾಧವಮುನೀಶ್ವರನಂ ನೋಡಿ ಹರಿಹರನಾಸ್ಥಲದೊಳ್ ತನ್ನ ಬೇಂಟೆಯ ದಿನದ ವೃತ್ತಾಂತಮಂ ನೆನಪುಗೊಂಡವನಾಗಿ—

ಗುರುಗಳ ಪಾದವೆಂದಗಲ್ದುದೋ [1]ಬಿಡದಾಗಲೆ ಕೆಟ್ಟಲಕ್ಷಣಂ ।
ದೊರೆತಿಹುದಿಲ್ಲಿಗೊಮ್ಮೆ ಸಲೆ ಬೇಂಟೆಗೆ ಬಂದಿರೆ ನಾಂ ವಿನೋದದಿಂ ॥
ಸರಭಸದಿಂದೆ ತಾಂ ಹುಲಿಯುನಟ್ಟುವ ನಾಯುನೆ ಕಚ್ಚುತಂದು ಮೇ ।
ಲ್ವರಿದುದು ನೋಡಲೊಂದು ಮೊಲನೆಲ್ಲರುಮಚ್ಚರಿವಟ್ಟು ದಿಟ್ಟಸಲ್ ॥ ೩ ॥

ಇಂತೆಂದ ಹರಿಹರನ ಮಾತಂ ಕೇಳಿ ಮಾಧವಂ ಬೆರಗುಗೊಂಡು ಕ್ಷಣಕಾಲಮಾಕಾಶಮಂ ನೋಡಿ—

---

೨— 1 ನಿಜವಾಗಿ
೩— 1 ಬಿಡದೆ+ಆಗಲಿ.

ಹರಿಹರನೆ ನಿಮ್ಮ ದುರ್ದಶೆ ।
ಹರಿದುದು ರಾಜಾಧಿರಾಜನಾದಪೆ ನೀಂ ॥
ನೆರೆ ನೀಂ ನಿಲಿಸಿದಪೆ ತುರು ।
ಷ್ಕರ ವೇಗವ ಸತ್ತ್ವದಿಂದೆ ತಿಳಿದಿಹೆ ನಾಂ ॥ ೪ ॥

ಇಳೆಯು ಮೊದಲ್ಪರಾಕ್ರಮದಿ ಗೆಲ್ದದರೊಳ್ಳೆರೆ ಪಟ್ಟಗಟ್ಟುವರ್ ।
ಕಲಿಗಳದೇಂ ವಿಶೇಷಮಿದೊ ಸಾತ್ತ್ವಿಕಜೀವಿಯು ಪೆರ್ಮೆದೋರ್ದ ಸು ॥
ಸ್ಥಲದೊಳೆ ಮುನ್ನಮೋ ನಿನಗೆ ಪಟ್ಟವ ಕಟ್ಟುತೆ ಮುಂದೆ ರಾಜ್ಯಮಂ ।
ಬಲಿಸುತೆ ತೋರ್ಪೆನಾಂ ಕುಲಗುರುತ್ವಮಹತ್ತ್ವವನೆಂಟುದಿಕ್ಕಿನೊಳ್ ॥ ೫ ॥

ರಾವಣನ ಕೊಲ್ಲ ಮುನ್ನಮೆ ।
ರಾವಣನನುಜಂಗೆ ಪಟ್ಟಗಟ್ಟಿದ ಪರಿಯಂ ॥
ಈ ವಸುಧೆಗೆ ತೋರ್ದೀಗಳು ।
ಮಾವಿಭುವಿನ ಶಾಶ್ವತತ್ವಮಂ ತೋರ್ಪಡಿಪೆಂ ॥ ೬ ॥

ಎಂದು ಮೆಯ್ಯುಬ್ಬಿ ಪೇಳ್ದ ಮಾಧವನ ಮಾತಂ ಮನಂದಂದು ವ್ಯವಹಾರದೃಷ್ಟಿಯಿಂದದರೊಳ್ಕಿಂಚಿತ್ಸಂಶಯಾತ್ಮನಾದ ಹರಿಹರಂ—

ಗುರುವೇ ಪಟ್ಟವ ಕಟ್ಟುವ ।
ಪರಿಯೆಂತೋ ಕಾಣೆನೀಗಳೆನ್ನಯ ಮತಿಯೊಳ್ ॥
ಬರಗಾಲವಾಗಿ ಮಳೆಬೆಳೆ
ಬರದುದರಿಂ ಜನತೆ ತಳವ ಹಿಡಿದೀ ಸ್ಥಿತಿಯೊಳ್ ॥ ೭ ॥

ಅದಂ ಕೇಳ್ದು ಮನದೊಳಿನಿಸುಂ ಹಿಂದುಮುಂದಂ ನೋಡದೆ ಮಾಧವನಾದರದಿಂ ಹರಿಹರನಂ ನೋಡಿ ದೈವಿಕಸಾಮರ್ಥ್ಯದ ವಿಚಾರಂ ಬುದ್ಧಿಗೆ ದೂರಮಾದುದರಿನಂತಹ ಕಲ್ಪನೆಯಂ ತರಬೇಡವೆಂದು ಸೂಚನೆಯಂ ಕೊಟ್ಟು—

ಹರಿಹರ ಹೋಗು, ನಂಬಿಗೆಯ ಪೇಳ್ಮನುಜರ್ಗೆ, ವರಾಹಚಿತ್ರಮಂ ।
ಬರೆದಿಹ ಪೂರ್ವಿಕಧ್ವಜಮನೆತ್ತುತೆ, ಹಾಡುತೆ ರಾಷ್ಟ್ರಗೀತೆಯಂ ॥
ಭರದೊಳೆ ಸಾರಿ ಪೇಳ್ಜನಕೆ ಮುಂದಿನ ಮಂಗಳವಾರವೆಲ್ಲಮಿಂ ।
ದಿರೆಯ ಪದಾಬ್ಜಯುಗ್ಮಗಳುಪಾಸನೆಯಾಗೆ ವಿಶೇಷಮಾಗಿ ತಾಂ ॥ ೮ ॥

ಈ ರೀತಿಯೊಳ್ಕಟ್ಟಾಜ್ಞತಿಯಂ ಕೊಟ್ಟಾತನಂ ಕಳುಪಿ ಶ್ರೀಭುವನೇಶ್ವರಿಯ ಸನ್ನಿಧಿಯಂ ಸೇರಿ ಮುನ್ನಿನಂತುಗ್ರತಪಶ್ಚರ್ಯೆಯಂ ಸಾಧಿಸಲಾ ತಪೋಜ್ವಾಲೆಯಂ ತಡೆಯಲಾರದೆ ಬೇಗುದಿಗೊಂಡವನಂತೆ ತನ್ನಿಂ ನಿಷ್ಕಾರಣಮಾಗಿ ಮಾಧವಂಗಾಯಾಸಮಾದುದೆಂದು ತನ್ನೊಳ್ತಾನೆ ಪಶ್ಚಾತ್ತಾಪಂಗೊಂಡ ಸುರನಾಥನಿನ್ನವನಿಷ್ಟಾರ್ಥವಂ ಪೂರೈಸೆಂದು ಶ್ರೀಮಹಾಲಕ್ಷ್ಮಿಗೆ ಪೇಳಲಾಕೆಯಾ ಮಂಗಳವಾರದ ದಿನಮೆ—

ಮುನಿಪನ ಚಿತ್ತದೊಳ್ಕದಲದಂತಿರೆ ಸಿಕ್ಕಿಹುದೊಂದು, [1]ಪಾಕಶಾ ।
ಸನನೊಲಿದಾಗ ಯಾಚಿಸಿದುದೊಂದು, ಜನಾಂಗದೊಳೆಲ್ಲ ಲೋಗರುಂ ॥
ಘನಮೆನೆ ನಿಷ್ಠೆಯಿಂ ಭಜಿಪುದೊಂದಿವು ಮೂರುಮನಾಗ ನೋಡುತಾ ।
ಮುನಿಪನ ಮುಂದೆ [2]ಬಂದವನನೆಬ್ಬಿಸಿದಳ್ಬಲಿದಾ ಸಮಾಧಿಯಿಂ ॥ ೯ ॥

ಆಗಳ್—

ಕನಕರಸಂ ಸ್ವರೂಪಮನಿದೊಂದನೆ ತಾಳುತೆ ಬಂದು ನಿಂದುದೋ ।
ಜನದನುರಾಗಮೆಲ್ಲ ಕಲೆತೊಂದೆಡೆಯಲ್ಲಿರಲಿಂತು ಕಾಣ್ಬುದೋ ॥
ಮುನಿಪನ ಶಾಸ್ತ್ರಸಿದ್ಧವಹ ಮಾನಸಮೂರ್ತಿಯೆ ರೂಪುಗೊಂಡುದೋ ।
ನೆನೆವೊಡೆ ಬಾರದೆಂಬವೊಲದೇಂ ಮೆರೆದಿರ್ದುದೊ ಮೂರ್ತಿ ಲಕ್ಷ್ಮಿಯಾ ॥

ಬೆಳಗುತ್ತಿರ್ಪ ಪ್ರಕಾಶಾಂಬುವಿನೊಳೆಸೆದು ತೋರಲ್ಸಹಸ್ರಾರಪದ್ಮಂ ।
ನೆಲಸಿರ್ದಾಪೀಠದೊಳ್ತಾಳ್ದರುಣವಸನಮಂ ರತ್ನಭೂಷಂಗಳಂ ಮೇಣ್ ॥
ನಳಿನಂ ಕೈಯಲ್ಲಿ ತೋರಲ್ಬಲಿಸೆ ಕೊರಳೊಳೇಕಾವಳೀಹಾರಮಾಗಳ್ ।
ತೊಳಗುತ್ತಿರ್ದಳ್ಪ್ರಸನ್ನಾಸ್ಯದಿನಗೆಯುಗೆತಾಂ ಲಕ್ಷ್ಮಿಸಲ್ಲಕ್ಷ್ಯದಿಂದಂ॥೧೧॥

ಈ ಬಗೆಯ ಸಾಕ್ಷಾತ್ಕಾರಮಾದೊಡನೆ ಮಾಧವಂ—

ನಮಸ್ಕಾರಂ ಮಾಳ್ಪೆಂ ವರದೆ, ಶರಣೌಘಾಭಯಕರೇ ।
ಕ್ಷಮಾಶೀಲೇ, ಸಂಪತ್ಪ್ರದೆ, ಸಕಲದಾರಿದ್ರ್ಯಶಮನೇ ॥
ಅಮಂದಾನಂದಾಢ್ಯೇ ಕ್ಷಮಿಸುತಪಚಾರಾವಳಿಗಳಂ ।
ಪ್ರಮೋದಂ ಬೆತ್ತೆನ್ನಂ ಸಲಹು ಕರುಣಾಪೂರ್ಣಹೃದಯೇ ॥ ೧೨ ॥

---

೯— 1 ಪಾಕಶಾಸನಂ+ಒಲಿದು+ಆಗ. 2 ಬಂದು+ಅವನಂ.

ಬೆಳೆಯಲ್ಕೀರಮನೆ ಭೋಗಬಟ್ಟೆನೇ ।
ತಳದಲ್ಲಿ ನಿಲ್ಲೆನುತೆ ಕೂಡಿಸಿಟ್ಟೆನೇ ॥
ಖಳರಲ್ಲಿ ಪೋಗೆನುತೆ ನಿನ್ನ ಕೊಟ್ಟೆನೇ ।
ತಿಳಿಸೆನ್ನ ತಪ್ಪನೆಲೆ ದೇವಿ ನೆಟ್ಟನೆ ॥ ೧೩ ॥

ಜಡನಿಧಿಯೊಳೆ ಪುಟ್ಟಿದಾಕೆಯೆಂದೋ ।
ಜಡಜವೆ ವಾಸಕೆ ಪೀಠವಾಯಿತೆಂದೋ ॥
ಜಡಜನರೊಳಗಿರ್ಪೆಯಲ್ತೆ ಪೇಳ್ನೀಂ ।
[1] ಜಡಮಹುದೌ ಇದರರ್ಥಮೂಹಿಸಲ್ಕಾಂ ॥ ೧೪ ॥

ಇಂದಿರೆ ನಿನ್ನ ಸಮಕ್ಷದೊ ।
ಳಿಂದೊರೆದಪೆನೊಂದು ಸವಿನಯಪ್ರಾರ್ಥನೆಯುಂ ॥
ಇಂದುರವಿಕೋಟಭಾಸೇ ।
ಇಂದಿರು ನೀನೆನ್ನ ರಾಜ್ಯದೊಳಗಕ್ಕರೆಯಿಂ ॥ ೧೫ ॥

ಕ್ಷೀರಸಮುದ್ರರಾಜನೆ ಪಿತಂ, ಪುರುಷೋತ್ತಮನಾಮಧೇಯನುಮಂ ।
ಧಾರಣೆಗೆಯ್ದವಂ ಪತಿ, ಪಿತಾಮಹನೇ ಸುತನಿಂತುಟಿರ್ದೊಡಂ ॥
ನೀರಜನೇತ್ರೆ, ನೀಂ ಶರಣರಂ ಪಲಿಪಾಲಿಸದಿರ್ದೊಡಿನ್ನದೇಂ ।
ಧಾರಿಣಿಯಲ್ಲಿ ನಿನ್ನ ಕುಲಕೊಂದಪಕೀರ್ತಿಯನೀಯದಿರ್ಕುಮೋ ॥ ೧೬ ॥

ಗೋಪೀಜನನಾಯಕನಹ ।
[1] ಗೋಪಾಲನ ಪತ್ನಿಯಾದ ಮಾತ್ರಕೆ ಜಗದೊಳ್ ॥
[2] ಗೋಪಾಲಸಮಾನರ ಸಂ ।
ಗೋಪನವೇ ಕಾರ್ಯಮೆಂಬೆಯಾ ಪೇಳ್ಮನದೊಳ್ ॥ ೧೭ ॥

ಆಡಿದುದೇ ಪ್ರಮಾಣಮಹುದೀಕ್ಷಿಸೆ ಧನ್ಯತೆಗಪ್ಪುದಾಸ್ಪದಂ ।
ಪಾಡಿದುದೇ ಸುರಾಗವೆನಿಕುಂ, ನೆರೆ ಸೋಂಕೆ ಪವಿತ್ರಮಾಗಿ ಮಾ ॥
ತಾಡಿಸೆ ಭಾಗ್ಯವೇ ಮನೆಗೆ ಬಂದವೊಲಪ್ಪುದು ನಿನ್ನನುಗ್ರಹಂ ।
ಕೂಡಿರೆ ಲಕ್ಷ್ಮಿ ಪೇಳಲಳವೇಂ ಜನಮೋಹಿನಿ, ನಿನ್ನ ಮೈಮೆಯುಂ ॥ ೧೮ ॥

---

೧೪— 1 ಭಾರವಾಗುವದು (ಅಶಕ್ಯವಾಗುವದು)

೧೭— 1 ಕೃಷ್ಣನ. 2 ದನಕಾಯುವವರಿಗೆ ಸಮಾನರಾದವರ

ಕಮಲೆ ಕಮಲಾಯತಾಂಬಕಿ ।
ಕಮಲಾಲಯೆ ಕಮಲನಾಭನರ್ಧಾಂಗಿ ॥
ಕಮಲಜಜನನೀ ಬಾ ಹೃ ।
ತ್ಕಮಲದಿ ನಿಲ್ಲೌ ಸಮಸ್ತ ಶುಭಸಂಗಿ ॥ ೧೯ ॥

ವಿಷದೊಡನೆ ಹುಟ್ಟಿ ಬಂದಿಹ ।
ವಿಷಮುತ್ಸದ ಗುಣಮನೆಲ್ಲ ತೊರೆಯುತ್ತಿನ್ನೀ ॥
ವಿಷಯದೊಳಮೃತಸಹೋದರಿ ।
ವಿಷಾದಮಂ ಕಳೆದು ರಕ್ಷಿಪುದು ಮುನ್ನಂ ನೀಂ ॥ ೨೦ ॥

ಯಾಚಕನೆಂಬಂತೀಗಳ್ ।
ಯಾಚಿಸೆನಗಾಗಿ ನಿನ್ನೊಲವನಾನೀಗಳ್ ॥
ಯಾಚಿಪೆನಾನಿಂದೆಲ್ಲರ ।
ಯಾಚಕವೃತ್ತಿಯನೆ ಕಳೆದು ಸೌಖ್ಯವ ತೋರಲ್ ॥ ೨೧ ॥

ಭುವನೇಶ್ವರಿಯಾದುದರಿಂ ।
[1] ಭವನದ ಸುಖಕೊಲಿಯುಲೊಲ್ಲೆಯಲ್ಲವೆ ನೀನೀ ॥
ಭುವನಸುಖಕಾಗಿ ಬೇಳ್ಪೆಂ।
[2] ಭವನಾಶನೆ, ಒಲಿಮೆದೋಱದಲ್ಲದೆ ಬಿಡೆ ನಾಂ ॥ ೨೨ ॥

ಮಂಗಲದೇವತೆ, ನಿನ್ನಯ ।
ಹಂಗೇಂ ನೀನೆನ್ನ ಮಾತ ನಡೆಸದೊಡೆ ॥
ಮಂಗಲಮಯಿ ಶರಣಾಗತ ।
ಭಂಗವ ತಾಂ ಬಿಡಿಸಲಾರಳೆನದೆ ಬಿಡೆ ॥ ೨೩ ॥

ಜನ್ಮಂ ಮುಂದೆಲ್ಲಿಯದೋ ।
ಜನ್ಮಾದಿವಿದೂರಳಾದ ನಿನ್ನಂ ನಾನೀ ॥
ಜನ್ಮದೆ ಕಂಡಿರಲಿನ್ನೀ ।
ಜನ್ಮದೊಳೆಂತೊಲಿಯದಿರ್ಪೆಯದ ಪೇಳ್ವನನಿ ॥ ೨೪ ॥

---

೨೨— 1 ಮನೆಯ (ಒಂದು ಮನೆತನದ ಸುಖಕ್ಕಾಗಿ ಎಂದರ್ಥ). 2 ಜನ್ಮಬಂಧವನ್ನು ಕಳೆವವಳು.

ಇಂತೆಂದ ಮಾಧವನ ನುಡಿಯ ಬೆಡಂಗಂ ನೋಡಿದ ಲೋಕಮಾತೆ ಯುವಂಗೆ ತನ್ನ ಪ್ರಸನ್ನಮುಖಪಂಕಜಮಂ ತೋರ್ದಳ್—

ಧರೆಯುಮುರನೆ, ಮೆಚ್ಚಿದೆ ನಿ ।
ನ್ನಿರವಂ ನಿನ್ನಿಷ್ಟಕೀಗ ನೆರವಪ್ಪೆಂ ॥
ಕರೆವೆಂ ಸುವರ್ಣವೃಷ್ಟಿಯ ।
ನೆರೆ ನಿನ್ನಯ ಯಶವ ಹಬ್ಬಿಸದೆ ತಪ್ಪೆಂ ॥ ೨೫ ॥

ಎಂದಂತರ್ಧಾನಳಾಗಲಾ ಮಾಧವಂ ತನ್ನಿಷ್ಟಂ ಪೂರ್ಣಮಾದು ದೆಂದಮಂದಾನಂದತುಂದಿಲಾಂತಃಕರಣನಾಗಿ ಆ ಸಾಕ್ಷಾತ್ಕೃತಮೂರ್ತಿ ಯ ವೈಭವಮಂ ಮನಸ್ಸಿಗೆ ಮತ್ತೆ ಮತ್ತೆ ತಂದುಕೊಳ್ಳುತ್ತೆ ತನ್ನ ಮನಕ್ಕೆ ದಶದಿಕ್ಕುಗಳುಂ ಪ್ರಸನ್ನವಾಗಿರ್ಪುವೆಂದು ಭಾವಿಸುತ್ತಿರಲಾಗಳ್—

ಸತಿಸುತರೊಳಸಕ್ತಂ ಧ್ಯಾನಮಂ ಗೆಯ್ಯಲಿರ್ಪಾ ।
ಮತಿಯೊಳಗಿಳಿತರ್ಪಾ ಧ್ಯೇಯರೂಪಂಗಳಾವ್ರೊಲ್ ॥
ಸತತಭಜನೆಯಿಂದಂ ತುಂಬಿಹೋಗಿರ್ದ ಪಂಪಾ ।
ಕ್ಷಿತಿಗಿಳಿದವು ಮೋಡಂಗಳ್ಮುದಂ ಲೋಕಕಾಗಲ್ ॥ ೨೬ ॥

ಮಾಧವಂ ತಿರುಗಿ ಬಂದನೆನುತ್ತಂ ।
ದಾದ ಸುದ್ದಿ ಸುಖಮಂ ಮನಕೀಯಲ್ ॥
ಆ ದಿನಂ ಪುದಿದ ತಣ್ಣೆಲರೆಂತುಂ ।
ಮೋದಮಿತ್ತುದು ಸುಖಂ ತನುಗಾಗಲ್ ॥ ೨೭ ॥

ಬಗೆಯುಲಂದಿನ ಮೇಘದ ಯೋಗದಿಂ ।
ಗಗನದಲ್ಲಿಯು ಗರ್ಜನೆಯಲ್ಲದೆ ॥
ಭಗವತೀಜಯಘೋಷವಿಶೇಷದಿಂ ।
ಮಿಗೆ ಧರಾತಲಮಿತ್ತು ಸುಯೋಗದೆ ॥ ೨೮ ॥

ಹೊರಗೆ ಮಿಂಚಿದುದೊಮ್ಮೆ ಥಳಾರನೇ ।
ಧರಣಿಯೊಳ್ಬೆಳಕಾಗಲದೆಲ್ಲಿಯುಂ ॥
ಭರದಿ ಚಿತ್ತದಿ ಮಿಂಚಿತು ಪಾರ್ವನು ।
ದ್ಧರಿಪನೆಂಬುದು ತಾಂ ಜನರಲ್ಲಿಯುಂ ॥ ೨೯ ॥

ಹೊರಗಣ ರೀತಿಯುಂ ನಿರುಕಿಸುತ್ತೆ ಪತತ್ರಿಗಳೆಲ್ಲ ಗೂಡಿಗೈ ।
ತರುತಿರೆ, [1]ಮೂಸುತಿರ್ದ ಪಶುಸಂತತಿ ಮುಂದೆಮಗೊಳ್ಳಿತಪ್ಪುದೆಂ ॥
ದುರುಭರದಿಂದೆ ತಮ್ಮ ಮನೆಗೈತರೆ ದೈವವಿಪಾಕದಿಂದಲಾ ।
ತುರುಕರ ಗರ್ಭದೊ[2]ಳ್ತಳಮಳಂ ಪುದಿದಿರ್ದುದದೇಕೊ ಕಾಣೆ ನಾಂ॥೩೦॥

ಇನಿತರೊಳದುವರಂಗಿನ ಮುಸಲ್ಮಾನರ ರಾಜ್ಯಭಾರಕ್ಕೆ ಆನಂದ ಪ್ರದರ್ಶಕವಾಗಿ ಅಲ್ಲಿಯು [1]ನವಿಲ್ಗಳೆಲ್ಲ ಯಮುನೂರೊಳ್ನರ್ತನಂಗೆಯ್ಯೆ ಪೋಗಿರಲ್—

ನವಜಲದವ ನೋಡಿ ನೃತ್ಯಗೆಯ್ಯಲ್ ।
ನವಿಲುಗಳೇ ಮೃತವಾದವೆಂಬ ದುಮ್ಮಾ ॥
ನವ ಮರೆದಾಗಲಿ ನೃತ್ಯಗೆಯುದ್ದಾಗಳ್ ।
ನವಿಲವೊಲೇ ಜನಮಳ್ತಿಯಿಂದ ತಮ್ಮ ॥ ೩೧ ॥

[1] ರುಧಿರಧಾರೆಗಳಿಂದಪವಿತ್ರವಾ ।
ದುದರ ಶುದ್ಧತೆಗಾಗಿಯೆ ಈ ದಿನಂ ॥
ಪುದಿದ ಮಂಗಲಮಾರ್ಜನಮಪ್ಪುದೆಂ ।
ದುದು ಜನಂ ಮಿಗೆ ತಾಂ ನಲಿಯಲ್ಕಸಂ ॥ ೩೨ ॥

ನೆರೆ ಚಾತಕಂ ಜಲಕೆ ಬಾಯ ಬಿಟ್ಟುದಂ ।
ಧರೆ ನೋಡಲೆಂತುಮದಸಾಧ್ಯಮಾಗಿರಲ್ ॥
ನರರೆಲ್ಲ ವೃಷ್ಟಿಯನೆ ನಿಟ್ಟಿಸಿರ್ದುದಿ ।
ನ್ನರಿಯಲ್ಕೆ ತೋರ್ದುದಿಳೆಗೆಲ್ಲ ಕಾಣ್ಬವೊಲ್ ॥ ೩೩ ॥

---

೩೦— 1 ಮೂಸಿ ನೋಡುತ್ತಿರ್ದ (ಹುಲ್ಲಿಲ್ಲದ್ದರಿಂದ ದನಗಳು ಬರೀ ನೆಲವನ್ನೇ ಮೂಸಿ ನೋಡುತ್ತಿದ್ದವು). 2 ಈ ಮಳೆಯಿಂದ ಮುಂದೆ ಮುಸಲ್ಮಾನರಿಗೆ ರಾಜ್ಯಚ್ಯುತಿಯಾಗುವದರಿಂದ ಅದರ ಸೂಚನೆಯಾಗಿ ಅವರಿಗೆ ಆಗಲೇ ಅರಿವಿಲ್ಲದಂತೆ ತಳಮಳವುಂಟಾಯಿತೆಂದು ತಾತ್ಪರ್ಯ

೩೧ — 1 ನವಿಲುಗಳ ನಾಲಿಗೆಯಿಂದ ಮಾಡಿದ ಅಡಿಗೆ ಬಹು ರುಚಿಕರವಂತೆ.

೩೨ — 1 ರುಧಿರಧಾರೆಗಳಿಂದ + ಅಪವಿತ್ರವಾದುದರ.

ಬಿರುಗಾಳಿ ಬೀಸಿ ಬಹುಮೇಘಸಂಘಮಂ ।
ಬರಮಾಡಿ ತೋರ್ದ ಸಮಕಾಲದಲ್ಲಿಯೇ ॥
ಬಿರುಗಾಳಿಯಿಂ ಪರಿವ ತೂಲದಂತೆ ಮುಂ ।
ಬರಿದೋಡಿತಾ ಜನರ ದೈನ್ಯಮೆಲ್ಲಿಯೋ ॥ ೩೪ ॥

ಬರಲಾರಂಭಿಸಲಾಗಳ್ ।
ಬಿರುಮಳೆಯಾಕಾಶದಿಂದಲಾ ಜನರೆಲ್ಲಂ ॥
ಭರದಿಂದದಕಂಜುತೆ ಮುಂ ।
ಬರಿದಂ ನೆರೆ ಮುಚ್ಚಲೆಂದು ಬಾಗಿಲನೆಲ್ಲಂ ॥ ೩೫ ॥

ನೆರೆ ಭೂದೇವಿಯುನತ್ಯಾ ।
ದರದಿಂದಂ ಮೇಘರಾಜನಾಲಿಂಗಿಸಿರಲ್ ॥
ಮೊರೆವ ಮಳೆ ಹರ್ಷನಾದದ ।
ತೆರದಿಂ ಮೆರೆದಿರ್ದುದಾಗ ತಾಂ ಬಹುಪರಿಯೊಳ್ ॥ ೩೬ ॥

ಬಿಡದೊಂದು ಮುಹೂರ್ತಂ ಕ ।
ಣ್ಬಿಡೆ ಲಕ್ಷ್ಮೀದೇವಿ ಜನರ ಕನಸುಂ ಮನಸುಂ ॥
ಬಿಡಿವಾರದ ಮಳೆಯಾಗಿರೆ ।
ಬಿಡದಾದತ್ತದರ ಕೀರ್ತಿ ನಿಂತಿರಲನಿಶಂ ॥ ೩೭ ॥

ಬಯಲಾದುದು ಜನರೆಲ್ಲರ ।
ಭಯಮಲ್ಲಿಂದಾಚೆಗೆಲ್ಲ ದಿಕ್ಕುಗಳೊಳ್ ॥
ಬಯಲಾದುದು ಮೇಘಂ ನಿ ।
ರ್ಭಯತೆಯು ತಾನೀವ ಕಾರ್ಯಮದು ಮುಗಿಯಲ್ ॥ ೩೮ ॥

ಹೊರಗೆಯ್ದಿ ನೋಡೆ ಜನಕ ।
ಚ್ಚರಿಯಾದುದು ರಕ್ತದಿಂದ ನಾಂದಿರ್ದ ॥
ಧರೆಯುನುರೆ ಮೇಘರಾಜಂ ।
ಧರೆಯುವರೊಳ್ಪ್ರೀತಿಯಿಂದೆ ತೊಳೆದಿರ್ದಂ ॥ ೩೯ ॥

ಇಂತಪ್ಪನಿತರೊಳ್ ಮುಸಲ್ಮಾನರಧಿಕಾರದಸ್ತಮಂ ಸೂಚಿಪಂತೆ ಮುಚ್ಚಂಜೆಯಾಗಿರಲ್—

ಇಳಿವರ್ಕನ ಹೊಂಬಣ್ಣದ ।
ಕಳಿಗಳ್ಮಸುಕಿರ್ದ ಪಂಚಶೈಲಂಗಳ್ ॥
ಇಳೆಗೊಂದಚ್ಚರಿಯೆಂಬೊಲ್ ।
ಪೊಳೆದಿರ್ದತ್ತೈದು ಮೇರುಗಿರಿಗಳವೊಲ್ ॥ ೪೦ ॥

ಸುರಿದಾಲಿಯ ಕಲ್ಗಳ್ಗಾ ।
ತರಳರ್ಕೈ ಹಾಕುತದರ ತಳದೊಳಗೆಲ್ಲಂ ॥
ನೆರೆ ಪೊಳೆವ ಪೊನ್ನ ನಾಣ್ಯದ ।
ಪರಿಯಂ ಕಂಡೊರೆದ ಕೂಗು ತುಂಬಿದುದೆಲ್ಲಂ ॥ ೪೧ ॥

ಬೆಳೆಗಳ ಸುಗ್ಗಿಯಾಗಿ ಜನರೊಳ್ಧನಸಂಪದಮುಪ್ಪುದೆಂದೊ ಮೇ ।
ಣ್ಪೊಳೆದಿಹ ಕಲ್ಗಳಲ್ಲಿ ಮಿನುಗುತ್ತಿಹ ಚಿನ್ನದ ಕಾಂತಿಯಿಂದವೋ ॥
ಅಳತೆಗೆ ಬಾರದಷ್ಟು ನಿಧಿಯೆಲ್ಲಿಯುಮಿರ್ದುದರಿಂದವೇನೊ ಆ ।
ಮಳೆಯು ಸುವರ್ಣವೃಷ್ಟಿಯೆನುತೆಲ್ಲರುಮೊಕ್ಕಿಸಿ ಪೇಳ್ದರೆಲ್ಲಿಯುಂ ॥ ೪೨ ॥

ಇಂತೊರೆವರ ಕಲ್ಪನೆಗಳೊಳೆಲ್ಲಿ ನೋಡಿದೊಡಂ

ಶಂಕರ ದೇಶಿಕಂ ತನಗೆ ನೆಲ್ಲಿಯ ಕಾಯನೆ ಭಿಕ್ಷವೆಂದು ನಿ ।
ಶ್ಶಂಕೆಯೊಳಿತ್ತವಳ್ಗೆ ಸಲೆ ಚಿನ್ನದ ನೆಲ್ಲಿಯ ಕಾಯ್ಗಳಿತ್ತನೈ ॥
ಬಿಂಕಮನೀಗ ನೋಡು ತನಗೇನುಮನೀಯದವರ್ಗೆ ಕೊಟ್ಟಹಂ ।
ಶಂಕರಕಿಂಕರಂ ನೆರೆ ಸುವರ್ಣವ ಲೋಕಕೆ ಸಾಕು ಸಾಕೆನಲ್ ॥ ೪೩ ॥

ಶಿವನಾಗಳ್ಗಿರಿಪುತ್ರಿಯೊಂದಿಗೆ ವಿವಾಹಂ ಸಾಗಲಂದಾ ಮಹೋ ।
ತ್ಸವದಿಂ ಸಾಲವ ತಂದನಾ ಧನಧನಿಂ ದ್ರವ್ಯಾಬ್ಧಮಂ ಕೇಳುತಂ ॥
ಶಿವಭಕ್ತಂ ತನಗೆಂಬುದಿಲ್ಲದೆ ಜನೌಘಕ್ಕಾಗಿಯೇ ವೈಮೆಯಿಂ ।
ದವನೀ ಭಾಗಕೆ ವೃಷ್ಟಿಯಂ ಕರೆಸಿದಂ ತಾನಾಗಿ ಬಂಗಾರದ ॥ ೪೪ ॥

ಇಂತಾಡುತಿರಲ್—

ಜಲಮಯವೆಂದೆನೆ ಗೆಯ್ವಾ ।
ಮಳೆಗಳ್ಪಲವುಂಟು ನೋಡಲಿಂದಿನ ಮಳೆ ತಾಂ ॥
ಜಲದೊಡನೆ ಧನವ ಸುರಿದಾ ।
ಮಳೆಯಾದುದು ಜನತೆ ನೆನೆಯುತಿರಲಿದ ಸತತಂ ॥ ೪೫ ॥

ನದಿಗಳ ತುಂಬಿ ತುಳುಂಕಿಸು ।
ವುದು ಸಹಜಂ ವೃಷ್ಟಿಗೆಂಬುದಿದು ಜನವಿದಿತಂ ॥
ನದಿಗಳುಮಾ ಭಂಡಾರವು ।
ನದುಬುತಮಾಯ್ತಿದೆನೆ ಪೆರ್ಚಿಸಿತ್ತಿದು ಚಿತ್ರಂ ॥ ೪೬ ॥

ಶ್ರೀದೇವಿಯಿಳಿದು ಬಂದಾ ।
ಭೂದೇವಿಯನೊಲಿಯುತಪ್ಪಿಕೊಂಡಿಹಳೆಂಬೊಲ್ ॥
ಮೇದಿನಿಯೆಲ್ಲಂ ಕಣ್ಗಿಂ ।
ಪಾದುದು ಬಂಗಾರವುಲ್ಲಿ ತುಂಬಿರೆ ನೋಡಲ್ ॥ ೪೭ ॥

ಇಳಿವಾ ಸೂರ್ಯನ ಪೊಂಜಲಾಕೆಯುವೊಲಿರ್ಪರೆೞ್ಚಿಗಳ್ಳೀರಿನೊಳ್ ।
ಪೊಳೆದಿರ್ದಂದವ ನೋಡಲಾ ಹರಿಹರಂಗೆಂದೀಗ ತಾಂ ಪಟ್ಟಗ ।
ಟ್ಟಲೆನುತ್ತಾ ಮುನಿಮೌಳಿ ಪೊನ್ನುಡಿಗೆಯಿಂ ಭೂದೇವಿಯಂ ಸಿಂಗರಂ ।
ಗೊಳಿಸಿರ್ಪಂ ನಿಜಮೆಂಬವೊಲ್ಸೊಗಸುದೋರುತ್ತಿರ್ದುದಾ ಕಾಲದೊಳ್ ॥

ಇಂತೆಲ್ಲರುಮಾ ಸುವರ್ಣವೃಷ್ಟಿಗಾಶ್ಚರ್ಯಂಬಟ್ಟು ಮುನಿಪುಂಗವಂಗೆ ತಮ್ಮ ಕೃತಜ್ಞತೆಯಂ ತೋರಿಸ ಪೋಗಬೇಕೆಂಬಷ್ಟರೊಳ್ಗನರೆಲ್ಲರಂ ಜಾಗರೂಕತೆಗೊಳಿಪುದ್ಯೋಗದೊಳ್ತೊಡಗಿರ್ದ ಹರಿಹರಬುಕ್ಕರುಮಾ ಗುಂಪಿಗೆ ಸೇರಿ ಸರ್ವರುಮಾ ಮಹಾಮುನಿಯ ತಪೋಗೃಹದ ಬಳಿಗೆಯ್ದಿ ಸಾಷ್ಟಾಂಗಪ್ರಣಾಮಂ ಗೆಯ್ದಾನಂದದ ಬಾಷ್ಪದಿಂ ಮಾಧವನ ಪಾದ ಪ್ರಕ್ಷಾಲನೆಯಂ ಗೆಯ್ದಿಂ ಬಳಿಯಂ ಹರಿಹರಬುಕ್ಕರ್ವಿನಯದಿಂದೆ ಹಿಂದೆ ಕೈ ಜೋಡಿಸಿ ನಿಂತಿರಲ್ ನಾಗರಿಕಪ್ರಮುಖರ್ಮುಂದೆ ಸಾಗಿ ಬಂದು—

ಪನ್ನೆರಡಬ್ದವುಂ ಮಳೆಯ ಕಾಣದೆ ಬೇಯುವ ಭೂಮಿಯೆಂಬವೊಲ್ ।
ಅನ್ನೆಯದಿಂದ ಕಾದು ಕರಿಯಾಗಿಹ ಸರ್ವರ ಚಿತ್ತದೇಶಮಂ ॥
ನಿನ್ನಯ ಪುಣ್ಯದಿಂ ಕನಕವೃಷ್ಟಿಯಿದೀಗ ಬರುತ್ತೆ ಧಾತ್ರಿಯೊಳ್ ।
ಬನ್ನಮನೆಲ್ಲಮಂ ಕಳೆದುದೀಪಂ ಸಾಕೆನಿಪಷ್ಟನೀಯುತಂ ॥ ೪೮ ॥

[1]ಧಾತ್ರಿ ನಿಜವಾಗಿ ನಿಮ್ಮಂ ।
[2]ಧಾತ್ರೀತ್ವದ ಬೆಡಗ ತೋರಿ ಕೀರ್ತಿಯ ಪಡೆದಳ್ ॥
ದಾತೃತ್ವದಿಂದ ನಿಮ್ಮ ವಿ ।
ಧಾತೃತ್ವವಿಶೇಷಮೆಮಗೆ ತೋರ್ದಪುದೀಗಳ್ ॥ ೫೦ ॥

ತಿಳಿಯದೆ ಪೋದೆವೋ ಮುನಿಕುಲಾಗ್ರಣಿ, ಮುನ್ನಮೆ ನಿನ್ನ ಶಕ್ತಿಯಂ ।
ತಿಳಿದೆವಿದೀಗ ನಿನ್ನ ಹೊರತನ್ಯರ ಕಾಲ್ಪಿಡಿಯಲ್ಕೆ ಪೋಗೆವೈ ॥
ತಳಮಳದಿಂದೆ ಬೇಯುತಿಹ ನಾವ್ಮಲೆತಿನ್ನಿದೊ ನಿನ್ನ ಛತ್ರಿಯಾ ।
ನೆಳಲೊಳೆ ನಿಂದು ಶಾಂತಿಸುಖಮಂ ಪಡೆಯುತ್ತಿಹೆವೆಂದುಮೆಲ್ಲರುಂ ॥೫೧॥

ತಿಂವವರ ಮಾಡಿ ಧರ್ಮಂ ।
ತರಗೊಳಿಪವರಾಳಿಕೆಯೊಳಗಿರಲೊಲ್ಲೆವು ಕೇಳ್ ॥
ತೊರೆದೆವು ತುರುಷ್ಕರಾಜರ ।
ತೆರಪಿಲ್ಲದೆ ನಿನ್ನ ಸೇವೆಗೆಮಗಾಜ್ಞೆಯ ಪೇಳ್ ॥ ೫೨ ॥

ಜನರಂ ಜನವೆಂದೆಣಿಸದ ।
ಜನಪಾಲಕಪದವಿಯೊಲವ ನಾಶಿಸದವರಾರ್ ॥
ಜನರಂಜನವೆಂದೆನಿಸಿದ ।
ಜನಪಾಲಕಪದವಿ[1]ಯೊಲವನಾಶಿಸದವರಾರ್ ॥ ೫೩ ॥

ಹಿಂದುಳಿದು ಮೂಲೆಗೊರಗಿದ ।
ಹಿಂದುಗಳೊಳ್ತುಂಬಿ ತೋರ್ಪೆಯ್ಮೆ ಚೇತನವಂ ॥
ಹಿಂದೆಂದುಂ ಕಾಣದ ಬಲು ।
ಹಿಂದೆಲ್ಲರ ಪುಷ್ಟಿಗೊಳಿಸಿದ್ಮೆ ತನುಮನವಂ ॥ ೫೪ ॥

ಧೊರೆಯೇ? ರಾಜ್ಯವನೆಲ್ಲ ಸೂರೆಗೊಳಲುತ್ಸಾಹಂ ಬಡುತ್ತಿರ್ಪವಂ ।
ಧೊರೆಯೇ? ಲೋಗರನೆಲ್ಲ ಕೊಲ್ವುದರೊಳೇ ಸಂತೋಷಮಂ ತಾಳ್ವವಂ ॥
ಧೊರೆಯೇ? ಧರ್ಮದ ದಾರಿಯಂ ಕೆಡಿಪವಂ ತಾನೇ ಬಲಾತ್ಕಾರದಿಂ ।
[1]ದೊರೆಯೇ? ತಮ್ಮ ಪದಾಬ್ಜಧೂಳಿಗದನಿನ್ನೇವೇಳ್ವೆವೋ ಅದುದಂ ॥ ೫೫ ॥

---

೫೦ — 1 ಭೂಮಿ. 2 ದಾದಿಯಾಗಿರುವಿಕೆಯ.
೫೩ — 1 ಒಲವಂ + ಆಶಿಸದವರ್ + ಆರ್
೫೫ — 1 ಸಮಾನನೇ?

ತಪ್ಪಿದೆವು ತಪ್ಪಿದೆವು ಹಾ! ।
ತಿಪ್ಪೆಯ ನಂದನದ ಜೊತೆಗೆ ಹೋಲಿಸಿದೆವಲಾ! ॥
ತಪ್ಪಿಲ್ಲದೆ ಹಣಿವನವಂ ।
ತಪ್ಪೆಣಿಸದೆ ರಕ್ಷೆಗೈದಪಿಂ ನೀವೆ ಭಲಾ || ೫೬ ||

ಎಲ್ಲಿಯು ಮಲ್ಲಿಕನಬಿಯಿ ।
ನ್ನೆಲ್ಲಿಯುದೊ ತುರುಷ್ಕರಾಜ್ಯವಿೂ ನೆಲದೊಳ್ ॥
ಒಲ್ಲೆವವರೊಡನೆ ನಡೆವುದ ।
ನೆಲ್ಲರ್ಸುಖಮಿಹೆವು ನಿಮ್ಮ ಪದತಲದೊಳ್ || ೫೭ ||

ಬಡವರ್ನಾವಿದ ಬಲ್ಲೆನೀಂ ಪೊಡವಿಯೊಳ್ಬಂಗಾರವಮಂ ವೃಷ್ಟಿಯಿಂ ।
ಪಡೆದಿರ್ಪುಷ್ಟನುವೇನ ಗೆಯ್ವೆವದ ಪೇ[1]ಳನ್ಯಾಯಂದಿಂದೆಲ್ಲವಮಂ ॥
ಬಿಡದಂತೆಲ್ಲರುಮೀಗ ಕೊಂಡರದಂ ಕೇಡಲ್ಲವೆ! ಎಂದಿಗುಂ ।
ಕೊಡೆವೀ ದ್ರವ್ಯವನಾ ತುರುಷ್ಕನೃಪಗಿನ್ನೇಗೆಯ್ವೆವಾಜ್ಞಾಪಿಸೈ || ೫೮ ||

ಪೊಡೆವೆವೆ ಪೇಳ್ದಂಗುರವಮಂ ।
ಪೊಡವಿಯೊಳುರೆ ನೀವೆ ಗೆಯ್ವುಯಜ್ಞವೆನುತ್ತಂ ॥
ಪೊಡವಿಯ ಜನತತಿಯೆಲ್ಲಂ ।
ಪೊಡಮಡುವಂತಾಗೆ ನಿಮ್ಮ ಕೊಂಡಾಡುತ್ತಂ || ೫೯ ||

ಇಂತೊರೆದ ನಾಗರಿಕರ ವಚನಮಂ ಕೇಳ್ದು ಹುಸಿನಗೆಯಂ ನಕ್ಕು ಮಾಧವಂ—

ಪರಧರ್ಮದ್ರೋಹಮಂಗೆಯ್ವರಸಿಹ ನೆಲದೊಳ್ಯಜ್ಞವಮಂ ಗೆಯ್ವ ಮಾತುಂ ।
ತರವಲ್ಲಂ, ಸರ್ವರುಂ ವಂದಿಸಲೆನಗಿದರಿಂದೆಂಬುದುಂ ಯೋಗ್ಯಮಲ್ಲಂ ॥
ಧರೆಗೆಲ್ಲಂ ಕ್ಷೇಮಮಂ ಬೇಳ್ಪಿಳೆಯುಮರಜನಕ್ಕೀಧನಾನೀಕದಿಂದೇಂ ।
ಭರದಿಂದೀನಾಡು ತಾಂ ಸುಸ್ಥಿತಿಯ ಪಡೆಯಲೀದ್ರವ್ಯದಿಂ ಯೋಗ್ಯಮಕ್ಕುಂ॥

---

೫೮— 1 ತಮ್ಮ ಸಂಪಾದನೆಯಲ್ಲದಂಥ ಹಣವನ್ನು ತಾವು ತೆಗೆದುಕೊಳ್ಳುವದು ಅನ್ಯಾಯವೆಂದು ಅವರ ತಾತ್ಪರ್ಯ.

ಎಂಬುದುವೆಲ್ಲರ್ದಿಟಂ ದಿಟವೆಂದು ಮಾಧವನ ವೈರಾಗ್ಯಮಂ ಬಣ್ಣಿಸಿ ತಮಗೆ ಸ್ವರಾಜ್ಯಂ ಸಿಕ್ಕುವುದೆಂಬ ಕುತೂಹಲದಿಂದಾನಂದಪರವಶರಾಗಿ ಸರ್ವಧನಮುಮಂ ಸ್ವರಾಜ್ಯನಿಧಿಯಾಗಿ ಭಾವಿಸವೇಳ್ಕುಮೆಂದು ಸರ್ವರುಮಭಿಪ್ರಾಯಂಬಡಲಾಗ ಮಾಧವನದರ್ಕರ್ಧಾಂಗೀಕಾರಮಂ ತೋರ್ದ —

ಅರಸಂ ತಾನಾದ ಮೇಲಾಪ್ರಜೆಗಳ ಸಿರಿ ಮೆಯ್ವೆರ್ಚೆ ಸಾಮಾನ್ಯರಾಜಂ ।
ನೆರೆಯುತ್ಸಂಗೆಯ್ವನೀ ರೀತಿಯೊಳಿಹ ಸಿರಿದೇಂ? ಲೋಗರೈಶ್ವರ್ಯಮೆಂತುಂ॥
ಭರದಿಂದಂ ಪೆರ್ಚೆ ಮುನ್ನಂ ಪಿಂದೆನಲುರೆ ನಿಮ್ಮಾ ಗೃಹಸ್ಥಾನದೊಳ್ಬಿ ।
ಳ್ದಿರುವೆಲ್ಲಾ ಪೊನ್ನ ನೀಮೇ ತೆಗೆದುಕೊಳುತೆ ನಿಶ್ಚಿಂತೆಯಿಂ ಬಾಳ್ವ
ದೆಂದುಂ ॥ ೬೧ ॥

ಮನೆಯುಂ ಬಿಟ್ಟುತರಸ್ಥಲಂಗಳೊಳೆ ಬಿಳ್ದಿರ್ಪಾಸುವರ್ಣಾಂಶಮುಂ ।
ಕ್ಷಣದೊಳ್ಕೂಡಿಸಿ ಮೇಣ್ಸ್ವರಾಜ್ಯನಿಧಿಗೆಂದೊಲ್ದಿತ್ತು ನೀವಾಗಿ ಮುಂ ॥
ದಿನ ಕಾರ್ಯಕ್ಕನುವಾಗೆ ನಾಳೆಯೆ ಮಹಾಸಾಮ್ರಾಜ್ಯಮಂ ಸ್ಥಾಪಿಪೆಂ ।
ಘನಕೀರ್ತಿಪ್ರಭೆ ಲೋಕದೊಳ್ಮಿಗಿಲೆನಲ್ತೋರ್ಪಂತೆ ಕರ್ಣಾಟಕಂ ॥ ೬೨ ॥

ಎನೆ ಸರ್ವರುಂ ಮಹಾಪ್ರಸಾದವೆಂದಾ ಆಣತಿಯಂ ಶಿರದೊಳ್ಪೊತ್ತು ತಮ್ಮ ತಮ್ಮ ಮನೆಗಳೊಳಿಲ್ಲಿಲ್ಲಿಯುಂ ನಿಧಿಗಳಂ ಪಡೆಯಲ್ —

ಶ್ರಮಬಟ್ಟವರ್ಗೆ ಫಲಮೆಂಬರೆಲ್ಲರೀ ।
ಕ್ರಮವಿಲ್ಲಿ ನೋಡೆ ವಿಪರೀತಮಾದುದೈ ॥
[1] ಶ್ರಮಮಾದುದಾ ತಪದಿ ಮಾಧವಂಗೆ ಭಾ ।
ಗ್ಯಮದೀಗಲಾ ಜನಸಮೂಹಕಾದುದೈ ॥ ೬೩ ॥

ಇಂತರಿನತ್ಯಂತ ಸಂತುಷ್ಟರಾದ ಜನಂಗಳ್ಮತ್ತಿತರಸ್ಥಲಂಗಳೊಳ್ಕಂಡ ನಿಧಿಗಳೆಲ್ಲಮುಮಂ ಕೂಡಿ ಹಾಕುತದರ್ಕೆ ತಮ್ಮ ಧನಮುಮಂ ರಾಜಾದಾಯಮಾಗಿ ಸೇರಿಸಿ ಗುಡ್ಡೆಯಂ ಹಾಕಲ್ —

---

೬೩ — 1 ಶ್ರಮಮಾದುದು + ಆ + ತಪದಿ.

ಉತ್ತರದೊಳೊಂದೆ ಮೇರುವ ।
ದೆತ್ತಲೊ ಲೋಕದೊಳಗಾವನುಂ ಕಂಡಿಲ್ಲಂ ॥
ಇತ್ತ ಧನರಾಶಿಯಿಂದೆ ।
ತ್ತೆತ್ತಲುಮುಪಂಮಿತ ಮೇರುಗಳ ಹೊರತಿಲ್ಲಂ ॥ ೬೪ ॥

ಇಂತು ತನ್ನ ಹೃದಯಸ್ಥಳಾದ ಲಕ್ಷ್ಮಿಯಂಶಮಂ ಸರ್ವಗೃಹಂಗಳಲ್ಲಿಯುಂ ಪ್ರತಿಷ್ಠೆಮಾಡಿ ಸಾರ್ವಜನಿಕವಾದ ಸ್ವರಾಜ್ಯನಿಧಿಯಂ ಕಂಡು—

ಇಂತೀ ಸದ್ವೃಷ್ಟಿಯಿಂ ಶೋಭಿಸುತಿಹ ನೆಲದೊಳ್ಮುಂದೆ ಮೇಲಪ್ಪುದೆಂದಾ ।
ಸಂತೋಷೋದ್ರೇಕದಿಂದಾನಿಧಿಯ ಹರಿಹರಂಗೊಪ್ಪಿಸುತ್ತೀಗಳೇ ನೀ ॥
ನೆಂತುಂ ಶೃಂಗಾರದಿಂ ಮಂಟಪವ ರಚಿಸೆನಲ್ಕಾಗ ಪಟ್ಟಾಭಿಷೇಕೋ ।
ದಂತಂ ವಿಸ್ತಾರವಾಗಲ್ ಜನರತಿಮುದದಿಂದುದ್ಯಮಂ ಗೆಯ್ದರಾಗಳ್ ॥

ಬಾಳೆಯ ಕಂಬಮಂ ಬಳಸಿ ನಾಲ್ದೆಸೆಯೊಳ್ತಳಿರಿಂದೆ ತೋರಣಂ ।
ಮೇಳವಿಸಲ್ಕೆ ಮಧ್ಯದೊಳಗುನ್ನತನಾಗಿಹ ಪೀಠವೇರ್ಪಡಲ್ ॥
ಸಾಲಿಡಲಾಪತಾಕೆ, ನೆರೆ ಕಟ್ಟಿರೆ ಪಟ್ಟೆಯ ಮೇಲುಕಟ್ಟು ಭೂ ।
ಪಾಲಕ ಪಟ್ಟಮಂಟಪಮದೊಪ್ಪಿದುದಿಂತು ಮುಹೂರ್ತಮಾತ್ರದೊಳ್ ॥೬೬॥

ನಿಶಿಯಾದೊಡಮೆಲ್ಲರ ಮಾ ।
ನಸದೊಳ್ಮಾಧವನ ಮಹಿಮೆಯೆಂಬರ್ಕಂ ॥
ನಸುಮಾಸದೆ ಕಣ್ಮುಂದಿರೆ ।
ನಿಶಿಯೇ ಬರಲಿಲ್ಲವೆಂದವರ ತರ್ಕಂ ॥ ೬೭ ॥

ಉದಿಸೆ ರವಿ ಮರುದಿನಂ ತೋ ।
ರ್ದುದು ದೆಸೆಯೆಲ್ಲಂ ಪ್ರಸನ್ನಮಾಗಿರುತೆ ॥
ಮುದಮೆನಿಸೆ ವಾಯು ಹರಿದಂ ।
ಸುದೈವದಿಂದಡಗಿತೆಲ್ಲಿಯೋ ಕೊರತೆ ॥ ೬೮ ॥

ಹೊರಗಣ ವೈಭವಂ ಬಹಳಮಪ್ಪೊಡೆ ಕಾಲವೆ ಸಾಲದಾದೊಡಂ ।
ಪಿರಿದೆನೆ ತುಂಬಿರಲ್ಕೊಳಗೆ ಸಂತಸಮೆಲ್ಲರ ಚಿತ್ತದೊಳ್ಮನೀ ॥
ಶ್ವರಮೃದುವಾಣಿಯಂ ತಲೆಯೊಳಾನುತೆ ಸರ್ವರುಮಾಗ ತಮ್ಮತ ।
ದ್ವಿಸ್ಮರಕನುಕೂಲವಾಗಿ ನೆರೆದರ್ನೆರೆ ಮಂಟಪದಲ್ಲಿ ನಾಡಿಗರ್ ॥ ೬೯ ॥

ಇಂತು ಸರ್ವಸನ್ನಾಹಂಗೆಯ್ದು—

ಮಾಧವಮುನಿವರ, ಸರ್ವಮು ।
ಮಾದುದು ಸಿದ್ಧತೆ ಮಹಾನುಭಾವನೆ ಕೇಳ್ ॥
ಮೇದಿನಿಯುನಾಳೆ ಪೀಠವ ।
ಮೋದದಿ ನೀನೇರು ಹರ್ಷಮೆಮಗಾಗಲ್ ॥ ೭೦ ॥

ಇಂತೆಂದು ಬೇಡಲಾ ಮಾಧವನನವರಂ ನೋಡಿ—

ಇಳೆಯುಮರ್ಥರಾತಲಕೆ ಸೌಖ್ಯದ ಯೋಜನೆಗೆಯ್ವುದಲ್ಲದಾ ।
ನೆಲದೊಡೆಯರ್ಕಳಾಗುತೆ ನೃಪಾಸನದಲ್ಲಿರೆ ಯುಕ್ತಮಲ್ತು ಭೂ ॥
ತಲದೊಳಗೀಗಳೀ ಹರಿಹರಾದಿಗಳಿರ್ದಪರಲ್ತೆ ನೋಡೆ ಸ ।
ತ್ಕುಲದವರಾಗಿ ಕಟ್ಟುದಪೆನೀ ಜನರೊಳ್ ಹಿರಿಯಂಗೆ ಪಟ್ಟಮಂ ॥೭೧॥

ಎಂದು—

ಸುತನಂ ಮದುವೆಯು ಜಗುಲಿಗೆ ।
ಪಿತಂ ಮಹೋತ್ಸವದೆ ಕರೆವವೊಲ್ಮಾಧವನಾ ॥
ಕ್ಷಿತಿಗೊಡೆಯನ ಮಾಡೆ ಮಹಾ ।
ಯುತವೇದಿಗೆ ಕರೆದನಾಗಳಾ ಹರಿಹರನ ॥ ೭೨ ॥

ಅದಂ ಕಂಡು ಕ್ಷತ್ರಿಯವಂಶೋತ್ಪನ್ನರಾದ ನಿಮ್ಮ ಶಿಷ್ಯರ್ಗೆ ಪಟ್ಟಂಗಟ್ಟುವವೆಲ್ಲ ಬಗೆಯಿಂದಮುಂ ಶ್ರೇಯಸ್ಕರವೆಂದೊಪ್ಪಿ ತಮ್ಮ ಸಮ್ಮತಿಯಂ ಸೂಚಿಸಲೆಳಸಿದ ಜನಂಗಳ್—

ಹರಿಹರಬುಕ್ಕರ್ ನಿಮ್ಮಂ ।
ಹೊರಗಣ ನಾಡಿಂದೆ ಕರೆದು ತರಲೀಗಳ್ ॥
ಹುರಿಗೊಂಡ ನಾವಿವರನೇ ।
ಹರಿಹರಸಮರೆಂದು ತಿಳಿಯದಿರ್ಪೆವೆ ಪೇಳ್ ॥ ೭೩ ॥

ಎಂದು ಪೇಳುತ್ತೆ ತನ್ನ ತಪಃಪ್ರಭಾವದಿಂದಮೆ ಸರ್ವಸಿದ್ಧಿಯಾಗಿರ್ದೊಡಮಾ ಮಾಧವಂ ತಾನದರ ಸ್ವಾಮಿತ್ವಮಂ ಬಯಸದೆ ಬ್ರಾಹ್ಮಣರ ಪರಾರ್ಥನಿಷ್ಠೆಯ ಪರಾಕಾಷ್ಠತೆಯಂ ಪ್ರದರ್ಶನಂಗೆಯ್ದುದಕೆಲ್ಲರುಂ ಬೆರಗುವಟ್ಟರೆ—

ಹೊನ್ನಮ್ಮನ ಸಂತಯಿಸುತೆ ।
ಹೊನ್ನಿನ ಮಳೆಯಾದ ಮಾತನಾಡುತೆ ಬುಕ್ಕಂ ॥
ಹೊನ್ನಿನ ವೇದಿಯು ಸನಿಯಕೆ ।
ಹೊನ್ನುಡಿಗೆಯು ನುಡಿಸಿತಂದನೇಳ್ದಿರಲರ್ಕಂ ॥ ೭೪ ॥

ಆಗಳ್ —

[1]ವಸುಗಳ್ಪ್ರಾಣಗಳಕ್ಷಿವೇದಿನಿಗಳಿಪರ್ ಸಂಖ್ಯೆಯುಂಬೆತ್ತು ಶೋ ।
ಭಿಸುತಿರ್ಪ ಶಕೆಯಲ್ಲಿ ಧಾತುವಿನ ವೈಶಾಖಾದಿಯೊಳ್ವೃದ್ಧವೆಂ ॥
ದೆಸೆವಾ ಸಪ್ತಮಿ ಸೌಮ್ಯವಾಸರಯುತಂ ಲಗ್ನಸ್ಥಜೀವಂ ವಿರಾ ।
ಜಿಸೆ ರಾಷ್ಟ್ರಧ್ವಜಮಾಗಸಕ್ಕಡರ್ದುದಾ ಮೌನೀಂದ್ರನಾಜ್ಞಾಪಿಸಲ್ ॥ ೭೫ ॥

ಮೊಲವಂದು ನಾಯ ಹಿಡಿದಾ ।
ನೆಲದೊಳ್ನಿಂತಿರ್ದು ಶೋಭಿಪಾ ಧ್ವಜಮಾಗಳ್ ॥
ನೆಲನೆಲ್ಲಮನೊಲವಿಂದಲೆ ।
ಗೆಲೆವಂದೇಳ್ದಿರ್ದುದಂದು ಕೋವಿದರಾಡಲ್ ॥ ೭೬ ॥

ಮುಗಿಲಂ ಮುಟ್ಟಿದುದಾಧ್ವಜ ।
ಮಗಾಧಬಲಶಾಲಿ ತಾನೆನುತ್ತಲ್ಲಿ ॥
ಮಿಗೆ ಸುರಪದವಿಭವವನೊ ।
ಮ್ಮೆಗೆ ಭೂಮಿಗೆ ತಂದು ತೋರ್ಪೆನೆನುತಿಲ್ಲಿ ॥ ೭೭ ॥

ಧ್ವಜಪಟವೇರಲ್ಮೇಲಕೆ ।
ನಿಜದೇಶವನಿನ್ನು ಮೇಲಕೇರಿಪೆನೆನುತಂ
ವಿಜಯಿಗಳಾವೆಂಬೆಲ್ಲರ ।
[1]ಋಜುಮನದಭ್ಯುದಯುಮಾದುದಹ! ಜನಜನಿತಂ ॥ ೭೮ ॥

---

೭೫ — 1 ಶಾಲೀವಾಹನಶಕೆ ೧೨೫೮.

೭೮ — 1 ಸರಳವಾದ ಮನಸ್ಸಿನ.

ಪಟಪಟಸಲ್ರಾಷ್ಟ್ರಧ್ವಜ ।
ಪಟಮಾಕಾಶದೊಳಗಾಗಲೇ ಅಲ್ಲಿ ॥
ಪಟುಭಟರ ಬಾಹುಬಲಲಂ ।
[1] ಪಟುತ್ವಮುಂ ಪಟಪಟಸಿದುದೊಲವಿನಲಿ ॥ ೭೯ ॥

ಕರ್ಣಾಟಕದಭ್ಯುದಯುವ ।
ನರ್ಣವವೃತಧರೆಗೆ ತೋರ್ಪ ರಾಷ್ಟ್ರಧ್ವಜಮಾ ॥
ಘೂರ್ಣಿಸುತಿರ್ದ ತುರುಷ್ಕರ ।
ಕರ್ಣಂ ಕಿವುಡಾಗೆ ಶಬ್ದ ಗೆಯ್ದುತ್ತಮುಮಾ ॥ ೮೦ ॥

ಕನ್ನಡ ನಾಡಿಗೆ ಕೇಂದ್ರದ ।
ಮನ್ನಣೆ ಬರ್ಪಾ ಸ್ವರಾಜ್ಯಮಂ ನೆಲೆಗೊಳಿಸಲ್ ॥
ಇನ್ನಿದು ಮೂಲಸ್ತಂಭಂ ।
ಮುನ್ನಮೆನಲ್ಧ್ವಜದ ಕಂಬಮೊಪ್ಪಿದುದಾಗಳ್ ॥ ೮೧ ॥

ಭರದಿ ಕೆಳಕೆಳಗೆ ಪೋಗಿರೆ ।
ವರಾಹನಂದಿಳಿದು ಧರೆಯನುದ್ಧರಿಸಿರೆ ತಾಂ ॥
ಮೊರೆದೇರ್ದೆತ್ತುವೆನೆನುತಿದ ।
ವರಾಹರಾಷ್ಟ್ರಧ್ವಜಂ ವಿರಾಜಿಸಿತೆಂತುಂ ॥ ೮೨ ॥

[1] ವಿಜಯಾನಗರವ ವಿಜಯ ।
ಧ್ವಜನೆನಿಪಂಗೆಯ್ದು ಮೇಲ್ಮೆಯೊಂದಿರ್ದೆಡೆಯೊಳ್ ॥
ವಿಜಯಶ್ರೀಯ ವಿಹಾರ ।
ಧ್ವಜಂ ನವೀನಾಭ್ಯುದಯವ ತೋರ್ದುದು ಧರೆಯೊಳ್ ॥ ೮೩ ॥

---

೭೯— 1 ಕುತೂಹಲವೂ

೮೩— 1 ಪಾರ್ವತಿಯ ವಿಜಯಾ ಎಂಬ ಹೆಸರಿನ ಜ್ಞಾಪಕಾರ್ಥವಾಗಿ ವಿಜಯಧ್ವಜನೆಂಬವನು ಕೆಲವು ಶತಮಾನಗಳ ಹಿಂದೆ ವಿಜಯಾನಗರವೆಂಬ ಊರನ್ನು ಅಲ್ಲಿ ಸ್ಥಾಪಿಸಿದ್ದನೆಂದು ಇತಿಹಾಸಕಾರರು ಹೇಳುತ್ತಾರೆ.

ಇಂತು ಧ್ವಜಸ್ಥಾಪನೆಯಾಗುತ್ತಲೇ ಮಾಧವನ ಕಣ್ಸನ್ನೆಯಂತೆ—

ಉದಯಾಚಲದಗ್ರವನೇ ।
ಱಿದ ರವಿ ಜಗಕೆಲ್ಲ ಸೊಂಪನೀವಂತೆ ॥
ಮುದದಿಂ ಸಿಂಹಾಸನವೇ ।
ಱಿದ ಹರಿಹರನೆಸೆದನೆಲ್ಲರರಿವಂತೆ ॥ ೮೪ ॥

ಮುನಿಪತಿ ಸಮಾಧಿಯೊಳಿರ್ಪಂ ।
[1] ವನಜಾಲಯೆಯೊಂದುಮೂರ್ತಿಯೋ ತೋಱಿದುದೈ ॥
ಮುನಿಶಿಷ್ಯಂಗೀ ಸಭೆಯೊಳ್ ।
ವನಜಾಲಯೆಯುರ ಸಮೂಹವೇ ತೋಱಿದುದೈ ॥ ೮೫ ॥

ಮಂಗಳವಾದ್ಯಸಂಘದ ಮಹಾಧ್ವನಿ, ವಿಪ್ರರ ವೇದಘೋಷಮುಂ, ।
ಕಂಗೊಳಿಪಾ ಸುವಾಸಿನಿಯರೆಲ್ಲರ ಹಾಡಿನ ನಾದಮುಂ ಸುಗೀ ॥
ತಂಗಳ ಸುಸ್ವರಂ, ಶಿಶುಗಳೊಟ್ಟನ ಕೇಕೆಯ ನಿಸ್ವನಂ ಸಭಾ ।
ರಂಗಕದೊಂದು ಶೋಭೆಯನೆ ತಂದುದಪೂರ್ವಮಿದೆಂಬ ರೀತಿಯಿಂ ॥ ೮೬ ॥

[1] ಗುರುವೀ ವಿಜಯಾನಗರದಿ ।
ಗುರುವಾಗಿರೆ ಸಗ್ಗದಲ್ಲಿ ಲಘುವಿವನೆಂದಾ ॥
ಗಿರಲಾರದೆ ಸುರಪತಿ ತಾಂ ।
[2] ಗುರುವೇಗದಿ ಬಂದು ಸೇರ್ದನಾ ಹರಿಹರನಂ ॥ ೮೭ ॥

ಆಗ ಮಾಧವನುಚ್ಚಸ್ವರದಿಂದ—

ಹರಿಹರಗೀಯುಲೀಗ ರವಿ ತನ್ನೊಳಗಿರ್ಪ ಸಮಸ್ತತೇಜಮಂ ।
ಹರಿಹರಗೀಯುಲೀಗ ಸುರನಾಥನಶೇಷವಿಶೇಷಶೌರ್ಯಮಂ ॥
ಹರಿಹರಗೀಯುಲೀಗ ಕಮಲಾಲಯೆ ಸಂಪದದೊಳ್ಸಮೃದ್ಧಿಯಂ ।
ಹರಿಹರಗೀಯುಲೀಗ ಕೃಪೆಯಿಂ ಭುವನೇಶ್ವರಿ ಸರ್ವಸೌಖ್ಯಮಂ ॥ ೮೮ ॥

---

೮೫— 1 ವನಜಾಲಯೆಯ+ಒಂದು ಮೂರ್ತಿ.

೮೭— 1 ಬೃಹಸ್ಪತಿಯು. 2 ಅತಿ ತೀವ್ರವಾಗಿ.

ಇಂತು—

ರಾಮನ ಹರಸಿದ ಮುಖದ ಮ ।
[1] ಹಾಮುನಿಗಳ ವಂಶದಲ್ಲಿ ಪುಟ್ಟಿದ ಮುಖದಿಂ ॥
ಪ್ರೇಮದೊಳಾಶೀರ್ವಾದವ ।
ನಾಮಾಧವನಾಗ ಹರಿಹರಂಗುರೆ ಗೆಯ್ದಂ ॥ ೮೯ ॥

ಅಲ್ಲಿಂ ಬಳಿಯುಮೆಲ್ಲರುಮಂತಕ್ಕೆಂದು ಮಂತ್ರಾಕ್ಷತೆಯಂ ಹರಿಹರನ ತಲೆಯ ಮೇಲೆ ಹರಸಿಡಲ್—

ಬರೆ ಗಗನದ ಕನಕದ ಮಳೆ ।
ನೆರೆ ತೋರ್ದಾನಂದಕಿಂತ ಹರಿಹರಗೆ ॥
ವರಬುಧತತಿಯುತ ಮಾಧವ ।
ಕರದಕ್ಷತೆ ಕನಕಮೆನಿಸಿದುದು ಬಗೆಗೆ ॥ ೯೦ ॥

ಪ್ರಜೆಗಳ್ ಜಯಜಯಕಾರದಿ ।
ನಿಜ ಸಂತೋಷದೊಳಗೆಯ್ದೆ ಕರತಾಲಂ ॥
ನಿಜವಾದ ವಿಜಯಭೇರಿಯ ।
ಸಜಾತಿಯೆನೆ ಮೆರೆದುದಾಗ ಬಹುಕಾಲಂ ॥ ೯೧ ॥

ಆಗಳ್—

ಹರಿಹರ ಭೂಮಿಪಾಲ ಜಯ, ಭೋ ಹರಿಯಪ್ಪೊಡೆಯಾ ಜಯಂ ಜಯಂ ।
ಧರಣಿಯ ರಾಜರಾಜನೆ ಜಯಂ ಧರಣೀತಲಮಂಡಲೇಶ್ವರಾ ॥
ನರಪತಿಮೌಳಿಭೂಷಿತಪದದ್ವಯ, ಧಾರ್ಮಿಕಚಕ್ರವರ್ತಿಯೇ ।
ವರಮುನಿದತ್ತನಿರ್ಭಯ, ಚಿರಂ ಜಯಿಸೆಂದುದು ವಂದಿಸಂಕುಲಂ ॥ ೯೨ ॥

ಈ ರೀತಿಯೊಳ್ಪಟ್ಟಾಭಿಷೇಕಮಂ ಮುಗಿಸಿ ಸಮಸ್ತ ದೇವಸ್ಥಾನಂಗಳೊಳಂ ಮಂಗಳಾರತಿಯಂ ಮಾಡಿಸಿ ಸರ್ವಜನಮಾನಂದಸಾಗರದೊಳೋಲಾಡುತ್ತಿರ್ದುದು.

---

೮೯— 1 ಭರದ್ವಾಜರ.

ಹರಿಹರರೈಕ್ಯದಿನೈಕ್ಯವ ।
ಹರಿಹರದೊಳ್ತಿಳಿಯು ಪೇಳ್ವನೆಂದೆನಲಿಂದುಂ ॥
ಹರಿಹರನುಂ ಹರಿಹರರತ ।
ಹರಿಹರಗುರುವರನುಮೆಮ್ಮ ರಕ್ಷಿಸಲೆಂದುಂ ॥

## ಒಂಬತ್ತನೇ ನೆಲೆ— ವಿಜಯಯಾತ್ರೆ.

ಶ್ರೀಧರ್ಮಂ ವೃಷಮಾಗಲ್ ।
ಮೋದದೊಳದನೇರ್ದು ಧರ್ಮದೂರರನೆಲ್ಲಂ ॥
ಹಾದಿಗೆ ತಪರ್ಾ ಶಿವನೆಮ ।
ಗಾದರದಿಂ ಕುಡುಗೆ ಸರ್ವಸೌಖ್ಯಮನಿಳೆಯೊಳ್ ॥ ೧ ॥

ಅಲ್ಲಿಂಬಳಿಯುಂ ಮರುದಿನಂ ಶ್ರೀಮನ್ಮಾಧವಮಹಾಶಯುಂ ಹರಿಹರ ಬುಕ್ಕರಂ ಕರೆದು ಮುಸಲ್ಮಾನರಧಿಕಾರಮಂ ಹಿಮ್ಮೆಟ್ಟಿಸಲೆಂದು ರಣಭೇರಿಯುಂ ಪೊಯ್ಸಿ ಪೇಳಿದಾಗಳ್—

ಸುರಪಂ ವೃತ್ರಾಸುರನಂ ।
ಪರಿಹರಿಸಲ್ದೇವಸೇನೆಯೊಡನೈದಿದವೊಲ್ ॥
ಹರಿಹರನುಡುಗಿಸೆ ನಬಿಯುಂ ।
ವರಸೈನಿಕರೊಡನೆ ಹೊರಟನಚ್ಚರಿಯಾಗಲ್ ॥ ೨ ॥

ಪರಿಪರಿಯ ರಣದ ಸಿದ್ಧತೆ ।
ಮೆರೆಯುದೊಡಂ ವಜ್ರದೆದೆಯುಮುಕ್ಕಿನ ತೋಳ್ಗಳ್ ॥
ಎರಡೇ ಸಾಕೆಂದೊಡನೆಯೆ ।
ಹರಿಹರನೃಪನಾಗ ಮುಂದೆ ಗಮಿಸಿದನಾಗಳ್ ॥ ೩ ॥

ಮನೆಯೊಳ್ಮೊಲೆಯೊಳಿರ್ದ ಬಿಲ್ಗಳನಿತಂ ಜೇಗೆಯ್ದು, ಬಾಣಂಗಳಾ ।
ಮೊನೆಯುಂ ನೆಟ್ಟನೆ ಮಾಡಿ, ಬತ್ತಳಿಕೆಯುಂ ಕೊಂಡೆದ್ದರಾಗಳ್ಕಿಲರ್ ॥
ಹಣೆಯುಲ್ಕತ್ತಿಕಠಾರಿಯೊಟಗದೆಯುಂ ಶೂಲಾದಿಯುಂ ಕೊಂಡು ತ ।
ಟ್ಟನೆ ಬಂದರ್ ಬಹುಸೈನಿಕರ್ ಹರಿಹರಂಗಾಳಾಗಿ ತಾವಾಗಿಯೇ ॥ ೪ ॥

ಚತುರಂಗವೆಂಬುದಂಗಂ ।
ಚತುರತೆಯೇ ಅಂಗಿಯೆನಿಪುದದರಿಂದ ॥
ಪೃಥಿವಿಯುಮುರೋತ್ತಮನ ಬಹು ।
ಚತುರತೆಯಿಂ ಸೇನೆಗಾಯ್ತು ಬಹುಚೆಂದ ॥ ೫ ॥

ಈ ಪರಿಯೊಳ್ದೇಶಭಕ್ತಿಯುನುಜ್ಜ್ವಲಗೊಳಿಪ ಚತುರತೆಯುಳ್ಳ ಮಹಾತ್ಮರ ಬೆಂಬಲದ ಅಭಾವಮಾಯ್ತೆಂದೊಡೆ ಜನತೆ ನಿರ್ವೀರ್ಯಮಾಗಿ ಕಾರ್ಯಾಕಾರ್ಯಮನರಿಯದೆ ಸ್ವದೇಶಮುಮಂ ಸ್ವಧರ್ಮಮುಮನುಪೇಕ್ಷೆಗೈಗುಮಲ್ತೆ!

ಹಡೆದಿಹ ಮಾತೆಯುಂ ಪೊರೆವ ಕಾರ್ಯಕೆ ಸಂಶಯಗೊಂಬರುಂಟೆ? ಮೇಣ್ ।
ಕೆಡುಕರ ಪಾರತಂತ್ರ್ಯವಹ ಶೃಂಖಲೆಯುಂ ಕಡಿಯುತ್ತಮಾಕೆಯಂ ॥
ಬಿಡಿಪೊಡೆ ಹಿಂದುಮುಂದೆಣಿಪರೇ? ಸಹಜಂ ನೆರೆ ಮಾತೃಭಕ್ತಿಯಾ ।
ದೊಡೆಮನದಳ್ಕಿನಿಂ ಜನರುಪೇಕ್ಷಿಪರಯ್ಯೊ ಪವಿತ್ರಕೃತ್ಯಮಂ ॥ ೬ ॥

ಸುದೈವದಿಂದೀಗಳ್ನಾಡಿನೊಳ್ಗಾಢನಿದ್ರೆಯುಲ್ಲಿರ್ದ ಜನರ ಕಿವಿ ಕಿವುಡಾಗುವಂತೆ ಸ್ವದೇಶಾಭಿಮಾನಭೇರಿಯುಂ ಹೊಡೆಸಿದ ಮಾಧವಮುಹಾಮುನಿಗಳ ಬೆಂಬಲದಿಂ—

ಹರಿಹರನಾಗಲ್ ಮುಂಗಡೆ ।
'ಹರಹರ ಮಾದೇವ!' ಎಂದು ಜನಗಳ ಸಂಘಂ ॥
ನೆರೆದಿರ್ದುದವನ ಹಿಂಗಡೆ ।
ತೋರೆಯುತೆ ಸುವಿಚಾರದಿಂದೆ ಜೀವದ ಹಂಗಂ ॥ ೭ ॥

ಹುಟ್ಟಿದ ಭೂಮಿಯು ಜನರೊ ।
ಕ್ಕಟ್ಟಾಗಿರೆ ರಣಕೆ ದೂರದಿಂ ಬಂದಿರ್ಪ ॥
ಷ್ಟಿಷ್ಟೇ ಆಗಿಹ ಜನಗಳ ।
ಹುಟ್ಟಣಗದೆ ಹೋಗದಿರ್ಪುದೇ ಪೇಳ್ದಿರ್ಪಂ? ॥ ೮ ॥

ಸೃಷ್ಟಿಸಿಹಂ ಸ್ವತಂತ್ರದೊಲವಂ ನೆರೆ ದೇವನೆ ಜನ್ಮದೊಂದಿಗಿ ।
ನ್ನಿಷ್ಟರೊಳಂ ಸ್ವತಂತ್ರತೆಯು ಪೊಂದುವುದೇ ಪರಮಾರ್ಥವೃತ್ತಿಯೊ ॥
ಸೃಷ್ಟಿಯು ವೈಭವಂ ಮಲಿನಮಪ್ಪುದು ದೈವದ ದುರ್ವಿಪಾಕದಿಂ ।
ಶ್ರೇಷ್ಠರದಂ ಸ್ವಪೌರುಷದಿ ಮಾರ್ಜನಗೆಯ್ದಪರೀ ಧರಿತ್ರಿಯೊಳ್ ॥ ೯ ॥

ಪಂಕಿಸೆ [1] ತತ್ತ್ವವಂ ತಿಳಿಪ ಮುನ್ನವೆ ಚಿತ್ತದ ಶುದ್ಧಿಯಾಗಲೀ ।
ನರರಧಿಕಾರಕೀ ಪರಿಯು ಚೇತನವೀವುದೆ ತಕ್ಕುದೆಂದು ಸ ॥
ದ್ಗುರುವರನೀಗ ದೈನ್ಯಮಿರೆ ದಾಸ್ಯದಿ ಕತ್ತಲೆಯಿರ್ಪ ಚಿತ್ತದೊಳ್ ।
ಪಿರಿದಹ ತಮ್ಮ ದೇಶದಭಿಮಾನದ ದೀಪವ ಹಚ್ಚಿ ತೋರಿದಂ ॥ ೧೦ ॥

ರಣಭೇರಿಯು ಮೇಲೆ ಮೊದಲ್ ।
ರಣದುತ್ಸಾಹಾರ್ಥಮಾಗಿ ಕೋಲಿಂ ಬಡಿಯಲ್ ॥
ಧಣಧಣಶಬ್ದಮುದಾಯ್ತಾ ।
ಕ್ಷಣದೊಳ್ಕಲ್ಲೀಕನಬಿಯೊಳೆದೆಯೊಡೆಯಲ್ ॥ ೧೧ ॥

ಜನರೊಳಗಾಗ ತಮ್ಮದು ಜನಾಂಗವಿದೆಂಬ ವಿಶೇಷದೈಕ್ಯಭಾ ।
ವನೆ ಮೊಳೆದೋರಿ ವರ್ಧಿಸಿ ಫಲಪ್ರದಮಾಗಿ ತುರುಷ್ಕರಾಜನಂ ॥
ಗಣಿಸದೆ ರಾಜರೊಳ್ ಕೊಡದೆ ಕಾಣ್ಕೆಯನಾಜ್ಞೆಯ ಮಾನ್ಯಗೆಯ್ಯದಿ ।
ರ್ದನುವ ವಿಚಾರಗೆಯ್ದು ಕರೆದಂ ತೊಗಲಕ್ ನಬಿಯನ್ನೆ ಹಿಂದಕೆ ॥ ೧೨ ॥

ಮಾಧವನ ತಪಃಫಲದಿಂ ।
ದಾದುದು ಜನರೊಳ್ಜನಾಂಗಭಾವನೆ ತಾಂ ॥
ಹೋದುದು ತುರುಷ್ಕರಾಜ್ಯಂ ।
ಯೋಧರ್ಕರ್ಮಾಡದಿರ್ಪ ಮೊದಲೆಂತುಂ ॥ ೧೩ ॥

ನಬಿ ಹೋದಂ ಹಿಂದಕೆ ತಾ ।
ನಭಾವಮೆಂದೆನಿಸೆ ಧೃತಿ, ವರಾಹಧ್ವಜಗಳ್ ॥
ನಭವಂ ವ್ಯಾಪಿಸೆ ರವಿಸ ।
ನ್ನಿಭಮುನಿ ತಾಂ ಗೆಯ್ದ ಧರ್ಮಬಲದಿಂದಾಗಳ್ ॥ ೧೪ ॥

ಇಲ್ಲದೆ ಯುದ್ಧಸಿದ್ಧತೆಯದಿಲ್ಲದೆ ಲೋಕಕೆ ಭೀತಿ, ನೋಡಲಿ ।
ನ್ನಿಲ್ಲದೆ ಬಿಲ್ಲ ಝೇಂಕೃತಿಯುಮಿಲ್ಲದೆ ಬಾಣಗಳೋಟಮಾಗ ಮೇ ॥
ಣಿಲ್ಲದೆ ಕತ್ತಿಯೊಟಗಳ ಚುಚ್ಚಿದ ವೇದನೆ ಸತ್ತ ಸಾವುಮಿ ।
ನ್ನೆಲ್ಲಿಯದೋ! ನವೀನಸದುಪಾಯಮಿದಚ್ಚರಿಯೆಂದರೆಲ್ಲರುಂ ॥ ೧೫ ॥

---

೧೦— 1 ಆತ್ಮಜ್ಞಾನದ ವಿಚಾರವನ್ನು.

ನೆರೆ ಚತುರುಪಾಯುಮೆಂದೊಡೆ ।
ಹುರುಳೇನಾ ದ್ವಿಗುಸಮಾಸದಾ ನುಡಿಯೊಳ್ ॥
ಇರೆ ಚತುರೋಪಾಯುಮೆನ ।
ಲ್ಕರೆ ಚತುರತೆ ನೋಡೆ ಕರ್ಮಧಾರಯದೊಳ್ ॥ ೧೬ ॥

ಇತರರ ಕೊಂದು ತಾನುಮುರೆ ಗಾಸಿಯು ತಾಳುತೆ ತನ್ನ ಸೇನೆಯುಂ ।
ಸ್ಥಿತಿಗೆಡೆ ಗೆಲ್ವ ರಾಜರಿಳೆಯೊಳ್ವಲರುಂಟದು ಚಿತ್ರಮಾದುದ ।
ದ್ಭುತತಮಮಾದುದಾಃ ರಣದ ವಾಸನೆಯಿಲ್ಲದೆ ಕೊಲ್ಲದಾರುಮಂ ।
ಕ್ಷಿತಿಗತಿನೂತ್ನಮಾದುದಹ ಸಾತ್ವಿಕಯುದ್ಧಮಿದೀ ಜಯಪ್ರದಂ ॥ ೧೭ ॥

ಇಂತಾನೆಯುಗೊಂದಿಯುಂ ವಶಮಂ ಮಾಡಿಕೊಂಡಲ್ಲಿಂದುಳಿದ ನಾಡುಗಳೊಳ್ ಬಿಡಿಬಿಡಿಯಾಗಿ ಒಬ್ಬರನೊಬ್ಬರ್ಕೆಂಗಣ್ಣಿಂ ನೋಡುತ್ತೆ ತಮ್ಮ ತಮ್ಮ ರಚ್ಚಂ ತೀರಿಸಿಕೊಳ್ಳಲ್ಕಾಗಿ ಪರರ ದಾಳಿಯುಂ ಬರಮಾಡಿಕೊಂಡು ದೇಶದ್ರೋಹಮಂ ಗೆಯ್ದ ಸರ್ವರಾಜರ್ಗುಂ ತಕ್ಕ ಶಾಸನಮಂ ಗೆಯ್ಯಲ್ಧರ್ಮಯುದ್ಧಮಂ ಹೂಡಿ ಸೇನೆ ಮುಂದಾಗಲ್—

ಹರಿಹರನಾಳ್ಗಳ್ರಕ್ತವ ।
ಹರಿಸಿದರಾ ರಣದಿ ಸತ್ತು ಬಹುಜನರಾಗಳ್ ॥
ಮೆರೆವಾ ಸ್ವದೇಶಭಕ್ತಿಯು ।
ಭರದಿಂದದನುಳಿದ ಜನಗಳೆಲ್ಲರ್ಕಲಿಯಲ್ ॥ ೧೮ ॥

[1]ಹೊರಗಣವರ್ಹೊರಕ್ಕೆ ಹೊರಟರ್ಬಿಡುತಾನೆಯುಗೊಂದಿಯುಂ ಜನ ।
ರ್ಗರೆ ನಿಜದೇಶವಾಸಿಗಳದೆಂತುಟು ಪೋಪರೊ! ಮಿಕ್ಕ ಭೂಮಿಪರ್ ॥
ಧುರದೊಳೆ ನಿಂತು ಕಾದಿದರಮೋಘಪರಾಕ್ರಮದಿಂದ ಹಿಂದುಮುಂ ।
ದರಿಯದೆ ಕೊಂದು ತಮ್ಮವರ ಸೋತರಹೋ ಕೊನೆಗೆಲ್ಲ ರಾಜರುಂ ॥೧೯॥

ದೇಶಾಭಿಮಾನಹೀನರ ।
ದೇಶಾಧಿಪತಿತ್ವದಿಂದ ಸುಖಮಿಲ್ಲೆನುತಂ ॥
ದೇಶಾಭಿಮಾನಯುಕ್ತರ ।
ದಾಸತ್ವದೊಳವರ ದೇವನಿಟ್ಟನದೆಂತುಂ ॥ ೨೦ ॥

೧೯— 1 ಪರದೇಶದಿಂದ ಬಂದಿದ್ದ ಮುಸಲ್ಮಾನರು.

ಹರಿಹರನ ಯತ್ನವೆಲ್ಲಂ ।
ಗುರುಕೃಪೆಯಿಂ ಸಾಧ್ಯಮಾಗೆ ಸುಲಭದೊಳೆ ॥
ತಿರುಗಿದನವನುರುಜಯದಿಂ ।
ನೆರೆ ಹಂಪೆಗೆ ಗುರುಗಳೆಡೆಗೆ ನುತಿಸಲಿಳೆ ॥ ೨೧ ॥

ತರುಣಿಯರಾರತಿಗೆಯ್ವಾ ।
ಹರಿವಾಣದಿ ಚೆಲ್ಲಿದೋಕುಳಿಯ ಪೊರ್ದಿರುತಂ ॥
ಮೆರೆವಾಧರೆಯಂದವಭೃಥ ।
ದೆರೆತವನಾಂತಂತೆ ತೋರ್ದುದಂದೊಪ್ಪಿರುತಂ ॥ ೨೨ ॥

ಮೂಡಣ ಪಡುವಣ ತೆಂಕಣ ।
ನಾಡಿಗೆ ಸಾಗರವೆ ಮೇರೆಯಾಗಿರೆ ಧರೆಯೊಳ್ ॥
[1] ಈಡಿಲ್ಲವಿದಕೆನಲ್ಕೆಗೆ ।
ರೂಢಿಯೊಳಾ ರಾಜ್ಯಕೀರ್ತಿ ಹಬ್ಬಿದುದಾಗಳ್ ॥ ೨೩ ॥

ಎರಗಿದನಾ ಕಳಿಂಗನತಿದೈನ್ಯವನಾಂತಿರೆ ವಂಗನೆಲ್ಲಮಂ ।
ಚರಣಕೆ ನೀಡಲಾಂಧ್ರನೊಲಿದಾಗ ಸಲಾಮೆನಲಾ ತುರುಷ್ಕರುಂ ॥
ಸೆರಗನೆ ಒಡೆ ಪಾಂಡ್ಯನತಿಭಕ್ತಿಯನಾಂತಿರಲೋರಗಲ್ಲವಂ ।
ಹರಿಹರಭೂಪನಾಗ ಮೆರೆದಂ ಧರಣೀತಲಚಕ್ರವರ್ತಿವೊಲ್ ॥ ೨೪ ॥

ಇಂತು ಪರಿಣಮಿಸಿದ ಸ್ಥಿತಿಯಂ ಕಂಡ ಜನಂ ಮಾಧವನಂ ಕೊಂಡಾಡಲೆಳಸಿ—

ಸುರವರ್ಗಕ್ಕೆಲ್ಲ ಕೇಡಂ ಬಗೆಯುತೆ ದಿವಮಂ ಸೂರೆಗೊಂಡಿರ್ಪ ವೃತ್ರಾ ।
ಸುರನಂ ಸಂಹಾರಗೆಯ್ಯಲ್ ಸುರಪಗೆ ಮುನಿ ತನ್ನಸ್ಥಿಯಂ ಕೊಟ್ಟ ನೆಂಬರ್ ॥
ಭರದಿಂದೆಂತುಂ ತುರುಷ್ಕ[1]ರ್ಸರಿಯಲೆಸಗಿದಂ ಕ್ಷೇಮದಿಂ ತಾನುಮಿರ್ದೀ ।
ಪರಿ ಚಿತ್ರಂ ಧಾತ್ರಿಯಲ್ಲೀ ಹರಿಹರಗುರುಮಾಹಾತ್ಮ್ಯಮೆಂದಿರ್ಪರೆಲ್ಲಂ ॥ ೨೫ ॥

---

೨೩— 1 ಸಾಟಿ, ಸಮಾನ.

೨೫— 1 ಹಿಂದಕ್ಕೆ ಹೋಗುವಂತೆ.

ಎಂದು ಪೇಳುತ್ತಿರಲಾ ತನ್ನ ವಿಜಯಯಾತ್ರೆಯುಂ ಮುನಿವರಂಗೆ ನಿವೇದಿಸಿ ಹರಿಹರಂ ತನ್ನ ಪಟ್ಟಾಭಿಷೇಕಮುಂಟಪಸ್ಥಾನದೊಳರಮನೆಯು ಮನದರ ಸುತ್ತುಂ ನಗರಮುಮಂ ನಿರ್ಮಾಣಂಗೆಯ್ವ ಕಾರ್ಯಮಂ ಕೈಕೊಳ್ಳಲ್—

ವಿವಿಧಮೆನಿಪ್ಪ ಶಿಲ್ಪಕಲೆಯುನ್ನತಿಯುಂ ಭುವನಕ್ಕೆ ತೋರುತಂ ।
ಜವದೊಳೆ ಮೇಘಮಂಡಲವ ಚುಂಬಿಸಿದತ್ತುರೆ ರಾಜಮಂದಿರಂ ॥
ಭುವಿಯೊಳಗಾರುಮೊಂದುಮುರೆ ಕಾಣದ ವೈಭವದಿಂದ ಪತ್ತನಂ ।
ನವಮಿದೆನಲ್ಕೆ ರಂಜಿಸಿದುದೇಣ್ದೆಸೆಗಾವರ ಗೇಹದೆಂಟರಿಂ ॥ ೨೬ ॥

[1] ವಿದ್ಯಾಬಲದಿಂದಾದಿದು ।
ವಿದ್ಯುತ್ಕಾಂತಿಯುನುಮಿಳಿಕೆಗೆಯ್ವಂತಿರೆ ತಾಂ ॥
ವಿದ್ಯಾನಗರಮಿದೆಂದಾ ।
ವಿದ್ಯೆಗೆ ಗೌರವವನಾಗ ಹರಿಹರನಿತ್ತಂ ॥ ೨೭ ॥

ಧರ್ಮದ ಬೆಂಬಲಂ ದೊರೆಯೆ ರಾಜ್ಯಮಿದಾಗಿಹುದೆಂಬ ಭಾವನಾ ।
ಮರ್ಮದಿ ನಾಂ ಮೊದಲ್ಗೆ ಗುರುದಕ್ಷಿಣೆಯಿತ್ತಪೆನೆಂದು ಹರ್ಷದಿಂ ॥
ಧರ್ಮದ ಪೀಠಮಿರ್ಪಮಠಮಾಗಿಹ ಶೃಂಗಗಿರೀಂದ್ರಕಾಗ ಸ ।
ತ್ಕರ್ಮಿಯನಂತಮಾಗೆ ನೆರೆ ಭೂಮಿಯ ದಾನವ ಗೆಯ್ದನಾಗ ತಾಂ ॥ ೨೮ ॥

ಹರಿ ಕೊಟ್ಟನ್ನದ ಭಾಗವ ।
ಹರಿಗೆ ಮೊದಲ್ತಾಂ ನಿವೇದಿಸುವ ತೆರದಿಂ ॥
ಗುರು ಕೊಟ್ಟ ರಾಜ್ಯಭಾಗವ ।
ಗುರುವಿಗೆ ಮೊದಲಿತ್ತನಾತನಾದರದಿಂ ॥ ೨೯ ॥

ಈ ರೀತಿಯೊಳ್ಸದ್ಭಕ್ತಿಯುಳ್ಳವನಾಗಿ ಹರಿಹರಂ ಮುಂದುವರಿವಾ ಸಂಧಿಕಾಲದೊಳ್ದಿಕ್ಪ್ರದರ್ಶನಾರ್ಥಮಾಗಿ ಮಾಧವಂ ಕೆಲವು ರಾಜನೀತಿಗಳ ನುಪದೇಶಿಸಿದನದೆಂತೆನೆ—

---

೨೭— 1 ಉಪಾಸನೆ.

ಮಡದಿಯು ಮಂಗಲಸೂತ್ರದ ।
ದೃಢತ್ವದಿಂ ಪುರುಷನಾಯುಸಂ ವರ್ಧಿಸುಗುಂ ॥
ಪೊಡವಿಯು ಜನಗಳ ದಾರ್ಢ್ಯದೆ ।
ಪಡೆಯುತೆ ಭಾಗ್ಯವ ನೃಪಾಲಕಂ ಸ್ಪರ್ಧಿಸುಗುಂ ॥ ೩೦ ॥

ಜನರರಸಿನೊಲ್ಮೆಯಿಂ ಮೇ ।
ಣ್ಜನಪಾಲಂ ಪ್ರಜೆಗಳೊಲ್ಮೆಯಿಂ ಶೋಭಿಸುಗುಂ ॥
ಮಿನುಗುವ ನೀರಣೆಕಟ್ಟಂ ।
ದಣೆಕಟ್ಟಲ್ಲಿರ್ಪ ನೀರಿನಿಂ ನೆರೆ ಮೆರೆಗುಂ ॥ ೩೧ ॥

ಜನರಾಳಿಕೆಯೋ ಮೇಣಿದು ।
ಜನಪಾಲಕನಾಳಿಕೆಯೊ ಎನಲ್ತೋರದವೋಲ್ ॥
ಜನಜನಪಾಲರೊಳೆರಕಂ ।
ಜನಪದದೊಳ್ತೋರವೇಳ್ಕುಮಾರಿಗುಮರಿಯಲ್ ॥ ೩೨ ॥

ದೊರೆಯುಂಬಹಂಕೃತಿಯುನಾಂ ।
ತಿರಸಲ್ಲದು ಜನರಸಹ್ಯಪಡುವಂತೆ ॥
ದುರಹಂಕಾರಂ ಸಿರಿಯುಂ ।
ನೆರೆ ಕಳೆವುದು ಮುಪ್ಪು ಚೆಲ್ವನಳಿವಂತೆ ॥ ೩೩ ॥

ಧರೆಯುಂ ಪಲವುಮುಪಯಾಂ ।
ತರದಿಂ ಕೊಂಡೀಗಲೆನ್ನದೆನಲೇಂ ತಾಂ ॥
ಧರೆಯುವರನೆನ್ನವರೆನು ।
ತ್ತಿರಲಿಳೆಯೊಳ್ರಾಜನೆನಿಪನವನೆಂತುಂ ॥ ೩೪ ॥

ಜನಪನದೆಲ್ಲಾ ಐಸಿರಿ ।
ಜನಪತಿಯುಪಭೋಗಕೆಂದು ತಿಳಿವುದು ಸಲ್ಲಂ ॥
ಜನರೈಸಿರಿಯುಂ ಪೆರ್ಚಿಸೆ ॥
ಜನಪನ ರಾಜ್ಯಾಧಿಕಾರಸಂಪದಮೊಪ್ಪಂ ॥ ೩೫ ॥

ಜನಪನಧಿಕಾರವೆಲ್ಲಾ ।
ಜನಗಳ ಮೇಲಿರ್ಪುದೆಂದು ಹಿಗ್ಗುವುದೇಕೈ ॥
ಜನಪನ ಮೇಲೆಯು ಎಲ್ಲಾ ।
ಜನಂಗಳಧಿಕಾರವೊಂದು ತಗ್ಗಿರಬೇಕೈ ॥ ೩೬ ॥

ಬಾಧೆಯನೀಯದೆ ಪೂವಿಂ ।
ಗಾದರದಿಂ ಮಧುವನೀಂಟುವಂತಾರಡಿ ತಾಂ ॥
ಬಾಧಿಸದೆ ಲೋಗರಂ ಸಂ ।
ಪಾದಿಸೆ ಕಾಣ್ಕೆಯು ಧರಾಧಿಪತಿಗದು ವಿಹಿತಂ ॥ ೩೭ ॥

ಜನಗಳ್ಗೆ ದೂರನಾಗಿರು ।
ತನರ್ಥವಂ ಗೆಯ್ದು ಧನವ ಗಳಿಸುತ್ತಂ ತಾಂ ॥
ಗಣಿಸದೆ ದುರ್ವ್ಯಯಗೆಯ್ವಂ ।
ಧನಪತಿ ಪೊರತಲ್ಲವರಿಯೆ ಜನಪತಿಯೆಂತುಂ ॥ ೩೮ ॥

ಜನಪನ ಧನಸಂಗ್ರಹದಿಂ ।
ಜನರೊಳಗೇ ಧಾನ್ಯಸಂಗ್ರಹಂ ಮೇಲೆನಿಕುಂ ॥
ಧನಮುಂ ಬಾಯೊಳಗಿಡಲೇಂ ।
ಕೊನೆಗಾಣ್ಬುದೆ ಹಸಿವು ಧಾನ್ಯಮುಣ್ಣುವ ತನಕಂ ॥ ೩೯ ॥

ಧರಣೀಧೇನುವಿನಿಂ ಪಾ ।
ಲ್ಗರೆವೊಡೆ ಹೇ ರಾಜ, ಕರುಗಳಂದದಿ ಜನರಂ ॥
ಪೊರೆಯುದರಿಂದೆಲ್ಲರುಮುಂ ।
ಧರೆಗೆಯ್ಯದೆ ಬಿಡದು ತಾನೆ ಸುಖಭಾಜನರಂ ॥ ೪೦ ॥

ತಿರುಗಿ ಜಲವೀಯಲೆಂದೇ ।
ತರಣಿ ಜಲಾಶಯದ ನೀರ ಕೊಳ್ವಂತೆ ॥
ತಿರುಗಿ ಸುಖವೀಯೆ ಕೊಳ್ವುದು ।
ತೆರಿಗೆಯ ನೃಪನವರ್ಗೆ ಬಾಧೆಯಿರದಂತೆ ॥ ೪೧ ॥

ಪಾಲನ ಮೊದಲಾಗಿರ್ಪ ಗು ।
ಣಾಳಿಗಳಿಂ ಜನರ ಮನವ ರಂಜಿಸದರಸಂ ॥
ಪೇಳಲಜಂಗಳ ಕುಚಗಳ ।
ಹೋಲಿಕೆಗೊಳಗಾಗಿ ಧರೆಯೊಳಪ್ಪಂ ವಿರಸಂ ॥ ೪೨ ॥

ಜನರಂ ಪೀಡಿಸಲೆಲ್ಲರ ॥
ಮನದೊಳೆ ಸಂತಾಪವಾಗೆ ಹೊರಬೀಳ್ದನಲಂ ॥
ಜನಪನ ಕುಲಸಂಪತ್ಪ್ರಾ ।
ಣನಮಂ ಕೊಂಡಲ್ಲದಡಗಿಸದು ತಾಂ [1]ಕನಲಂ ॥ ೪೩ ॥

ಆರಿಂದುಪಕೃತಿಯಿಲ್ಲವೊ ।
ಆರಿಂದೆ ವಿಪತ್ತಿಮಾತ್ರಮೇ ಫಲವೋ ॥
ಆ ರಾಜನನಂದಜನರ್ ।
ದೂರದೆ ಬಿಡದಿರ್ದೊಡವರ್ಗದೇಂ ನಲವೋ ! ॥ ೪೪ ॥

ಜನರಂ ಪಾಲಿಪುದಾ ಸುರ ।
ಪನ ಭೋಗಂ ಪ್ರಾಪ್ತವಾಗೆ ಕಾರಣಮಕ್ಕುಂ ॥
ಜನರಂ ಪೀಡಿಸಲೆಲ್ಲಂ ।
ಕ್ಷಣದೊಳ್ನಿರ್ಮೂಲವಾಗೆ ಕಾರಣಮಕ್ಕುಂ ॥ ೪೫ ॥

ಪೊರೆದರಸಂ ಜನಪುಣ್ಯೋ ।
ತ್ಕರ ಷಡ್ಭಾಗಕ್ಕೆ ಭಾಗಿಯಪ್ಪಂ ತಾಂ ಮೇಣ್ ॥
ಪೊರೆಯದಿರೆ ಜನರ ಪಾಪೋ ।
ತ್ಕರ ಷಡ್ಭಾಗಕ್ಕೆ ಭಾಗಿಯಾಗದೆ ತಪ್ಪಂ ॥ ೪೬ ॥

ಪೊರೆಯುತೆ ವರ್ಣಾಶ್ರಮಮಂ ।
ಬರಲೀಯದೆ [1]ಬರವ, ತನ್ನ ದೇಶದ ಶಿಲ್ಪಂ ॥
ಪರಮಾವಧಿಗೇರ್ವಂತತಿ ।
ಭರದಿಂ ತಾಂ ಗೆಯ್ಯೆ ಭಾಗ್ಯಮಪ್ಪುದನಲ್ಪಂ ॥ ೪೭ ॥

---

೪೩— 1 ಕೋಪವನ್ನು.

೪೭— 1 ಕ್ಷಾಮವನ್ನು.

ನೆರವಾದೊಡವಿಲ್ಲದೊಡಂ ।
ಧರೆಯುವರವಗೊಳಿತವಾಳ್ಪುದರಸನ ಧರ್ಮಂ ॥
ಧರೆಯುವರ ಸತ್ಪ್ರಯತ್ನಕೆ ॥
ನೆರವಾಗದೊಡಾಗ ರಾಜನವನದಧರ್ಮಂ ॥ ೪೮ ॥

ಪರಿವೇಷ್ಟಿತಕಂಟಕನುಹ ।
ಪರಿಮಳಯುತಕೇತಕಿಯುವ್ರೊಲರಸಂ ಧರೆಯೊಳ್ ॥
ವರಗುಣಿಯಾಗಿರ್ದೊಡವೇಂ ।
ದುರುಳರೊಳೊಡಗೂಡೆ ತೊರೆವರವನಂ ಪ್ರಜೆಗಳ್ ॥ ೪೯ ॥

ನೆರೆ ದಿಟವೆನಿಪುದು ಗುಣದಿಂ ।
ದರಸಂ ಪ್ರತ್ಯಕ್ಷ ದೇವನೆಂಬುವ ಮಾತಂ ॥
[1] ಇರಲೈಶ್ವರ್ಯಾದಿಗಳಾ ।
ಪರದೈವದಿ, [2] ಸಂಧಿಯಾದಿಯಾದಾರ್ ನೃಪನೊಳ್ ॥ ೫೦ ॥

ಪ್ರಜೆಗಳನೆಲ್ಲರುವಂ ಸ್ವ ।
ಪ್ರಜೆಗಳ ತೆರದಿಂದೆ ಕಂಡು ಯುದ್ಧಕ್ಕೆಂದುಂ ॥
ನಿಜಮನವಂ ಸೋಲದೆ ತಾಂ ।
ವಿಜಯುವ ಪಡೆಯುವುದೆ ರಾಜಗದು ಬಹು ಚೆಂದಂ ॥ ೫೧ ॥

ಮಂತ್ರಿಸಮೂಹದೆ ರಾಜ್ಯದ ।
ತಂತ್ರವನೊಪ್ಪಿಸುತೆ ಸೌಧದೊಳ್ರಮಿಪ ನೃಪಂ ॥
ಚಿಂತಿಸದೆ ಪಾಲ ಬೆಕ್ಕಿನ ।
ಸಂತತಿಗುಣಲಿಟ್ಟ ಮೂಢನೇ ಎಂದೆನಿಪಂ ॥ ೫೨ ॥

---

೫೦-- 1 ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಸಂಪತ್ತು, ವೈರಾಗ್ಯ, ಮೋಕ್ಷ— ಈ ಆರು ಸಿದ್ಧಿಗಳು 2 ಸಂಧಿ (ಗೆಳೆತನವನ್ನು ಬೆಳೆಸುವದು), ವಿಗ್ರಹ (ಯುದ್ಧ), ಯಾನ (ವಿಜಯ ಯಾತ್ರೆ), ಆಸನ (ಸಮಯವನ್ನು ಕಾಯುತ್ತಾ ಸುರಕ್ಷಿತನಾಗಿರೋಣ), ದ್ವೈಧ (ಭೇದಭಾವ), ಆಶ್ರಯ (ಸಹಾಯವನ್ನು ಪಡೆಯುವದು),

ಅರಸನಧಿಕಾರಿವರ್ಗಕೆ ।
ಬೆರಗಾಗುತ್ತವರ ಬೆನ್ನ ಹಿಡಿದೊಡೆ ಬೆಲೆಯೇಂ? ॥
ಧರೆಯೊಳ್ಪಂಚೇಂದ್ರಿಯಗಳ ।
ಭರಕ್ಕೆ ವಶಮಾದ ಮನದವೊಲ್ಕೆಡದುಳಿಯಂ ॥ ೫೩ ॥

ತಿಳಿವುಂ ಧರ್ಮಮುಮೈಸಿರಿ ।
ಯೊಲವುಂ ಮೇಣ್ದೇಹದಾರ್ಢ್ಯಮುಂ ಜನತತಿಯೊಳ್ ॥
ಬೆಳೆವಂತೆ ಸರ್ವವಿಧದೊಳು ।
ಮಿಳೆಯೊಳ್ಕೃತ್ತ್ನಿಪುದು ರಾಜನತ್ಯಾದರದೊಳ್ ॥ ೫೪ ॥

[1] ಜಾತಿದ್ವೇಷವ ಮರೆಪ ವಿ ।
ಜಾತೀಯತಪಃಪ್ರಭಾವದಿಂದಿಹ ಋಷಿವೊಲ್ ॥
[2] ಜಾತಿದ್ವೇಷವ ಮರೆಪ ವಿ ।
ಜಾತೀಯಗುಣಂ ರಾಜನೆನಿಸಿಹುದು ಧಾರಿಣಿಯೊಳ್ ॥ ೫೫ ॥

ಮುಖ್ಯವಾಗಿ

[1] ಒಂದರಿಂ [2] ನೆರಡಂ ತಿಳಿ [3] ನಾ ।
ಲ್ಕಂದದೆ [4] ಮೂವರನುಮಾಗಿಸ್ಯೆ ನಿನ್ನವರಂ ॥
[5] ಸಂದೈದಂ ಗೆಲಿವಂ [6] ದಾ ।
ರಂದಳಿ [7] ದೇಳಂ ಬಿಡುತ್ತೆ ಪೊರೆ ಮಾನವರಂ ॥ ೫೬ ॥

ಇಂತವಂಗೆ ದಾರಿಯುಂ ತೋರ್ದಾ ಮಾಧವಂ ತಾಂ ಕೃತಾರ್ಥ ನೆಂದಿರ್ದಂ

---

೫೫ — 1 ಇಲಿ, ಬೆಕ್ಕು— ಮೊದಲಾದ ಜಾತಿಗಳ ಪರಸ್ಪರದ್ವೇಷವನ್ನು. 2 ಬ್ರಾಹ್ಮಣ, ಕ್ಷತ್ರಿಯ— ಮೊದಲಾದ ಜಾತಿಗಳ ದ್ವೇಷವನ್ನು.

೫೬ — 1 ಸುಬುದ್ಧಿ. 2 ಪಾಪಪುಣ್ಯಗಳು. 3 ಸಾಮ, ದಾನ, ಭೇದ, ದಂಡ. 4 ಶತ್ರು, ಮಿತ್ರ, ಉದಾಸೀನ 5 ಪಂಚೇಂದ್ರಿಯಗಳು. 6 ಸಂಧಿ ಮೊದಲಾದ ಆರು ಗುಣಗಳು. 7 ಏಳು ವ್ಯಸನಗಳು:— ಕುಡಿತ, ಜೂಜು, ಸ್ತ್ರೀಸಂಗ, ಬೇಟೆ, ದಂಡದಿಂದ ಹೊಡೆಯುವದು, ವಾಕ್ಪಾರುಷ್ಯ, ಅರ್ಥದೂಷಣ.

ಹರಿಹರರೈಕ್ಯದಿನೈಕ್ಯವ ।
ಹರಿಹರದೊಳ್ತಿಳಿಯಪೇಳ್ವನೆಂದೆನಲಿಂದುಂ ॥
ಹರಿಹರನುಂ ಹರಿಹರರತ ।
ಹರಿಹರಗುರುವರನುಮೆಮ್ಮ ರಕ್ಷಿಸಲೆಂದುಂ ॥

## ಹತ್ತನೇ ನೆಲೆ— ಸ್ವರಾಜ್ಯವೈಭವ.

ಶ್ರೀಪ್ರಮಥರೊಡೆಯನಾನತ ।
ತಾಪತ್ರಯಹರಣನಖಿಲಸುರತತಿವಿನುತಂ ॥
ಶ್ರೀಪಂಪಾಧ್ಯಕ್ಷಂ ಕರು ।
ಣಾಪೂರ್ಣಂ ಪೊರೆಯಲೆಮ್ಮ ಶಿವನನವರತಂ ॥ ೧ ॥

ಇಂತೆಂದ ಗುರುವರನುಪದೇಶಮಂ ಚಿತ್ತಂಗೊಟ್ಟು ಕೇಳಿದ ಹರಿಹರಂ—

ಗುರುವರ ಕೇಳ್ದೆನೀ ಸದುಪದೇಶವನೀ ಪರಿಯಲ್ಲಿ ಗೆಯ್ದು ನಾಂ ।
ಧರಣಿಯನಾಳ್ವ ಯೋಗ್ಯತೆಯದಿರ್ಪುದೊ ಇಲ್ಲವೊ ಕಾಣೆನೆನ್ನೊಳೀ ॥
ಪರಿಯಿಂತೆಲ್ಲಮುಂ ಕೃತಿಯೊಳೈತರೆ ತೋರಿಸುತೆಮ್ಮ ವಂಶದು ।
ದ್ಧರಣಕೆ ಸಾಹ್ಯಮಾಡಿ ನೆರೆ ತೋರ್ಪುದು ನಿಮ್ಮ ಪುರೋಹಿತತ್ವಮಂ ॥ ೨ ॥

ಎಂದು ಸಾಷ್ಟಾಂಗಪ್ರಣಾಮಂಗೆಯ್ದಂಗಲಾಚಿಕೊಂಡ ಹರಿಹರನಂ ಸಂತವಿಟ್ಟು ಮಾಧವನಂತೆಗೆಯ್ವೆನೆಂದಾತನನೊಡಂಬಡಿಸಿ ಆದರ್ಶಭೂತಮಾದ ಸ್ವರಾಜ್ಯಪದ್ಧತಿಯೊಳ್ ನಿಜಶಿಷ್ಯನಂ ಪಂಡಿತನಂ ಗೆಯ್ಯವೇಳ್ಕುಮೆಂಬ ಪೊಸಬಗೆಯುಜ್ಜುಗದೊಳಿರ್ದೊಡಗಲ್—

ದೇಶದ ಹಿತಮನೆ ಗೆಯ್ವು ।
ದ್ದೇಶದ ಹರಿಹರಗೆ ಮಾಧವನ ಮಂತ್ರಿತ್ವಂ ॥
ಕಾಸಿದ ಪಾಲ್ಸಕ್ಕರೆಯಿಂ ।
ಲೇಸಪ್ಪವೊಲಾದುದೆನಿಸಿ ತೋರೆ ಮಹತ್ತ್ವಂ ॥ ೩ ॥

'ಇದಂ ಬ್ರಾಹ್ಮ್ಯಂ ತೇಜಂ' ಮೆರೆದಪು 'ದಿದಂ ಕ್ಷಾತ್ರ'ಮಿಹುದೆಂ ।
ಬುದಂ ದ್ರೋಣಂ ತನ್ನೊಳ್ಬೆಳಗಿರೆ ಭರದ್ವಾಜಕುಲದೊಳ್ ॥
ಅದೆಂತುಂ ತಾನಾ ದ್ವಾಪರದ ನುಡಿಯಾಯ್ತೂ ಕಲಿಯೊಳಿ ।
ನ್ನಿದಂ ನೋಡೆಂಬೊಲ್ಮಾಧವನ ನಡೆಯೊಪ್ಪಿರ್ದುದರಿಯಲ್ ॥ ೪ ॥

ಶ್ರೀಮತಿಗೊಪ್ಪಿದಂ ಮುಖದ ಹೋಲಿಕೆಯಿಂದಮುಮಲ್ಲದೀ ಸುತಂ ।
ಶ್ರೀಮತಿಯೆಂಬ ನಾಮಮುಮನರ್ಥದೆ ತಾಳ್ದವನಂತೆ ಮಾಧವಂ ॥
ಭೂಮಿಯ ಭಾರಮಂ ವಹಿಸಿ ಭಾಗ್ಯಮುಮಂ ನೆರೆ ಪೊಂದುತೀಗ ನಿ ।
ಸ್ಸೀಮನಿವಂ ಕಲಾವಿದರೊಳೆಂದೆನಿಸಿರ್ದನಿಳಾತಳಾಗ್ರದೊಳ್ ॥ ೫ ॥

ಇಂತು ಭೂಭಾರಮಂ ವಹಿಸಿದೊಡನೆ ಅವಂ ಗೆಯ್ದ ಮುಖ್ಯವಿಷಯ ಮೇನೆಂದೊಡೆ

ಪ್ರತಿಯೊಂದೂರೊಳಮೆಲ್ಲ ಕಾರ್ಯಕುಶಲರ್ಪಿಂಪಿಂದಿರುತ್ತಾವಗಂ ।
ಕೃತಿಯಿಂ ಕರ್ಷಕವರ್ಗಕೆಲ್ಲ ಬಗೆಯಿಂ ಸಾಹ್ಯಂಗೊಡುತ್ತಂ, ಜನ ।
ಸ್ಥಿತಿಯಂ ಪೆರ್ಚಿಸುತಾಯುಮಂ ಪಡೆದು, ತಮ್ಮುದ್ಯೋಗದೊಳ್ಕಾಣುತು ।
ನ್ನತಿಯಂ [1]ಹನ್ನೆರಡಾಯಗಾರರಿರೆ ಗೆಯ್ದಂ ನಾಡಿನಲ್ಲೆಲ್ಲಿಯುಂ ॥ ೬ ॥

ಜನರೊಳ್ಕೈಗೆಲಸಂಗಳೆಲ್ಲರೊಳಮಿರ್ದೆಲ್ಲಗುರ್ವಾದಾಯಮಾ ।
ಯ್ತೆನೆ ಭಾಗ್ಯಂ ಜನರೆಲ್ಲರೊಳ್ ಹರಡಿಕೊಂಡಿತ್ತಲ್ಲದಿನ್ನೋರ್ವನೊಳ್ ॥
ಗಣಿಸಲ್ಕಾಗದ ರಾಶಿಯಾಗುತಿತರರ್ದೀನತ್ವಮಂ ಪೊಂದಲಾ ।
ಯ್ತೆನೆ ಪಕ್ಕಾಗದೆ ದೇಶಮೆಲ್ಲ ಸುಖದಿಂದಿರ್ದತ್ತದೇವೇಳ್ವೆನಾಂ ॥ ೭ ॥

ಅರಸರ್ ಪ್ರೋತ್ಸಾಹಿಸಲಾ ।
ಧರೆಯೊಳ್ಬಹುಬಗೆಯ ಕಲೆಗಳತ್ಯುನ್ನತಿಯಿಂ ॥
ಮೆರೆದಿರ್ದುವು ನೆರೆ ನೋಡಿದ ।
ಪರದೇಶದ ಜನರ ಮನವ ಸೆಳೆವಾ ಸ್ಥಿತಿಯಿಂ ॥ ೮ ॥

---

ಟಿ.— 1 ಈ ಹನ್ನೆರಡುಜನರನ್ನು ರೂಢಿಯಲ್ಲಿ ಬಾರಾಬಲೂತಿ ಎನ್ನುತ್ತಾರೆ.

ದೇಶದ ಬೆಳೆಯೆಲ್ಲಂ ನಿಜ ।
ದೇಶದ ಜನಕಾದ ಮೇಲೆ ಮಿಗಲುಳಿದೆಲ್ಲಾ ॥
ದೇಶಕದ ಕಳುಪುವುದರಿಂ ।
ದೇಶೀಯರ ರಕ್ಷೆಗಿನಿಸು[1]ಮೂಣೆಯುಮಿಲ್ಲಂ ॥ ೯ ॥

ಮಾಧವಶಿಷ್ಯರಾಳಿಕೆಯೊಳಲ್ಲಿಯ ನೇಯಿಗೆಯಂದವೆಂತು ಮೇ ।
ಲಾದುದೊ! ಕೈಯೊಳೇ ತೆಗೆದ ನೂಲನೆ ತಾಂ ನಿಲುವಂಗಿಗೆಯ್ಯೆ ತೆ ॥
ಳ್ಪಾದುದು ಮುದ್ರೆಯುಂಗುರದ ತೂತಿನೊಳೇ ಸಲೆ [1]ತೂರಿ ಬರ್ಪುದಿ ।
ನ್ನೇಧರೆಯೆಲ್ಲ ನೋಡಿ ಬೆರಗಾದಪರಿಂತು ಕಲಾವಿಶೇಷದಿಂ ॥ ೧೦ ॥

ಮಾಧವನ ಶಿಷ್ಯರಕ್ಷೆಯು ।
ಮಾಧವನಹ ಶಿವನ ದುಷ್ಟಶಿಕ್ಷೆಯುಮಿರಲಾ ॥
ಮೇದಿನಿ ಮೂಲೋಕಕ್ಕುಂ ।
ಮೋದಪ್ರದವಾದುದೆಂದು ಜನರೆಂಬರಲಾ! ॥ ೧೧ ॥

ಅಧಿಕಾರಂ ಬಡೆದಿರ್ದ ಮಾತ್ರಕೆ ನೃಪತ್ವಂ ಸಂದುದೆಂದಾ ಮಹೀ ।
ಬುಧನಾ ಯೋಧರ ಪೆರ್ಮೆಯಿಂದಲೆನಿತುಂ ಸಂತೃಪ್ತನಾದಾತನಾ ॥
ಗದೆ ಶಿಷ್ಯರ್ನೆರೆ ಭಾಷೆ ತಪ್ಪುವರ ಗಂಡರ್, ನೋಡೆ ಹಿಂದೂಜನಾಂ ।
ಗದೊಳಾದರ್ಶದ ರಾಜರೆಂದೆನಿಸೆ ಪಾರ್ವಂ ತೃಪ್ತಿಯುಂ ಪೊಂದಿದಂ ॥ ೧೨ ॥

ನೃಪತತಿಗೀ ನವೀನನೃಪಪದ್ಧತಿಯುಂ ಕಲಿಪೊಂದು ಕಾರ್ಯದೊಳ್ ।
ನೃಪಗುರು ಮಗ್ನನಾದೊಡಮದೊಂದರೊಳೇ [1]ಇರದಾಗಳಳ್ತಿಯಿಂ ॥
ನೃಪನಭಿಲಾಷೆಯುಂತಖಿಲವೇದಕೆ ಭಾಷ್ಯವ ಮಾಡಿ ಮಾನವ ।
ರ್ಗುಪಕೃತಿಗೆಯ್ದ ಮಾಧವನ ಕಾರ್ಯದ ದಕ್ಷತೆ ಲೋಕಕದ್ಭುತಂ ॥ ೧೩ ।

೯— 1 ಕೊರತೆ.

೧೦— 1 ಇದು ಇತಿಹಾಸಪ್ರಸಿದ್ಧವಾದ ವಿಷಯ.

೧೩— 1 ಇರದೆ+ಆಗಳ್.

ವೇದಕೆ ಭಾಷ್ಯಮಂ ರಚಿಸಿ ವೇದದ ಕರ್ಮವ ಗೆಯ್ವುತೆಂದುಮಾ ।
ವೇದವಿಚಾರಮಂ ಜನರ ಚಿತ್ತದಿ ಬಿಂಬಿಸಿ ಲೋಗರೆಲ್ಲರಂ ॥
ವೇದದ ಕರ್ಮದೊಳ್ನಿಲಿಸಿ ವೈದಿಕಧರ್ಮದ ರಕ್ಷೆಗೆಯ್ದನಾ ।
ವೇದವಿದಂ ಕೃತಾರ್ಥಳೆನೆ ಧರ್ಮದ ದೇವತೆ ಮಾಧವಾರ್ಯನಿಂ ॥ ೧೪ ॥

ವೇದೋದ್ಧಾರಂ ಗೆಯ್ದಿರ ।
ಲಾದುದು ಬಿರುದಾಗ ಸರ್ವಸಮ್ಮತಿಯಿಂ ॥
ಮೇದಿನಿಯು ವಿಪ್ರವರನಹ ।
ಮಾಧವನಾಚಾರ್ಯನೆಂದು ಬಹುಮತಿಯಿಂ ॥ ೧೫ ॥

ವೇದವ ಮೊದಲುದ್ಧರಿಸುತೆ ।
ಮೇದಿನಿಯು ಬಳಿಕ್ಕಮೆತ್ತೆ [1]ಮಾಧವನಾಗಳ್ ॥
ವೇದೋದ್ಧಾರದ ಜೊತೆಯೊಳೆ ।
ಮೇದಿನಿಯಂ ಪೊರೆದನಲ್ತೆ [2]ಮಾಧವನೀಗಳ್ ॥ ೧೬ ॥

ಮೀನಾಗಿ ವೇದವಂ ತಂ ।
ದೀ ನರತತಿಗಿತ್ತನಲ್ತೆ [1]ಮಾಧವನಾಗಳ್ ॥
ಮೀನಾಗದೆ ವೇದಾರ್ಥವ ।
ದೀನಜನಕ್ಕಿತ್ತನಲ್ತೆ! [2]ಮಾಧವನೀಗಳ್ ॥ ೧೭ ॥

ತಳೆಯುತೆ ಪಂದಿಯ ರೂಪವ ।
ನಿಳೆಯಂ ತಾಂ ಪೊರೆದಿರಲ್ಕೆ [1]ಮಾಧವನಾಗಳ್ ॥
ತಳೆಯುತೆ [2]ಪಂದಿಯ ಚಿತ್ರವ ।
ನಿಳೆಯಂ ಪೊರೆದಿರ್ಪನಲ್ತೆ [3]ಮಾಧವನೀಗಳ್ ॥ ೧೮ ॥

---

೧೬— 1 ವಿಷ್ಣು. 2 ಮಾಧವಾಚಾರ್ಯರು.

೧೭— 1 ವಿಷ್ಣು. 2 ಮಾಧವಾಚಾರ್ಯರು.

೧೮ — 1 ವಿಷ್ಣು. 2 ವರಾಹದ ಚಿತ್ರ (ಧ್ವಜದಲ್ಲಿ). 3 ಮಾಧವಾಚಾರ್ಯರು.

ಕಳಿದು ಪರರಸುವ ವೇದವ ।
ನಿಳೆಯುಂ ಪೊರೆದಾತನಾಗೆ [1]ಮಾಧವನಾಗಳ್ ॥
ಕೊಲೆಗೆಯ್ಯದಿರ್ದ ವೇದವ ।
ನಿಳೆಯುಂ ಪೊರೆದಾತನಲ್ತೆ [2]ಮಾಧವನೀಗಳ್ ॥ ೧೯ ॥

ಮೀಮಾಂಸಂ ಜ್ಯೋತಿಷಂ ವ್ಯಾಕರಣಮುಮರಿಯಲ್ವೈದ್ಯಮುಂ ಲೋಕದೊಳ್ಮೇ ।
ಣ್ಪ್ರಾಮಾಣ್ಯಗ್ರಂಥಮೆಲ್ಲಂ ವಿವರಣೆಗಳನಾಂತಿರ್ದು ಭೂಲೋಕದೊಳ್ಸ॥
ಕ್ಷೇಮಂ ಬೆತ್ತಲ್ಲಿಯುಂ ಖ್ಯಾತಿಯ ಪಡೆದವೆನಲ್ಪೇಳ್ವುದೇನಾತನಾ ನಿ ।
ಸ್ಸೀಮಂ ಪಾಂಡಿತ್ಯಮೆಂತುಂ ಸಕಲಜನಸುಖಾವಾಸಮಾಗಿರ್ದುದೆಂದುಂ ॥

ವೈದಿಕನಾದವಂ ಜಗದಿ ವೈದಿಕವಿದ್ಯೆಯನೊಂದ ಪೆರ್ಚಿಪಂ ।
ತಾದಪನೆಂತುಮೆನ್ನದಿರಿ ಮಾಧವನಿರ್ಮಿತರಾಜಧಾನಿಯೊಳ್ ॥
ಭೂಧರದಂತೆ ತೋರ್ಪ ಭವನಂಗಳ ಶಿಲ್ಪವ ನೋಡೆ ಪೇಳಲೇಂ ।
ವೈದಿಕವಿದ್ಯೆಯಂ ಬೆಳೆಸಿ ಲೌಕಿಕವಿದ್ಯೆಯುಮಂ ನೆರೆ ಪೆರ್ಚಿಸಿರ್ದಪಂ॥೨೧॥

ಮಾಧವಮಂತ್ರಿಯಿರ್ದದರಿನಾಗಿನ ಕನ್ನಡನಾಡಿದಾಗ ತಾ ।
ನಾದುದು ಭಾರತೋರ್ವಿಗೆ ಶಿರಸ್ಸೆನಲಾ ಶಿರದಲ್ಲಿ ನೋಡಲಿಂ ॥
ಪಾದುದು ಫಾಲದೊಳ್ತಿಲಕದಂತಿರೆ ಭಾರತಭೂಮಿಗೆಂದು ಪೆಂ ।
ಪಾಮುದೆನಲ್ಕೆ ವೈಭವದೊಳಾ ವಿಜಯಾನಗರಾಭಿದಂ ಪುರಂ ॥ ೨೨ ॥

ಇಳೆಯುಮರಂ ನಿಜಾಶ್ರಿತರ ರಕ್ಷಕನಾ ಗುರು ಮಂತ್ರಿಯಾಗಲಾ ।
ಬಲರಿಪುವಿಂದ ಬರ್ಪಳಲ ನೀಗುವೆವಿನ್ನೆನುತದ್ರಿಸಂಕುಲಂ ॥
ಗಳಿಲನೆ ಬಂದವಿಲ್ಲಿಗೆನಲುನ್ನತದೇವನಿವಾಸಮೆಲ್ಲಿಯುಂ ।
ತೊಳಗಿದವಲ್ಲಿ ನೋಡೆ ವಿಜಯಾನಗರಾಭಿದ ರಾಜಧಾನಿಯೊಳ್ ॥ ೨೩ ॥

---

೧೯— 1 ವಿಷ್ಣು. 2 ಮಾಧವಾಚಾರ್ಯರು.

ಭಾರತಯುದ್ಧದಲ್ಲಿ ಬಹುಕೀರ್ತಿಯ ಪೊಂದಿದ ಚಕ್ರಬಿಂಬವೆಂ ।
ಬಾರಮಣೀಯಕೋಟೆಯೊಳಪೋಪೊಡೆ ಬರ್ಪುದು ಪಿಂದಕೈತರಲ್ ॥
ದಾರಿಯೆ ಸಿಕ್ಕದೀ ನೃಪರ ಕೋಟೆಯೊಳಕ್ಕೆ ಪದಂಗಳಿಕ್ಕೆ ಮುಂ ।
ದೋರದ ಕೋಟೆಯಾಯ್ತು ವಿಜಯಾನಗರಾಖ್ಯದ ರಾಜಧಾನಿಯೊಳ್॥೨೪॥

ಧರಣಿಯೊಳಿಲ್ಲ ದೊಡ್ಡದೆನಲಾವುದಿದೇ, ಬಹುಬಂಧುರತ್ವದಿಂ ।
ಮೆರೆವುದಿದೇ, ವಿಶೇಷವಿಭವಂಗಳ ತೋರ್ಪುದಿದೇ, ವಿಲಾಸಭಾ ॥
ಸುರತೆಯೊಳೊಪ್ಪಿ ಶೋಭಿಪುದಿದೇ, ಎನೆ ಲೋಕದೊಳೆಲ್ಲರುಂ ಮನೋ ।
ಹರಮೆನಿಸಿರ್ದುದಾಗ ವಿಜಯಾನಗರಾಖ್ಯದ ರಾಜಧಾನಿ ತಾಂ ॥ ೨೫ ॥

ನೋಡದ ಕಣ್ಣದೇಕೆ ನವರಾಜ್ಯದ ವೈಭವಮೆಲ್ಲಮಂ, ಕರಂ ।
ಪಾಡದ ಜಿಹ್ವೆಯೇಕೆ ಪರಧರ್ಮಸಹಿಷ್ಣುತೆಯಂ, ಮನೋಜ್ಞಮೆಂ ॥
ದಾಡುತ ಕೇಳದಿರ್ಪ ಕಿವಿಯೇತಕೆ ರಾಜರ ಸೌಮ್ಯಕೀರ್ತಿಯಂ ।
ನಾಡಿಗೆ [1]ಗಾಡಿಯಾದುದರಿಯಲ್ ವಿಜಯಾನಗರಂ ಸುಖಾಕರಂ ॥ ೨೬ ॥

ಒಂದೆಡೆ ಭಕ್ತಗೋಷ್ಠಿ, ಮಗುಳೊಂದೆಡೆ ಕೀರ್ತನದಿಂಪು, ಕೇಳಲಿ ।
ನ್ನೊಂದೆಡೆಯೊಳ್ಕಲಾವಿದರ ಮಂಡಲಮೊಂದೆಡೆ ಕಾರ್ಯದಕ್ಷರಿ ॥
ನ್ನೊಂದೆಡೆ ರಾಷ್ಟ್ರಗೀತೆಯಿರಲೊಂದೆಡೆ ಸುಗ್ಗಿಯ ಹಾಡು, ನೋಡಲಿ ।
ನ್ನೊಂದೆಡೆ ಗಾನಮಿಂತು ಮೆರೆಯಲ್ ವಿಜಯಾನಗರಂ ಮನೋಹರಂ॥೨೭॥

ದೇವರ ಸೃಷ್ಟಿಯೊಳ್ಬಹಳರತ್ನಗಳಿರ್ಪೆಡೆ ತಾಂ ಸಮುದ್ರಮೆಂ ।
ದೀವಸುಧಾತಲಂ ತಿಳಿದುಕೊಂಡುದು ಸುಳ್ಳೆನೆ ಗೆಯ್ದ ರೀತಿಯಿಂ ॥
ದೀವಿಭವಾಧಿಕಸ್ಥಲದಿ ತೋರ್ದವನಂತಸುರತ್ನರಾಜಿಗಳ್ ।
ತೀವಿದ ವರ್ತಕಪ್ರಸರದಂಗಡಿಯೊಳ್ ಬಹುವಾಗಿ ಸೇರುತಾ ॥ ೨೮ ॥

ಕಮಲದ ಪುಷ್ಪಮೆಲ್ಲಿಯುಮಿರಲ್ವಿಜಯಾನಗರೋರ್ವಿಯಲ್ಲಿಯಾ ।
ವಿಮಲಸರೋವರಂಗಳೊಳುಮೆಲ್ಲರ ಮಂದಿರದಲ್ಲಿಯುಂ ದ್ವಿಜೋ ॥
ತ್ತಮಗೊಲಿದಾ ಹರಿಪ್ರಿಯೆಯೆ ಪಾರ್ವನ ರಾಜ್ಯದೊಳೆಲ್ಲಿ ನಿಲ್ಲಲಾ ।
ಕಮಲೆಯ ವಾಸಕೆಂದವುಗಳಲ್ಲಿಹವೆಂದೆನಲಿಂತು ಶೋಭಿಕುಂ ॥ ೨೯ ॥

---

೨೬— 1 ಸೌಂದರ್ಯ.

ಕರದೊಳ್ತೋರ್ಪುವು ಕತ್ತಿಗಳ್ಪಟರೊಳಾರುಂ ಸತ್ತುದಿಲ್ಲಂ ಮಹಾ ।
ಬಿರುದಾಂತಿರ್ಪ ಕಲಾವಿದರ್ಕ್ಕೆರೆದಪರ್ ಸೋಲೆಂಬುದಿಲ್ಲಾಗರ್ವಿ ॥
ನ್ನರಿಯಲ್ಕೋವಿದರುಂಟು ಕೈಗೆಲಸದೊಳ್ಮೇಣ್ದೈನ್ಯಮಿಲ್ಲಾಗರ್ವೆಂ ।
ದಿರಲೇವೇಳ್ವುದೊ ರಾಜ್ಯಭಾರದ ಬೆಡಂಗಂ ಮಾಧವಾಚಾರ್ಯರಾ ॥ ೩೦ ॥

ರವಿಶಶಿಗಳ ವೀಥಿಗಳಿಂ ।
ಬಿವು ಬರಿಮಾತಲ್ಲವೆಂದು ತಿಳಿವಂತೆ ॥
ರವಿಶಶಿಗಳ ಧಿಕ್ಕರಿಸಿ ।
ರ್ಪುವು ರತ್ನಗಳಲ್ಲಿ ಬೀದಿ ಪೊಳೆವಂತೆ ॥ ೩೧ ॥

ಬಾಲಕರೆಲ್ಲರ ಕೈಯೊಳ್ ।
ತಾಳಿಯ ಗರಿ ಕಂಠ ಕಡತ ಬಳಪಂಗಳ್ ॥
ಮೇಳವಿಸಿರ್ಪುವು ವಾಣಿಯ ।
ಲೀಲೆಯ ಗೆಯ್ವಂತೆ ತೋರುತಾ ನಾಡೊಳ್ ॥ ೩೨ ॥

[1]ಕರೆ ಬಂದ ಮೇಲೆ ತಾಂ ಬಲು ।
[2]ಕರೆಕರೆಯಿಂ [3]ತೆರುವೆವೆಂದು [4]ಕರೆಯದೆ [5]ಕರಮಂ ॥
ಕರೆಯಿಂ ಮುನ್ನಮೆ ಜನರ ।
ಕ್ಕರೆಯಿಂದದನೀವರಲ್ತೆ ಮುಗಿಯುತೆ [6]ಕರಮಂ ॥ ೩೩ ॥

ಶಿವೆ ತಾನೇ ಭುವನೇಶ್ವರೀ ಎನಿಸಿಕೊಂಡಿಲ್ಲಿರ್ಪಳಿನ್ನಾನುಮಾ ।
ಶಿವನಂ ಸೇರ್ದಪೆನೆಂದು ಗಂಗೆ ಭರದಿಂ ಬಂದಿರ್ಪಳೆಂಬಂತೆವೊಲ್ ॥
ಅವನೀಭಾಗದೊಳೆಲ್ಲಿ ನೋಡಿದೊಡಮುಂ ನೀರ್ದುಂಬಿದಾ ಕಾಲ್ಗಳಿಂ ।
ತವೆ ತೋರ್ಪಾ ಕೆರೆಕಟ್ಟೆಬಾವಿಗಳಿನೊಪ್ಪಿರ್ಕುಂ ಸಮಂತೆಲ್ಲಿಯುಂ ॥ ೩೪ ॥

---

೩೩— 1 ಕಂದಾಯವನ್ನು ಕೊಡೆಂದು ಕೇಳುವಿಕೆ. 2 ತಾಪತ್ರಯವನ್ನು ಪಟ್ಟು ಕೊಂಡು. 3 ದಂಡಕ್ಕಾಗಿ ಕೊಡುವೆವೆಂದು. 4 ಹೆಸರಿಡದೆ. 5 ಕಂದಾಯವನ್ನು 6 ಕೈಯನ್ನು.

ಮಳೆಯದನಿಶ್ಚಿತಮದಂ ।
ದಿಳೆ ನದಿಯಿಂದಂ ಪ್ರಶಸ್ತಮೆಂಬರ್ಕವಿಗಳ್ ॥
ಮಳೆ ತಪ್ಪದೆ ನದಿಯಿರ್ಪೀ ।
ಇಳೆಗಾವುದೊ ಮುಖ್ಯಮರಿಯೆ ನದಿಯೋ? ಮಳೆಯೋ?॥೩೫॥

ಮೂವತ್ತಮೂರುಕೋಟಿಯ ।
ದೇವತೆಗಳುಮಿಲ್ಲಿ ಬಂದು ಸಲೆ ನೆಲಸಿಹವೊಲ್ ॥
ಆ ವಸುಧೆಯ ನೆಲಮೆಲ್ಲಂ ।
ದೇವಾಲಯಮಯವೆ ಆದುದಂದಿಳೆಯರಿಯಲ್ ॥ ೩೬ ॥

ಹರಿಹರಸಹೋದರರ ದೆಸೆ ।
ತಿರುಗಿದುದೆಂಬುವದಕಿಂತಲೀಗಳ್ಧರೆಯೊಳ್ ॥
ಹರಿಹರರ ದೆಸೆ ತಿರುಗಿತೆನೆ ।
ಮೆರೆದುದು ಕೈಂಕರ್ಯಮೆಲ್ಲ ದೇವಾಲಯದೊಳ್ ॥ ೩೭ ॥

ಅತ್ತರೆನಲ್ಸುವಾಸನೆಯ ನೀರ್ಪಿಡಿಯೆಂದೆನಲಾನೆಯಲ್ಲಿ ಪೆಣ್ ।
ಮುತ್ತೆನೆ ಮೌಕ್ತಿಕಂ, ಮುನಿಯೆನಲ್ಋಷಿ, ಸಾಕೆನೆ ರಕ್ಷಿಸೆಂಬುದಾ ॥
ಗಿತ್ತರಿಯಲ್ಕೆ ಗೋಳದನಿ, ಬಂಧಿಪುದಾವೃತಿ, ಕೋಪಮೆಂದು ಬೇ ।
ಸತ್ತಿಹುದಾ ಧರಾತಲದೊಳೆಲ್ಲಿಯುಮಾರಿಗುಮಿಲ್ಲವಾರಯಲ್ ॥ ೩೮ ॥

ಇರಿಯೆನಲಾದರೋಕ್ತಿ, ಲಯಮೆಂದೆನೆ ರಾಗವಿರಾಮಕಾಲಮುಂ ।
ಸರಿಯೆನೆ ಪೋಗೆನುತ್ತೊರೆವುದುಂ, ಮಡಿ ಧೌತಸುವಸ್ತ್ರಮಲ್ಲದಾ ॥
ಇರಿವುದುಮಂತೆ ನಾಶಿಪುದುಮಲ್ಲದೆ ದೂರಕೆ ಪೋಗೆ ಪೇಳ್ವುದುಂ ।
ಮರಣಮುಮರ್ಥಮಾಗದಿಹುದೆಂತಹ ಪೈಮೆಯೊ ಮಾಧವಾರ್ಯರಾ॥೩೯॥

ಕಾಡೆನಲಾ ಅಗಣ್ಯಮುರೆ ಸಾಲಮೆನಲ್ಕದು ವೃಕ್ಷಮೊಂದು ಮೇಣ್ ।
ರೂಢಿಯ ಮಿಂಚೆನಲ್ಪದದ ಭೂಷಣಮುಂ ಕವಿ ಕಾವ್ಯಕರ್ತನಿಂ ॥
ತಾಡುವರಲ್ತೆ ಪೀಡಿಪುದರೊಳ್ಕಡಮೆಂದೆನೆ ಮೀರುವರ್ಥದೊಳ್ ।
ಗಾಢದಿ ಮುತ್ತುವರ್ಥದೊಳುಮಾಡರಹೋ. ಜನರೆಂದುಮಾರಿಗುಂ ॥ ೪೦ ॥

ಆನೆಗಳಲ್ಲಿ ಕಾಡಿನೊಳಿ ಗೆಯ್ದಿಹ ಗುಂಡಿಗಳಲ್ಲಿ ಬಿಳ್ದಿರಲ್ ।
ಮಾನವನೊರ್ವನಾಗಳದ ದಂಡಿಸಲಿನ್ನದು ಸೋತ ಮೇಲೆ ತಾಂ ॥
ಕಾಣಿಸಿಕೊಂಡು ಬೇರೆ ನರನಟ್ಟುತೆ ದಂಡಿಸಿದಾತನಂ ಮಹಾ ।
ದಾನಿಯೆಸಲ್ಕೆ ನೀಡಿ ತಿನಿಸಂ ಪಡೆವರ್ ನಲವಂ ಗಜಾಳಿಯಾ ॥ ೪೧ ॥

ಬಿಳಿದಾದೈರಾವತದಿಂ ।
ನಿಲಿಂಪರಾಜನದದಾಯ್ತು ಪೆರ್ಚುಗೆ ಮುನ್ನಂ ॥
ಬಿಳಿಯಾನೆ ವಿಜಯನಗರದ ।
ನೆಲದೆರೆಯನ ಪಟ್ಟದಾನೆಯಾಗಿರಲಿನ್ನೇಂ ॥ ೪೨ ॥


ನೃಪರಾ ಆಳಿಕೆ ಲೋಕಕೆಲ್ಲಕುಮದೊಂದಾದರ್ಶಮೊಂದಾಗಿರಲ್ ।
ಜಪಕಾಯ್ತೊ ಧರೆಯಲ್ಲಿ ರಾಜರ ಪೆಸರ್, ಮೇಣ್ಕೀರ್ತಿಯಾಶಾಂತಮಾ ।
ಗಿ ಪವಿತ್ರತೆಯಾನಲಾಗ ಪರದೇಶಾಧೀಶರುಂ ತಮ್ಮತ ।
ದುಪಕಾರಕ್ಕೆನೆ ಮೈತ್ರಿಯಂ ಬಳೆಸಿದರ್ತಾವಾಗಿ ಸಂತೋಷದಿಂ ॥ ೪೩ ॥

ಏಕಾಂತಸ್ಥಾನಮಾಗಿರ್ದುದರಿನಿದು ಮಹಾಯೋಗಿಗಳ್ಸೇರುತೆಂದುಂ ।
ಶ್ರೀಕಾಂತಧ್ಯಾನಮಂ ಸಾಗಿಪೊಡೆ ಸಮುಚಿತಸ್ಥಾನಮಾಗಿರ್ದುದೀಗಳ್ ॥
ಶ್ರೀಕಾಂತಧ್ಯಾನಮುಂ ಸಾಗಿರೆ ಪರರಿಗೆ ದುರ್ಭೇದ್ಯಮಾಗಿರ್ದು ರಾಜ ।
ಗೇಕಾಂತಾಖಂಡರಾಜ್ಯಸ್ಥಿತಿಗುಚಿತಮೆನಲ್ಶೋಭಿಸಿತ್ತಾ ಸ್ವರಾಜ್ಯಂ ॥ ೪೪ ॥

ಎಲ್ಲಿಯು ಭಾಗ್ಯಮೋ, ಸುರಪಗೆಲ್ಲಿಯು ದೈವದ ಸದ್ವಿಲಾಸಮೋ ।
ಎಲ್ಲಿಯುದೇಳ್ಗೆಯೋ, ಸುರರ ಸಂಘದೊಳೆಲ್ಲಿಯುದೈಕಮತ್ಯಮೋ ॥
ಎಲ್ಲಿಯು ಸೌಖ್ಯಮೋ ಎನಿಸಿ ಧಿಕ್ಕರಿಕುಂ ದಿವಮಂ ಸ್ವಶೋಭೆಯಿಂ ।
ದಲ್ಲಿಯುದಾ ಮಹಾನವಮಿಯುತ್ಸವಮಂದಿನ ರಾಜರಾಜಿಯೊಳ್ ॥ ೪೫ ॥

ಬಗೆಬಗೆಯಾದ ವೃಕ್ಷತತಿ ಪೂರ್ಣಫಲಪ್ರದಮಾಗಿ ತಾಂ ಪ್ರಜಾ ।
ಳಿಗೆ ಸಕಲೇಷ್ಟಮಂ ಕೊಡುತಲಿರ್ದುದ ಪೂರ್ಣವಿಚಾರ ಮಾಡಲೇಂ ॥
ಬಗೆಗತಿಹರ್ಷಮಾದಪುದೊ ತೋಂಟದ ಗುಂಪು ಪುರೋಪಕಂಠದೊಳ್ ।
ನಗುತಿಹುದಿಂದ್ರನಂದನಮನಾಶ್ರಿತಂಷ್ಟವನೀವ ಪೆಂಪಿನೊಳ್ ॥ ೪೬ ॥

( ವಿಜಯವಿಠಲದೇವಸ್ಥಾನ )



........ದೇವತಾಗಾರಮಿದೆಸೆ........"

ಶ್ರೀವಿದ್ಯಾರಣ್ಯಕಾವ್ಯ ೧೦—೪೭

ಇದು ವಿದ್ಯಾಶಾಲೆಯಿಲ್ಲಿರ್ಪುದು ಜನರಿಳಿಯಲ್ಧರ್ಮಶಾಲಾಸಮೂಹಂ ।
ಮುದದಿಂದಂ ಪೌರರೆಲ್ಲರ್ನೆರೆವ ಪರಿಷದಿರ್ಪಿಕ್ಕೆಯಿಲ್ಲಿಪ್ಪುದೆಲ್ಲಾ ॥
ಚದುರರ್ಗೈದಿರ್ಪ ವಸ್ತುವ್ರಜವ ನೆರಪಿದೀ ದರ್ಶನಾಗಾರಮಿನ್ನಿಂ ।
ತಿದು ಸತ್ರಂ ದೇವತಾಗಾರಮಿದೆನೆ ಮೆರೆಗುಂ ಸೌಧದಾ ಮಂದಿರಂಗಳ್ ॥

ದಾರಿಯೊಳೆಲ್ಲ ತೋಪುಗಳ್, ದಾರಿಯೊಳೆಲ್ಲಿಯುಮಿರ್ಪ ಬಾವಿಗಳ್ ।
ದಾರಿಯೊಳೆಲ್ಲ ಸಾಲಪುರಗಳ್, ಸುವಿಶಾಲಮೆನಿಪ್ಪ ವೀಥಿಗಳ್ ॥
ದಾರಿಯೊಳೆಲ್ಲ ಹೂಗಿಡಗಳಿಂದಲೆ ತುಂಬಿದ ತೋಟಮೆಲ್ಲಿಯುಂ ।
ತೋರುತೆ ಕಣ್ಗೆ ಮೇಣ್ಮನಕೆ ಸೌಖ್ಯಮನಿತ್ತುದು ರಾಜ್ಯಸಂಭ್ರಮಂ ॥ ೪೮ ॥

ಭೂರಿದಯಾಳುಗಳ್ಪರಮಧಾರ್ಮಿಕರಾದ ನೃಪಾಲಕರ್ ತುಲಾ ।
ಭಾರವ ವಿಪ್ರವರ್ಗಕುರೆ ದಾನವ ಮಾಡುತೆ ಬಿಟ್ಟ ನೀರಿನಿಂ ॥
ಧಾರಿಣಿ ಶೈತ್ಯಮಂ ಪಡೆದು ಧರ್ಮದ ವೃಕ್ಷವ ಪೆರ್ಚಿಸಿತ್ತೆನಲ್ ।
ಪಾರಮೆ ಇಲ್ಲಮಾದುದಹ! ದಾನಕೆ ಮಾಧವಶಿಷ್ಯರಾಜರಾ ॥ ೪೯ ॥

ನೆಲೆಗೊಂಡಿರ್ದುದು ಭೂಪಭೂಸುರರ ಯೋಗಂ ತೋರುತಾ ದೇಶದೊಳ್ ।
ನೆಲೆಗೊಂಡಿರ್ದುದು ಯುದ್ಧಸಿದ್ಧತೆಯು ನೋಡಿಲ್ಲೆಂಬುದಾ ದೇಶದೊಳ್ ॥
ನೆಲೆಗೊಂಡಿರ್ದುದು ತಂತ್ರಮಿಲ್ಲದಿಹ ಧರ್ಮೋತ್ಕರ್ಷಮಾದೇಶದೊಳ್ ।
ನೆಲೆಗೊಂಡಿರ್ದುದು ರಾಜನಾ ಜನರ ಸಾಹ್ಯಕ್ಕೆಂಬುದಾ ದೇಶದೊಳ್ ॥೫೦॥

ಅರ್ಣವವೃತ ಧರೆಯೊಳ್ಜನ ।
ಕರ್ಣಗಳೊಳಗೆಲ್ಲಗೆಯ್ದ ವಿಜಯಧ್ವನಿಯಿಂ ॥
ಕರ್ಣಾಟಕತ್ವಮೊಗಳ್ ।
ಪೂರ್ಣತೆಯಾಂತೊಪ್ಪುತಿರ್ದುದಾ ದ್ವಿಜಮುನಿಯಿಂ ॥ ೫೧ ॥

ಇಂತು—

ಹರಿಹರನಾಳಿದನಲ್ಲಿಂ ।
ದುರೆ ಬುಕ್ಕನ ರಾಜ್ಯಭಾರದಿರವುಂ ಮುಗಿಯಲ್ ॥
ಗುರುಕರುಣದಿಂದಲಿಮ್ಮಡಿ ।
ಹರಿಹರನುಂ ಪೊರೆದನವನಿಯುವನಂ ನುತಿಸಲ್ ॥ ೫೨ ॥

ಇಂತರೆನೂರಬ್ದಂಗಳ್ಮಂತ್ರಿವರ್ಗಕ್ಕೆ ಮಾರ್ಗದರ್ಶಕನಾಗಿ ನಿಂತಿರ್ದನ್ನೆವರಂ ರಾಜ್ಯಚಕ್ರಕ್ಕೆ ದೊರೆತ ಚಲನೆಯಿಂ ಧರ್ಮದುದ್ಧಾರಮಾಗಿ ಗುರುದಕ್ಷಿಣೆಯ ಬಹುಭಾಗದ ಋಣಂ ತೀರ್ದುದೆಂದು ಮನಂಗಂಡಲ್ಲಿಂದಿನ್ನು ಪರಮಾರ್ಥವೃತ್ತಿಯುಮಂ ಪ್ರದರ್ಶನಂಗೆಯ್ದು ಪೂರ್ಣಕೃತಕೃತ್ಯನಾಗಿ ಜೀವನ್ಮುಕ್ತಿಸುಖಾನುಭವಮಂ ಮಾಡಲ್ವೇಳ್ಕುಮೆಂದು ಬಯಸಿ ರಾಜ್ಯಭಾರಮಂ ಕಳಲ್ಚಿಕೊಂಡು ಶೃಂಗಗಿರಿಯನೈದಿ ಪೂರ್ವಸಿದ್ಧತೆಯಂತೆ ಶ್ರೀಭಾರತೀಕೃಷ್ಣತೀರ್ಥರಿಂ ತುರ್ಯಾಶ್ರಮಸ್ವೀಕಾರಮಂ ಗೆಯ್ದು ಶ್ರೀವಿದ್ಯಾರಣ್ಯರೆಂಬ ಗುರುಪುತ್ತ್ರನಾಮಧೇಯಮಂ ಪರಿಗ್ರಹಿಸಲಾಗಳ್ಟನ ರವರಂ ಕರ್ಣಾಟಕಸಿಂಹಾಸನಪ್ರತಿಷ್ಠಾಪನಾಚಾರ್ಯ ಶ್ರೀಮದ್ರಾಜಾಧಿರಾಜಗುರುಭೂಮಂಡಲಾಚಾರ್ಯರೆಂದು ಬಿರುದನುಗ್ಘಡಿಸಲ್

ತರುಣಿಯು ಗರ್ಭದಿ ಪೊರಗೈ ।
ತರಲಾ ಪುನ್ನಾಮನರಕಭಯಮಂ ಪಿತೃಗಳ್ ॥
ತೊರೆದಿರ್ದೀಗಳ್ದೀಕ್ಷಾಂ ।
ತರದಿಂ ಸದ್ಗತಿಯ ಪಡೆದರೇವೇಳ್ದಪೆನಾಂ ॥ ೫೩ ॥

ಇಂತಾಗಲ್ —

ಭುವನೇಶ್ವರಿಯೆನೆ ಪೆಸರೀ ।
ಭುವನದಿ ತಾಂ ರೂಢನಾಮಮಾಗಿರ್ದೀಗಳ್ ॥
[1] ಭುವನೇಶ್ವರರಂ ಗೆಯ್ದು ।
ಭುವನತ್ರಯಕಾದುದರ್ಥಯುತಮೆಂದೆಂಬೊಲ್ ॥ ೫೪ ॥

ಅಲ್ಲಿಂ ಬಳಿಯುಂ—

ವಿದ್ಯಾರಣ್ಯಮುನೀಶನಾಗ ಕೃತಕೃತ್ಯಂ ತಾಳ್ದು ಸಂತೋಷಮಂ ।
ವಿದ್ಯಾತೀರ್ಥಗುರೂತ್ತಮಾಖ್ಯರ ಸಮಾಧಿಸ್ಥಾನದೊಳ್ಗೆಯ್ಸಿದಂ ॥
ವಿದ್ಯಾಶಂಕರದೇವಮಂದಿರಮನಾಗಳ್ಶಿಲ್ಪವಿದ್ವಾಂಸರೊಳ್ ।
ವಿದ್ಯಾಪ್ರೌಢಿಮೆ ತೀರಿತೆಂದೆನಿಸೆ ಶೃಂಗೇರೀಪುರೀಮಧ್ಯದೊಳ್ ॥ ೫೫ ॥

---

೫೪ — 1 ಹರಿಹರ ಮೊದಲಾದವರನ್ನು ರಾಜತ್ವದಿಂದಲೂ ಶ್ರೀವಿದ್ಯಾರಣ್ಯರನ್ನು ಗುರುತ್ವದಿಂದಲೂ ಲೋಕದೊಡೆಯರನ್ನಾಗಿ.

ಜಗದೊಳ್ಖ್ಯಾತಿಯುನಾಂತ ದೇಶವೆನಿಸಿರ್ದತ್ತಾದೊಡಂ ನೋಡಲೇಂ ।
ಜಗದೊಳ್ಭಾಗವುದೊಂದಿದೆಂದೆನಿಕುವೊಂದೀಶಂ ದ್ವಿಜೋತ್ತಂಸನೀ ॥
ಜಗಕೆಲ್ಲಂ ಗುರುವಾದ ಪೀಠದೊಳೆ ವಿದ್ಯಾರಣ್ಯರೆಂದಾಗಿ ಮುಂ ।
ಜಗದೊಳ್ ಖ್ಯಾತಿಯು ಪೊಂದೆ ಶೃಂಗಗಿರಿಯೊಳ್ನಿಲ್ವಂತೆ ಗೆಯ್ದಂ ದಿಟಂ॥೫೬॥

ನೆರೆ ಕರ್ಣಾಟಕದೊಳ್ಸ್ವರಾಜ್ಯದ ಮಹಾಪೀಠಪ್ರತಿಷ್ಠಾಪನಾ ।
ಭರದಿಂ ಮುಂದೆ ಜನರ್ಸ್ವಧರ್ಮಪರರಾ..ಲ್ಸಾಹ್ಯಮಾಯ್ತೆಂದು ಲೋ ॥
ಗರ ಸಂಘಂ ಗುರುಪೀಠಮುಂ ಮೆರೆವ ವಿದ್ಯಾರಣ್ಯರಾದಂದಿನಿಂ ।
ಕರೆವರ್ಕನ್ನಡನಾಡ ಸುಸ್ಥಿತಿಯು ಗೆಯ್ದಾಚಾರ್ಯರೆಂದೆಂದಿಗುಂ ॥ ೫೭ ॥

ಧರ್ಮದ ಪೀಠದೊಳ್ಕುಳಿತ ಮಾಧವನಾಗಳನಂತಶಿಷ್ಯರಂ ।
ಧರ್ಮದ ಮಾತಿನೊಳ್ನಿಪುಣರಾಗಿರೆ [1] ಗೆಯ್ದವರೆಲ್ಲ ಧಾತ್ರಿಯೊಳ್ ॥
ಧರ್ಮದ ಪೆರ್ಮೆಯುಂ ಪ್ರಸರಿಪಂತೆ ನಿಯೋಗಿಸಿ ಮಿಕ್ಕ ಕಾಲದೊಳ್ ।
ಧರ್ಮಕೆ ಜೀವವಿಟ್ಟು ಬರೆದಂ ನೆರೆ ತತ್ತ್ವವಿಚಾರವೆಲ್ಲಮಂ ॥ ೫೮ ॥

ಈ ಬಗೆಯುದ್ಯೋಗಂ ಮುಂದುವರಿಯಲ್ —

ಬರೆದೇಂ ವೇದಾಂತವೊಂದಂ ಭುವನದ ಜನಗಳ್ನೋಡಲಾನಾಗಳೆಂತುಂ ।
ನೆರೆ ವಿದ್ಯಾರಣ್ಯನೀಗಳ್ಬರೆದಿಹನರಿಯಲ್ಸರ್ವಶಾಸ್ತ್ರಂಗಳಂ ಸ ॥
ಚ್ಚರಿತಂ ತಾಂ ಶಿಷ್ಯನಿಂ ಸೋಲನೆ ಗುರು ಬಯಸುತ್ತಿರ್ಪುದಂಬುಕ್ತಿ-
ಯೆನ್ನೊಳ್ ।
ಮೆರೆಗುಂ ಸಾರ್ಥಕ್ಯಮಾಂತೆಂದಿರಬಹುದೆನಿಕುಂ ಶಂಕರಾಚಾರ್ಯವರ್ಯಂ॥೫೯॥

ಇಂತೆಣಿಪಂತಿರೆ ವಿಜಯನಗರದ ಅರಸರೇ ಮೊದಲಾದ ಶಿಷ್ಯವರ್ಗದಿಂ ಪಾದಪೂಜೆಯುಂ ಪಡೆದು ತನ್ನ ಗುರುತ್ವಮುನಿನ್ನುಂ ಸಾರ್ಥಕಂಗೊಳಿಸಲೆಂದು ಶಿಷ್ಯಕೋಟಿಯನುದ್ಧರಂಗೆಯ್ವುದ್ದೇಶದಿಂ ವಾರಣಾಸಿಯವರೆಗಂ ದಿಗ್ವಿಜಯಯಾತ್ರೆಯುಂ ಪೊರಟು ಮಾರ್ಗದೊಳೆಲ್ಲಂ ಧರ್ಮಪ್ರತಿಷ್ಠೆ

---

೫೮ — 1 ಗೆಯ್ದು+ಅವರೆಲ್ಲ.

ಯಂ ಗೆಯ್ದು ವಾರಣಾಸಿಯೊಳ್ಶ್ರೀವ್ಯಾಸರ ದರ್ಶನಮಂ ಪಡೆದು ತಮ್ಮ ಸರ್ವಗ್ರಂಥಂಗಳುಮನವರ್ಗೆ ನಿವೇದಿಸಿ ಪೂರ್ವಾಶ್ರಮನಾಮಧೇಯ ದಂತೆ ತುರ್ಯಾಶ್ರಮನಾಮಧೇಯಮುಮನ್ವರ್ಥಮಾದುದೆಂದವರಿಂ ಪೆರ್ಚಿನ ಮೆಚ್ಚುಗೆಯಂ ಪಡೆದು ಕೃತಾರ್ಥರಾಗಿ ಹಿಂದಿರುಗಿ ಬಂದು ಜೀವನ್ಮುಕ್ತಿ ಸುಖಾನುಭವಮಂ ಗೆಯ್ಯುತ್ತಿರ್ಪುದಂ ನೋಡಿ—

ಕನಸಿನೊಳೈದಿ ಧಾತನೆಲೆ ಸದ್ಗುರು ಎನ್ನಯ ಕಟ್ಟೆಗೀಗ ಮ ।
ನ್ನಣೆಗೊಡು, ಮರ್ತ್ಯರಾಯುಮುಗಿದಿರ್ಪುದು ನಿನ್ನಯ ಜನ್ಮವಾಗಿ ನೀಂ ॥
ಘನಬಲನೆಂದು ಬಲ್ಲೆನುರೆ ಯೋಗದ ಸಾಹ್ಯದೆ ಪೆರ್ಚಲಾಯುಮೀ ।
ಗಿನ ಕಲಿಕಾಲಮಂ ನೆನೆದು ಬಾ, ನಿಜಧಾಮಕೆ ಯೋಗಿವಲ್ಲಭಾ ॥ ೬೦ ॥

ಅದರಂತೆಯೇ—

ಬರೆದಂ ಶಾಸ್ತ್ರಂಗಳಂ, ಶಾಸ್ತ್ರದ ನಿಯಮಮವನಾಂ ಮೀರ್ವುದಲ್ಲೆಂದು ಯೋಗೀ।
ಶ್ವರನಾಗ[1]ಳ್ರತ್ನಮುಂ ಖಂಗುಣಮಿಳಿಶಕೆಯಾಗಲ್ಕ್ಷಯಾಭಿಖ್ಯಸಂವ ॥
ತ್ಸರದೊಳ್ಜ್ಯೇಷ್ಠಾಖ್ಯಮಾಸಾಂತದಿ ಜನರರಿಯಲ್ತಾಂ ಸಮಾಧಿಸ್ಥನಾದಂ ।
ಧರೆಯೊಳ್ಪೂರ್ಣತ್ವಮುಂ ಪೊಂದಿರಲುರುಭರದಿಂ ಧರ್ಮಸಂಸ್ಥಾಪನಂ ತಾಂ ॥

ಅಂತರ್ಧಾನವ ಪೊಂದಿದ ।
ನಂತಾಗಳ್ತಾಂ ತ್ರಯೋದಶೀತಿಥಿಯೊಳ್ ॥
ಅಂತರವರ್ಜಿತ[1] ವಿದ್ಯೆಯ ।
ನಂತಜನರ್ಪಡೆಯಲಾಗೆ ತಾಂ ಗೆಯ್ದಿಳೆಯೊಳ್ ॥ ೬೨ ॥

ವಿದ್ಯಾರಣ್ಯರ ಕೀರ್ತಿಯ ।
ವಿದ್ಯುತ್ಪ್ರಭೆ ಬೆಳೆಯೆ ವಿಜಯನಗರದ ರಾಜಂ ॥
ವಿದ್ಯಾರಣ್ಯಪುರಾಖ್ಯವ ।
ವಿದ್ಯಾವಂತರ್ಗೆ ಕೊಟ್ಟನದ್ಭುತತೇಜಂ ॥ ೬೩ ॥

---

೬೧— 1 ಶಾ. ಶ. ೧೩೦೯

೬೨— 1 ವಿದ್ಯೆ+ಅನಂತಜನರ್.

ಮೆರೆದಾ ಧರ್ಮಶ್ರದ್ಧೆಗೆ ।
ಬೆರೆಯಲ್ದೇಶಾಭಿಮಾನವೆರಡರ ದೆಸೆಯಿಂ ॥
ನೆರೆ ರತ್ನಕೆ ಕುಂದಣವುಂ ।
ಬೆರಸಿದವೊಲ್ ರಮ್ಯಮೆನಿಸಿ ಬೆಳಗಿತು ರಸೆಯುಂ ॥ ೬೪ ॥

ಇಂತು ವಿದ್ಯಾರಣ್ಯರಂತರ್ಧಾನರಾದೊಡಮವರ ಶಿಷ್ಯರಪ್ಪ ರಾಜರವರುಪದೇಶಮಂ ತಲೆಯೊಳ್ಪೊತ್ತು ಮುಂದೆಯುಂ—

ನರಪತಿವರ್ಗದೊಳ್ಮಗೆ ಮನ್ನಣೆ ಪೆರ್ಚಿರುತಿರ್ದೊಡಂ ತುರು ।
ಷ್ಕರ ಬಿರುಸೆಲ್ಲಮಂ ಮರೆಯುದಿರ್ದೊಡಮುಂ ಹಗೆ ಸಲ್ಲದೆಂದು ತಾಂ ॥
ನೆರೆಯೊಳ[1]ಗಲ್ಲವುದ್ದಿನಗೆ ಮೈತ್ರಿಯನೀಯುತುದಾರಭಾವದಿಂ ।
ಮೆರೆದರೆನಲ್ಕದೇಂ ಸುಗುಣದಂದಮೊ ಮಾಧವಶಿಷ್ಯರಾಜರಾ ॥ ೬೫ ॥

ಜನರೊಳಗೇಕನಿಷ್ಠೆಯಿಹುದಾವುದೊ ನೋಡಲದೇ ದೃಢಾಗೊಳ ।
ಲ್ಕೆನುತೆ ಸಹಾನುಭೂತಿ ಪರಧರ್ಮದೊಳಿರ್ಪುದೆ ಹಿಂದುಗಳ್ಗೆ ಭೂ ॥
ಷಣಮೆನೆ ಸಿಂಹಪೀಠದಿ [1]ಕುರಾನನವನಿಟ್ಟ ನೃಪಾಳಿ ಶೋಭಿಕುಂ ।
ನೆನೆಯೆ ಕುರಾನಕೇ ಮಹಮದೀಯರ ವಂದನೆಯಪ್ಪ ರೀತಿಯಂ ॥ ೬೬ ॥

ಇಂತಾ ರಾಜಮಂಡಲಿ ತಮ್ಮ ಗುರೂತ್ತಮಪಾದಂಗಳ್ಕಣ್ಮುಂದೆಯೇ ಇರ್ದಂತೆ ಭಾವಿಸುತ್ತಿರಲ್—

ಅಡಗಿದನಾ ಗುರುವೆಂಬೀ ।
ನುಡಿ ಜಡತೆಯ ತೋರ್ಪುದಡಕನಾಗಿಹ ತನುವಂ ॥
ಬಿಡುತೆ ಜಡಮೆನುತೆ ತಾನೆ ।
ಲ್ಲೆಡೆಯೊಳುಮಿಹನೆಂಬುದೈದಿದುದು ಜನಮನವಂ ॥ ೬೭ ॥

ಆದುದರಿಂದವರ ವಿಚಾರಂಗಳೊಳೆಲ್ಲಮುಂ—

ಎಲ್ಲಿಯುಮಿರ್ದಪಂ ಗುರುವರಂ ಬಿಡದೀಕ್ಷಿಸುತೆಮ್ಮ ಧರ್ಮಮಂ ।
ಬಲ್ಲವನಿರ್ದಪಂ ಗುರುವರಂ ಬಿಡದೀಕ್ಷಿಸುತೆಮ್ಮ ರಾಜ್ಯಮಂ ॥
ಮೆಲ್ಲನೆ ಮೆಲ್ಲನಾ ಗುರುವರಂ ಬಿಡದೀಕ್ಷಿಪನೆಮ್ಮೊಳೈಕ್ಯಮಂ ।
ನಲ್ಲನವಂ ಜಗದ್ಗುರುವರಂ ಬಿಡದೀಕ್ಷಿಪನೆಮ್ಮ ಚಿತ್ತಮಂ ॥ ೬೮ ॥

---

೬೫— 1 ಬಹಮನಿರಾಜ್ಯದಲ್ಲಿದ್ದ ಅಲ್ಲಾವುದ್ದೀನನೆಂಬ ಅರಸನಿಗೆ.

೬೬— 1 ಕುರಾನ್ ಎಂಬುದು ಮುಸಲಮಾನರ ಧರ್ಮಗ್ರಂಥವು.

ಎಂಬ ಕಲ್ಪನೆಗಳಿಂ ತುಂಬಿ

ಶಂಕರ, ಚಂದ್ರಶೇಖರನೆ, ಲಾಲಿಪುದೀಗಳಿದೊಂದು ಬಿನ್ನಪಂ ।
ಕಿಂಕರಸಂಕುಲಂ ಪರಮಧಾರ್ಮಿಕಮಾಗುತೆ ಮೇಣ್ಸ್ವರಾಜ್ಯದೊಳ್ ॥
ಬಿಂಕವ ಕಾಣಲಾ ಮುನಿಯ ತೇಜದ ರಶ್ಮಿಯನೊಂದನಾದೊಡಂ ।
ನೀಂ ಕೃಪೆದೋರುತೆಮ್ಮೊಳಿಡು ಪೆಂಪಿನ ಹಂಪೆಯನಾಳ್ದ ಚಿದ್ಘನ ॥ ೬೯ ॥

ಜಯಮಕ್ಕೆ ಧರ್ಮದೃಷ್ಟಿಗೆ ।
ಜಯಮಕ್ಕೆಮ ಧರ್ಮರಾಜ್ಯಭಾರಕ್ಕೆ ॥
ಜಯಮಕ್ಕೆ ಭರತಭೂಮಿಗೆ ।
ಜಯಮಕ್ಕೆಮ ಸತ್ಪ್ರಜಾಸಮೂಹಕ್ಕೆ ॥ ೭೦ ॥

ಎಂಬ ಪ್ರಾರ್ಥನೆಯನರ್ಪಿಸುವುದರೊಳವರ ಮನಂ ಮಗ್ನಮಾಗಿರ್ದುದು.

ವೇದಾಂಗಂ ಶಂಕರಸ್ಥಾಪಿತಮತನಿಚಯಂ ಶಾಸ್ತ್ರಮುಂ ಪೊಂದಿ ತೋರ್ಪ೯ಂ।
ತಾದೀ [1]ಪದ್ಯಾಂಕದಿಂದೀ ಕವಿತೆಯನನುಸಂಧಾನಮಂ ಗೆಯ್ವ ಲೋಗ ॥
ರ್ಗಾದೇವಂ ಷಡ್ಗುಣೈಶ್ವರ್ಯವ ಕೊಡುವನೆನುತ್ತೀಗ ತಾಂ ಮೂರುಸೂಳುಂ ।
ಮೋದಂ ಬೆತ್ತುಚ್ಚನಾದಂ ಪ್ರವಹಿಸೆ ಕೃತಿಯೀ ಸಾರಿ ಪೇಳ್ವಂತೆ ತೋರ್ಕುಂ ॥

ಹರಿಹರರೈಕ್ಯದಿನೈಕ್ಯವ ।
ಹರಿಹರದೊಳ್ತಿಳಿಯಪೇಳ್ವನೆಂದೆನಲಿಂದುಂ ॥
ಹರಿಹರನುಂ ಹರಿಹರರತ ।
ಹರಿಹರಗುರುವರನುಮೆಮ್ಮ ರಕ್ಷಿಸಲೆಂದುಂ ॥

ಇಂತಿದು ಕನ್ನಡನುಡಿವೆಣ್ಣ ನುಣ್ಣುಡಿಯ ಬಿನ್ನಣದ ಚಿಣ್ಣನಪ್ಪ ಚಿದಂಬರಂ
ತಾಯಡಿಗೆ ತೊಡಿಸಲೆಂದು ಸಡಗರದಿಂ ಬಿಡದೊಡರ್ಚಿದ ಯೋಗೇಶ್ವರ
ಚರಿತ್ರಯಪ್ಪ ಶ್ರೀವಿದ್ಯಾರಣ್ಯಕಾವ್ಯಮೆಂಬೀ ಬೆಡಗಿನ ತೊಡರ
ನುಣ್ಚರಂ ಯೋಗಶಾಸ್ತ್ರೋಕ್ತದಶವಿಧನಾದಂಗಳಂತೆ ಪತ್ತು
ನೆಲೆಗಳೊಳ್ ಸಂಚಾರಮಂ ಮಾಡಿ ಮುಗಿದುದು.

---

೭೧— 1 ಪದ್ಯಸಂಖ್ಯೆ ೬೬೬.

# ಸೂಚನೆ.

ಈ ಗ್ರಂಥಕರ್ತರ ಇನ್ನೂ ಕೆಲವು ಗ್ರಂಥಗಳಲ್ಲಿ ಗೀತಾರ್ಥ ವಿವರಣೆ, ಜೀವನ್ಮುಕ್ತಿವಿವೇಕ, ಕಲಿಸಂತರಣ– ಇವು ಮೈಸೂರು ಗವರ್ನ್‌ಮೆಂಟ್ ಹೈಸ್ಕೂಲ್ ಪಂಡಿತರು ವೇ. ಸಾಲಿಗ್ರಾಮ ನಾರಾಯಣ ಶಾಸ್ತ್ರಿಗಳಲ್ಲಿಯೂ; ಭಗವದ್ಗೀತಾಸಾರವಿಚಾರವು ಬೆಂಗಳೂರ ಕ್ಯಾಕ್ಸ್ಟನ್ ಪ್ರೆಸ್ಸಿನ ಮ. ನಾರಾಯಣಯ್ಯಂಗಾರ್ಯ ರಲ್ಲಿಯೂ; ಮನಸ್ಸಿಗುಪದೇಶ, ಮಾರುತಿಯ ಚರಿತ್ರೆ–ಇವು ಧಾರ ವಾಡದ ಕರ್ನಾಟಕ ಪ್ರಿಂಟಿಂಗ ವರ್ಕ್ಸಿನಲ್ಲಿಯೂ ದೊರೆಯುವವು.

## ಈ ಗ್ರಂಥಕರ್ತರ ಇನ್ನೂ ಕೆಲವು ಗ್ರಂಥಗಳು.

# ರಾಸಕ್ರೀಡೆ.

ಪಶ್ಚಿಮದ ಬಿರುಗಾಳಿಯಿಂದ ಬುಡಮೇಲಾಗುವಂತಿರುವ ಶ್ರದ್ಧೆಯ ಮೂಲಸ್ತಂಭವನ್ನು ಆಕ್ಷೇಪಸಮಾಧಾನರೂಪವಾದ ವಿಚಾರವಿಶೇಷಗಳಿಂದ ಗಟ್ಟಿಗೊಳಿಸಿರುವ ಶ್ರೀಮದ್ಭಾಗವತದ ಕಥಾಭಾಗ.

**ಬೆಲೆ: ರೂ. ೦—೬—೦.**

# ಶ್ರೀರಾಮನ ಮತ್ತು ರಾಮನಾಮದ ಮಹಿಮೆ.

ಶ್ರೀ ತುಲಸೀರಾಮಾಯಣವನ್ನು ಹಿಡಿದು ಬರೆದ ಭಕ್ತಿರಸದ ದೇವಗಂಗಾಸ್ವರೂಪವಾದ ಪವಿತ್ರ ವಿಚಾರ. **ಬೆಲೆ: ರೂ. ೦—೪—೦.**

# ಗಣಪತಿಸ್ವಯಂವರ, ಅನಸೂಯಾಖ್ಯಾನ ಮತ್ತು ಧ್ರುವಾಖ್ಯಾನ.

ಪುರಾಣದ ಕಥೆಗಳಲ್ಲಿರುವ ಧರ್ಮನೀತಿಗಳನ್ನು ಕಣ್ಣಿಗೆ ಕಟ್ಟಿದ ಹಾಗೆ ಚೆನ್ನಾಗಿ ಬಿಚ್ಚಿ ತೋರಿಸಿ ಧರ್ಮಪೀಠದಲ್ಲಿ ನಿಂತು ಪ್ರತಿಪಾದಿಸುವುದಕ್ಕೆ ತಕ್ಕ ಪದಪದ್ಯಗಳೊಡನೆ ಸಮಗ್ರವಾಗಿ ಸಿದ್ಧಗೊಳಿಸಿರುವ ಕೀರ್ತನ-ಹಂಕಥೆ-ಗಳು. **ಬೆಲೆ: ಒಂದೊಂದಕ್ಕೆ ರೂ. ೦—೪—೦.**

# ಪರಮಾತ್ಮಸ್ತುತಿ.

ಪರಮಾತ್ಮನ ಮಹಿಮಾವಿಶೇಷಗಳು ಮನಸ್ಸಿನಲ್ಲಿ ಮೂಡುವಂತೆ ಮೃದುಮಧುರಶೈಲಿಯಿಂದ ಮನೋಹರವಾಗಿರುವ ಷಟ್ಪದಿಗ್ರಂಥ. ವಿದ್ಯಾವರ್ಧಕಸಂಘದವರಿಂದ ಬಹುಮಾನವನ್ನು ಪಡೆದದ್ದು.

**ಬೆಲೆ: ರೂ. ೦—೩—೦.**

ಸಿಕ್ಕುವ ಸ್ಥಳಗಳು:—

(೧) **ಎಮ್. ಎಸ್. ರಾವ್ ಕಂಪೆನಿ,** ಅವಿನ್ಯುರೋಡ್, **ಬೆಂಗಳೂರು ಸಿಟಿ.**

(೨) **ಪಿ. ಎ. ಪೈ ಸಹೋದರರು,** ಪುಸ್ತಕವ್ಯಾಪಾರಿಗಳು, **ಉಡುಪಿ.** (ದ. ಕ).

(೩) **ಶಂಕರಪುಸ್ತಕಭಾಂಡಾರ, ಮಾಳಮಡ್ಡಿ, ಧಾರವಾಡ.**

**ಈ ಗ್ರಂಥಕರ್ತರ ಇನ್ನೂ ಕೆಲವು ಗ್ರಂಥಗಳು.**

# ಆರ್ಯಧರ್ಮಪ್ರದೀಪ.

ಧರ್ಮಭೂಮಿಯೆಂದು ಪ್ರಸಿದ್ಧವಾಗಿರುವ ಈ ದೇಶದಲ್ಲಿ ಧರ್ಮಜ್ಞಾನವು ಹುಡುಗರ ಮನಸ್ಸಿನಲ್ಲಿ ಕೂಡ ಚೆನ್ನಾಗಿ ಬಿಂಬಿಸುವಂತೆ ದೇವರು, ಜಗತ್ತು, ಧರ್ಮ, ಅವತಾರ ಮತ್ತು ಜನ್ಮಾಂತರ, ವಿದ್ಯಾರ್ಥಿವೃತ್ತಿ, ಗೃಹಸ್ಥವೃತ್ತಿ, ಕರ್ಮಯೋಗ, ರಾಜಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗ ಮೊದಲಾದ ವಿಚಾರಗಳನ್ನು ಚೆನ್ನಾಗಿ ವಿವರಿಸಿ ಅವುಗಳಿಗೆ ಪ್ರಾಚೀನ ಶಾಸ್ತ್ರೋಕ್ತಿಗಳನ್ನೂ ಬೇರೆ ಬೇರೆ ಪಂಥಗಳ ಈಚೀಚಿನ ಸಾಧುಸಂತರ ವಚನವಿಶೇಷಗಳನ್ನೂ ಅನೇಕ ಕವಿಗಳ ಉದ್ಗಾರಗಳನ್ನೂ ಪ್ರಮಾಣವಾಗಿ ಕೊಟ್ಟು ಅನೇಕ ಯುಕ್ತಿಗಳಿಂದಲೂ ಅವುಗಳನ್ನು ಪರಿಪುಷ್ಟಗೊಳಿಸಿ ಆ ತತ್ವಾರ್ಥಗಳನ್ನು ಆಚರಣೆಯಲ್ಲಿ ತೋರಿಸಿದ ಪುರಾಣಪುರುಷರ ದೃಷ್ಟಾಂತಗಳನ್ನೂ ದುಂದುಮಾಡಿ ವೈದಿಕಧರ್ಮದ ಸಾರ್ವಜನಿಕಧರ್ಮಸ್ವರೂಪವನ್ನು ವೀರ್ಯವತ್ತರಭಾಷೆಯಿಂದ ಮನಗಾಣಿಸುವ ಗ್ರಂಥ.

**ಬೆಲೆ: ರೂ. ೨—೮—೦.**

# ಆತ್ಮಶಕ್ತಿಯ ತೇಜಸ್ಸು.

ಮನುಷ್ಯನಲ್ಲಿ ಅಪ್ರತಿಮಸಾಮರ್ಥ್ಯವು ಆವಿರ್ಭವಿಸುವಂತೆಮಾಡಿ ಕೀರ್ತಿಶರೀರರೂಪವಾದ ಚಿರಂಜೀವಿತ್ವವನ್ನು ತಂದುಕೊಡುವಂಥ ಸ್ವದೇಶಭಕ್ತಿ, ಗೋಭಕ್ತಿ, ಮಾತೃಭಕ್ತಿ, ಮಾತೃಭಾಷಾಭಕ್ತಿ, ರಾಜಭಕ್ತಿ, ಬ್ರಹ್ಮಚರ್ಯ, ಧೈರ್ಯ, ಉದ್ಯೋಗ, ಧರ್ಮನಿಷ್ಠೆ, ಪರಮಾರ್ಥವೃತ್ತಿ ಮೊದಲಾದ ಆತ್ಮಶಕ್ತಿಯ ವಿವಿಧವಿಚಾರವಿಶೇಷಗಳನ್ನು ವಿವರಿಸಿ ಆರ್ಯಸಂಸ್ಕೃತಿಯ ದೃಷ್ಟಿಯಿಂದ ಅವುಗಳೆಲ್ಲಾ ಕೃತಿಸಾಧ್ಯಗಳೆಂಬುದನ್ನು ಮನಗಾಣಿಸುವುದಕ್ಕಾಗಿ ಇತಿಹಾಸಪ್ರಸಿದ್ಧರಾದ ಲೋಕೋತ್ತರವಿಭೂತಿಗಳ ಆಚರಣೆಗಳನ್ನು ಉದಾಹರಿಸುವ ಉತ್ತಮಗ್ರಂಥ. **ಬೆಲೆ: ೧—೮—೦.**

ಸಿಕ್ಕುವ ಸ್ಥಳಗಳು.—

**(೧) ಎಮ್. ಎಸ್. ರಾವ್ ಕಂಪೆನಿ,** ಅವಿನ್ಯುರೋಡ್,
**ಬೆಂಗಳೂರು ಸಿಟಿ.**

**(೨) ಪಿ. ಎ. ಪೈ ಸಹೋದರರು, ಪುಸ್ತಕವ್ಯಾಪಾರಿಗಳು,**
**ಉಡುಪಿ.** (ದ. ಕ).

**(೩) ಶಂಕರಪುಸ್ತಕಭಾಂಡಾರ, ಮಾಳಮಡ್ಡಿ, ಧಾರವಾಡ.**

**ಈ ಗ್ರಂಥಕರ್ತರ ಇನ್ನೂ ಕೆಲವು ಗ್ರಂಥಗಳು.**

# ಭರತಖಂಡದ ಜೀವಜ್ಯೋತಿಗಳು.

ಹಿಂದುಸ್ಥಾನದ ದಿಗಂತಗಳನ್ನೆಲ್ಲಾ ತಮ್ಮ ತಮ್ಮ ಪ್ರತಿಭೆಯಿಂದ ಪ್ರಕಾಶಗೊಳಿಸಿ ಪ್ರಸಿದ್ಧರಾಗಿರುವ ಐತಿಹಾಸಿಕಮಹನೀಯರ ಅನೇಕ ಚರಿತ್ರೆಗಳ ತಿರುಳನ್ನು ಅನೇಕ ಕಡೆಗಳಿಂದ ಸಂಗ್ರಹಿಸಿ ಸುಲಭವಾದ ಮತ್ತು ರಸವತ್ತಾದ ಭಾಷೆಯಿಂದ ವಿಚಿತ್ರವಾಗಿ ವಿವರಿಸಿರುವ ಸಚಿತ್ರ ಗ್ರಂಥ. ವಿದ್ಯಾವರ್ಧಕಸಂಘದವರಿಂದ ಬಹುಮಾನವನ್ನು ಪಡೆದದ್ದು.

**ಬೆಲೆ: ರೂ. ೧—೪—೦.**

# ಭರತನ ಬಂಧುಪ್ರೇಮ.

ಶ್ರೀ ತುಲಸೀರಾಮಾಯಣದ ಸರಣಿಯನ್ನು ಹಿಡಿದು ಪ್ರೇಮರಸವನ್ನು ಸೂರೆಮಾಡುತ್ತ ಪ್ರಾಚೀನಸಾಂಪ್ರದಾಯಗಳನ್ನು ಆಧುನಿಕದೃಷ್ಟಿಯಿಂದ ಸಕಾರಣವಾಗಿ ವಿವರಿಸುತ್ತ ಬರೆದಿರುವ ಭರತನ ಕಥೆ. ವಿದ್ಯಾವರ್ಧಕಸಂಘದವರ ಬಹುಮಾನಕ್ಕೆ ಪಾತ್ರವಾಗಿ ಮೈಸೂರು ಸರಕಾರದವರಿಂದ ಒಂದು ವರ್ಷ ಪಠ್ಯಪುಸ್ತಕವಾದದ್ದು.

**ಬೆಲೆ: ರೂ. ೦—೧೦—೦.**

# ನವೀನಕಲ್ಪ.

ಈಗಿನ ಸಾಮಾಜಿಕ ಪರಿಸ್ಥಿತಿಯು ಪಾಶ್ಚಾತ್ಯಪದ್ಧತಿಯನ್ನೆಲ್ಲಾ ನಾಗರಿಕತೆಯೆಂದು ಭ್ರಮಿಸಿ ಮೋಸಹೋಗುತ್ತಿರುವುದರಿಂದ ಭಾರತೀಯತ್ವವು ನೀರುಪಾಲಾಗುತ್ತಿರುವ ದುಷ್ಪರಿಣಾಮವನ್ನು ಚಿತ್ರಿಸಿ ನಮ್ಮ ಪೂರ್ವಪದ್ಧತಿಯೇ ನಿಜವಾದ ನಾಗರಿಕತೆಯೆಂಬುದನ್ನು ಮನಗಾಣಿಸುವ ಕಲ್ಪಿತ ನಾಟಕ. **ಬೆಲೆ: ರೂ. ೦—೮—೦.**

ಸಿಕ್ಕುವ ಸ್ಥಳಗಳು:—

**(೧) ಎಮ್. ಎಸ್. ರಾವ್ ಕಂಪೆನಿ,** ಅವಿನ್ಯೂರೋಡ್,
**ಬೆಂಗಳೂರು ಸಿಟಿ.**

**(೨) ಪಿ. ಎ. ಪೈ ಸಹೋದರರು,** ಪುಸ್ತಕವ್ಯಾಪಾರಿಗಳು,
**ಉಡುಪಿ.** (ದ. ಕ).

**(೩) ಶಂಕರಪುಸ್ತಕಭಾಂಡಾರ, ಮಾಳಮಡ್ಡಿ, ಧಾರವಾಡ.**